ಸಂಪುಟ ೯
ಸಂಚಿಕೆ ೧

# ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ
೧೯೭೫

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

## ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ ಸಂಶೋಧನ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು, ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ-೫೮೦೦೦೩ ಇವರಿಗೆ ಬರೆಯಬೇಕು.


### ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ  ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ  ೪. ಅಕ್ಷಯತೃತೀಯಾ ಸಂಚಿಕೆ

**ವಾರ್ಷಿಕ ಚಂದಾ : ರೂ. ೮-೦೦** (ಅಂಚೆ ವೆಚ್ಚ ಸಹಿತ)

**ಬಿಡಿಸಂಚಿಕೆಯ ಬೆಲೆ : ರೂ. ೨-೫೦**

**(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)**

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ

**ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ,**

**ಧಾರವಾಡ-೫೮೦೦೦೩**

ಇವರಿಗೆ ಕಳುಹಿಸಬೇಕು.

# ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೮ ಸಂಚಿಕೆ : ೧

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಕರ್ನಾಟಕ ಭಾರತಿ


ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೮ ಸಂಚಿಕೆ : ೧

ಅಗಸ್ಟ ೧೯೭೫


## ಸ್ವಾತಂತ್ರ್ಯೋತ್ಸವ ಸಂಚಿಕೆ






ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಮುದ್ರಕರು :

ಸದಾನಂದ ಪವಾರ
ಸದಾನಂದ ಪ್ರಿಂಟರ್ಸ್, ಧಾರವಾಡ

# ಪರಿವಿಡಿ

# ಶೋಧ

ಮೋಹನ ಕುರುಡಿಗಿ

ಬೀಜ ವೃಕ್ಷ ನ್ಯಾಯಕ್ಕೆ
ಆಧ್ಯಾತ್ಮಿಕ ಬಂಡಿಯು ಗಾಲಿಯು **Example** ನ್ನೂ
ಡಾರ್ವಿನ್ನನ 'ಥಿಯರಿ'ಯು ಸೋಂಕಿನಿಂದ
ವಿಕಾಸವಾದದ ನಂಬಿಕೆಯು ಮೇಲೆ
ಅಮೀಬಾ ಗೋಪುರ ಕಟ್ಟಿ,
ಕಳಶವೆಬ್ಬಿಸಲಾರೆ.
ಆದರೆ,
ಎಲ್ಲಿಯ ವರೆಗೆ ಈ ಹಸಿ ಭೂಮಿ,
ಶತಕೋಟಿ ಸ್ತನಗಳಲ್ಲಿ ತೊಟ್ಟಿಕ್ಕುವ ಕೊನೆಯಿಲ್ಲದ
ದುಗ್ಧಕ್ಕೆ ಜೀವನಾಡಿಯು ರಸ ಸೇರಿಸಿ
ವೀರ್ಯಬೀಜವನ್ನು ಸೃಷ್ಟಿಸುತ್ತೆಯೋ
ಆ ಶಕ್ತಿ ಇರುವವರೆಗೆ ಅಂದರೆ,
ಆ ಶಕ್ತಿ ಮೊದಲಿನಿಂದ
ಕೊನೆಯುವರೆಗೂ ಇರುವವರೆಗೆ
ಈ ಬೀಜ, ವೃಕ್ಷದೊಳಗೆ
ಈ ವೃಕ್ಷ, ಬೀಜದೊಳಗೆ.

●

# ನೆಲ್ಲೂರಿನ ತಾಳ್ವಾರ ಶಾಸನ

ಎಚ್. ಆರ್. ರಘುನಾಥಭಟ್

ಸ್ತೂಪದ ಕಟಾಂಜನ ಅಥವಾ ದೇವಾಲಯದ ತಾಳ್ವಾರದ ಮೇಲೆ (PALUSTRADE) ಶಾಸನ ಬರೆಸುವ ಪದ್ಧತಿ ಬಹು ಪುರಾತನವಾದುದು.[೧] ಪ್ರಾಚೀನ ಕರ್ನಾಟಕದಲ್ಲಿ ಈ ಪರಂಪರೆ ಅಪೂರ್ವವೆಂದು ಹೇಳಬೇಕು. ಈ ದಿಸೆಯಲ್ಲಿ ನೆಲ್ಲೂರಿನ ತಾಳ್ವಾರ ಶಾಸನ ವೈಶಿಷ್ಟ್ಯಪೂರ್ಣವಾಗಿದೆ; ಅದರ ಪ್ರಾಚೀನತೆ ಹಾಗೂ ಲಿಪಿಶಾಸ್ತ್ರದ ದೃಷ್ಟಿಗಳಿಂದಲೂ ಮಹತ್ವಪೂರ್ಣವಾಗಿದೆ.

ಶಿವಮೊಗ್ಗಾ ಜಿಲ್ಲೆಯ ಸೊರಬ ತಾಲೂಕಿನ ನೆಲ್ಲೂರು ಎಂಬ ಗ್ರಾಮದಲ್ಲಿ ಈ ಹೊಸ ಶಾಸನ ದೊರಕಿದ್ದು–ನಾನು ಸಂಶೋಧನಾರ್ಥವಾಗಿ ಹೋದಾಗ. ಈ ಶಾಸನ ಇದುವರೆಗೆ ನನಗೆ ಅಧಿಕೃತವಾಗಿ ತಿಳಿದುಬಂದಿರುವಂತೆ-ಪ್ರಕಟವಾಗಿಲ್ಲ. ಇತ್ತೀಚೆಗೆ ಉದ್ಭವಿಸಿತೆಂದು ಹೇಳಲಾದ ಶನಿದೇವರ ಮೂರ್ತಿಯಿಂದಾಗಿ ನೆಲ್ಲೂರು ಇಂದು ಪ್ರಖ್ಯಾತಿ ಪಡೆದಿದೆ. ಅದಕ್ಕಾಗಿಯೆ ಒಂದು ದೇವಾಲಯವನ್ನು ನಿರ್ಮಿಸಿ ಅಲ್ಲಿ ವಿಶೇಷ ಪೂಜೆ, ಉತ್ಸವಗಳು ಆಗಾಗ ಜರುಗುವುದುಂಟು. ಇದಲ್ಲದೆ ೧೦-೧೧ನೆಯ ಶತಮಾನದ ಒಂದೆರಡು ದೇವಾಲಯಗಳೂ ಭಗ್ನವಾಗಿ ಬಿದ್ದಿರುವುದು ಇಲ್ಲಿ ಗಮನಾರ್ಹ. ಇವುಗಳಲ್ಲಿ ಒಂದು ದೇವಾಲಯ ಕಲ್ಲೇಶ್ವರನದಾಗಿದ್ದು ಅದರ ಎದುರಿನಲ್ಲಿ ಮೂರು ಶಾಸನಗಳ ಶಿಲೆಗಳನ್ನು ನಿಲ್ಲಿಸಲಾಗಿದೆ. ಇವು ೧೦–೧೧ನೆಯ ಶತಮಾನದವುಗಳಾಗಿದ್ದು ಬಿ. ಎಲ್. ರೈಸ್‌ರವರು ೧೯೦೪ರಷ್ಟು ಹಿಂದೆಯೆ (ನೋಡಿ) ಪ್ರಕಟಿಸಿದ್ದಾರೆ.[೨] ಈ ಊರಿನ ಮಧ್ಯದಲ್ಲಿರುವ ಬಂಗಾರಪ್ಪನವರ ಮನೆಯ ಹಿಂಭಾಗದಲ್ಲಿರುವ ತಿಪ್ಪೆಗುಂಡಿಯ ದಿಬ್ಬದ ಮೇಲೆ ಒಂದು ಸುಂದರವಾದ ಮಹಿಷಾಸುರಮರ್ದಿನಿಯ ಶಿಲ್ಪ ಬಿದ್ದಿದೆ. ಮೂರ್ತಿಶಿಲ್ಪದ ಲಕ್ಷಣಗಳನ್ನು ಅನುಲಕ್ಷಿಸಿ ಹೇಳುವುದಾದರೆ ಇದು ಬಹುಶಃ ಕಲ್ಯಾಣ ಚಾಲುಕ್ಯರ ಕಾಲದ್ದು.[೩]

---

೧ Sir John Marshall : **The Monuments of Sanchi** : Vol. 1, text p. 34. ARIE, 1967-68, B. 141-149.

೨ EC VIII,-ii sb. 471 ('S 935); sb 472 ('S 1110)

೩ ಸುಂದರವಾದ ಈ ಮೂರ್ತಿಶಿಲ್ಪವನ್ನು ವಸ್ತುಸಂಗ್ರಹಾಲಯದಲ್ಲಿಟ್ಟು ಸಂರಕ್ಷಿಸುವುದು ಸೂಕ್ತ.

ನೆಲ್ಲೂರಿನ ಹೊರವಲಯುದ ಗುಡ್ಡದ ತಡಿಯಲ್ಲಿ ಗಿಣೇಶ್ವರ ದೇವಾಲಯು ವಿತ್ತೆಂದು ಸಾರುವ ಅವಶೇಷಗಳನ್ನು ಇಂದಿಗೂ ಗಮನಿಸಬಹುದು. ಬಾಗಿಲುವಾಡ, ಅದರ ಲಲಾಟ ಬಿಂಬದ ಮೇಲೆ ಕೆತ್ತಿರುವ ಗಜಲಕ್ಷ್ಮಿ, ಮುಚ್ಚಿಗೆ ಕಲ್ಲು, ಗಣೇಶ, ನಾಗ ಮುಂತಾದ ಮೂರ್ತಿಶಿಲ್ಪಗಳು ಹೇಳ ಹೆಸರಿಲ್ಲದೆ ಬಿದ್ದಿವೆ. ಇವುಗಳಲ್ಲೆಲ್ಲ ದೇವಾಲಯುದ ಮೆಟ್ಟಲಿನ ಎರಡು ತಾಳ್ವಾರಗಳು ಅತ್ಯಂತ ಗಮನಾರ್ಹವಾದುವು. ಇವುಗಳಲ್ಲಿ ಒಂದು ತಾಳ್ವಾರದ ಮೇಲೆ ಪ್ರಸ್ತುತ ಶಾಸನವನ್ನು ಕೆತ್ತಲಾಗಿದೆ. ಈ ತಾಳ್ವಾರದ ಮೇಲ್ತುದಿಯಲ್ಲಿ ಕೆತ್ತಿರುವ ಸಿಂಹ ಮತ್ತು ಇತರ ಸುರುಳಿ ಕೆಲಸಗಳನ್ನು ಸೂಕ್ಷ್ಮವಾಗಿ ಗಮನಿಸಿದಲ್ಲಿ ಪ್ರಾಚೀನವಾದದ್ದೆಂಬುದು ಸ್ಪಷ್ಟವಾದೀತು. ಇದನ್ನು ಪುಷ್ಟೀಕರಿಸುವಂಥ ಈ ಪ್ರಾಚೀನ ಶಾಸನವನ್ನು ಮೊದಲಬಾರಿಗೆ ಇಲ್ಲಿ ಚರ್ಚಿಸ ಲಾಗಿದೆ.

ಸುಮಾರು ೪೦ ಸೆಂ. ಮಿೂ. ಉದ್ದ, ೨೦ ಸೆ. ಮಿೂ. ಅಗಲದ ಸ್ಥಳವನ್ನು ಆವರಿಸಿರುವ ಈ ಶಾಸನದ ಕೆಲವು ಅಕ್ಷರಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ನೂರಾರು ವರ್ಷಗಳಿಂದ ಗಾಳಿ, ಮಳೆ, ಬಿಸಿಲಿನಲ್ಲಿ ಬಿದ್ದಿರುವುದರಿಂದ ಬಹುಶಃ ಅಕ್ಷರಗಳು ಮಾಸಿಹೋಗಿವೆ. ಆದರೂ ಸೂಕ್ಷ್ಮವಾಗಿ ಅದರ ಪಡಿಯಚ್ಚನ್ನು ತೆಗೆಯುವ ಪ್ರಯತ್ನ ಮಾಡಲಾಗಿದೆ. ಸುಮಾರು ೮ನೆಯ ಶತಮಾನದ ಕನ್ನಡ ಲಿಪಿಯಲ್ಲಿ ಪ್ರಸ್ತುತ ಶಾಸನ ಬರೆಯಲಾಗಿದೆ. ಆದರೆ ಲಿಪಿಯ ಶೈಲಿ ಸ್ವಲ್ಪ ವಿಚಿತ್ರ ವಾಗಿದೆ. ಕೆಲವು ಅಕ್ಷರಗಳಲ್ಲಿ ತಮಿಳುನಾಡಿನ ಗ್ರಂಥಲಿಪಿಯ ಪ್ರಭಾವವನ್ನು ಗಮನಿಸಬಹುದಾಗಿದೆ. ಉದಾ: ಣ (ಸಾಲು–೩); ಚ (ಸಾಲು–೪). ಲಿಪಿಯ ಪ್ರಮಾಣದಲ್ಲಿ ಹಾಗೂ ಅದರ ಕೆತ್ತನೆಯಲ್ಲಿ ಏಕರೂಪತೆ ಕಂಡುಬರುವುದಿಲ್ಲ. ಕೆಲವು ಅಕ್ಷರಗಳು ೪ ಸೆಂ. ಮಿೂ. ಉದ್ದ ಇವೆ : ಉದಾ : 'ಅ' (ಸಾಲು–೨) 'ಮ' ಮತ್ತು 'ಪಿ' (ಸಾಲು–೪); ಇನ್ನು ಕೆಲವು ಅಕ್ಷರಗಳು ೧.೫–೨ ಸೆಂ. ಮಿೂ. ಉದ್ದ ಇವೆ. ಉದಾ 'ಧ' (ಸಾಲು–೧). ಇನ್ನು ಕೆಲವು ಅಕ್ಷರಗಳಲ್ಲಿ ಅಲಂಕರಣೆ ಕಂಡು ಬರುವುದು. ಉದಾ : 'ರ್ಗ' (ಸಾಲು–೨) ಹಾ (ಸಾಲು–೪). 'ಅ' ಮತ್ತು 'ಇ' (ಸಾಲು;–೨–೩) ಮುಂತಾದ ಸ್ವರಾಕ್ಷಗಗಳೂ, 'ಕ' (ಸಾಲು–೨) ಎಂಬ **'ಟೆಸ್ಟ್ ಲೆಟರ್'**ನ್ನೂ ಗಮನಿಸಬಹುದು. ಈ ಅಕ್ಷರವನ್ನು ಬರೆದಿರುವ ರೀತಿ, ತೀರ ಕುತೂಹಲಕಾರಿಯಾಗಿದೆ. ಈ ಅಕ್ಷರದ ಮಧ್ಯದ ಲಂಬರೇಖೆ ತಲೆಕಟ್ಟಿಗೆ ತಾಗಿದೆ. ಆದರೂ ಮಧ್ಯದ ಭೇದಕ ರೇಖೆಯಲ್ಲಿ ಸ್ಖಾಲಿತ್ಯವಿಲ್ಲದೆ ಅದೇ ರೇಖೆ ಮುಂದು ವರೆದು ತಲೆಕಟ್ಟಾಗುವ ರೀತಿ ಗಮನಾರ್ಹ. ಉದಾ: 'ಕ' ಕ್ಕು (ಸಾಲು–೫).ಪ್ರಸ್ತುತ ಶಾಸನದ ಅಕ್ಷರಗಳ ತಲೆಕಟ್ಟುಗಳನ್ನು ಸ್ಪಷ್ಟವಾಗಿ ಕೆತ್ತಲಾಗಿದೆ. ಇ ಕಾರದ ಸಂಕೇತವನ್ನು ಅಕ್ಷರದ ಮೇಲ್ತುದಿಯಲ್ಲಿ ಪೂರ್ಣವೃತ್ತಾಕಾರದ ಸುರುಳಿಯನ್ನು ಕೆತ್ತುವುದರ ಮೂಲಕ ಸೂಚಿಸಲಾಗಿದೆ. ಉದಾ : 'ಸ್ಥಿ' (ಸಾಲು–೧); 'ಸಿ'

(ಸಾಲು–೧), ಇದಕ್ಕೆ ಅಪವಾದಗಳೂ ಇಲ್ಲದಿಲ್ಲ. ಉದಾ : 'ಳ', 'ಪಿ' (ಸಾಲು-೪) 'ರ' ಕಾರವನ್ನು ಅಂಡಾಕಾರದಲ್ಲಿ ಬರೆಯಲಾಗಿದ್ದು ಬಾದಾಮಿಚಾಲುಕ್ಯರ ಕಾಲದ 'ರ'ಕಾರದಂತಿದೆ.[೪] ಅಲ್ಲದೆ 'ಅ' 'ಭ' 'ಇ' ಮುಂತಾದ ಅಕ್ಷರಗಳನ್ನು ಪ್ರಾಚೀನ ಶೈಲಿಯಲ್ಲಿ ಬರೆಯಲಾಗಿದೆ.

ಸಾಲು ೪–೫ರಲ್ಲಿ **'ಅಳಿದೋನ್'** ಎಂಬುದಕ್ಕೆ ಬದಲಾಗಿ **'ಅಳಿಪಿದೋನ್'** ಎಂದು ಬರೆಯಲಾಗಿದೆ. ಸಾಲು ೩ರಲ್ಲಿ **'ಭತ್ತ'** ಎಂಬ ಪದದ ನಂತರ **'ಕೊಟ್ಟಾರ್', 'ವಿಟ್ಟಾರ್'** ಎಂದು ಮುಂತಾದ ಕ್ರಿಯಾಸೂಚಕಪದವಿಲ್ಲದಿರುವುದು ಗಮನಾರ್ಹ. ಅನುಸ್ವಾರದ ಸ್ಥಾನದಲ್ಲಿ ವರ್ಗಾನುನಾಸಿಕವನ್ನು ಪ್ರಯೋಗಿಸಿದ್ದುಂಟು. ಉದಾ : (ಸಾಲು–೩) **'ಗಣ್ಡುಗ'**; (ಸಾಲು–೪–೫) **'ಪಞ್ಚ ಮಹಾಪಾತಕ'**.

ಈ ತಾಳ್ವಾರ ಶಾಸನವನ್ನು ಹಳಗನ್ನಡದ ಗದ್ಯಶೈಲಿಯಲ್ಲಿ ರಚಿಸಲಾಗಿದೆ. ಈ ಶಾಸನವನ್ನು ಪಾಠಕ್ರಮ ಹಾಗೂ ಲಿಪಿ ಸ್ವರೂಪಗಳಿಂದ ನೋಡಿದಲ್ಲಿ ಇದು ಸುಮಾರು ೮ನೆಯ ಶತಮಾನದ ಮಧ್ಯಕಾಲಕ್ಕೆ ಸೇರಿದ್ದೆಂದು ಊಹಿಸಲು ಅವಕಾಶವಿದೆ (ಈ ಶಾಸನದಲ್ಲೆಲ್ಲೂ ಕಾಲಮಾನದ ವಿಚಾರವೇ ಬಂದಿಲ್ಲ).

ಸಾಮಾನ್ಯವಾಗಿ ಪ್ರಾಚೀನತಮ ಶಾಸನಗಳಲ್ಲಿ ಹೆಚ್ಚು ವಿವರಗಳಿರುವುದಿಲ್ಲ; ಸಂಕ್ಷಿಪ್ತವಾಗಿ ಬರೆಯಲ್ಪಟ್ಟಿರುತ್ತವೆ. ಪ್ರಸ್ತುತ ಶಾಸನ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಕೇವಲ ೫ ಸಾಲುಗಳಿರುವ (೪೧ ಅಕ್ಷರಗಳಿಂದ ಕೂಡಿರುವ) ಈ ದಾನಶಾಸನದ ಮಹತ್ವವನ್ನು ಹೀಗೆ ಗಮನಿಸಬಹುದು. ಶಾಸನ 'ಸ್ವಸ್ತಿ' ಎಂಬ ಶುಭ ಶಬ್ದದಿಂದ ಪ್ರಾರಂಭವಾಗಿ ಮಂಗಳ ಚಿಹ್ನೆಯೊಂದಿಗೆ ಮುಕ್ತಾಯವಾಗುತ್ತದೆ. ಶ್ರೀ ಧರ್ಮಾರಸಿಂಘನೆಂಬವನು ಶಿಂಡಿಲಿಯ ಇಪ್ಪತ್ತುನಾಲ್ವರಿಗೆ (ಮಹಾಜನರಿಗೆ ?) ಅರುವತ್ತು ಖಂಡುಗ ಭತ್ತವನ್ನು ಕೊಟ್ಟ. ಇದನ್ನು ಕೆಡಿಸಿದವನು (ಅಳಿಪಿದವನು) ಪಂಚಮಹಾಪಾತಕನಾಗುವನು—ಇದು ಶಾಸನದ ಸಾರಾಂಶ.

ಈ ಶಾಸನವನ್ನು ಬರೆಸಿರಬಹುದಾದ ಶ್ರೀ ಧರ್ಮಾರಸಿಂಘ ಯಾರು ? ಅವನ ಕುಲ, ಗೋತ್ರ, ವ್ಯಕ್ತಿತ್ವ ಹಾಗೂ ಸಾಧನೆಗಳೇನು ? ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಪ್ರಸ್ತುತ ಶಾಸನದಲ್ಲಿಲ್ಲ. ಈತನಿಗೆ ಸಂಬಂಧಿಸಿ ಬೇರೆ ಯಾವ ಶಾಸನವೂ ಇದುವರೆಗೆ ದೊರೆತಿಲ್ಲ. ಬಹುಶಃ ಈ ಧರ್ಮಾರಸಿಂಘ ಆ ಪ್ರದೇಶದ ನಾಯಕ ಇಲ್ಲವೆ ಸಾಮಂತರಾಜನಾಗಿದ್ದಿರಬಹುದು.

---

೪ ನೋಡಿ : EC VII -i sk. 53; IA. XIX p. 145

ಗಂಡುಗ ಅಥವಾ ಖಂಡುಗ ಎಂಬುದು ಒಂದು ಅಳತೆಯ ವಿಧಾನ. ಪ್ರಾಚೀನ ಕರ್ನಾಟಕದಲ್ಲಿ ಸಾಗುವಳಿ ಜಮೀನಿನ ಇಳಿದಾರಿಯನ್ನು ಅಥವಾ ಬೀಜವಾಟವನ್ನು 'ಖಂಡುಗ'ದಲ್ಲಿ ಸೂಚಿಸುವ ಪದ್ಧತಿಯಿತ್ತು.[೫] ಇವತ್ತಿಗೂ ಆ ಪ್ರದೇಶದ ಜನ (ನೆಲ್ಲೂರು, ಪರೀಶಿ ಮುಂತಾದ ಊರುಗಳಲ್ಲಿ) ಈ ಪದ್ಧತಿಯನ್ನೇ ಅನುಸರಿಸಿ ಹೇಳುವವನ್ನು ಗಮನಿಸಬೇಕು.

ನೆಲ್ಲೂರಿನ ತಾಳ್ಪ್ರಾರ ಶಾಸನವು ಬಹುಶಃ ಮೊದಲಬಾರಿಗೆ, ಶಂಡಿಲಿ ಇಪ್ಪತ್ತು ನಾಲ್ಕು (ಮಹಾಜನರನ್ನು?) ಹೆಸರಿಸುತ್ತದೆ. ಶಾಸನದಲ್ಲಿ 'ಮಹಾಜನ' ಎಂಬ ಪದ ಪ್ರಯೋಗ ಮಾಡಿರದಿದ್ದರೂ 'ಇಪ್ಪತ್ತುನಾಲ್ಕು' ಎಂಬ ಪದವನ್ನು ಬಳಸಿರುವ ಸಂದರ್ಭವನ್ನು ಆಧರಿಸಿ ಹೇಳುವುದಾದರೆ 'ಇಪ್ಪತ್ತುನಾಲ್ಕು ಮಹಾಜನರು' ಎಂದೇ ಅರ್ಥೈಸುವುದು ಸಾಧುವೆಂದು ತೋರುವುದು. ಮಹಾಜನ ಎಂದರೆ ಅಗ್ರಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣರು; ಅವರೇ ಅಗ್ರಹಾರದ ಪ್ರಭುಗಳು. ಈ ಶಾಸನದಲ್ಲಿ ೨೪ ಮಹಾಜನರನ್ನು ಸಂಬೋಧಿಸಿದರೆ ಇನ್ನು ಕೆಲವು ಶಾಸನಗಳಲ್ಲಿ ೨೦೦,[೬] ೪೦೦,[೭] ೫೦೦,[೮] ೩,೨೦೦೦[೯] ಮುಂತಾದ ದೊಡ್ಡ ಸಂಖ್ಯೆಯನ್ನು ಬಳಸಲಾಗಿದೆ.[೧೦] ಮಹಾಜನರ ಸಂಖ್ಯೆ ಅಗ್ರಹಾರದ ವಯಸ್ಕ ಬ್ರಾಹ್ಮಣರ ಒಟ್ಟು ಸಂಖ್ಯೆಯನ್ನೋ ಅಥವಾ ಬ್ರಾಹ್ಮಣ ಗೃಹಸ್ಥರನ್ನೋ ಸೂಚಿಸುತ್ತದೆಯೆಂದಿಟ್ಟುಕೊಳ್ಳಬಹುದು.

ಸ್ಥಳ ನಿರ್ದೇಶನಕ್ಕೆ ಸಂಬಂಧಪಟ್ಟಂತೆ **ಶಂಡಿಲಿ** ಎಂಬ ಊರಿನ ಹೆಸರು ಮಾತ್ರ ಕಂಡುಬರುವುದು. ಪ್ರಸ್ತುತ ಶಾಸನ ದೊರೆತ ಸ್ಥಳದಿಂದ ಸುಮಾರು ೧ ಕಿ. ಮಿೂ.

---

೫ T. V. Mahalingam ; **South Indian Polity**, Madras 1955, p. 155
S. Gururajachar : **Some Aspects of Economic and Social Life in Karnatak**, Mysore, 1974 p. 151

೬ SII.XI-ii 133 (1087)

೭ SII.XI-ii 191 (1112)

೮ SII.XI-i 83 (1049)

೯ EC VII, sk 185 (1158)


೧೦ ನೋಡಿ : ಡಾ. ಎಂ. ಚಿದಾನಂದಮೂರ್ತಿ : **ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ** ಪು. 210—4
Dr G. S Dikshit : **Local Self Government in Medieval Karnataka** p. 114

ದೂರದಲ್ಲಿ ಶಿಂಡ್ಲಿ ಎಂಬ ಗ್ರಾಮವಿದ್ದು, ಅಲ್ಲಿ ಕೆಲವು ಬ್ರಾಹ್ಮಣರ ಮನೆಗಳು ಮಾತ್ರ ಇವೆ. ಈ ಹಿನ್ನೆಲೆಯಲ್ಲಿ ಈ ಶಾಸನದ ಶಂಡಿಲಿ ಎಂಬುದು ಇಂದಿನ ಶಿಂಡ್ಲಿ ಆಗಿರಬಹುದೆಂದು ಊಹಿಸಬಹುದು.

## ಶಾಸನದ ಪಾಠ

೧. ಸ್ವಸ್ತಿ ಶ್ರೀ ಧರ್ಮ್ಮರಸಿಙ್ಗ ಶಂ-
೨. [ಡಿ]ಲಿ ಇಪ್ಪತ್ತನಾಲ್ವರ್ಗೆ ಅಱುವ-
೩. ತ್ತು ಗಣ್ಡುಗ ಭತ್ತ [||*] ಇದಾನ್ನ-
೪. [ಳಿಪಿ]ದೊನ್ಪಞ್ಚಮಹಾಪಾ-
೫. ತಕನಕ್ಕು ||

• ಈ ಶಾಸನವ್ಯಾಸಂಗದಲ್ಲಿ ಸಲಹೆ, ಸಹಕಾರ ನೀಡಿದ ಡಾ. ಕೆ ವಿ. ರಮೇಶ್ ಅವರಿಗೆ ಕೃತಜ್ಞತೆಗಳು.



ನೆಲ್ಲೂರಿನ ತಾಳ್ಪ್ವರ ಶಾಸನ

# ಕೊಳ್ಳದ ನೆರಳು

ಬಸವರಾಜ ನಾಯ್ಕರ

## ದೃಶ್ಯ : ಅತ್ತೀಕೊಳ್ಳ

(ಗುಡಿಸಲಿನ ಅಡಿಗೆಮನೆ: ಬಲಗಡೆ ಕುಳ್ಳುಬೇಕಿ. ಅದರ ಹತ್ತಿರವೆ ಗೋಡೆಗೆ ಹತ್ತಿ ಒಂದು ಹೊರಸು. ಅದರ ಮೇಲೆ ಮಲಗಿದ ದೇಹದ ತುಂಬ ದುಪ್ಪಟ್ಟಿ ಹೊದಿಸಿದೆ. ಕೋಣೆಯ ಮತ್ತೊಂದು ಬದಿಗೆ ಒಂದು ಬಾಗಿಲು. ಅದರ ಹತ್ತಿರ ಒಂದು ಸಣ್ಣ ಮೇಜು, ಕೆಲವು ಹಲಗೆ ಮಣೆಗಳು. ಮೇಜಿನ ಮೇಲೆ ಒಂದು ಚಹದ ಕಿತ್ತಲಿ ಮತ್ತು ಎರಡು ಕಪ್ಪುಗಳು. ಹೊರೆಸಿನ ಹತ್ತಿರ ಮತ್ತೊಂದು ಸಣ್ಣ ಬಾಗಿಲು. ಅಸ್ತವ್ಯಸ್ತವಾಗಿ ಬಿದ್ದಿದ್ದ ಕೆಲವು ಸಾಮಾನುಗಳನ್ನು ಸರಿಪಡಿಸುತ್ತ, ಮೇಜಿನ ಮೇಲೆ ಗುಬ್ಬಿ ಚಿಮಣಿಯನ್ನು ಹಚ್ಚಿಡುತ್ತ, ಆಗಾಗ ಹೊರಸಿನ ಕಡೆಗೆ ಅಸಮಾಧಾನದಿಂದ ನೋಡುತ್ತ ಶಾಂತವ್ವ ಕೋಣೆಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಹೆಜ್ಜೆ ಹಾಕುತ್ತಾಳೆ. ಎಡಗಡೆಯ ಬಾಗಿಲನ್ನು ಯಾರೊ ಸಾವಕಾಶ ತಟ್ಟುತ್ತಾರೆ. ಅವಳು ಮೇಜಿನ ಮೇಲಿದ್ದ ರೊಕ್ಕದ ಚೀಲವನ್ನು ತೆಗೆದುಕೊಂಡು ತನ್ನ ಬಾಳೆಪಟ್ಟಿಯಲ್ಲಡಗಿಸಿಕೊಳ್ಳುತ್ತಾಳೆ. ನಂತರ ಬಾಗಿಲನ್ನು ತೆರೆಯುತ್ತಾಳೆ.)

**ಹಾದಿಹೋಕ :** (ಹೊರಗಿನಿಂದ) ನಮಸ್ಕಾರ್ರೀ ಎವ್ವಾ !

**ಶಾಂತವ್ವ :** ನಮಸ್ಕಾರಪಾ ಎಪ್ಪಾ. ಮಳೀ ಹಂಗs ಒಂದಕಳತೀ ಜಡಿಯಾಕತ್ತೈತಿ. ಹಿಂತಾ ಕಾಳಕತ್ತಲದಾಗ ಎಲ್ಲಿಂದ ಬಂದೇ ಎಪ್ಪಾ ನೀನು?

**ಹಾದಿಹೋಕ :** ನಾ ಮೊನ್ನೆ ಸವದತ್ತಿ ಜಾತ್ರೀಗೆ ಹೋಗಿದ್ದಿನ್ರ್ಯ. ಅಲ್ಲಿಂದ ಹಿಂಗs ಬಂದ್ನ್ರಿ. ನಾ ಮುಂದ ನವಲೂರಿಗೆ ಹೋಗಬೇಕ್ರಿ.

**ಶಾಂತವ್ವ :** ಇಷ್ಟು ದೂರ ನಡಕೊಂತ ಹೊಕ್ಕೀಯೇನs ಎಪ್ಪಾ?

**ಹಾದಿಹೋಕ :** ಹೌದ್ರಿ, ನಡಕೊಂತsನ ಬನ್ರ್ಯವ್ವಾ. ನಾ ಹೀಂಗ ಹಾದು ಹೊಂಟಿದ್ದಿನ್ರಿ, ಆವಾಗ ಇಲ್ಲಿ ಕೆಳಗಡೆ ಮಿಣುಕುದೀಪ ಕಾಣಿಸ್ತ್ರ್ಯ. ಹಂಗರ ಇಲ್ಲಿ ಹೊಟ್ಟೀಗಿ ಒಂದೀಟು ಏನರ ಹಾಲು-ರೊಟ್ಟಿ, ಮಕ್ಕೊಳ್ಳಾಕ ಒಂಚೂರು ಜಾಗ ಸಿಗತೈತೇನಂತ.... (ಒಳಗಡೆ ಹೊರಸಿನ ಮೇಲೆ ಮಲಗಿಸಿದ ಹೆಣ ನೋಡುತ್ತಾನೆ) ಶಿವ ಶಿವಾ !

**ಶಾಂತವ್ವ :** ಅದೇನಿಲ್ಲ ಬಾರ ಎಪ್ಪಾ. ಆರಿಬಿ ಎಲ್ಲಾ ತೋಸಿಗೊಂಡೀ, ಮೊದಲ ಒಳಗ ಬಾ ಇತ್ಲಾಗ.

---

* ಮೂಲ : The Shadow of the Glen—J. M Sange.

**ಹಾದಿಹೋಕ** : (ಹಗುರಕೆ ಒಳಗೆ ಬಂದು ಹಾಸಿಗೆಯ ಹತ್ತಿರ ಹೋಗುತ್ತ) ಏನ್ರೀ ಯವ್ವಾ! ಸತ್ತಾರ!

**ಶಾಂತವ್ವ** : ಹೌದs ಎಪ್ಪಾ. ಎಲ್ಲಾ ಭಾರಾ ನನ್ನ ತಲೀಮ್ಯಾಲಿಟ್ಟು ಹ್ವಾದ್ರು. ಮನ್ಯಾಗರ ನೂರು ಕುರಿ ಅದಾವು. ನಾಳೆ ಬ್ಯಾಸಿಗ್ಗೆ ಹಾಕಾಕ ಒಂದೀಟು ಹುಲ್ಲು ತಪ್ಪಲ ಬೇಜಿವಿ ಇಲ್ಲಾ. ನಾ ಒಬ್ಬಾಕಿ ಇದನ್ನೆಲ್ಲಾ ಹ್ಯಾಂಗ ನೀಗಿಸಿಗೊಂಡು ಹೋಗಬೇಕು?

**ಹಾದಿಹೋಕ** : (ಮಲಗಿದ ವ್ಯಕ್ತಿಯನ್ನು ದಿಟ್ಟಿಸುತ್ತ) ಅಲ್ರೀ ಎವ್ವಾ. ಮುಖದ ಮ್ಯಾಲೆ ಒಂದ ನಮೂನಿ ಕಳಾ ಐತೆಲ್ಲಾ. ಸತ್ತಾವರಂಗ ಕಾಣೂದs ಇಲ್ಲಾ.

**ಶಾಂತವ್ವ** : (ಅರೆಚೇಷ್ಟೆಯಲ್ಲಿ) ಇಂವಾ ಯಾವಾಗ್ಲೂ ಹಿಂಗs ಒಂದ ನಮೂನಿ, ವಿಚಿತ್ರನs ಇದ್ದಾ. ಅವೆಂದ ಮಂದೀಯಂಗ ಸ್ವಾಭಾವಿಕ ಇದ್ದಾ ಹೇಳು ? ಹಿಂತಾವರು ಜೀವಂತಿದ್ದಾಗೂ ವಿಚಿತ್ರ ಇರತಾರು; ಸತ್ತಮ್ಯಾಲೂ ವಿಚಿತ್ರsನ ಇರತಾರು.

**ಹಾದಿಹೋಕ** : ಅಲ್ರೀ ಯವ್ವಾ ಈ ಹೆಣಾ ಚಂದಾಗಿ ಮಲಗಿಸಿ ದುಪ್ಪಟಿ ವಗ್ಯಾರೆ ನೀಟಾಗಿ ಹೊದಸೂದು ಬಿಟ್ಟು, ಹಂಗs ಎತ್ತರ ಪತ್ತರ ಕೆಡವಿ ಬಿಟ್ಟೀರಲ್ರಿ. ಹಿಂಗ್ಯಾಕ್ರೀ ಯವ್ವಾ ?

**ಶಾಂತವ್ವ** : (ಹೊರಸಿನ ಹತ್ತಿರ ಬರುತ್ತ) ಏನ ಕೇಳತೀಯs ಎಪ್ಪಾ, ಈ ಮನಶ್ಯಾ ಏನ ತುಸs ನೀರಾಗ ಮುಣುಗೂವಾವಲ್ಲ. ಇವತ್ತ ಮುಂಜೇಲೆ ಇಂವಾ ನನ್ನ ತಂಗೀನ ಬಿಟ್ಟು ನನ್ನ ಯಾರೂ ಮುಟ್ಟಬ್ಯಾಡ್ರಿ, ಒಂದುವೇಳೆ ಮುಟ್ಟಿದ್ರೆಂದ್ರ ಶಾಪಾ ಕೊಡತೇನಿ, ಜೀಂವಾ ಬಿಟ್ಟಬಿಡತೇನಿ ಅಂತ ಹೇಳ್ಯಾನು. ಅವರ ತಂಗೀಗೆ ಹೇಳಿಕಳಿಸೇತಿ. ಆಕೆರ ಇಲ್ಲಿಂದ ಹತ್ತುಮೈಲಿ ದೂರ, ಈ ಗುಡ್ಡಾ ದಾಟಿ ಆ ಸೋಮೇಶ್ವರ ಕೊಳ್ಳದಾಗಿರತಾಳು.

**ಹಾದಿಹೋಕ** : (ಅವಳೆಡೆಗೆ ನೋಡುತ್ತ, ತಲೆಯಲ್ಲಾಡಿಸುತ್ತ) ತಮ್ಮ ಕೈ ಹಿಡಿದ ಹೇಣ್ತೀನs ತಮ್ಮನ್ನ ಮುಟ್ಟಬಾರದಂದ್ರ ಹೆಂತಾ ಮನಶ್ಯಾರ್ರಿದ್ದಾರ್ರೀ ಇವರು. ತಮುಷ್ಟಕ್ಕ ತಾಂವs ಗದ್ದಿಲ್ಲದಾಂಗ ಸಾಯಬೇಕಂತಾರೇನು ?

**ಶಾಂತವ್ವ** : ನೋಡಪಾ ಹನಮಂತಪ್ಪಾ, ಇಂವಾ ಮೊದಲs ಒಂದ ನಮೂನಿ ಮನಶ್ಯಾ. ಅದರಾಗ ವಯಸ್ಸು ಬ್ಯಾರೆ ಆಗಿತ್ತು. ಹಿಂಗಾಗಿ ಎಲ್ಲಾದರಾಗೂ ಅರುವು ಮರವs ಬ್ಯಾಡಂತ ಎಷ್ಟು ಹಾಲ್ಯಾರುದ್ರೂ ಕೇಳತಿದ್ದಿಲ್ಲಾ, ಹಂಗs ಆ ಗುಡ್ಡದಮ್ಯಾಲೆ ಹೋಗಿ ಮಳಿಯಿರ್ಲಿ, ಬಿಸಲಿರ್ಲಿ, ಯಾವುದರಾ ಗುಂಗಿನ್ಯಾಗ ಅಡ್ಯಾಡತಿದ್ದ. (ದುಪ್ಪಟಿಯನ್ನು ಸ್ವಲ್ಪ ಮೇಲೆತ್ತಿ) ಇಲ್ಲಿ

ನೋಡು, ಅವನ ಮೈ ಮುಟ್ಟಿ ನೋಡಟು, ಎಲ್ಲಾ ತಣ್ಣಗ ಆಗೇತ್ಯೋ ಹ್ಯಾಂಗ ಅನ್ನೂದು ಹೇಳ ನನಗ.

**ಹಾದಿಹೋಕ** : ಮುಟ್ಟಬ್ಯಾಡಾಂತ ಶಾಪಾ ಹಾಕ್ಯಾರಂತೀರಿ. ಈಗ ನಾ ಅವರನ್ನ ಮುಟ್ಟಿದರ ನನಗೇನರ ಕೆಡಕಾದ್ರ ಹ್ಯಾಂಗ್ರೀ ಎಪ್ಪಾ. ನಾ ಮರೇ ಒಲ್ರೆಪಾ ಎಪ್ಪಾ. ನರಗುಂದ ಗುಡ್ಡದಷ್ಟು ಬಂಗಾರಾ ಕೊಡತೇವೆಂದ್ರೂ ಬ್ಯಾಡ ನನಗ.

**ಶಾಂತವ್ವ** : **(ಅಸಮಾನದಿಂದ ಹೆಣದ ಕಡಗೆ ನೋಡುತ್ತ)** ಹಿಂತಾವರ ಮೈ ತಣ್ಣಗಾಗಿದ್ರೂ ಸತ್ತಾರಂತ ನಿಶ್ಚಿತ ಹೇಳಾಕ ಬರೂದಿಲ್ಲಾ, ಯಾಕಂದ್ರ ಇಷ್ಟು ದಿನಾ ಬಾಳೇ ಮಾಡೇನಿ ಇವನ ಕೂಡ, ಇಂವಾ ಯಾವಾಗ್ಲೂ, ಹಗಲೂ ರಾತ್ರಿ, ಹಿಂಗಽ ತಣ್ಣಗಽ ಇರತಿದ್ದಾ. **(ಹೆಣದ ಮುಖವನ್ನು ಮುಚ್ಚಿ, ಹೊರಸಿನಿಂದ ದೂರ ಸರಿಯುತ್ತಾಳೆ)** ಈಗೇನೂ ಮಿಸಿಗ್ಯಾಡವಲ್ಲಾ, ಅವನ ಜೀಂವಾ ಪೂರಾ ಹೋಗೇತಿ ಕಾಣಸ್ತೈತಿ, ಯಾಕಂದ್ರ ಮೊನ್ನೆ ಮೂರು ನಾಕು ದಿನಾ ಸವದತ್ತಿಗೆ ಹೋಗಿ ಬಂದಾಗಿನಿಂದ ಅವನ ಮೈಯ್ಯಾಗ ಆರಾಮ ಇದ್ದಿಲ್ಲಾ. ಇವತ್ತು ಮುಂಜೇನೆ ನನ್ನ ಎದಿ ನೊಯ್ತೈತಿ ಅಂತ ನೆಳಸ್ಯಾಡತಿದ್ದಾ. ಸಂಜಿ ಮುಂದ ಸೂರ್ಜಾನ್ನೆರಳು ಎದುರಿಗಿನ ಗುಡ್ಡದಮ್ಯಾಲೆ ಏರೋವಾಗ ನನ್ನ ಕತಿ ಎಲ್ಲಾ ಮುಗೀತಿ ಅನಕೊಂತ ಹಾಸಿಗಿ ಹಿಡದಾ. ಸೂರ್ಜಾ ತಾಯಿಮ ಹೊಟ್ಟಿ ಹೊಕ್ಕಾಗ ಒಮ್ಮೆಕೆಲೆ ಚೀರಿದವನ ಉಸುರು ಬಿಟ್ಟು, ಸತ್ತಕುರಿಯಂಗ ಕೈಕಾಲು ಸೆಟಿಸಿಗೊಂಡು ಬಿದ್ದಾ.

**ಹಾದಿಹೋಕ** : ಅಯ್ಯೊ ಪಾಪ ! ನೋಡ್ರಿ, ದೇವರಾಟ ಹ್ಯಾಂಗೈತಿ !

**ಶಾಂತವ್ವ** : **(ಕಪ್ಪಿನಲ್ಲಿ ಚಹ ಸುರುವುತ್ತ)** ಇಗಾ, ಹಿಡಿ ಇವನ್ನ. ಹೆಂತಾಬೇಕು ಹಂತಾ ಹೊಳಿಸಾಲು ಆಕಳಹಾಲು ಜಕ್ಕಸತೈತಿ ಇದರ ಮುಂದ.

**ಹಾದಿಹೋಕ** : ನಿಮ್ಮ ಹೊಟ್ಟಿ ತಣ್ಣಗಿರ್ಲಿರೀ ಎಪ್ಪಾ. ನಿಮ್ಮನಿ ಉದ್ಧಾರಾಗ್ಲಿ. **(ಕುಡಿಯುತ್ತಾನೆ).**

**ಶಾಂತವ್ವ** : **(ಮೇಜಿನೊಳಗಿಂದ ಚಿಲಿಮೆ, ಪುತ್ತು, ತಂಬಾಕನ್ನು ತೆಗೆದು ಅವನಿಗೆ ಕೊಡುತ್ತ)** ನಮ್ಮನ್ಯಾಗ ಪ್ಯಾರೆ ಚಿಲಿಮಿ ಇಲ್ಲ ನೋಡಪಾ ಹನಮಂತಪ್ಪಾ. ಇದನಽ ತುಗೊ. ಭಾಳ ಛಲೊ ತಂಬಾಕ ಐತಿ. ಇಂವನಽ ಸೇದತಿದ್ದನು ಇದನ್ನ.

**ಹಾದಿಹೋಕ** : ಪಾಳ್ಳೇದು, ಯಾಕೊಲ್ಲಾಕ್ರೀಯಪ್ಪಾ.

**ಶಾಂತವ್ವ** : ಖಯ್ಯ ಹಂಗಽ ನಿಂತೀಯಲ್ಲಽ ಏಪ್ಪಾ. ಇಲ್ಲಿ ಕುಂದ್ರು, ಆರಾಮ ತುಗೊ ಅಟು.

**ಹಾದಿಹೋಕ :** (ಚಿಲಿಮೆಯಲ್ಲಿ ತಂಬಾಕನ್ನು ತುಂಬುತ್ತ, ಸುತ್ತೂಕಡೆಗೆ ನೋಡುತ್ತ) ನಾನು ಬೇಕಾದಷ್ಟು ಊರು ತಿರಗ್ಯಾಡೇನ್ರಿ, ಬೇಕಾದಷ್ಟು ವಿಚಿತ್ರ ಘಟನಾ ನೋಡೇನ್ರಿ. ಆದ್ರ ಹಿಂತಾ ಶಾಂತ ಹೆಣದ ಮನಿ ಎಲ್ಲೀ ನೋಡಿದ್ದಿಲ್ರಿ. ಹಿಂತಾ ಚಿಲಿಮಿ, ಹಿಂತಾ ತಂಬಾಕು ಎಲ್ಲೀ ಕಂಡಿಲ್ಲ ಬಿಡ್ರಿ ನಾ. ಇದನ್ನ ಸೇದಾಕ ಒಬ್ಬರೂ ಗಂಡಸಮಕ್ಳು ಉಳಿದಿಲ್ಲಲ್ರ್ಯ ಇಲ್ಲೆ ?

**ಶಾಂತವ್ವ :** ಆಗಲೆ ಹೇಳಲಿಲ್ಲಾ ನಾ ನಿನಗ, ಸೂರ್ಜಾ ಮುಳುಗೂ ಹೊತ್ತಿಗೆ ಇಂವಾ ಜೀಂವಾ ಬಿಟ್ಟನಂತ. ನಾನರ ಮನ್ಯಾಗ ಒಬ್ಬಾಕಿ ಹೆಣಮಗಳು. ಎಡಕ ಬಲಕ ಒಂದ ಮನಿ ಇಲ್ಲಾ. ಹಿಂತಾ ಕೊಳ್ಳದಾಗ, ಕತ್ತಲದಾಗ ನಾ ಎಲ್ಲೆಂತ ಹೋಗಲಿ, ಯಾರನ ಕರೀಲಿ ನೀನs ಹೇಳು ?

**ಹಾದಿಹೋಕ :** (ಚಹಾ ಕುಡಿಯುತ್ತ) ಇದರಾಗ ತಪ್ಪೇನೈತ್ರೀ ಎವ್ವಾ ?

**ಶಾಂತವ್ವ :** ಹೌದಪ್ಪಾ, ಹನಮಂತಪ್ಪಾ, ಇದರಾಗೇನೂ ತಪ್ಪಿಲ್ಲ ಖರೆ. ಆದ್ರ ಇಲ್ಲೆ ಮಂದಿ ಸಂಚಾರ ಇಲ್ಲದಲ್ಲೆ ಕತ್ತಲದಾಗ ಒಬ್ಬಾಕಿ ಹೆಣಮಗಳು ಇರೂದಂದ್ರ ಎಷ್ಟು ತ್ರಾಸೈತೆನ್ನೂದು ನಿನ್ನಂತಾ ಯಾವಾಗರ ಬರೂವಾರಿಗೆ ಹ್ಯಾಂಗ ತಿಳಿದೀತು?

**ಹಾದಿಹೋಕ :** (ಕೂಡುತ್ತ) ನಾಯೇನು ಹಂತಾ ಬುದ್ಧಿಗೇಡಿಲ್ಲರೀ ಎವ್ವಾ. ನನಗೂ ಎಲ್ಲಾ ತಿಳೀತೈತಿ. (ತನ್ನ ಚಿಲುಮೆಯನ್ನು ಹೊತ್ತಿಸುತ್ತಾನೆ. ಆಗ ಅವನ ಒರಟಾದ ಮುಖದ ಮೇಲೆ ಬೆಳಕು ಬೀಳುತ್ತದೆ) ನಾನು ನಿಮ್ಮನೀ ಬಾಗಲಕ ಬಂದು ಚಿಲಕಾ ಬಾರಸೂವಾಗs ಗೊತ್ತಾತರೀ ಹಿಂತಾ ಮಂದಿ ಸಂಚಾರ ಇಲ್ಲದಲ್ಲೆ ನೀವು ಒಬ್ಬರ ಇರಬೇಕಾದ್ರ, ನೀವು ಎಷ್ಟು ಗಟ್ಟಿದೀರೆನ್ನೂದು. ಯ್ಯಾಕೆಂದ್ರೆ ಎಡಕ ಬಲಕ ಮಂದಿ ಇದ್ರೂ ನನ್ನಂಥಾವರ್ಯಾರರ ಬಂದು ಬಾಗಲಾ ಬಡದ್ರ ಹೆಣಮಕ್ಕಳು ಹ್ಯಾಂಗ ಹೌಹಾರತಾರನ್ನೂದು ನನಗ ಗೊತ್ತಿಲ್ಲೇನ್ರಿ? ಬುತ್ತಿ ಕಟಿಗೊಂಡು ಅಡ್ಯಾಡಿದವ್ರು ಸಿಗಾಕಿಲ್ರಿವಾ—ನಿಮ್ಮನೀ ಅಷ್ಟು ಒಳ್ಯಾಕ ಐತಿದು.

**ಶಾಂತವ್ವ :** (ಸಾವಧಾನವಾಗಿ) ಎಲ್ಲಾರೂ ಹಿಂತಾವಕ ಅಂಜತಾರನ್ನೂದು ಗೊತ್ತೈತಿ ನನಗ. ಆದ್ರ ನನಗ ಮಾತ್ರ ನಿನ್ನಂಥಾವರಾಗ್ಲಿ, ನೀಡಿಸಗೊಳ್ಳಾವಾರಾಗ್ಲಿ, ಸ್ವಾಮಿಗೋಳಾಗ್ಲಿ ಇವರನ ಕಂಡ್ರ ಏಟೂ ಅಂಜಿಕಿ ಬರೂದಿಲ್ಲಾ. (ಅವಳು ಕಿಟಕಿಯ ಕಡೆಗೆ ನೋಡಿ, ಧ್ವನಿ ಕಡಿಮೆಮಾಡಿ) ಮತ್ತ ಬ್ಯಾರೆ ಏನರ ನೋಡಿದ್ರ ಭಾಳ ಅಂಜಿಕಿ ಬರತೈತಿ!

**ಹಾದಿಹೋಕ :** (ಹೆದರಿಕೆಯಿಂದ ಸುತ್ತೂಕಡೆಗೆ ನೋಡುತ್ತ) ಹೌದ್ರೀ ಎವ್ವಾ. ನೀವು ಹೇಳೂದು ಖರೇ ಐತಿ. ದೇವರಽ ನಮ್ಮನ್ನ ಕಾಯಬೇಕು.

**ಶಾಂತವ್ವ :** (ಒಂದು ಕ್ಷಣ ಕುತೂಹಲದಿಂದ ಅವನೆಡೆಗೆ ನೋಡುತ್ತ) ಅಲ್ಲಽ ಹನಮಂತಪ್ಪಾ, ನೀನೂ ಹೆದರಿದೌರಂಗಽ ಮಾತಾಡಾಕತ್ತೀಯಲ್ಲ ಯಾಕ ?

**ಹಾದಿಹೋಕ :** (ಅಳುವ ಧ್ವನಿಯಲ್ಲಿ) ಅಲ್ಲರೀ ಎವ್ವಾ, ಮಳಿ ಇರ್ಲಿ, ಚಳಿ ಇರ್ಲಿ, ಮಂಜ ಬಿದ್ದಿರ್ಲಿ, ಕಾಳಕತ್ತಲಿರ್ಲಿ, ನಾ ಹಂಗಽ ದೆವ್ವನಂಗ ಈ ಕೊಳ್ಳದಾಗೆಲ್ಲಾ ಅಡ್ಡ್ಯಾಡಿಲ್ಲೇನ್ರಿ? ಮಂಜು ಬಿದ್ದಾಗ, ಒಂದು ಸಣ್ಣ ಗಿಡದ ಟೊಂಗಿ ಸೈತೆ ನಿಮ್ಮ ರಟ್ಟೀಯಷ್ಟು ಗಡತರಾ ಕಾಣಸತೈತಿರಿ. ಒಂದು ಸಣ್ಣ ಮೊಲಾ ಕಾಠೇವಾಡದ ಕುದರಿಯಂಗ ಕಾಣಸತೈತಿರಿ. ಒಂದು ಹುಲ್ಲಿನ ಕಡ್ಡಿ ಸೈತೆ ನರಗುಂದ ವೆಂಕಪ್ಪನ ಗುಡಿಯಷ್ಟು ದ್ವಾಡದಾಗಿ ಕಾಣಸತೈತಿರಿ. ಇಷ್ಟಿದ್ರೂ ನಾ ಏನು ಅಂಜಿಲ್ಲಾ, ಅಳಕಿಲ್ಲಾ ಬಿಡ್ರೀಯವ್ವಾ. ಇಲ್ಲಾ ಅಂದ್ರ ಏನ ಕೇಳತೀರಿ, ನಾ ಇಷ್ಟೊತ್ತೀಗೆ ಬೆಳಗಾವಿ ರೋಡಿಗೆ ಹುಚ್ಚರಾಸ್ಪತ್ರ್ಯಾಗ ಇರತಿದ್ದಿನ್ರಿ. ಇಲ್ಲಾ ಬರೇ ಒಂದು ಕೈಪಾ ಹಾಕ್ಕೊಂಡು ಗುಡ್ಡದ ಮ್ಯಾಲೆ ಓಡಾಡಿ ಕೊರ್ರ ನಾಗ್ಯಾನಂಗ ತ್ವಾಳದ ಬಾಯಾಗ ಬೀಳತಿದ್ದ್ಯ ಹ್ವಾದ ವರ್ಷ.

**ಶಾಂತವ್ವ :** (ಕುತೂಹಲದಿಂದ) ನಿನಗ ಕೊರ್ರ ನಾಗ್ಯಾಂದು ಗುರ್ತಿತ್ತೇನು ?

**ಹಾದಿಹೋಕ :** ಗುರ್ತಿರದ ಏನು ಮಾಡೀತರೀ ಎವ್ವಾ, ಸಾಯೂಕಿಂತ ಮೊದಲ ಅಂವಾ ಹಾಡಿದ ಕಡೇ ಹಾಡುಸೈತೆ ನಾನಽ ಅಲ್ಲೇನ್ರಿ ಕೇಳಿದಾಂವಾ !

**ಶಾಂತವ್ವ :** ಅಲ್ಲಪಾ ಹನಮಂತಪ್ಪಾ, ಅದರ ಬಗ್ಗೆ ಬಾಳಬಾಳ ಮಂದಿ ಬ್ಯಾರೆ ಬ್ಯಾರೆ ಏನೇನಽ ಕತೀಕಟ್ಟಿ ಹೇಳತಾರು. ಆದ್ರ ಅವೆಲ್ಲಾ ಖರೆ ಅಂತ ಜನಾ ನಂಬತಾರಾ ?

**ಹಾದಿಹೋಕ :** ಇದೇನು ಸುಳ್ಳಲ್ರೀಯವ್ವಾ, ನಾ ಹೇಳಿದ್ದು ಒಂದೀಟು ಕಿಂವ್ಯಾಗ ಹಾಕ್ಕೊರಿ.... ಇವತ್ತ ಹ್ಯಾಂಗೈತಿ ಹಂಗಽ ಒಂದಿನಾ ಕತ್ತಲಿದ್ದಾಗ ನಾ ಅಲ್ಲಿ ಗುಡ್ಡದ್ದಂಡೀಗುಂಟ ಹೊಂಟಿದ್ದಿನ್ಯ. ಅಲ್ಲೆಲ್ಲಾ ಸಾಕಷ್ಟು ಮಂಜು ಬಿದ್ದಿತ್ತು, ಮಳೀನೂ ತಟಗುಡುತ್ತಿತ್ತು. ಅಲ್ಲೆ ಕೆಳಗಡೆ ಒಂದು ಕುರಿ ಮಂದಿತ್ತು. ಅವೆಲ್ಲಾ ಬ್ಯಾ ಬ್ಯಾ ಅಂತ, ಅಕ್ಸೀ ಅಕ್ಸೀ ಅಂತ ಕೆಮ್ಮೂದೂ ಸೀನೂದೂ ಮಾಡತಿದ್ದುವ್ರಿ. ಆಮ್ಯಾಲೆ ಅಲ್ಲೆ ಯಾರಽ ಒಂದ ನಮೂನಿ ಮಾತಾಡಿದಂಗ ಕೇಳಸತಿತ್ತು. ಆ ದನಿ ಕೇಳಿ ನನ್ನ ಕೈಕಾಲು ತರಾತರಾ ನಡಗಾಕಹತ್ತಿದುವು. ಇಷ್ಟೊತ್ತಿನ್ಯಾಗ ಹಿಂತಾ ದನಿ ಕೇಳಬೇಕಂದ್ರ ಇಲ್ಲೆ ಏನಽ

ದೆವ್ವಗಿವ್ವ ಇರಬೇಕು, ನಾ ಸತ್ತೆನೊ ಎಪ್ಪಾ ಅಂತ ಓಡಾಕತ್ತಿನ್ನಿರಿ ಅಲ್ಲಿಂದ. ಹಂಗs ಓಡಿದ್ದs ಓಡಿದ್ದs. ಕಡೀಕ ಸರೇಂದ್ರತ್ತಸಕಾ ಓಡಿಕೊಂತ ಹ್ವಾನ್ನಿರಿ. ಹೋಗಿ ಅಲ್ಲಿ, ಅವತ್ತ ರಾತ್ರಿ, ಮರುದಿನಾ ಮುಂಜೇಲಿ ಅಲ್ದ ಮಳ್ಳಾಮರದಿನಾ ಸೈತೆ ಕುಡನ್ನಿರಿ. ಆಮ್ಯಾಲೆ ಮೂರನೆ ದಿನಾ ಗೊತ್ತಾತರೀ ಖರೆ ಸುದ್ದಿ, ಅವತ್ತ ನಾ ಕೇಳಿದ್ದು ಕೊರ್‍ರ ನಾಗ್ಯಾಂದs ದನಿ ಅಂತ. ಆಮ್ಯಾಲಿಂದ ಮನಸ್ಸಿನ್ಯಾಗ ಹೆದರಿಕೆನ್ನೂದು ಏಟೂ ಉಳೀಲಿಲ್ಲರಿ. ನನ್ನ ಬಗ್ಗೆ ನನಗs ನಗಿ ಬಂತರಿ.

**ಶಾಂತವ್ವ** : (ದುಃಖದಿಂದ, ಸಾವಕಾಶವಾಗಿ ಮಾತಾಡುತ್ತ) ಪಾಪ ಕೊರ್‍ರ ನಾಗ್ಯಾ ಇದ್ದಾಗ ಇತ್ಲಾಗ ಮ್ಯಾಗಡೆ ಹೋಗ್ಲಿ, ತಳಗಡೆ ಹೋಗ್ಲಿ ನಮ್ಮನೀಗೆ ಬಂದು ಭೆಟ್ಟಿ ಆಗೇ ಹೋಗತಿತ್ತು. ಅಂವಾ ಸತ್ತಮ್ಯಾಲೆ ಇಲ್ಲೆ ಮಂದಿ ಸಂಚಾರs ಇಲ್ಲದಂಗಾಗಿ ನಾನು ಕಟಬೊ ಅಂತ ಒಬ್ಬಾಕೆ ಇರಬೇಕಾಗತಿತ್ತು. (ಹೊರಸಿನ ಕಡೆಗೆ ನೋಡಿ, ಧ್ವನಿ ಕಡಿಮೆ ಮಾಡಿ ಸ್ಪಷ್ಟವಾಗಿ ಮಾತಾಡುತ್ತ) ಇತ್ಲಾಗಿಂದ ದೂಡಿ ಆತು. (ಒಂದು ಕ್ಷಣ ಮಾತು ನಿಲ್ಲಿಸಿ, ನಂತರ ಎದ್ದುನಿಂತು) ಅಲ್ಲs ಹನಮಂತಪ್ಪಾ ನೀಯೇನು ಊರಿಂದ ಬಂದೆಲ್ಲಾ, ಅಲ್ಲಿ ದಾರ್‍ಯಾಗ ಯಾರರ ಇತ್ತಾಗ ಬರೂದು ನೋಡೀದೇನು ?

**ಹಾದಿಹೋಕ** : ಹೌದು ಹೌದ್ರಿ ಎವ್ವಾ. ಅಲ್ಲೆ ಒಬ್ಬ ಹರೇದ ಹುಡುಗಾ ಕುರಿ ಅಟಿಗೊಂಡು ಬರೂದು ಮಾತ್ರ ನೋಡಿನ್ರಿ. ಅಂವಾ ಅತ್ಲಾಗಿತ್ಲಾಗ ಓಡ್ಯಾಡಿ ಕುರಿ ಹೊಡಕೊಂಡು ಬರತಿದ್ದನ್ರಿ.

**ಶಾಂತವ್ವ** : (ಮುಗುಳುನಗೆಯಿಂದ) ಇನ್ನೂ ಭಾಳ ದೂರಿದ್ನೇನು ಅಂವಾ ?

**ಹಾದಿಹೋಕ** : ಭಾಳ ದೂರೇನಿಲ್ಲರಿ, ಇಲ್ಲೇ ಸನೇಕs ಇದ್ದನ್ರಿ.

(ಅವಳು ಕಿತ್ತಲಿಯಲ್ಲಿ ನೀರು ಹಾಕಿ ಒಲೆಯ ಮೇಲಿಡುತ್ತಾಳೆ)

**ಶಾಂತವ್ವ** : ಹನಮಂತಪ್ಪಾ, ನಿನಗ ಹೆದರಿಕೆ ಆಗಲಿಕ್ರ ಇಲ್ಲೇ ಇರತೀಯಾ ಅಟು ಇವನ ಸಂಗಾಟ ?

**ಹಾದಿಹೋಕ** : ಇರತೇನಿ ಬಿಡ್ರಿ, ಅದಕೇನ್ರಿ ಯವ್ವಾ. ಹ್ಯಾಂಗಾದ್ರೂ ಸತ್ತ ಮನಶ್ಯಾ ನನಗೇನೂ ಅಪಾಯ ಮಾಡಾಕಂತೀ ಬರೂದಿಲ್ರ್ಯಾ ?

**ಶಾಂತವ್ವ** : (ಸ್ವಲ್ಪ ಗಂಭೀರವಾಗಿ) ನಾ ಒಂದೀಟು ಅತ್ಲಾಗ ಹೋಗಿ ಬರಲ್ಯಾ ಹಂಗಾರ. ನಮ್ಮನೀಯಾಂವಾ ಜೀವಂತಿದ್ದಾಗ, ಒಂದೊಂದಿನಾ ರಾತ್ರಿ ಅಲ್ಲಿ ಹೋಗಿ, ಸಿಳ್ಳು ಹೊಡೆದು ನೀ ನೋಡೇನೇದೆಲ್ಲ ಆ ಹುಡುಗನ್ನ ಕರೀತಿದ್ದಾ. ಅಂವಾ ಮೊನ್ನೆಮೊನ್ನೆ ಗೋಕರ್ಣದ ಕಡಿಂದ ಬಂದು ಆ ಗುಡ್ಡದ ಅಜ್ಜೀ

ಕಡೆ ಮನಿ ಮಾಡ್ಯಾನು —ಅಂವ ಬಂದು ಏನರ ಕೆಲಸ ಇದ್ರ, ಇಬ್ರೂ ಮಾಡಿ ಮುಗಸತಿದ್ರು. ಈಗ ಅಂವನ್ನ ಕರಕೊಂಡು ಬರಬೇಕಾಗೇತಿ ಯಾಕಂದ್ರ ಬೆಳಗಾಪಕೂಡ್ಲೆ ಅಂವಾ ಊರಾಗ ಹೋಗಿ ಮಂದೀಗೆ ನಮ್ಮಾಂವ ಸತ್ತ ಸುದ್ದಿ ಹೇಳಿಬರತಾನು.

**ಹಾದಿಹೋಕ** : (ದುಪ್ಪಟ್ಟಿಯನ್ನು ಹೊದ್ದು ಮಲಗಿದ ವ್ಯಕ್ತಿಯ ಕಡೆ ನೋಡುತ್ತ) ಅಲ್ಲಿರೀ ಯವ್ವಾ, ನಾನs ಹೋಗಿ ಕರದ ಬರತೇನಿ ಬಿಡ್ರೀ ಅವನ್ನ ನೀವ್ಯಾಕ ಹಿಂತಾ ಜೋರ ಅನ್ನೂ ಮಳ್ಯಾಗ ತ್ರಾಸ ತಗೊಂಡ ಹೋಗತೀರಿ ?

**ಶಾಂತವ್ವ** : ಬ್ಯಾಡಪಾ, ನಿನಗ ದಾರಿ ಗೊತ್ತಾಗೂದಿಲ್ಲಾ. ಅದೂ ಈಟsಈಟ ಐತಿ. ಮತ್ತೂ ಅದರ ಎಡಕs ಬಲಕs ಒಂದು ಎತ್ತೂ ಚಕ್ಕಡಿ ಮುಳು ಗೂವಷ್ಟುದ್ದ ಕೆಸರಿನ ಗುಂಡ್ಯದಾವು. (ತಲೆಯ ಮೇಲೆ ದುಪ್ಪಟ್ಟಿಯೊಂದನ್ನು ಹೊದ್ದು) ನೀ ಇಲ್ಲೆ ಆರಾಮ ತಗೊ, ಬೇಕಾದ್ರ ದೇವರ ಭಜನಿ ಮಾಡ ಕೊಂತ ಕುಂತಿರು, ನಾ ಲಗೂ ಹೋಗಿ ಬಂದಬಿಡತೇನಿ.

**ಹಾದಿಹೋಕ** : (ಗಡಿಬಿಡಿಯಿಂದ ಅಡ್ಡಾಡುತ್ತ) ಹಂಗಾರ ಹಿಂಗ ಮಾಡ್ರಿಯವ್ವಾ. ನಿಮ್ಮ ಹಂತೇಕ ಸೂಜಿ–ದಾರಾ ಏನರ ಐತೇನ್ರಿ. ಇದ್ರ ಒಂದೀಟು ಕೊಟ್ಟ ಹೋಗ್ರಿ. ನನ್ನ ಕೋಟು ಬಾಳ ಹರದೈತಿ, ನಾಕ ಹೊಲಿಗೀನರ ಹಾಕ್ಕೊಂತೇನಿ, ಭಜನೀನೂ ಮಾಡತೇನ್ರಿ.

**ಶಾಂತವ್ವ** : (ತನ್ನ ದುಪ್ಪಟ್ಟಿಯಲ್ಲಿ ಚುಚ್ಚಿದ್ದ ಸೂಜಿ-ದಾರವನ್ನು ಅವನಿಗೆ ಕೊಡುತ್ತಾಳೆ) ಇಗಾ ಈ ಸೂಜಿ ತಗೊ ಹನಮಂತಪ್ಪಾ, ನಿವಗೂ ಗುಡ್ಡಗಾಡಿನ್ಯಾಗ ಇದ್ದು ರೂಢಿ ಐತೆಲ್ಲಾ ? ನಿನಗೇನು ಇಲ್ಲಿ ಒಬ್ಬನs ಇರಾಕ ಬೇಜಾರಾಗೂ ದಿಲ್ಲಲ್ಲಾ ? ಹೊರಗ ಬುಸಗುಡೂ ಗಾಳ್ಯಾಗ ಅಡ್ಯಾಡುವ್ರಕಿಂತ ಇಲ್ಲೇ ಒಳಗs ಈ ಹೆಣದ ಹಂತೇಲೆ ಬೆಚ್ಚಗ ಕುಂತು, ಗಾಳಿ ಸದ್ದು ಕೇಳಿಕೊಂತ ಗಿಡಗಂಟಿ ನೋಡಿಕೊಂತ ಕುಂತಿರು ಅಂ ?

**ಹಾದಿಹೋಕ** : (ಹಗುರಕೆ) ಹೌದೆಲ್ಲಾ ಖರೆ ! ಮೈಲಾರಲಿಂಗ ಒಳ್ಳೇದು ಮಾಡ್ಲೆವಾ !

(ಶಾಂತವ್ವ ಹೊರಗೆ ಹೋಗುತ್ತಾಳೆ. ಹಾದಿಹೋಕನು 'ಸಂಸಾರವೆಂಬುದೊಂದು ಗಾಳಿಯ ಸೊಡರು' ಎಂಬ ಹಾಡನ್ನು ಹಾಡುತ್ತ, ಕೋಟು ಹೊಲಿಯಲಾರಂಭಿಸು ತ್ತಾನೆ. ಒಂದು ಕ್ಷಣದಲ್ಲಿ ಮಲ್ಲಪ್ಪನು ಮುಖದ ಮೇಲಿನ ವಸ್ತ್ರವನ್ನು ತೆಗೆದು, ಸುತ್ತಲೂ ಕಣ್ಣಾಡಿಸುತ್ತಾನೆ. ಹಾದಿಹೋಕ ಹೌಹಾರಿ, ನಡುಗಲಾರಂಭಿಸುತ್ತಾನೆ.

**ಮಲ್ಲಪ್ಪ** : (ಗಡಸು ಧ್ವನಿಯಲ್ಲಿ) ಹೆದರಬ್ಯಾಡಪಾ ತಮ್ಮಾ. ಸತ್ತ ಮನಸ್ಯಾ ನಿನಗೆಂದರ ಅಪಾಯ ಮಾಡತಾನೇನು ?

**ಹಾದಿಹೋಕ** : (ನಡುಗುತ್ತ) ನಾ ನಿಮಗ ಕೆಟ್ಟಾಗಲಿ ಅಂತೇನು ಅಂದಿಲ್ರೀ ಧಣಿಯಾರ! ನಾ ನಿಮ್ಮ ಆತ್ಮಕ್ಕs ಶಾಂತಿ ಸಿಗಲಿ ಅಂತ ದೇವರ ನಾಮಸ್ಮರಣಿ ಮಾಡಾಕತ್ತೇನ್ರಿ.

(ಹೊರಗೆ ಸಿಳ್ಳು ಹೊಡೆದ ಧ್ವನಿ ಕೇಳಿಸುತ್ತದೆ)

**ಮಲ್ಲಪ್ಪ** : (ಆ ಧ್ವನಿ ಕೇಳುತ್ತ, ಹೊರಸಿನ ಮೇಲೆ ಎದ್ದು ಕುಳಿತು, ಸಿಟ್ಟಿನಿಂದ) ಇಕಿ ಎಂದ ದಾರಿ ಹತ್ತತಾಳೊ ಅಂತೇನಿ. ನೋಡಪಾ ಹನುಮಂತಪ್ಪಾ, ಕೇಳೀದೇನ್ನಿದನ್ನ ? ಹಿಂಗ ಮತ್ತ ಯಾರರ ಹೆಂಗಸೂರು ಯಾಡೂಡ್ಡ ಬಟ್ಟು ಬಾಯಾಗಿಟ್ಟು ಸಿಳ್ಳು ಹೊಡಿಯೂದು ಕೇಳೀಯೇನು ? (ಅವಸರದಿಂದ ಮೇಜಿನ ಕಡೆ ನೋಡುತ್ತಾನೆ) ನೀರಡಿಕಿ ಸಾವು ಆಗೇತ್ಯೊ ಮಾರಾಯಾ. ಲಗೂ ಒಂದ ಮಗಿ ಸಿಂದಿ ತಾ ಇತ್ಲಾಗ ಬರೂದರಾಗ ?

**ಹಾದಿಹೋಕ** : (ಸಂಶಯದಿಂದ) ಹಂಗಾರ ನೀವು ಸತ್ತಿಲ್ರಿ, ಯಜಮಾನ್ರ?

**ಮಲ್ಲಪ್ಪ** : ನಾ ಬರೇ ಎಲುಬೂ ತೊಗಲೂ ಉಳದೇನಿ ಖರೆ. ನಾ ಹ್ಯಾಂಗ ಸಾಯುತೇನೊ ಮಾರಾಜಾ ?

**ಹಾದಿಹೋಕ** : (ತಪ್ಪಿನಲ್ಲಿ ಸಿಂದಿ ಹಾಕುತ್ತ) ಅಲ್ರೀ ಅಪ್ಪನಾರು ಬಂದು, ವಾಸನಿ ಗುರ್ತ ಹಿಡದ್ರು ಏನಂದಾರ್ರಿ ? ಇಲ್ಲಾಂದ್ರ ಸುಳ್ಳಸುಳ್ಳ ನೀವು ಹಿಂಗ ಸತ್ತವರಂಗ ಯಾಕ ನಾಟಕಾ ಮಾಡತಿದ್ರಿ ?

**ಮಲ್ಲಪ್ಪ** : ಅಕೀಗೇನು ಗುರ್ತಾಗೂದಿಲ್ಲೊ ಹನಮಂತಪ್ಪಾ, ಯಾಕಂದ್ರ ಅಕಿ ಹಂಗs ನನ್ನ ಸನೇಕ ಬರೂದಿಲ್ಲಾ ತಿಳೀತೇನು. ಇನ್ನೇನು ಭಾಳೊತ್ತು ನಾ ಸತ್ತಾವರಂಗ ಬೀಳೂದಿಲ್ಲಪಾ ಮಾರಾಯಾ, ನನ್ನ ಬೆನ್ನು ಒಂದs ಅಳತಿ ಹೊಡಿಯಾಕತ್ತೈತಿ. ಕಾಲೆಲ್ಲಾ ಜುಂಯ್‌ಹಿಡದಾವ. ಹಿಂತಾವರಾಗ, ಇವ ನೌನ ಈ ನೊಣಾ ಒಂದು ನನ್ನ ಮೂಗಿನ್ಯಾಗ ಹೊಕ್ಕು ಗುಳೂಗುಳೂ ಮಾಡಾಕತ್ತಿತ್ತು. ಎಷ್ಟು ಜೋರಾಗಿ ಸೀನು ಬಂದ್ರೂ ಗಟ್ಟಿಹಿಡದು ಸಾಕಾಗಿಹೋಗಿತ್ತು. ಮತ್ತು ನೀ ಒಬ್ಬಾಂವ–ಮಾಳಿ ಹಂಗಾತು, ಹಿಂಗಾತು! ಎಂಕಪ್ಪನ ಗುಡಿಯುಷ್ಟಿತ್ತು, ಹಾಂಗಿತ್ತು ಹೀಂಗಿತ್ತು ! ಕೂರ್ರ ನಾಗ್ಯಾ ಅಷ್ಟು ಛಲೊ ಹಾಡತಿದ್ದಾ, ಇಷ್ಟು ಛಲೊ ಹಾಡತಿದ್ದಾ ಅಂತೇಳಿ ನಿನ್ನ ಪುರಾಣಾ ಬ್ಯಾರೆ ಬಿಚ್ಚಿದ್ದಿ. (ಗಡಿಬಿಡಿಯಿಂದ ಒದರುತ್ತ) ಲಗೂ ಕೊಡಲ್ರೀ ಆ ಮಗಿ ? (ಹಾದಿಹೋಕ ಮಗಿಯನ್ನು ಕೊಡುತ್ತಾ, ಮಲ್ಲಪ್ಪ ಸಿಂದಿಯನ್ನು ಗುಟುಕರಿಸಿ ಜಿಲಂಮೆಯಿಂದ ಒಂದೆರಡು ಜುರುಕಿ ಎಳೆಯುತ್ತಾನೆ) ಅಲ್ಲಿ ಹೋಗು ಮೂಲ್ಯಾಗ ಒಂದು ಬಡಗಿ ಇಟ್ಟೇನಿ, ಅದನ್ನ ತಗೊಂಡು ಬಾ ಹೋಗು.

**ಹಾದಿಹೋಕ :** (ಮೂಲೆಯಲ್ಲಿಯ ಕೋಲನ್ನು ತಂದು) ಇದs ಬಡಿಗೇನ್ರೀ ಧಣಿ ಯಾರ ?

**ಮಲ್ಲಪ್ಪ :** ಹೌದು ಹೌದಪಾ. ನನ್ನ ಹೇಣ್ತಿ ಭಾಳ ಪಾಂಡಾ ಅದಾಳು ಅದಕ್ಕ ಇಟ್ಟೇನೆ ಈ ಬಡಿಗಿ, ತಿಳೀತೇನು ?

**ಹಾದಿಹೋಕ :** (ಆಶ್ಚರ್ಯಚಕಿತನಾಗಿ) ಅವ್ವಾವರು, ಮಂದಿ ಕೂಡ ಎಷ್ಟು ಚೆಂದ ಮಾತಾಡತಾರು. ಅವರಿಗೆ ನೀವು ಪಾಂಡಾ ಅಂತೀರಲ್ಲರಿ ?

**ಮಲ್ಲಪ್ಪ :** ಹನಮಂತಾ, ನೀ ಹೊಸದಾಗಿ ಬಂದಿ ನಿನಗೇನೂ ಗೊತ್ತಿಲ್ಲ. ಆಕಿ ಹ್ಯಾಂಗದಾಳನ್ನೂದು ನಿನಗೇನು ಗೊತ್ತು, ಚಂಪಾಳಚೌಕಡಿ ಅಂದ್ರ ಮುಗದಹೋತು. ನನಗರ ವಯಸ್ಸಾಗೇತಿ. ಈ ಹರೇದ ಮಿಂಡಿ ಭಾಳ ಜೋರಿಕಿ ಅದಾಳ. ನನಗೆ ಮೈಯಾಗಿನ್ನೂ ಅಟು ಶಕ್ತಿ ಐತೆಂತ ಹೇಳಿ ಬಾಳೇ ಬಚ್ಚೀವಾಗೇನಿ. (ಕೋಲನ್ನು ಕೈಯ್ಯಲ್ಲಿ ತೆಗೆದುಕೊಳ್ಳುತ್ತಾನೆ) ಇನ್ನೊಂದ ತಾಸೇದು ತಾಸು ಇಲ್ಲೇ ಇದ್ದು ನೋಡನೀ, ಏನು ಮಜಾ ನಡೀತೈತಿ ಈ ಮನ್ಯಾಗನ್ನೂದು ಗೊತ್ತಾಕ್ಕೈತಿ ನಿನಗ. (ಹೊರಗಿನ ಧ್ವನಿ ಕೇಳುವದಕ್ಕೋಸ್ಕರ ತಡೆದು) ಹೊರಗ ಯಾರರ ಬಂದರೇನು ?

**ಹಾದಿಹೋಕ :** (ಲಕ್ಷಗೊಟ್ಟು ಕೇಳುತ್ತ) ಅಲ್ಲೆ ದಾರ್‍ಯಾಗ ಯಾರೊs ಮಾತಾಡೂ ಹಂಗ ಕಾಣಸತೈತ್ರಿ ?

**ಮಲ್ಲಪ್ಪ :** ಏ ಹನಮಂತಾ ಹಾಯಿಲ್ಲೆ, ಈ ಬಡಿಗಿ ತಗೊ. ಇದನ್ನ ಏನು ಮಾಡ ಬೇಕು ಗೊತ್ತೈತಿ ? ಈ ಹಾಸಿಗಿ ಒಡಕ್ಕ ಮುಚ್ಚಿಡು ಅದನ್ನ. ಆಮ್ಯಾಲೆ ಮೊದಲ ಹ್ಯಾಂಗಿತ್ತು ಹಾಂಗ ಹೊಚ್ಚ ಈ ದುಪ್ಪಟಿ ನನ್ನ ಮ್ಯಾಲೆ. (ಅವಸರದಿಂದ ಮಲಗುತ್ತಾನೆ) ನೀನೂ ಮುಕ್ಕೊಂಡು ಬಿಡು. ಆಕಿ ಮುಂದ ಯಾವದರ ಬಗ್ಗೈ ಹೀಂಗ ಅಂತ ತುಟಿ ಎರಡು ಮಾಡಬ್ಯಾಡಾ. ಏನರ ಬಾಯಿ ಬಿಚ್ಚಿದಿ ಅಂದ್ರ ನಿನ್ನ ಕುತಗೀನs ಹಿಚಗತೇನಿ. ನಾ ಇದನ್ನೆಲ್ಲಾ ನಿನಗ ಹೇಳಬಾರದಾಗಿತ್ತು. ಆದ್ರ ಏನು ಮಾಡೂದು ನನಗ ನೀರಡಿಕೆ ಆಗಿ ಗಂಟಲ್ಲಾ ಒಂದs ಅಳತಿ ಸೆಳೀತಿತ್ತು, ಹಿಂಗಾಗಿ ನಿನ್ನ ಕೂಡ ಮಾತಾಡಾಕs ಬೇಕಾತು.

**ಹಾದಿಹೋಕ :** (ಮಲ್ಲಪ್ಪನ ತಲೆಗೆ ಹೊದಿಸುತ್ತ) ನೀವೇನು ಕಾಳಜಿ ಮಾಡಬ್ಯಾಡ್ರಿ ಧಣಿಯಾರ ! ಅವ್ವಾರ ಮುಂದ ನಿಮ್ಮ ಬಗ್ಗ ಹೇಳೂವಂತಾದ್ದರ ನನಗೇನು ಗೊತ್ತೈತಿ ಹೇಳ್ರಿ. (ಒಲೆಯ ಹತ್ತಿರ ಹೋಗಿ, ಹೆಣದ ಕಡೆಗೆ ಬೆನ್ನು ಮಾಡಿ, ನ್ಯಾಲಿಸ ಮೇಲೆ ಕೋಟು ಹೊಲಿಯುತ್ತ ಕೂಡ್ರುತ್ತಾನೆ)

**ಮಲ್ಲಪ್ಪ :** (ದುಪ್ಪಟ್ಟಿಯ ಕೆಳಗಿನಿಂದ, ಜಗಳಾಡುವ ಧ್ವನಿಯಲ್ಲಿ.) ಹನಮಂತಾ.

**ಹಾದಿಹೋಕ :** (ತ್ವರಿತವಾಗಿ) ಉಸ್. ಬಂದುಮಾಡ್ರಿ ಧಣೆಯಾರ, ಮಾತಾಡ ಬ್ಯಾಡ್ರಿ. ಅವರು ಇಲ್ಲೆ ಬಂದ್ರು.

(ಶಾಂತವ್ವ, ಎತ್ತರವಾದ ಮುಗ್ಧ ತರುಣ ಸೋಮಶೇಖರನೊಡನೆ ಪ್ರವೇಶಿಸು ತ್ತಾಳೆ)

**ಶಾಂತವ್ವ :** ನಾಯೇನು ದೂರ ಹೋಗಲಿಲ್ಲಪ್ಪಾ. ಹನಮಂತಪ್ಪ ಇಂವಾ ಇಲ್ಲೇ ಸನೇದಾಗs ಭೆಟ್ಟ್ಯಾದ ನನಗೆ.

**ಹಾದಿಹೋಕ :** ಹೌದ್ರಿ. ನೀವೇನೂ ಭಾಳ ಹೊತ್ತು ಹ್ವಾದಾಂಗ ಕಾಣೂದಿಲ್ಲ. ಲಗೂನs ಬಂದು ಬಿಟ್ರಿ. ಬೇಶಾತು ಬಿಡ್ರಿಯವ್ವಾ.

**ಶಾಂತವ್ವ :** ಇಂವೇನರ ಮಿಸಿಗ್ಯಾಡಿದ್ನೇನು ಮತ್ತ ?

**ಹಾದಿಹೋಕ :** ಏಟೂ ಮಿಸಿಗ್ಯಾಡಿಲ್ಲ ಬಿಡ್ರಿ.

**ಶಾಂತವ್ವ :** (ಸೋಮಶೇಖರನಿಗೆ) ಸೋಮಶೇಖರಾ ಗs ಅಲ್ಲಿ ಹೋಗಿ ಆ ದುಪ್ಪಟ್ಟಿ ತೆಗದು ಅವನ ಮಾರಿ ನೋಡು, ಅಂದ್ರ ನಾ ಹೇಳಿದ್ದು ಖರೇನೊ ಸುಳ್ಳೊ ಗೊತ್ತಾಗತೈತಿ.

**ಸೋಮಶೇಖರ :** ನಾ ಮರೇ ಒಲ್ಲೆವಾ ಮಾರಾಯಳs. ನನಗ ಹೆಣಾ ಕಂಡ್ರ ಹೆದರಿಕೆ ಸಾವ್ರ ಬರತೈತಿ.

(ಸೋಮಶೇಖರ ಹಾದಿಹೋಕನ ಎದುರಿಗೆ ಮಣೆಯ ಮೇಲೆ ಕೂಡ್ರುತ್ತಾನೆ. ಶಾಂತವ್ವ ಚಹದ ಕಿತ್ತಲಿಯಿನ್ನು ಒಲೆಯ ಮೇಲಿಟ್ಟು, ಒಲೆಯಲ್ಲಿ ಕುಳ್ಳನ್ನು ತುಂಬು ತ್ತಾಳೆ)

**ಶಾಂತವ್ವ :** (ಹಾದಿಹೋಕನ ಕಡೆಗೆ ಹೊರಳಿ) ಏನಪಾ ಹನಮಂತಪ್ಪಾ ನಮ್ಮ ಕೂಡ ಒಂದೀಟು ಚಾ ಕುಡೀತೀಯೇನು, ಇಲ್ಲಾಂದ್ರ (ಹೆಚ್ಚು ಬಲವಂತವಾಗಿ) ಒಳಗ ಕ್ವಾಣ್ಯಾಗ ಹೋಗಿ ಒಂದೀಟು ಅಡ್ಡಾಗ್ಯರ ಅಡ್ಡ್ಯಾಗು. ಹಿಂತಾ ಜೋ ಅನ್ನೂ ಮಳ್ಯಾಗ ದೂರಿನ ದಾರಿ ನಡದು ಭಾಳ ದಣದಿ ನೀನು.

**ಹಾದಿಹೋಕ :** ಮನ್ಯಾಗ ಹೆಣಾ ಇದ್ದಾಗ ನಿಮ್ಮನ್ನ ಒಬ್ಬರನs ಬಿಟ್ಟು ಹೋಗ ಬೇಕಾ, ನಾ. ಸಾದ್ದಿಲ್ಲರಿ ನಾ ಇಲ್ಲೇ ಇರತೇನಿ ನೋಡ್ರಿ. (ಮಗ್ಗಲಲ್ಲಿದ್ದ ಗ್ಲಾಸಿನಲ್ಲಿದ್ದ ನೀರನ್ನು ಗುಟುಕರಿಸಿ) ನಿಮ್ಮ ಚಾನೂ ಬ್ಯಾಡಾ, ಏನೂ ಬ್ಯಾಡ್ರಿ ನನಗ. (ಹೊಲಿಯುವುದನ್ನು ಮುಂದುವರಿಸುತ್ತಾನೆ)

(ಶಾಂತವ್ವ ಚಹವನ್ನು ತಯಾರಿಸುತ್ತಾಳೆ)

**ಸೋಮಶೇಖರ :** (ಒಂದು ಕ್ಷಣ ಹಾದಿಹೋಕನೆಡೆಗೆ ತಿರಸ್ಕಾರದಿಂದ ನೋಡುತ್ತ) ಏನೊ ಮಾರಾಯಾ ನಿನ್ನ ಕೋಟು ಎಲ್ಲಾ ಹರದು ಚಿಂದಿ ಆಗೇತಿ. ನೀ ಏನು ಲಗಾ ಒಗವರೂ ನಿನ್ನ ಕೋಟ ದುರಸ್ತಿ ಆಗೂದಿಲ್ಲಾ. ಏನು ದರಿದ್ರ ಸಿಂಪಿಗ್ಯಾ ಅದೀ ನೀನು ?

**ಹಾದಿಹೋಕ :** (ಸೋಮಶೇಖರನೆಡೆಗೆ ಒಂದು ಕ್ಷಣ ನೋಡುತ್ತಾನೆ) ಹೌದರೀ ನಾ ದರಿದ್ರ ಸಿಂಪಿಗ್ಯಾ ಆದೇನಿ ಖರೆ. ಅಲ್ಲರೀಯಪಾ ನೀವು ಇವತ್ತು ಜಾತ್ರಿ ಮುಗಿಸಿಗೊಂಡು ಬರಾಕತ್ತಿದ್ದಿರಿ. ಒಮ್ಮೆ ಹಿಂದಕ ಒಮ್ಮೆ ಮುಂದಕ ಓಡ್ಯಾಡಿ ಕುರಿ ಹೊಡಕೊಂಡು ಬಂದಿರೆಲ್ಲಾ ನೀವು ಹೆಂತಾ ಕುರಿ ಕಾಯೂ ದಾರದೀರ್ರಿ ?

**ಶಾಂತವ್ವ :** (ಮೇಲಿನ ಬಳಿ ಬಂದು, ಮೆಲುದನಿಯಲ್ಲಿ ಸೋಮಶೇಖರನಿಗೆ) ಅವರ ಮಾತೇನು ಮನಸ್ಸಿಗೆ ಹಚಿಗೊಬ್ಯಾಡ ಸೋಮಶೇಕ್ರಾ. ಅದು ಕುಡದ ನಿಶೇದಾಗ ಹಂಗ ಮಾತಾಡತೈತಿ. ಇನ್ನೊಂದೀಟು ಹೊತ್ತಿಗೆ ಬೀಳತೈತೆಳ.

**ಸೋಮಶೇಖರ :** ಅಂವಾ ಹೇಳೂದು ಅಗದೀ ಖರೆ ಐತಿ. ಇವತ್ತ ಇವೆಲ್ಲಾ ಕುರಿ ಅಟಿಗೊಂಡು ಬರಬೇಕಾದ್ರು ನನಗ ಯೋಳೂಹನ್ನೊಂದಾತು. ಇವನೌನ ಈ ಹೊಲಸ ಕುರಿಗೋಳು ಇತ್ಲಾಗ ಹೋಗಿ ಮಂದಿ ಹೊಲದಾಗ ತೊಗರಿ ತಿಂತಾವು, ಅತ್ಲಾಗ ಹೋಗಿ ಮತ್ತೊಬ್ಬರ ಹೊಲದಾಗ ಸಿಂಗಾ ತಿಂತಾವು. ಮತ್ತೊಂದುಸರೆ ಯಾವುದರ ಒಂದು ಕೆಸರಿನ ಗುಂಡ್ಯಾಗ ಬಿದ್ದು ಬ್ಯಾಬ್ಯಾ ಅಂತ ಒದರತಾವು. ಇವು ಒಳ್ಳೆ ವಿಚಿತ್ರ ಜಾತಿ ಕುರಿಗೋಳದಾವು. ನನಗ ಓಂತಾವುನ್ನ ಜೆಳಸಿ ರೂಢಿ ಇಲ್ಲ ಬಿಡು.

**ಶಾಂತವ್ವ :** (ಚಹದ ಪಾತ್ರೆಗಳನ್ನು ಸರಿಪಡಿಸುತ್ತ) ಓಂತಾ ಕುರಿ ಸಾಕೂದೂ, ಕಾಯೂವರಾಗ ಶಾಣ್ಯಾರನಬೇಕು ರಾಮದುರ್ಗದವರು, ಇಲ್ಲಾ ಸವದತ್ತಿಯವರು, ಇಲ್ಲಾಂದ್ರ ಗುಡದೂರ ಕಡೀಯಾರು. ಹೀಂಗಂತ ಮಂದಿ ಮಾತಾಡೂದು ಕೇಳೇನಿ ನಾನು. ಪಾಪ ನಮ್ಮ ಕೊರ‍್ರ ನಾಗ್ಯಾ ಇತ್ತಲ್ಲ,—ಸತ್ತು ಸ್ವರ್ಗಕ್ಕ ಹ್ವಾದ್ನು— ಭಾಳ ಒಳ್ಯಾವನೂ ಇದ್ದಾ ಶಾಣ್ಯಾನೂ ಇದ್ದಾ. ಅಂವಾ ನಮ್ಮ ಐದುನೂರು ಕುರಿ ನಡುವ ಬಂದುಬಂದು ಕುರಿಮರಿ ಮುಚ್ಚಿಗೊಂಡು ಹ್ವಾದ್ರ ನಮ್ಮಂವಗ ಗುರ್ತಾ ಹಿಡಿಯಾಕs ಬರತಿದ್ದಿಲ್ಲಾ. ಅಷ್ಟು ಎಬರs ತಬರs ಇದ್ದಾ ನಮ್ಮಾಂವಾ.

**ಸೋಮಶೇಖರ :** (ಅಸಮಾಧಾನದಿಂದ) ಕೊರ‍್ರ ನಾಗ್ಯಾಂದ್ರ ಹ್ವಾದವರ್ಷ ಕೆಲಿ ಭ್ರಮಾ ಆಗಿತ್ತಲ್ಲ ಅವನs ಏನs ಶಾಂತಿ ?

**ಶಾಂತವ್ವ :** ಹೌದು, ಅವನಽ !

**ಹಾದಿಹೋಕ :** (ದುಃಖದ ಧ್ವನಿಯಲ್ಲಿ) ನೋಡ್ರೀ ಶೇಕ್ರಪ್ಪನಾರ, ಕೊರ್‍ರ ನಾಗ್ಯಾ ಮಾತ್ರ ಭಾಳ ಚಾಲಾಕಿದ್ನು ಇಷ್ಟಽ ಅಲ್ದ ಭಾಳ ದೊಡ್ಡ ಮನಶ್ಯಾನೂ ಇದ್ದಾ. ಕುರಿ ಕಾಯೂದರಾಗಂತೂ ಭಾಳ ತೆಲಿ ಇತ್ತರೀ ಹುಡುಗ್ಗ, ಅವನ ಕುರಿಮಂದ್ಯಾಗ ಎಲ್ಲಾನೂ ಗುರ್ತಾ ಇಡತಿದ್ದ ನೋಡ್ರಿ. ಒಂದಽ ಒಂದು ಕುರಿ ಮಾಯಾದ್ರ ಹಿಂತಾದಽ ಕುರಿ ಹೋಗೇತೆಂತ ಹೇಳತಿದ್ದಾ. ಇಲ್ಲಿಂದ ಹಿಡದು ಹುಬ್ಬಳ್ಳೀತನಾ ಹಂಗಽ ಉಸುಲು ತುಗೊಳ್ಳಾಕ ಪುರ ಸೊತ್ತಿಲ್ಲದಾಂಗ ಓಡ್ಯಾಡತಿದ್ನು ನೋಡ್ರಿ.

**ಶಾಂತವ್ವ :** (ಗಕ್ಕನೆ ತಿರುಗಿ) ಹೌದಪಾ ಹನುಮಂತಪ್ಪಾ, ಕೊರ್‍ರ ನಾಗ್ಯಾ ಭಾಳ ಒಳ್ಳೇ ಮನಶ್ಯಾ ಇದ್ದಾ. ಕಡೀಕ ಹುಚ್ಚು ಹಿಡದು ಸತ್ತಾ. ಸತ್ತಾವರ ಬಗ್ಗೆ ಇದ್ದಾವರು ಒಂದನಾಕು ಒಳ್ಳೇ ಮಾತು ಆಡಿದ್ರ ಅದೂ ದೊಡ್ಡ ಮಾತಽ ಅಲ್ಲೇನು ?

**ಹಾದಿಹೋಕ :** ಆದನ್ನರೀ ನಾನೂ ಅಂದದ್ದು ಈಗ. ಅಂವಗ ಸತ್ತಲ್ಲಿ ಸ್ವರ್ಗ ಸಿಗ್ಲಿ ಅಂತ.

**(ಅವನು ಸೂಜಿಯನ್ನು ತನ್ನ ಕೋಟಿನ ಕಾಲರಿನ ಬುಡದಲ್ಲಿ ಚುಚ್ಚಿ, ಹೊಗೆಗಿಂಡಿಯ ಹತ್ತಿರ ಮಲಗಿಕೊಳ್ಳಲು ಸಿದ್ಧನಾಗತ್ತಾನೆ. ಶಾಂತವ್ವ ಮೇಜಿನ ಬಳಿ ಕೂಡ್ರುತ್ತಾಳೆ. ಅವರಿಬ್ಬರು ಹೊರಸಿಗೆ ಬೆನ್ನು ಮಾಡಿದ್ದಾರೆ)**

**ಸೋಮಶೇಖರ :** (ಅವಳೆಡೆಗೆ ವಿಚಿತ್ರ ದೃಷ್ಟಿಯಿಂದ ನೋಡುತ್ತ) ಅಲ್ಲಽ ಶಾಂತಿ ನಾ ಇನ್ನೊಂದು ಸುದ್ದಿ ಕೇಳೇನಿ, ಏನಂದ್ರ ಕೊರ್‍ರ ನಾಗ್ಯಾ ಇಲ್ಲೇನು ತಳಗ ಕಾಲುದಾರ್‍ಯೆತೆಲ್ಲ ಅಲ್ಲೆ ಹಾದು ಹೋಗುಮುಂದ, ರಾತ್ರಿರ್ಲಿ, ಹಗಲಿರ್ಲಿ, ಇಲ್ಲಿಗೆ ಬಂದು ನಿನ್ನ ಕೂಡ ಮಾತಾಡಲ್ಲೇ ಹೋಗಽತಿದ್ದಿಲ್ಲಂತ. ಖರೇ ಏನಿದು ?

**ಶಾಂತವ್ವ :** (ಸಣ್ಣ ಧ್ವನಿಯಲ್ಲಿ) ಹೌದು ನೋಡು, ಸೋಮಶೇಕರಾ ನೀ ಏನು ಹೇಳಿದೆಲ್ಲ ಅದು ಖರೇ ಐತಿ.

**ಸೋಮಶೇಖರ :** (ಮೊದಲಿನಂತೆ) ನಿನಗ ಗಂಡಸೂರ ಸಹವಾಸಾ ಹ್ಯಾಂಗ ಮಾಡ ಬೇಕು, ಏನೇನು ಹ್ಯಾಂಗ್ಯಾಂಗಂತ ಅವರ ಅಜ್ಜು ಮೆಟ್ಟು ಎಲ್ಲಾ ಗುತ್ರ್ಯೆತಿ. ಅಂದಲ್ಲೆ ಹಿಂತಾ ಚೌಂ ಅನ್ನೂ ಕೊಳ್ಳದಾಗ ಒಬ್ಬಾಕೆ ಚಾಕಿ ಮಾಡತಿ.

**ಶಾಂತವ್ವ :** (ಅವನಿಗೆ ಚಹಕೊಡುತ್ತ, ಮೆಲ್ಲಗೆ) ಅಲ್ಲಽ ಸೋಮಶೇಕರಾ ನೀನಽ ಹೇಳು, ಮಂದಿಲ್ಲಾ ಮಕ್ಕಳಿಲ್ಲದ ಜಗಾದಾಗ ನನ್ನಂತಾಕಿ ಒಬ್ಬಾಕೆ ಇದ್ದಾಗ,

ಯಾರ ಗಂಡಸೂರು ಬಂದ್ರೂ ಮಾತಾಡಸಾಕs ಬೇಕಾಕ್ಕೈತಿ. ಒಂದು ಏನರ ಕೆಲಸಿತ್ತಂದ್ರ ಸಂಜೀಮುಂದ ಯಾರನರ ಹುಡಿಕ್ಕೊಂಡು ಬರಾಕs ಬೇಕಾಕ್ಕೈತಿ. ಅವರೆಲ್ಲಾರೂ ಒಳ್ಳೆ ಮನಶ್ಯಾರಿದ್ರಂತ ನಾ ಅವರ ಕೂಡ ಮಾತಾಡತಿದ್ನಿ. ಇಲ್ಲಾಂದ್ರ ನಾ ಯಾರಿಗೆರ ಸೊಪ್ಪು ಹಾಕೇನ್ಯಾ. ಹಾಂಗ ನೋಡಿದ್ರ ನಾನೂ ಭಾಳ ಧೀಮಾಕದಾಕೆದೇನಿ. ಸಣ್ಣಾಕಿದ್ದಾಗೂ ಹಿಂಗs ಇದ್ದಾಳಿ. **(ಸೋಮಶೇಖರನೆಡೆಗೆ ನೆಟ್ಟದೃಷ್ಟಿಯಿಂದ ನೋಡುತ್ತಾಳೆ)** ಇವತ್ತಿಗೂ ಹಿಂಗs ನನ್ನ ಸ್ವಭಾವ ನಾ ಹೇಳೂದು ಸುಳ್ಳಲ್ಲ.

**ಸೋಮಶೇಖರ :** **(ಹಾದಿಹೋಕನೆಡೆಗೆ ನೋಡಿ ನಿದ್ರಿಸುತ್ತಾನೆಂಬುದನ್ನು ಖಚಿತಪಡಿಸಿ ಕೊಂಡು, ಹೆಣದ ಕಡೆ ಕೈಮಾಡುತ್ತ)** ಮತ್ತ ಇವನ ಕೂಡ ಮದಿವ್ಯಾಗೂ ಮುಂದೂ ಹಿಂಗs ನಿನ್ನ ಧೀಮಾಕದಾಗs ಇದ್ದೇನು ಶಾಂತಿ ನೀ ?

**ಶಾಂತವ್ವ :** ಆವಾಗ ಧಿಮಾಕ ಮಾಡಾಕ ಹ್ಯಾಂಗ ಬರತಿತ್ತು ? ಒಂದೀಟರ ಹೊಲ ಮನಿ, ಕುರಿ, ದನಕರಾ ಇದ್ದಾವನ್ನ ಮಾಡಿಕೊಳ್ಳಾಕs ಬೇಕಾಗಿತ್ತು. ಇಲ್ಲಾಂದ್ರ ಲಗ್ನಾಮೂರ್ತಿಲ್ಲಲ್ಲೆ ಹಿಂಗs ಮುದಿಕಿ ಆಗಬೇಕಾಗತಿತ್ತು.

**ಸೋಮಶೇಖರ :** **(ವಿವೇಕದಿಂದ)** ಅದೂ ಬರೋಬ್ಬರೀನs ಶಾಂತಿ. ನೀ ಮಾಡಿದ್ದೇನೂ ತಪ್ಪಿಲ್ಲಾ. ಯಾಕಂದ್ರ ನಿನ್ನ ಗಂಡ ಸತ್ರೂ ನಿನಗ ಛಲೊ ಹೊಲಮನಿ ಬಿಟ್ಟು ಹೋಗ್ಯಾನ. ಮೇಲಾಗಿ ಇಲ್ಲಿ ನಿನಗ ಯಾರ ಕಿಟಿಕಿಟೀನೂ ಇಲ್ಲಾ. ಬೇಕಾದಷ್ಟು ರೊಕ್ಕಾನೂ ಇಟ್ಟುಹೋಗ್ಯಾನ ಕಾಣಸತೈತೆಲ್ಲಾ ?

**ಶಾಂತವ್ವ :** **(ತನ್ನ ಬಾಳೆ ಪಟ್ಟಿಯಿಂದ ಹಣದ ಚೀಲವನ್ನು ತೆಗೆದು ಮೇಜಿನ ಮೇಲಿಡುತ್ತ)** ನಾ ಅವನ್ನ ಮಾಡಿಕೊಂಡದ್ದು ಬಾಳ ಹುಚ್ಚತನಾ ಆತು ಅಂತ ನಾ ಹಗಲೂ ರಾತ್ರೀ ಚಿಂತಿಮಾಡೇನಿ. ಒಂದು ತುಕಡಿ ಹೊಲಾ, ಒಂದನಾಕು ಕುರಿ, ಆಕಳಾ ತುಗೊಂಡು ಏನು ಮಾಡೂದೂ ? ಸೋಮಶೇಕರಾ ನೀನs ನೋಡು ಆ ಬಾಗಲ್ದಾಗಿಂದ ಏನು ಕಾಣಸತೈತಿ ? ನಾನು ಹಗಲಿ ಹನ್ಯಾಡ್ಡ ತಾಸು ಕಟಬೊ ಅಂತ ಹಿಂತಾ ಬಾಗಲದಾಗ ಕುಂತು ಬರೇ ಧೋ ಅನ್ನೂ ಮಳಿ ಇಲ್ಲಾ ಮಂಜು ನೋಡಿಕೊಂತ, ಬೌಂವಂತ ಬೀಸೂಗಾಳಿ, ಗಿಡದ ಸೊಂಯುಗುಡೂ ಸಪ್ಪಳಾ, ದಬ್ಬದಬ್ಬಂತ ಹರಿಯೂ ನೀರಿನ ಸಪ್ಪಳಾ ಕೇಳಿ ಕೊಂತ ಕಾಲಾ ಕಳೀತಿದ್ನಿ.

**ಸೋಮಶೇಖರ :** **(ಅಸಮಾಧಾನದಿಂದ)** ಶಾಂತಿ ಇವತ್ತ ನಿನಗ ಏನಾಗೇತಿ ಹೇಳು ? ನಿನ್ನಂಗ ಯಾರು ಮಾತಾಡತಾರು ಗೊತ್ತೈತೇನು, ಭಾಳವರ್ಷ

ಗುಡ್ಡಗಾಡಿನ್ಯಾಗ ಇದ್ದು ಕಷ್ಟಪಟ್ಟಿರತಾರಲ್ಲಾ ಹಂತಾ ಗಂಡಸೂರು ಮಾತಾಡೂ ಮಾತದು, ನೀ ಅಲ್ಲಾ.

**ಶಾಂತವ್ವ :** **(ನಾಣ್ಯಗಳನ್ನು ಮೇಜಿನ ಮೇಲಿಡುತ್ತ)** ಇವತ್ತ ಕೆಟ್ಟಗಾಳಿ ಬಿಟ್ಟು ಸಿಡ್ಲು ಮಿಂಚೂ ಒಂದು ರಾತ್ರಿ ಭಾಳ ಅಂಜಿಕಿ ಬರೂವಂಗೈತಿ. ಅಲ್ಲs ಸೋಮು ಶೇಕರಾ ನಾನೂ ಈ ಗುಡ್ಡದಾಗಿರಾಕತ್ತಿ ಭಾಳ ವರ್ಷಾಗಲಿಲ್ಲೇನು ? ಮುಂಜೇಲೆ ಚಂಜೀಕೆ ಕೂಳು ಕುಚ್ಚಿ, ರೊಟ್ಟಿ ಬಡದು ನನಗೂ ಬ್ಯಾಸರಾಗೂದಿಲ್ಲೇನು ? **(ಅವಸರದಿಂದ ನಾಣ್ಯಗಳನ್ನು ಮೇಜಿನ ಮೇಲೆ ಹೊಂದಿಸುತ್ತಾಳೆ)** ಮಳಿಗಾಲಿರ್ಲಿ, ಚಳಿಗಾಲಿರ್ಲಿ, ಬ್ಯಾಸಿಗಿರ್ಲಿ ಇಲ್ಲೇ ಕುಂತುಕುಂತು ನನಗೂ ವಾಕರಕಿ ಬರೂದಿಲ್ಲೇನs ಸೋಮುಶೇಕರಾ. ಸಣ್ಣಾವರೆಲ್ಲಾ ಬೆಳದು ದೊಡ್ಡಾವರಾಗತಾರ, ದೊಡ್ಡಾವರೆಲ್ಲಾ ಮುದುಕರಾಗತಾರ ನಮ್ಮ ಕಣ್ಣೆದುರ್ಗೇ. ಹಂಗs ಒಂದು ಉದಾರಣೆ ಕೊಡಬೇಕಂದ್ರ, ನೀ ನಮ್ಮ ಮಾದೇವಿನ್ನ ನೋಡಿದ್ದೆಲ್ಲ, ಸಣ್ಣದಿದ್ದಾಗ ಈಟಿತ್ತು ( ಕೈಯಿಂದ ತೋರಿಸಿ ). ಈಗ ನೋಡಿದ್ರ ನಿನಗ ಹಂಗs ಗುರ್ತ ಹತ್ತೂದಿಲ್ಲಾ, ಅಷ್ಟು ದೊಡ್ಡಾಕ್ಯಾಗ್ಯಾಳ. ಚೆಲುವೆಂದ್ರ ಚೆಲುವಿ, ನೋಡಿದಾವರ ಬಾಯಾಗ ಹಂಗs ನೀರು ಬರಬೇಕು. ಈಗ ಯಾಡ್ಡು ಮಕ್ಕಳ ತಾಯಾಗ್ಯಾಳು. ಇನ್ನು ನಾಕು ತಿಂಗಳಿಗೆ ಮೂರನೇದ್ದು ಒಂದು ಬರತೈತಿ. **(ನಿಲ್ಲುತ್ತಾಳೆ)**

**ಸೋಮಶೇಖರ :** **(ನಾಣ್ಯಗಳ ಮೂರು ಗುಂಪುಗಳನ್ನು ಸರಿಸುತ್ತ)** ಇವು ಅರುವತ್ತ ರೂಪಾಯಿ ಆದೂವಲ್ಲಾ ಶಾಂತಿ ?

**ಶಾಂತವ್ವ :** **(ಅದೇ ಧ್ವನಿಯಲ್ಲಿ ಮುಂದುವರಿಸುತ್ತ)** ಸೋಮುಶೇಕರಾ, ಇನ್ನೊಂದು ಉದಾರಣೆ ಕೊಡತೇನಿ ಕೇಳು. ನಮ್ಮ ಪಾರೀ ನೋಡಿದ್ದೆಲ್ಲ ನೀ, ಹ್ಯಾಂಗಿತ್ತು. ಹಾಲು ಎಷ್ಟು ಒತ್ತರ ಹಿಂಡತಿದ್ಲು, ತೆಳ್ಳನ್ನ ರೊಟ್ಟಿ ಮಾಡೂವರಾಗ ಎಷ್ಟು ಚಳಕಿದ್ಲು, ಎಷ್ಟು ಜೂಟಿದ್ಲು, ಈಗ ನೋಡಿದ್ರ ಏನಂತೀಯೇನ ನೀ. ಎಲ್ಲಾ ಹಲ್ಲು ಬಿದ್ದಾವು, ಕೈಕಾಲು ನಡಗತಾವು, ಬಚ್ಚಬಾಯಿ ಮಾಡಿಕೊಂಡು ಮನ್ಯಾಗ ಮುದ್ದಾಗಿ ಕುಂತಿರತೈತಿ ಇಲ್ಲಾಂದ್ರ ದಾರ್‍ಯಾಗ ಅತ್ಲಾಗಿತ್ಲಾಗ ಅಡ್ಡ್ಯಾಡತಿರತೈತಿ. ತೆಲ್ಯಾಗಂತೀ ಒಂದು ಕೂದಲಿಲ್ಲಾ, ಎಲ್ಲಾ ಸಪಾಟಾಗೇತಿ. **(ಮತ್ತೆ ನಿಲ್ಲುತ್ತಾಳೆ)**

**ಸೋಮಶೇಖರ :** ಇಲ್ಲಿ ನೂರು ರೂಪಾಯಿ ಚಿಲ್ಲರ, ಎರಡ್ನೂರುರೂಪಾಯಿ ನೋಟು ಅದಾವು. ಒಟ್ಟ ಎಲ್ಲಾ ಕೂಡಿ ಮುನ್ನೂರು ರೂಪಾಯಿ ಅದಾವು. ಇದೇನು ಕಡಿಮಿ ಅಂತಿಳದೀಯೇನು ? ಇನ್ನ ಮ್ಯಾಲೆ ಹರೇದ ಹುಡುಗನ್ನ

ಮಾಡಿಕೊಂಡೆಂದ್ರ ಹಿಂದಿನಂಗ ನೀಯೇನು ಚಿಂತಿ ಮಾಡಬೇಕಾಗಿಲ್ಲಾ ಶಾಂತಿ. ನಾ ಜಾತ್ರೀಗೆ ಹೋಗಿದ್ನೆಲ್ಲಾ, ಎಲ್ಲೆ ಹ್ವಾದಲ್ಲೆಲ್ಲಾ ಎಲ್ಲಾರೂ ನನ್ನ ಕುರಿ ಭಾಳ ಮೆಚ್ಚಿಗೊಂಡರು. ಹಿಂಗಾಗಿ ನನ್ನ ಕುರೀಗೆ ಚಲೊ ಕಿಮ್ಮತ್ತು ಸಿಕ್ಕಿತಿ. ಈಗ ನೋಡು, ನಾಯೇನು ವ್ಯಾಪಾರ ಮಾಡೂದ ರಾಗ ಧಡ್ಡ ಅಲ್ಲ ಅನ್ನೂದು ತಿಳೀತಿಲ್ಲೊ ?

**ಶಾಂತವ್ವ :** ಹಂಗರ ಒಟ್ಟು ಎಷ್ಟು ರೊಕ್ಕ ಸಿಕ್ಕತಿ ಎಲ್ಲಾ ಕೂಡಿ ?

**ಸೋಮಶೇಖರ :** ನೋಡು ಶಾಂತಿ, ಎಲ್ಲಾ ಕೂಡಿ ಒಟ್ಟಿಗೆ ನಾಕುನೂರರೂಪಾಯಿ ಬಂತು. ···ನಿನ್ನ ಗಂಡನ ಅಂತ್ಯಸಂಸ್ಕಾರ ಎಲ್ಲಾ ಮುಗಿಯೂತನಾ ತಡೀ, ಆಮ್ಯಾಲೆ ನಾವಿಬ್ರೂ ನರೇಂದ್ರದ ಕಲ್ಮೇಶ್ವರ ಗುಡಿಗೆ ಹೋಗಿ ಉಡಿಕಿ ಮಾಡಿಕೊಂಡು ಬರೂನು. ನಾನೂ ನನ್ನ ಎಲ್ಲಾ ಕುರಿಮಂದಿ ಇಲ್ಲೀ ಹೊಡಕೊಂಡು ಬಂದು, ಇದ್ದ ಬಿಡತೇನಿ. ಆಮ್ಯಾಲೆ ಬೇಕಾ ವಷ್ಟು ಮಳಿ ಆಗ್ಲಿ, ಮಂಜು ಬೀಳ್ಲಿ, ನಾವೆದಕೂ ಹೆದರಬೇಕಾಗಿಲ್ಲಾ.

**ಶಾಂತವ್ವ :** **(ಅವನಿಗೆ ಚಹವನ್ನು ಕೊಡುತ್ತ)** ಅಲ್ಲs ಸೋಮಶೇಕರಾ, ನಾಯಾಕ ನಿನ್ನ ಮದಿವ್ಯಾಗಬೇಕು ? ಯಾಕ ಹೇಳತೇನೆಂದ್ರ ನೀನೂ ಮುದುಕಾಗತಿ, ನಾನೂ ಮುದುಕ್ಯಾಗತೇನಿ. ಇನ್ನೊಂದು ಸ್ವಲ್ಪದಿಂದಾಗ ಅಂವಾ ಕುಂತಿ ದ್ದನಲ್ಲ ಹಂಗs ನೀನೂ ಹಾಸಿಗ್ಯಾಗ ಮುದುಡಿಕೊಂಡು ಕುಂತಿರತಿ. ನಿನ್ನ ತೆಲಿ ನಡಗತಿರತೈತಿ, ಹಲ್ಲು ಬಿದ್ದಿರತಾವು, ಕುರಿಗೋಳೆಲ್ಲಾ ತಿಂದು ಅಲ್ಲೊಂದು ಇಲ್ಲೊಂದು ಕಂಟಿ ಉಳಿದಿರತಾವಲ್ಲ ಹಂಗ ನಿನ್ನ ತೆಲ್ಯಾಗ ಅಲ್ಲ್ಯೊಂದಿಲ್ಲ್ಯೊಂದು ಬಿಳೀ ಕೂದಲಾ ಕಾಣಸತಿರತಾವು.

**(ಮಲ್ಲಪ್ಪ ಸಪ್ಪಳಿಲ್ಲದಂತೆ ಎದ್ದು ದುಪ್ಪಟಿಯನ್ನು ಹೊದ್ದು, ಗದ್ದಕ್ಕೆ ಕೈ ಹಚ್ಚಿ ಕೊಂಡು ಕೂಡ್ರುತ್ತಾನೆ. ತಲೆಯ ಎಡ-ಬಲ-ಹಿಂಭಾಗದಲ್ಲಿ ಬಿಳಿಗೂದಲ ಕಾಣಸು ತ್ತವೆ)**

**ಶಾಂತವ್ವ :** **(ಅವನನ್ನು ನೋಡದೆ ಮುಂದುವರಿಸುತ್ತಾಳೆ)** ಎಲ್ಲಾರೂ ಒಂದಿಲ್ಲ ಒಂದಿನಾ ಮುದುಕರಾಗsಬೇಕನ್ನೂದು ಎಷ್ಟು ಕೆಟ್ಟನಸತೈತೆಲ್ಲಾ? ನಮ್ಮಾಂವ ನಂಗ ಹಲ್ಲು ಬಿದ್ದು ಹೋಗಿ, ಯಾವಾಗ್ಲೂ ಗುರ್ರನಕೊಂತ, ಹುಚಗೊಡ್ಡ ದಂತಾ ಗದ್ದಾ ಮಾಡಿಕೊಂಡು ಹಾಸಿಗ್ಯಾಗ ಗೂಡಿಕೊಂಡು ಕುಂಡ್ರೂದು ವಿಚಿತ್ರಲ್ಲಾ ? ಸೋಮಶೇಕರಾ, ಒಟ್ಟ ಹೇಳಬೇಕಂದ್ರ ಮನಶ್ಯಾ ಮುದುಕಾ ಗೂದಂದ್ರs ವಿಚಿತ್ರಲ್ಲಾ ?

**ಸೋಮಶೇಖರ :** ಹಂಗಲ್ಲ ಶಾಂತಿ, ನೀ ಇಷ್ಟದಿನಾ ಈ ಮುದುಕನ ಕೂಡ ಇದ್ದಿದ್ದು ಒಬ್ಬಂಟಿಗ್ಯಾಳಾಗಿದ್ದಿ, ಅದಕ್ಕ ನಿನಗ ಕೇಸರಿಟ್ಟು ಹೋಗೇತಿ. ಮತ್ತೂ ಆಗಲ್ಲೆ ಹೇಳಿನ್ನೆಲ್ಲಾ ಹಂತಾ ಗುಡ್ಡದಾಗ ಭಾಳ ವರ್ಷದ್ದ ಬಂದ ಗಂಡಸೂರಂಗ ಮಾತಾಡತಿ ನೀ. **(ಅವಳ ನಡುವನ್ನು ಬಳಸಿ)** ಆದದ್ದಾಗಿ ಹೋತು. ಅದನ್ನೆಲ್ಲಾ ಮರತುಬಿಡು. ಇನ್ನಮ್ಯಾಲೆ ಹರೇದಾಂವನ್ನ ಮಾಡಿ ಕೊಂಡು ತಣ್ಣಗ ಬಾಳೇಮಾಡಿಕೊಂತಿರು.

**(ಮಲ್ಲಪ್ಪ ಜೋರಾಗಿ ಸೀನುತ್ತಾನೆ. ಸೋಮಶೇಖರ ಹೆದರಿ ಬಾಗಿಲಿಗೆ ಓಡಿ ಹೋಗಲು ಪ್ರಯತ್ನಿಸುತ್ತಾನೆ. ಅಷ್ಟರೊಳಗೆ, ಬಿಳಿಯ ವಸ್ತ್ರಗಳನ್ನು ಧರಿಸಿದ ಮಲ್ಲಪ್ಪನು ಹೊರಸಿನಿಂದ ಜಗಿದು, ಬಡಿಗೆಯನ್ನು ಬೆನ್ನಹಿಂದೆ ಹಿಡಿದು, ಬಾಗಿಲಿಗೆ ಅಡ್ಡವಾಗಿ ನಿಲ್ಲುತ್ತಾವೆ)**

**ಸೋಮಶೇಖರ :** ಅಯ್ಯೋ ದೇವರs, ನೀನs ಕಾಯಬೇಕಪಾ ನಮ್ಮನ್ನ.... ವೆಂಕಟ ರಮಣಾ ಗೋವಿಂದಾ ಗೋವಿಂದ. **(ದೇವರಿಗೆ ಕೈ ಮುಗಿದು ಹಿಂದೆ ಸರಿಯುತ್ತಾನೆ)**

**ಮಲ್ಲಪ್ಪ :** **(ಅವನೆಡೆಗೆ ಕೈಮಾಡುತ್ತ)** ಲೇ ಶೇಕರಾ ನಾ ಇಲ್ಲಿ ಬಿದ್ದು ಕೊಳಿಯೂ ಹೊತ್ತಿನ್ಯಾಗ ನೀ ಆಕೀನ್ನ ಮಾಡಿಕೊಳ್ಳಾಕ ಸಾದ್ದಿಲ್ಲಾ. ಒಂದs ಒಂದು ಏಟು ಬಡಿಗೀಲೆ ಬಾರಿಸಿನ್ನೆಂದ್ರ ಎಂಟುದಿನಾ ಬೆಚ್ಚರಿಬಿ ಕಾವು ಕೊಟಗೋ ಬೇಕಾದೀತು ನೋಡು.

**ಸೋಮಶೇಖರ :** **(ಶಾಂತವ್ವನಿಗೆ)** ಶಾಂತಾ ಈ ಮುದುವಾ ಏನು ಕಿಟಿಕಿಟೀ ಹಚ್ಯಾನವಾ ? ನೀ ಹೇಳಿದರ ಕೇಳತಾನು. ಸುಮ್ಮನಾಗಂತ ಹೇಳಂವಗ ಒಂದೀಟು.

**ಶಾಂತವ್ವ :** **(ಹಾದಿಹೋಕನೆಡೆಗೆ ನೋಡುತ್ತ)** ಅಲ್ಲs ಹನಮಂತಪ್ಪಾ, ಅಂವಾ ಜೀವಂತದಾನೊ, ಸತ್ತಾನೊ ನೋಡು.

**ಮಲ್ಲಪ್ಪ :** **(ಅವಳೆಡೆಗೆ ಹೋಗುತ್ತ)** ನಾ ಸತ್ತೇನೊ, ಜೀವಂತದೇನೊ ಅನ್ನೂದು ತಗೊಂಡು ಏನು ಮಾಡತೀ ? ಇನ್ನಮ್ಯಾಲೆ ನೀನು ಹರೇದ ಗಂಡನ್ನ ಮಾಡಿ ಕೊಂಡು ಲಲ್ಲುಹೊಡಿಯೂದು, ಮುದುಕನ್ನ ಬೈಯ್ಯೂದು ಎಲ್ಲಾ ಬಂದಾ ಕೈತಿ. **(ಬಾಗಿಲು ತೆಗೆಯುತ್ತಾನೆ)** ಲೇ ಮಗನ ನನ್ನ ಮನೀಬಿಟ್ಟು ಹೊರಗ ನಡಿ ಮೊದಲ, ಮತ್ತೆಂದರ ಒಳಗ ಕಾಲಿಟ್ಟೆಂದ್ರ ನೋಡು ನಿನ್ನ ಮೈಯ್ಯಾ ನ್ನೆಲುಬು ಪುಡಿಪುಡಿ ಮಾಡಿ ಬಿಡತೇನಿ.

**ಹಾದಿಹೋಕ :** **(ಎದ್ದುನಿಂತು)** ನೋಡ್ರಿಯಪಾ, ನೀವು ಮನಿ ಯಜಮಾನ್ರಾದವರು ಹಿಂಗ ಹೆಣಮಕ್ಕಳಿಗೆ ಎದ್ವಾತದ್ವಾ ಮಾತಾಡಬಾರದು. ಪಾಪ ಅವರು

ಒಬ್ಬರ ಅಂತ ಎಲ್ಲಿ ಹೋಗಬೇಕು ಹಿಂಗ ನೀವು ಮನಿ ಬಿಟ್ಟು ಹೊರಗ ಹಾಕಿದ್ರ ?

**ಮಲ್ಲಪ್ಪ :** ಆಕಿಗೇನು ಧಾಡಿ ಹಲಕಟ್‌ರಂಡೀಗೆ ಹೋಗ್ಲಿ, ಆ ಪಾರಿಯಂಗ ಪ್ಯಾಟ್ಯಾಗ ಹೋಗಿ ಭಿಕ್ಷಾಬೇಡಿಕೊಂತ ತಿರಗ್ಯಾಡ್ಲಿ. ಇಲ್ಲಾಂದ್ರ ಮನಿ ಮನಿಗೆ ಜಾತಿಗ್ಯಾರಂಗ ಹಾಡಿಕೊಂತ ಅಡ್ಡ್ಯಾಡ್ಲಿ. (ಶಾಂತವ್ವನಿಗೆ) ಲೇ ಶಾಂತಿ, ಹೊರಗ ನಡಿ ನೀ ಮೊದಲ, ನನ್ನ ಕಣ್ಣೆದುರ್ಗೆ ನಿಲ್ಲಬ್ಯಾಡಾ. ನಿನಗೂ ಇನ್ನೊಂದೀಸುದಿಂದಾಗ ನನ್ನ ಪರಿಸ್ಥಿತಿ ಬರತೈತಿ. ನಿನ್ನವೂ ಹಲ್ಲು ಬಿದ್ದು ಬಚ್ಚಬಾಯಾಗಿರತೈತಿ. ಕುರಿ ಕಡದು ಅಲ್ಲೊಂದಿಲ್ಲೊಂದು ಉಳದ ಕಂಟೀಯಂಗ ನಿನ್ನ ತೆಲ್ಯಾಗೂ ಅಲ್ಲೊಂದಿಲ್ಲೊಂದು ಬಿಳೀ ಕೂದಲಾ ಉಳಿದಿರತಾವು.

(ನಿಲ್ಲುತ್ತಾನೆ. ಅವಳು ಸೋಮಶೇಖರನೆಡೆಗೆ ಹೊರಳಿನೋಡುತ್ತಾಳೆ)

**ಸೋಮಶೇಖರ :** (ಹೆದರಿಕೆಯಿಂದ) ಇವತ್ತ ಅಲ್ಲೇ ಕೆಳಗಡೆ ಸಪ್ಪಾಪುರದಾಗ ಒಂದು ಮೆರವಣಿಗಿ ಐತಿ.

**ಮಲ್ಲಪ್ಪ :** ಅಷ್ಟುದೂರ ಹಿಂತಾಕ ಹೋಗಾಕ ಸಾಧ್ಯನs ಇಲ್ಲಾ.... ಇಕಿ ಹೋಗೂ ಪಾರ್‍ಯಾಗ ನೋಡೇನೆಂದ್ರು ಒಂದು ಪಿಳ್ಳಿ ಸಿಗೂದಿಲ್ಲಾ. ಇಕಿ ಕಡೇ ಉಸುರು ಬಿಡೂತನಕಾ ಎಲ್ಲೀರ ರ‍್ಯಾವ್ಯಾಗ ಸಿಗಿಬಿದ್ದಿರತಾಳು. ಸತ್ತ ಕುರಿ ಯಂಗ ಕೈಕಾಲು ಸೆಟಿಸಿಗೊಂಡು ಬಿದ್ದಾಗ, ಸುಡುಗಾಡಸಿದ್ದರು ದೊಡ್ಡ ದೊಡ್ಡ ಸಲಿಕಿ ತಗೊಂಡು ಬಂದು ಇಕೀನ್ನ ಎಬ್ಬಿಕೊಂಡು ತಗೊಂಡು ಹೊಕ್ಕಾರ. ತಿಳೀತೇನ್ನಿನಗ ?

**ಶಾಂತವ್ವ :** (ಸಿಟ್ಟಿನಿಂದ) ನಂದಂತೂ ಹಿಂಗಾತು. ನೀ ಕುಣ್ಯಾಗ ಕುಂತಾಗ ಹ್ಯಾಂಗಿರ್ತಿ ? ನೀ ಜೀವಂತಿದ್ದಾಗ ಎಷ್ಟು ವಾಳ್ಯಾಗಿ, ಸತ್ತಮ್ಯಾಲೂ ಅಷ್ಟs ವಾಳ್ಯಾಗಿರ್ತಿ. (ಒಂದು ಕ್ಷಣ ಸಿಟ್ಟಿನಿಂದ ಅವನೆಡೆಗೆ ನೋಡುತ್ತಾಳೆ. ಆಮೇಲೆ ಹೊರಳಿ, ಅಳುವ ಧ್ವನಿಯಲ್ಲಿ ಮತ್ತೆ ಪ್ರಾರಂಭಿಸುತ್ತ) ಇಷ್ಟು ಪಾಳಿಪತ್ತಿ, ಬೌಂವಂತ ಗಾಳಿ ಬೀಸಿದರೂ ನೀ ಇನ್ನs ಸಾಯುವಲ್ಲಿ, ಮತ್ತ ಹಾಸಿಗ್ಯಾಗ ಎದ್ದು ಕುಂತರ, ನಿನ್ನ ಹಣೇಬಾರಕ ಯಾರೇನು ಮಾಡತಾರ ?

**ಮಲ್ಲಪ್ಪ :** ನೀನು ನನ್ನ ಮನಿ ಬಿಟ್ಟು ಹೊರಗ ಹ್ವಾದ್ದಿನಾನs ನಾ ಸತ್ತರ ನಾ ದೊಡ್ಡ ಪುಣ್ಯಾವಂತಾ ಅಂತಿಳಕೊಂತೇನಿ. (ಬಾಗಿಲ ಕಡೆಗೆ ತೋರಿಸುತ್ತ) ಮೊದಲ ನಡಿ ನೀ ಹೊರಗ. ಒಂದs ನೀ ಹಸಿವ್ಯಾಗೇತಿ, ನಿದ್ದಿ ಬಂದೈ

ತೆಂತ ಹೊಜ್ಜ್ಯಲ ಒಳಗ ಕಾಲು ಹಾಕೀದೀ ಅಂದ್ರು ನೋಡು ಗತೀಸ್ಯ ನೆಟ್ಟಗಾಗಾಕಿಲ್ಲ.

**ಹಾದಿಹೋಕ** : (ಸೋಮಶೇಖರನೆಡೆಗೆ ಕೈಮಾಡಿ) ಹಂಗಾದರ ಅವರು ಅಪ್ಪನಾರನ ಕರಕೊಂಡು ಹೋಗತಾರು ಬಿಡ್ರಿ.

**ಶಾಂತವ್ವ** : ನನ್ನ ಕರಕೊಂಡುಹೋಗಿ ಏನು ಮಾಡತಾನಂವಾ?

**ಹಾದಿಹೋಕ** : ಕರಕೊಂಡುಹೋಗಿ ಏನಮಾಡತಾರಂದ್ರೇನ್ರೀಯವ್ವಾ, ತಮ್ಮ ಊಟದಾಗ ನಿಮಗ ಅರ್ಧಾ ಊಟಾ ಕೊಡತಾರು, ತಮ್ಮ ಹಾಸಿಗ್ಯಾಗ ನಿಮಗ ಅರ್ಧಾ ಹಾಸಿಗಿ ಕೊಡತಾರು.

**ಮಲ್ಲಪ್ಪ** : ಲೇ ಹನುಮಾ, ಹುಚ್ಚು ಆ ಶೇಕರ್ಯಾಗ ಹಿಡದೈತ್ಯೋ, ನಿನಗ ಹಿಡದೈತ್ಯೋ ನನಗ ತಿಳೀವಲ್ದು. ಅರೆ ಮೊದಲ ನನ್ನ ಮನಿ ಬಿಟ್ಟು ಹೊರಗ ನಡೀಬೇಕು. ಮಳಿಹತ್ತಿದ್ರೇನಾತು. ನಿನಗ ಅಕಿಕೂಡ ಮಾತಾಡೂ ಚಟಾ ಭಾಳ ಆಗಿದ್ರ ನೀನೂ ಗುಡಿಚ್ಯಾಪಿ ಕಟ್ಟು ಇಲ್ಲಿಂದ.

**ಹಾದಿಹೋಕ** : (ಶಾಂತವ್ವನ ಹತ್ತಿರ ಹೋಗುತ್ತ.) ಹೋಗೂನು ನಡೀರಿಯವ್ವಾ. ಮಳಿ ಹತ್ತೇತಿ ಖರೆ, ಆದ್ರೂ ಹಂತಾಯೇನು ಜೋರಿಲ್ಲಾ. ಬೆಳಿಗ್ಗಿ ಎಲ್ಲಾ ಮುಗಲು ಸ್ವಚ್ಛಾಗಿರತೈತಿ. ಅಂ ರಿ?

**ಶಾಂತವ್ವ** : ಸರುವ ನಾಶಾಗಿ ನಾ ಸಾಯೂಹೊತ್ತಿನ್ಯಾಗ ಬೆಳಗಾದರೇನು ಕತ್ತಲಾದರೇನು ಬಿಡ್ಸ ಎಪ್ಪಾ, ನೀ ಏನು ಹೇಳತೀ?

**ಹಾದಿಹೋಕ** : ನನ್ನಕೂಡ ಬಂದ ನೀವು ಸಾಯೂದಿಲ್ಲಾ, ನಿಮಗೇನೂ ತೊಂದ್ರಿ ಆಗಲ್ಲದಂಗ ನೋಡಿಕೊಂತೇನ್ರಿ. ನಾಯೇನು ಹಂತಾ ಹುಚ್ಚಲ್ಲರಿ, ನನಗೂ ಎಲ್ಲಾ ತಿಳೀತೈತಿ. ನೀವು ಬಂದ್ರು ದಾರ್ಯಾಗ ಮಳಿ ಆಗ್ಲಿ, ಚಳಿ ಆಗ್ಲಿ, ಮಂಜು ಬೀಳ್ಲಿ, ಬಿಸಲಿರ್ಲಿ, ಗಾಳಿ ಬೀಸಲಿ, ಇಂವೇನಾದ್ರೂ ಇಲ್ಲಿ ಕುಂತಾಂಗ ಕಟಬಿೊ ಅಂತ ಕುಂತು ಮನಸ್ಸಿಗೆ ಬೇಜಾರು ಪಟಗೊಳ್ಳೂ ಪರಿಸ್ಥಿತಿ ಬರೂದಿಲ್ರಿ. ಅದರ ಬದ್ಲಿ ಈ ಗುಡ್ಡಾ, ಗಿಡಗಂಟಿ ಎಷ್ಟು ಚೆಂದ ಕಾಣಸ್ತಾವಂತ ನೀವ್ಯ ಸಂತೋಷಪಡತೀರಿ. ರಾತ್ರಿ ಗಾಳಿ ಬೀಸಾಕತ್ತಿದರ, ಜಡಿಮಳಿ ಬಂದ್ರು ಇದರಾಗೇನೈತಿ, ಬೆಳಿಗ್ಯನ್ನೂರಾಗ ಎಲ್ಲಾ ಮಾಯಾಗಿರತೈತೆಂತ ಮನಸ್ಸಿಗೆ ಸಮಾಧಾನ ಮಾಡಕೊಂತೀರಿ. ಇದೂ ಅಲ್ಲದ್ಯ ಮತ್ತ ........

**ಮಲ್ಲಪ್ಪ** : (ಸಿಡಿ ಸಿಸಿದ ಒದರುತ್ತ ಅವರ ಕಡೆಗೆ ಹೋಗುತ್ತಾನೆ) ಮೊದಲು ಇಲ್ಲಿಂದ ಜಗಾ ಬಿಡಿತೀಯೊ ಏನಂತೀಯಲೇ ಸೂಳಿಮಗನ ನಿನ್ನ ವಟಾವಟಾ

ಮಾತು ಹಚ್ಚಬ್ಯಾಡ ನನ್ನ ಮುಂದ. ಅಲ್ಲಿ ತಳಗ ಕೊಳ್ಳದಾಗ ಹೋಗಿ ಬೇಕಾದಷ್ಟು ಬೊಗಳಕೊ ಹೋಗು.

(ಶಾಂತವ್ವ ಕೆಲವು ಸಾಮಾನುಗಳನ್ನು ತನ್ನ ದುಪ್ಪಟಿಯಲ್ಲಿ ಕಟ್ಟಿಕೊಳ್ಳುತ್ತಾಳೆ)

**ಹಾದಿಹೋಕ : (ಬಾಗಿಲಲ್ಲಿ)** ಲಗೂ ನಡಿರಿ. ಒಮ್ಮೆ ಮನಿ ಬಿಟ್ಟಿರೆಂದ್ರ, ವಡಾವಡಾ ಮಾತೇನು ಹಚ್ಚೊದಿಲ್ಲರಿ ನಾನು. ನೀವು ದಾರ್‍ಯಾಗ ಸರೂವ ದಾಗ ನೀರಗೋಳಿ, ಸೀಳದನೀಲ್ಲೆ ಹಾಡಿಕೊಂತ ಈಜ್ಯಾಡೂದು ನೋಡ ತೀರಿ. ಕೋಗಿಲ ಕೂಗೂದು, ಗಿಳಿ ಹಾಡೂದು ಕೇಳತೀರಿ. ಅಲ್ಲಿ ಪಾರಮ್ಮನಾರು ಮುದಿಕ್ಯಾಗಿದ್ದು, ನೀವು ಮುದುಕರಾಗಿ ತಲೀಮ್ಯಾಲಿನ ಕೂದಲೆಲ್ಲಾ ಹೋಗಿ ಕಣ್ಣ ಕಾಣಲ್ದಂಗಾಗೂದು ಇವೆದರಮೂ ಹಂಗs ನೆನಪು ಸೈತೆ ಆಗೂದಿಲ್ಲಾ. ಬೆಳಗಾದ ಕೂಡಲೆ ಪಾರಿವಾಳಾ, ಸಾಂಬಾರಗಾಗಿ ನೋಡೀರೆಂತ, ಹಕ್ಕಿ ಹಾಡು ಕೇಳೀರೆಂತ ಅಂದ್ರ ಮನಸ್ಸು ಎಷ್ಟು ಹಗರಾ ಕೈತಿ ನೋಡ್ರಿ. ಅಲ್ಲಿ ಹಿಂತಾ ಮುದುಕಾ ಹಗಲಿ ಹನ್ನ್ಯಾಡ್ಡ ಕಾಸು ಮನ್ಯಾಗ ಸಿಗಬಿದ್ದುಕೊಂಡು ಗೂರೂದು, ಕ್ಯಾಕರಸೂದೂ ಎಂದು ನಿಮ್ಮ ಕಿವೀಗೆ ಬೀಳೂದಿಲ್ಲಾ.

**ಶಾಂತವ್ವ :** ಆ ಹೊತ್ತಿನ್ಯಾಗ ಕಟಗುಡೂ ಥಂಡ್ಯಾಗ ನಾನs ಕೆಮ್ಮುದೂ, ಕ್ಯಾಕರ ಸೂದು ಮಾಡತಿರತೇನಿ ಅಲ್ಲೇನಪಾ ? ಹನಮಂತಪ್ಪಾ ನೀ ಭಾಳ ಚೆಂದ ಮಾತಾಡತಿ ನೋಡು. ನಿನ್ನ ಮಾತು ಕೇಳಿದ್ರ ಗಿಡದನ್ನ ಮಂಗ್ಯಾ ಸೈತಿ ಕೈಬಿಟ್ಟಿರಬೇಕು. ನಾ ನಿನ್ನ ಕೂಡs ಬರತೇನಿ ನಡಿಯುsಯಪ್ಪಾ. (ಬಾಗಿಲ ಹತ್ತಿರ ಹೋಗಿ, ಮಲ್ಲಪ್ಪನ ಕಡೆಗೆ ತಿರುಗಿನಿಂತು) ಸತ್ತಾವರಂಗ ನಾಟಕಾ ಮಾಡಿ ಭಾಳ ದೊಡ್ಡ ಕಸರತ್ತ ಮಾಡೀದಿ ನೋಡು. ಇಷ್ಟೆಲ್ಲಾ ಮಾಡಿ ಏನು ಮಾಡಾಂವಾ ನೀ ? ಯಾರೂ ಮಂದಿ ಸಂಚಾರ ಇಲ್ಲದ ಹಿಂತಾ ಕೊಳ್ಳದಾಗ, ಒಬ್ಬಾಕೆ ಹೆಣಮಗಳು ಹ್ಯಾಂಗಿರಬೇಕು ? ಅಪ್ಪಿ ತಪ್ಪಿ ಬಂದ ಗಂಡಸೂರ ಕೂಡ ಮಾತಾಡಿದ್ರ ಏನು ತಪ್ಪೈತಿ? ನಾ ಅಂತೀ ಮನಿ ಬಿಟ್ಟು ಹೊಂಟೇನಿ, ಇನ್ನ ಮ್ಯಾಲೆ ನಿನ್ನ ಹೊಟ್ಟಿ ನೆತ್ತಿ ನೋಡೂವಾರ್‍ಯಾರು ? ಜಡ್ಡು ಬಿದ್ರ ನಿನ್ನ ಆರೈಕಿ ಮಾಡೂವಾರ್‍ಯಾರು ? ಇನ್ನ ಮ್ಯಾಲೆ ನಿನ್ನ ಪರಿಸ್ಥಿತಿ ಬಾಳ ಹದಗೆಡತೈತಿ. ಇದs ಹಾಸಿಗ್ಯಾಗs ಬಿದ್ದು ಸತ್ತ ಹೋಗೂ ಕಾಲ ಭಾಳ ದೂರೇನಿಲ್ಲಾ ನಿನಗ. ನಾ ಬರತೇನಿ.

(ಅವಳು ಹಾದಿಹೋಕನೊಡನೆ ಹೊರಗೆ ನಡೆಯುತ್ತಾಳೆ. ಸೋಮಶೇಖರನು ಸುಸುಳಿಕೋಡು ಹೋಗುವುದರಲ್ಲಿಯೆ, ಮಲ್ಲಪ್ಪನು ಅವನನ್ನು ತಡೆಯುತ್ತಾನೆ)

**ಮಲ್ಲಪ್ಪ :** ಕುಂತುಗೊಳ್ಳಪ್ಪಾ ಸೋಮಶೇಖರಾ. ಆ ರೂಮಾಲ್ದ ಮಗಿ ತುಗೊಂಡು ಆ ಬಿಂದಿಗ್ಯಾಗಿಂದ ಒಂದೀಟು ಸಿಂದಿ ಸುರುವಿಕೊಂಡು ತರ

ತೀಯಾ ? ಅತ್ತಽ ಒಂದೀಸು ನೀರೂ ತುಗೊಂಡು ಬಾ. ನನಗ ನೀರಡಿಕ್ಯಾಗಿ ಗಂಟಲಾ ಒಂದಳತಿ ಸೆಳಿಯಾಕತ್ತೈತಿ. ಬೆಳಗಾಗಾಕ ಇನ್ನೂ ಭಾಳೊತ್ತೈತೆಲ್ಲಾ.

**ಸೋಮಶೇಖರ** : (ಮೇಜಿನ ಬಳಿ ಬರುತ್ತ) ನಾನು ಮುಂಜೇಲಿಂದಽ ಗುಡ್ಡಗಾಡಿನ್ಯಾಗ ಕುರಿ ಅಟಿಗೊಂಡು ಬಂದು ಮೊದಲಽ ಕಂಗಾಲಾಗಿದ್ನಿ. ಅದರ ಮ್ಯಾಲೆ ನೀವೆಲ್ಲೆ ನನ್ನ ಬಡದು ಕೊಲ್ಲತೀರ್‍ಯೊ ಅಂತ ಹೆದರಿಕಿ ಒಂದು. ನನಗೂ ಗಂಟಲಾ ಒಂದಳತಿ ಸೇದಾಕತ್ತೈತಿ.

**ಮಲ್ಲಪ್ಪ** : (ಕೋಲನ್ನು ಒಗೆಯುತ್ತ) ನಿನ್ನ ಮೈಯೂಳ ಹೊಡಿಯೂಪಷ್ಟು ಸಿಟ್ಟು ಬಂದಿತ್ತು. ಸೋಮಶೇಕರಾ, ಆದ್ರ ಹಿಂದಾಗಡೆ ಗೊತ್ತಾತು ಇದರಾಗ ನಿಂದೇನೂ ತಪ್ಪಿಲ್ಲಾ ಅನ್ನೂದು. ಈಗ ನಿನ್ನ ಮ್ಯಾಲೆ ಏಟೂ ಸಿಟ್ಟಿಲ್ಲ ನಂದು. (ಸಿಂದಿಯ ಎರಡು ಮಗಿಗಳಲ್ಲಿ ಒಂದನ್ನು ಸೋಮಶೇಖರನಿಗೆ ಕೊಡುತ್ತಾನೆ)

**ಮಲ್ಲಪ್ಪ** : ದೇವರು ನಿನಗ ಕಲ್ಯಾಣ ಮಾಡ್ಲೆಪಾ ಸೋಮಶೇಕರಾ.

**ಸೋಮಶೇಖರ** : ನೀವೂ ಇನ್ನಮ್ಯಾಲೆ ಯಾತರದೂ ಚಿಂತಿ ಹಚ್ಚಿಗೊಬ್ಯಾಡ್ರಿ. ನಿಮ್ಮ ಪ್ರಕೃತಿ ಬರೊಬ್ಬರಿ ಇಟ್ಟಗೊಂಡು, ಸಾಯೂತನಕಾ ತಣ್ಣಗಿರ್‍ರಿ. ಒಂದಿಲ್ಲಾ ಒಂದಿನಾ ಸಾಯೂದು ಐತೇ ಐತಿ. (ಅವರು ಕುಡಿಯುತ್ತಾರೆ)

—ಪರದೆ—

# ಅಣಬೆ

ಜಯಸುದರ್ಶನ

ಒಮ್ಮೊಮ್ಮೆ ತಕ್ಷಣ ಗೊತ್ತಾಗುವುದಿಲ್ಲ.
ಸ್ನಾನ ಮಾಡಿದರೂ ಪ್ರತಿನಿತ್ಯ
ಮೈ ತೊಳೆದರೂ ಸೋಪಿನಲಿ ಸ್ವಚ್ಚ
ಒಸರುವ ಬೆವರಿನಲ್ಲಿ ಕಾಲನಿ ಮಾಡಿದ
ಬ್ಯಾಕ್ಟೀರಿಯ ತತ್ಕಾಲಕ್ಕೆ
ನೀರಿನಲ್ಲಿ ಕೊಚ್ಚಿ ಹೋದರೂ,
ಅಣಬೆಯಂತಹ ಹರಿತ್ತಿರದ ಕ್ಷುದ್ರ
ಒಣ ಜೀವ ಹೇಗೋ ತಗಲಿಕೊಂಡು
ಚರ್ಮದ ಹಾಸಿಗೆಯಲ್ಲಿ
ಸಮಯವನ್ನಷ್ಟೆ ತಿಂದು ಬೆಳೆಯುತ್ತದೆ.

ಒಮ್ಮೊಮ್ಮೆ ನಿದಾನ ತಿಳಿದೀತು
ಫಲಬಿಡದೆ ತಾನೆ ಬೆಳೆಯುವ
ಅಣಬೆಯ ನಿಃಸಂತಾನ ಅಮರತ್ವ;
ಇದಕ್ಕಿಂತ ಹೆಚ್ಚಿನದು ಬೆವರಿನಷ್ಟೇ
ಸಲೀಸಾಗಿ ಅಣಬೆಗೆ ಆಶ್ರಯ ಕೊಡುವ
ದೇಹದ ಸ್ವಯಂಪ್ರೇರಿತ ಸಹನೆ,
ಮತ್ತು ತುರಿಕೆಯಾಗುವುದೇ
ತನ್ನ ಸಹಜಧರ್ಮವೆಂಬ ಹಾಗೆ
ಪಿಚ್ಚೆತ್ತು, ಉರಿದೆದ್ದು, ಪೊರೆಯಾಗಿ
ಸುಲಿವ ಚರ್ಮದ ಪ್ರಾಚೀನ.

ಬದಲಾಗುವ ದೇಹ ಸ್ವಭಾವಕ್ಕೆ ವ್ಯತಿರಿಕ್ತವಲ್ಲ
ಹೀಗೆ ನಿನ್ನೊಡನೆ ಮಲಗಿ ಅಣಬೆಗಳ ಬೆಳೆಸುವಾಸೆ–
ನನ್ನ ಪುರುಷಕಾಂಡಕ್ಕೆ ಅಣಬೆರೋಗ ತಗಲುವ
ಭಯವಿದ್ದರೂ ನೋಡು, ಹಿಂಗದ ನವೆ;

ನಿನ್ನ ಸಾಬೀತಾದ ಸ್ತ್ರೀತ್ವದ
ಸವಾಲಿನ ಸನಿಹದ ಸಂಪರ್ಕದಲ್ಲಿ ನಾನು ಬಯಸಿದ
ಒಂದಿರುಳ ಪುರುಷೋತ್ತಮಿಕೆ
ಅಡ್ಡ ಕಸಬಿ ಚರ್ಮದ ರೀತಿ
ನಿನ್ನ ಅಣಬೆಗಳ ಕಸಿ ಮಾಡಿಕೊಂಡು
ಅವುಗಳ ಜತೆ ಗತಿಗಾಣಲು ಒಪ್ಪುತ್ತದೆ.
ಸಾಂಕ್ರಾಮಿಕ ಭಯದ ನಿವಾರಣೆಗೆ
ರೋಗಗ್ರಸ್ತವಾಗುವುದು ಹತ್ತಿರದ ಮಾರ್ಗ.

ಗೊತ್ತಿದೆಯೆ ನಿನಗೆ ಪೆನಿಸಿಲಿನ್ ಅಣಬೆ ?
ವಿಷಯಾಂತರವಲ್ಲ, ಮಾತಿಗೆ ಹೇಳುತ್ತೇನೆ–
ಈ ಉಪಕಾರಿ ಅಣಬೆ ರಕ್ತದಲ್ಲಿ ಓಡಾಡಿ
ಮೈ ಕೊರೆವ ಅಣಬೆಗಳನ್ನು
ಹೇಳ ಹೆಸರಿಲ್ಲದಂತೆ ಮಾಡುವುದಂತೆ;
ಆದರೂ ಕೇಳು,
ಅಣಬೆಯ ಸ್ವಜಾತಿ ವೈರದ ಈ ಮಾತು

ಹಾಗಿರಲಿ,
ದೇಹಶುದ್ಧಿಯ ನನ್ನ ಸಂಸ್ಕಾರದ
ನಿತ್ಯಕರ್ಮ ಹಾಗಿರಲಿ,
ತಟ್ಟುವ ಮುಂಚೆ ಸ್ಪರ್ಶಕ್ಕೇ ಬಾಗಿಲು
ತೆರೆವ ನಿನ್ನ ಬಿಡಾರದ ಮುಟ್ಟು ನಿಲ್ಲದ
ಲಾವಪ್ರವಾಹದ ಬಿತ್ತಲಾಗದ ನೆಲ ಹಾಗಿರಲಿ,
ಪೆನಿಸಿಲಿನ್ ಮಡಿ ಅಣಬೆ ನರನಾಡಿಗಳಲ್ಲಿ
ಜುಮುಗುಟ್ಟುವ ಅನಂತರದ
ಜಾಗ್ರತೆಯ ಮಾತು ಹಾಗಿರಲಿ;
ತುರಿಕೆಯ ತೀಡಿ ತಿನ್ನುವ ಲೌಕಿಕಕ್ಕೆ,
ಮುಚ್ಚಿಟ್ಟ ದೇಹ ಸುಖಕ್ಕೆ ಒಡ್ಡಿದರೆ
ನಿಷ್ಪಾಪ ತೊಡೆ, ತುಟಿ, ಎಂಜಲು,
ಹಣೆಬರೆಹವ ಜಲಸಮಾಧಿ ಮಾಡುವ ಬೆವರು,
ಸೃಷ್ಟಿಕ್ರಿಯೆಯ ಆರೋಪಿತ ಕರ್ತವ್ಯಗಳ
ಬದಿಗಿರಿಸಿ, ಮಕ್ಕಳಾಟವಾಡಿದರೆ ನಮ್ಮ ತಿಮಿರು,

ಅಣಗಿದರೆ ಭುಗಿಲೆದ್ದ ಸ್ವಯಾರ್ಜಿತ ವಾಸನೆಗಳು ಕೂಡಿ—
ಒಮ್ಮೆಲೆ ಗೊತ್ತಾಗಬಹುದು ಜ್ಞಾಪಕದ ಹಾಗೆ:
ಈ ನೆಲದಲ್ಲಿ ದಾರಿತಪ್ಪುವ ಮಾತೆ ಬುಡವಿರದ ಸುಳ್ಳು.

೨

ಅಣಬೆಯ ಅಸ್ತಿತ್ವ ಅದರ ಅಗತ್ಯಕ್ಕಿಂತ
ಮುಖ್ಯವಾಗಿರುವಾಗ ಈ ಉಪಜೀವಿಯ
ಒಳಿತು ಕೆಡಕುಗಳ ವಿಂಗಡಿಸಿ ಪಥ್ಯ ಬರೆದು
ವಿಚಾರವಾದಿಯಾಗಲೇ?
ಹತ್ತಿರ ಬಂದು ಮತ್ತೆಮತ್ತೆ ನಿರುತ್ತರವಾಗುವ
ನಮ್ಮ ನಶ್ವರ ಕಾಮುಗಳ ಕುರಿತು
ಅವಾಚ್ಯಕ್ಕೆ ಇಳಿಯಲೇ?
ನೀನು ಬಲ್ಲೆ—ಈಡನ್ ಉದ್ಯಾನದ ಮೂಲ ಕಥೆ:
ಕೇವಲ ಪೋಲಿ ತೀಟೆಗೆ ಅಣಬೆಯ ಬೆಳೆಸಿಕೊಳ್ಳುವ
ಮಾತು ನೂತ್ನ ಶೀಲಕ್ಕೆ ನಾಚಿ
ಎಲೆತೊಟ್ಟ ಪ್ರಾಥಮಿಕ ಅಶ್ಲೀಲದ
ಅತೃಪ್ತ ಕುತೂಹಲದಂತೆ ನಿಷ್ಫಲ.

ಇಂತು,
ಅಣಬೆಯ ಗುರುತ್ವವ ಅತ್ತಿತ್ತ ಒಲಿದು
ಮಧ್ಯೆ ಸ್ಥಾಪಿಸಿಕೊಳ್ಳುವುದೆ ಸದ್ಯಕ್ಕೆ ಪರಿಹಾರ;
ಅಣಬೆಗೆ ಅಣಬೆಯೇ ಗತಿಗಾಣಿಸಿದರೆ,
ಸೇಂದ್ರಿಯದ ಉಸಿರಾಡಿಸುವ ಛಿದ್ರಗಳಲ್ಲಿ,
ಬೆಳಕಿರದ ಬಿಸಿ ಥರಗುಟ್ಟುವ ಅಂಧ ಗುಹೆಗಳಲ್ಲಿ
ಅಣಬೆ ಧುತ್ತೆಂದು ನಿಂತರೆ ಸ್ವೇಚ್ಛೆ,
ಅದಕ್ಕೆ ದೇಹದಲ್ಲಾಶ್ರಯ ಕೊಡುವ ಧಿಮಾಕು
ಗಾಳಿಯಲ್ಲೊಸರುವ ತಳಕಿತ್ತ ಪ್ರೇತದ
ಭೂಸ್ಪರ್ಶ ಬಯಕೆಯ ಹಾಗೆ—
ಸಂಜೆಯಲ್ಲಿ ಧೂಳಿಪಟವಾದ ಹಗಲ ಚಿತ್ರ.
ನನ್ನುದ್ದಕ್ಕೆ ಫಲವತ್ತಾಗಿ ಅಡ್ಡಾದವಳೆ
ಮುಟ್ಟಿದರೆ ನಿನ್ನ ಮೈಯಿಂದ ಪುಟಿಯುವವು
ಗಾಳಿ ಜಿತ್ತಿದ ನಾಯಿ ಕೊಡೆಗಳ ಅರಣ್ಯಗಳು;

ಅಪ್ಪಿದರೆ, ನಿನ್ನ ಚರ್ಮದಸಂಖ್ಯ ರಂಧ್ರಗಳಲ್ಲಿ
ನನ್ನ ನಿಮಿರಿದ ಲಕ್ಷಗಟ್ಟಳೆ ರೋಮಗಳು ಹೊಕ್ಕು
ಭರ್ತಿಯಾದರೆ ನಿನ್ನ ಗುರುತ್ವ ಮಧ್ಯದ
ಆಳಸುಳಿಯ ಖಾಲಿ ಪ್ರದೇಶಗಳು,
ತಳಕ್ಕೆ ಬಿದ್ದರೆ ಸರಿವ ಸಂತೃಪ್ತ ಬಯಕೆಗಳ
ತೊಗಲಿನ ಮಿರಿಮಿರಿ ಅವಶೇಷಗಳು,
ಗೆದ್ದಲು ಗಣಿ ತೋಡಿದ ನೆಲದ ಅಂಟು ಬಿಲದಲ್ಲೇ
ಬುಸುಗುಟ್ಟಿದರೆ ಪೊರೆ ಕಳಚಿ ಹಸಿದ
ಸರೀಸೃಪದ ಆವೇಶಗಳು,
ಆಗ ಮಾತ್ರ ಕಣ್ಣ ಕಲ್ಪನೆಗೆ ಸಿಗದ
ಆಕಾಶ ನೀಲಿಯ ಅಂತರ್ಯದ ಹಾಗೆ
ಅಣಬೆ ಇದ್ದಲ್ಲೆ ಗತಿಸಿ, ಛಾಯೆ ತೇಲುತ್ತದೆ.
ನಿನ್ನ ಆರ್ದ್ರ ಮೈತುಂಬ ಕೆಂಪು ಮೊಗ್ಗುಗಳು
ಒಡೆದು, ಹೂವಾದ ಕಣ್ಣಲ್ಲೆ ಅಣಬೆ
ನೆನಪಾಗಿ ಇಣುಕಿ ಹೊಳೆಯುತ್ತದೆ.

೩

ಕತ್ತಲಲ್ಲಿ ಸಹಬಾಳ್ವೆ ನಡೆಸುವ ನಮ್ಮ
ಬೆತ್ತಲೆಗಳ ನೂರುಮುಖಕ್ಕೆ
ಒಮ್ಮೆಲೇ ಹಠಾತ್ತ ಮಿಂಚಿನ ಹಾಗೆ
ಹೊಳೆದರೂ ತಿಳಿಯದಂತೆ ಅಡಗುವ
ಕ್ಷಣಿಕ ನಿತ್ಯವಿಷ್ಟೇ: ಅಣಬೆಯುಂಟಿದರೆ
ತಂತಾನೆ ಕೂಡಿದ ನಮ್ಮೊಂಟಿತನಗಳಿಗೆ
ಪುಷ್ಪಪರಾಗದ ಅನುರಾಗದ ಹಾಗೆ
ನಮ್ಮ ಖಾಸ ಸ್ವಾರ್ಥಗಳ ಜಂಟಿ ಪಕ್ಕದಲ್ಲಿ
ಒಡೆಯುವುದು ನಿಷ್ಕಾರಣವೆ ತಕ್ಷಣಕ್ಕೆ
ಪರಾರ್ಥದ ನಿರ್ಮಾಲ್ಯ, ನಿರಪೇಕ್ಷ ರೆಕ್ಕೆ.

●

# ಹತ್ತಿರದವನು

ಟಿ. ಎಂ. ಸುಬ್ಬರಾಯ

ಹೊರಟಿದ್ದೇನೆ. ಇಂಥದೇ ನಿರ್ದಿಷ್ಟ ತಾಣ ತಲುಪುವ ದೃಢ ನಿಲುವಿಲ್ಲದೆ ಒಟ್ಟಾರೆ ಹೋಗುತ್ತಿದ್ದೇನೆ. ಬಳೆಗಳ ಸಪ್ಪಳ ಮಿದುಳಿನಲ್ಲಿ ತುರಿಕೆ ಉಂಟು ಮಾಡಿದ್ದಕ್ಕೆ, ಅದರಿಂದ ನಿವೃತ್ತನಾಗಲು ಬಯಸಿ ಸಾಗುತ್ತಿದ್ದೇನೆ. ನೆತ್ತಿ ಕಾಯಿಸುವ ರಣ ಬಿಸಿಲು; ಕಾಲು ಸುಡುವ ಟಾರಿನ ಗಾಬು ಕಾದು, ಹರಿದರೂ ನಾನು ನಡೆಯುತ್ತಿದ್ದೇನೆ. ಕಜ್ಜಿ ಹತ್ತಿದ ನೆಲದ ಮೈಯಲ್ಲಿ, ಕಪ್ಪಗೆ ಹರಿವ ದಾಂಬರು ರಸಿಕೆ ಮೆತ್ತಿಕೊಳ್ಳುವ ಕಾಲನ್ನು ಎತ್ತಿ ಹಾಕುತ್ತಾ ಸಾಗುತ್ತಲೇ ಇದ್ದೇನೆ. ಎಲ್ಲರಿಗೂ ಕಾಣಿಸುವ ಶೇಷ ಅರಸುವ ಹಂದಿಗಳು ಮೂಸುವ ಕುನ್ನಿಗಳು, ಕೆದರುವ ಕೋಳಿಗಳು, ಕಫ ಉಗುಳುವ ಹಮಾಲಿ, ಜಾಗ ಬದಲಿಸುವ ನೊಣಗಳು—ಎಲ್ಲವನ್ನೂ ಅನುಭವಿಸುತ್ತಾ ಹೋಗುತ್ತಿದ್ದೇನೆ. ಆದರೂ ಎಲ್ಲಿಗೆ ನನ್ನ ಪಯಣ ? ನನಗೇ ತಿರ್ಮಾನಕ್ಕೆ ಸಿಕ್ಕಿಲ್ಲದೆ ನಡೆಯುತ್ತಿದ್ದೇನೆ.

'ನಮಸ್ಕಾರ' ಅವನು ಇದಿರಾಗಿದ್ದಾನೆ. ಕೈ ಜೋಡಿಸಿದ ನಟನೆ ಮಾಡಿದ್ದಾನೆ. ಮುಖ ನೋಡಿ ಹೋಗದೆ ಹೊರಗುಳಿದಿದ್ದಾನೆ. ಮತ್ತು ಹಲವು ಪ್ರಶ್ನೆಗೆ ಅವಕಾಶ ಕೊಟ್ಟು ಬಿಸಿ ಹೆಚ್ಚು ಮಾಡಿದ್ದಾನೆ. ಜೊತೆಗೆ 'ನಮಸ್ಕಾರ'ದಿಂದ ನಾನು ಹತ್ತಿರದವನೆಂದು ನನಗೇ ಅನ್ನಿಸಲಿ ಎಂದು ಉಥಾಯಿಸಿ ಬಿಟ್ಟಿದ್ದಾನೆ.

'ಏನು ಉರಿ ಬಿಸಿಲಿನಲ್ಲಿ ಹೊರಟಿರಿ ?' ಪ್ರಶ್ನೆ ಒಗೆದು ಪರಿಚಯದ ಮುಖ ಹೊದ್ದಿದ್ದಾನೆ. ನನ್ನ ಪ್ರತಿಕ್ರಿಯೆಗೂ ಕಾಯದೆ 'ಆರಾಮಿದ್ದೀರಲ್ಲಾ ?' ಎಂದು ಮತ್ತೊಂದು ಪ್ರಶ್ನೆ ತೂರಿದ್ದಾನೆ. ಉರಿಬಿಸಿಲಿನಲ್ಲಿ ಹೊರಡುವವನು ಆರಾಮಿಲ್ಲದೆ ಹೊರಟಾನೆಯೇ ಎಂದು ಕೇಳಲು ತವಕಿಸುತ್ತೇನೆ; ಆರಾಮಿಲ್ಲದೆಯೂ ಅಗತ್ಯವಿದ್ದರೆ ಉರಿಬಿಸಿಲಿನಲ್ಲಿ ಹೋಗುವ ಅನಿವಾರ್ಯತೆ ಬೀಳುತ್ತದೆ. ಎಂದು ನನಗೆ ನಾನೇ ಉತ್ತರಿಸಿಕೊಂಡು, ಹೆ ಹೆ ಹೆ ಎಂದು ಕೆನೆಯುತ್ತೇನೆ.

ಇವನನ್ನು ಎಲ್ಲಿ ನೋಡಿದ್ದೇನೆ ? ಕಾಲೇಜಿನ ಯಾವ ಕೊಠಡಿಯಲ್ಲಿ ? ಎಷ್ಟನೇ ಬೆಂಚಿನಲ್ಲಿ ? ಯಾವ ಕಾನ್‌ಫರೆನ್ಸಿನಲ್ಲಿ ? ಯಾವ ಬೀದಿಯಲ್ಲಿ ? ಯಾರ ಮದುವೆಯಲ್ಲಿ ? ಪ್ರಶ್ನೆಯಲ್ಲಿ ನನ್ನ ನೆನಪು ಕೆದಕುವ ಹವಣಿಕೆಯಲ್ಲಿ ತೊಡಗುತ್ತೇನೆ. ಊಹೂ .. ಇವ ನಾನು ಎಂದೂ ನೋಡದ ವ್ಯಕ್ತಿ ಎಂಬುದು ಮನದ

ತೀರ್ಮಾನದ ಗೂಟ ಗಟ್ಟಿಯಾಗುತ್ತದೆ. ಇವನ ಬಗ್ಗೆ ಯಾರಾದರೂ ನಂಗೆ ಮಾಹಿತಿ ನಿಡಿದ್ದುಂಟೆ ಎಂದು ಅವರಿವರ ಹೇಳಿಕೆ ಎಳೆದು ಜಗ್ಗಿ, ನೆನಪಿನ ಹಯ ಓಡಿಸುತ್ತೇನೆ. ಎಲ್ಲೂ, ಯಾರಿಂದಲೂ ಕೇಳಿರದ ಈ ಇವನು ಇಷ್ಟೆಲ್ಲಾ ಮಾತೇಕೆ ಇಟ್ಟ ಎಂದುಕೊಂಡು ನೋಡುತ್ತೇನೆ. ಮತ್ತು 'ಯಾರು ನೀವು ?' ಎಂದು ಕೇಳಬೇಕೆಂದು ಪ್ರಶ್ನೆ ಸಿದ್ಧಮಾಡಿಕೊಳ್ಳುತ್ತೇನೆ. ನನ್ನ ಅನುಮಾನದ ಘ್ರಾಣಕ್ಕೆ ಉಸಿರು ತುಂಬುವ ಹೊಂಚು ಅವನು ಹಾಕುತ್ತಾನೆ; 'ಗೀತಕ್ಕೆ ಆರಾಮಾಗಿದ್ದಾರಾ? ಸುಜಿತ ? ನಿಮ್ಮ ತಾಯಿಯ ಕೆಮ್ಮು ಕಡಿಮೆಯಾಯಿತಾ ?'

ಹೋಯ್....ಇವನು ಅಪರಿಚಿತ ನನಗೆ, ನಾನು ಅವನಿಗಲ್ಲ ಎಂದು ಕೊಳ್ಳುತ್ತೇನೆ. ನಾನು ಗೊತ್ತಿರುವ ಅವನು ಯಾರು ಎಂದು, ಎಲ್ಲದಕ್ಕೂ 'ಹೂಂ' ಎಂದು ಉತ್ತರಿಸಿ ಮತ್ತೆಮತ್ತೆ ನೆನಪು ಹಿಂಡುತ್ತೇನೆ. ಸಂಬಂಧಿಕರ ಬಾಲ ಜಗ್ಗುತ್ತಾ ಹನುಮಂತ ದೃಷ್ಟಿ ಓಡಿಸುತ್ತಾ 'ಅಯ್ಯಾ ನೀನಾರು ? ನಿನ್ನ ನಿಜ ನಾಮಾಂಕಿತವೇನು' ಎಂದು ಬೆಸಗೊಳ್ಳುವ ಬಯಲಾಟದ ಭಾಗವತನಾಗಲು ಹಂಬಲಿಸುವ ಯತ್ನಕ್ಕಿಳಿಯಲು ಉತ್ಸುಕನಾಗುತ್ತಿರುವಾಗ ಅವನು ಹೇಳುತ್ತಾನೆ: 'ಏನೇ ಆಗಲಿ, ನೀವು ಅದೃಷ್ಟವಂತರು ನೋಡಿ. ಅಂಥಾ ಉತ್ತಮ ಮನೆತನದ ಹೆಣ್ಣು ದೊರಕಿರೋದು ಅಂದ್ರೆ ಸುಮ್‌ಸುಮ್ನೆ ಆಯ್ತಾ?. ಯಾವ್ದೋ ಜನ್ಮದ ಪುಣ್ಯ ನಿಮ್ದು. ಗೀತಕ್ಕನ ಗುಣಾ ಅಂದ್ರೆ–ಮನೆತನದ ಗುಣವನ್ನ ಹೊದ್ದು ಬದುಕುವ ಜಾಯಮಾನ. ನಾ ಕಂಡಿಲ್ಲವಾ.'

ನನ್ನಾಕೆಯ ಪರಿಚಯ ಇಷ್ಟರಮಟ್ಟಿಗೆ ಹೊಂದಿರುವ ಇವನು ನನ್ನ ಆಪ್ತನೇ ಇರಬಹುದೆಂಬ ರೇಶ್ಮೆ ಎಳೆಯನ್ನು ಘಟ್ಟಿಯಾಗಿ ಹಿಡಿದ ತವಕ. 'ನಾನು ಕೇಳಿದೆ, ಹೇಳಿ ಗೀತಕ್ಕನಿಗೆ'. 'ಆಯ್ತು' ಎಂಬಂತೆ ತಲೆ ಆಡಿಸಿದಾಗ: ಯಾರು ಕೇಳಿದೆ ಅಂತ ಹೇಳಬೇಕು ಎಂಬ ನನ್ನೊಳಗಿನ ಪ್ರಶ್ನೆಗೆ ಅವನ ರೂಪ ಚಿತ್ರಣ ಮಾಡಿಕೊಂಡು, ಅದನ್ನೇ ಆಕೆಯೆದುರು ಬಿಚ್ಚಲು ಸಿದ್ಧತೆ ಆರಂಭಿಸುತ್ತೇನೆ. ಒಳಗಿನಿಂದ ಉಸಿರು ಮುಲುಗುಟ್ಟುತ್ತದೆ: 'ಯಾರು ಅಂತ ಪರಿಚಯ ಮಾಡ್ಕೊ'!

'ಮೊನ್ನೆ ಮೊನ್ನೆ.... ನಿಮ್ಮ ಅದೇ ವಿಮ್ಲು ಸಿಕ್ಕಿದ್ಲು. ನಿಮ್ಮ ವಿಷಯ ಕೇಳಿದ್ಲು ...' ಪ್ಯಾಂಟು ಕಿಸೆಯಿಂದ ಗಬ್ಬು ಕರ್ಚೀಫ್ ತೆಗೆದು, ಮೂಗಿನ ತುದಿಯ ಬೆವರನ್ನು ಅದರಲ್ಲಿಡಲು ಯತ್ನಿಸಿ, ಕರ್ಚೀಫಿನ ಗಬ್ಬು ಮೂಗಿಗೂ ತಾಗಿಸುತ್ತಾನೆ. 'ಯಾವ ವಿಮ್ಲು ?' ನನ್ನ ಪ್ರಶ್ನೆ. 'ಅದೇ....ಬಟ್ಟಲು ಮುಖದ, ಬೊಗಸೆಗಣ್ಣಿನ ಹುಡುಗಿ ಫಾರೆಸ್ಟ ಆಫೀಸರ್ ಮಗಳು. ನೀವು ಕಾಲೇಜಿನ ಹಾಸ್ಟೆಲ್ ವಾರ್ಡನ್ ಆಗಿದ್ದಾಗಲೂ ನಿಮ್ಮ ಬಳಿ ಬರತಿದ್ದಳಲ್ಲ....ನಿಮ್ಮ....ವಿಮ್ಲು'

ನನ್ನನ್ನೇ ಬಿಚ್ಚುತ್ತಿರುವ ಇವನು ಯಾರಪ್ಪ? ಕುತೂಹಲ, ಜೊತೆಗೆ ಭಯ ಮತ್ತು ಕೋಪ. ವಿಮ್ಲಾಳ ಸೆರಗಿನ ಗಾಳಿ ಬೀಸಿದ್ದು ಹೇಗೆ–ಎಂದುಕೊಳ್ಳುತ್ತಾ ಧಿಮಾಕಾಗಲೆಳೆಸುತ್ತೇನೆ. 'ನಂಗೆ ಯಾವ ವಿಮ್ಲಾನೂ ಗೊತ್ತಿಲ್ಲರಿ....' ಅವನು ಖಳನಾಯಕನು ಪಶ್ಚಾತ್ತಾಪ ತೋರಿಸುವ ಭಂಗಿ ಅಭಿನಯಿಸುವಂತೆ ಮುಖ ಮಾಡಿ ಅನ್ನುತ್ತಾನೆ: 'ಪ್ಚ್, ಪ್ಚ್,.... ಅವಳೂ ಹೀಗೇ ಹೇಳಿದ್ಲು ನೋಡಿ. ಅವ್ಳಿಗೆ ನಾನೀಗ ಎಲ್ ನೆನಪಿರ್‍ತೀನಿ, ಇರೂಕ್ಕೆ ಸಾಧ್ಯ? ಅಂತ.... ಹಾಗಯೇ ಆಗ್ ಹೋಯ್ತು....ಇಷ್ಟ ಬೇಗ ಮರೆತ್ರೆ ಹೇಗೆ ಹೇಳಿ' ಅವನ ಮರುಕದ ಮಾತಿಗೆ ಉರಿಯುತ್ತೇನೆ. ಉರಿದು ಮುಂದೆ ಸರಿಯಲೆತ್ನಿಸಿದ ನನ್ನ ನಿಲ್ಲಿಸಲೆಳೆಸುತ್ತಾ ಅನ್ನುತ್ತಾನೆ: 'ಹೋಗ್ಲಿ ಬಿಡಿ. ಒಳ್ಳೇ ದಿನಗಳು ನಡೀತಿವೆ ನಿಮ್ಗೆ. ಅದ್ರ ನಡುವೆ ಈ ಹಾಳು ನೆನಪು ಆರೋಗ್ಯವನ್ನ ವಿಷ ಮಾಡ್ತವೆ. ಬೇಡ. ಅಂದ್ಹಾಗ....ಅದೇ ನಿಮ್ಮ ಪ್ರಮೋಶನ್‌ಗೆ ಕಡ್ಡಿ ಹಾಕ್ತಾ ಇದ್ನಲ್ಲ. ಆ ಬಾಟನಿ ಡಿಪಾರ್ಟ್‌ಮೆಂಟ್‌ನ ರಂಗಣ್ಣ....ಅವನಿಗೆ ಪ್ಯಾರಲಿಸಿಸ್ ಅಂತೆ ಗೊತ್ತುಂಟಾ ನಿಮಗೆ ?'

ಮೈಗೆಲ್ಲಾ ಅಚ್ಚರಿಯ ಇಂಜಕ್ಷನ್ ಚುಚ್ಚಿ, ಉತ್ಸಾಹ ಉಕ್ಕೇರಿಸುತ್ತಿರುವ 'ಎಲೈ ಮಹಾಭಾಗನೆ ಯಾರು ನೀನು? ಮದ್ಛ್ಯಮಿಗೆಂತು ಬಂದೈ?' ಎಂದು ಮನದಲ್ಲಿ ಚೀರಿಕೊಳ್ಳುತ್ತೇನೆ. ಅವನು ನನ್ನಲ್ಲಿ ಗಾಳಿ ತುಂಬುತ್ತಾ ಸಾಗುತ್ತಾನೆ; "ಅಲ್ಲಾ, ಏನ್ ಹೊಟ್ಟೆ ಉರಿ ನೋಡಿ ಅವನಿಗೆ! ಕೊಲೀಗ್ ಅಂತ ತುಸುವಾದರೂ ಅಭಿಮಾನ ಬೇಡ್ವಾ ಅಂತೀನಿ. ಇಂಥಾ ಮಾವರ್‌ಫೇದ್‌ರನ್ನು ಪಬ್ಲಿಕ್‌ನಲ್ಲಿ ಹ್ಯಾಂಗ್ ಮಾಡ್ಬೇಕು. ಏನಂತೀರಾ?"

ಏನೂ ಅನ್ನದೆ ತೆಪ್ಪಗೆ ನಿಲ್ಲುತ್ತಾ, ಸಾವಿರ್ರಾವಿರ ಪ್ರಶ್ನೆ ಕುದಿಸುತ್ತೇನೆ.

'ಓಹೋ....ಇಷ್ಟೆಲ್ಲಾ ನಂಗೆ ಯಾಕೆ ಅದರ ಮೇಲೆ ಕೋಪ ಅಂತಾನೋ. ಕೋಪದ ಪ್ರಶ್ನೆ ಅಲ್ಲ ಇವರೇ....ಯಾರಾದರೂ ಪ್ರಶ್ನಿಸುವ ವಿಷಯ ನೋಡಿ ಇದು....' ಆತ ತನ್ನ ಹೇಳಿಕೆಗಳನ್ನು ಸಮರ್ಥಿಸಿಕೊಳ್ಳುವ ತುಂಬು ಹವಣಿಕೆಯಲ್ಲಿದ್ದಾನೆ.

ಎಲ್ಲೆಲ್ಲಿಂದಲೋ ಧೈರ್ಯ ಎಳೆದು ತರಲು ಯತ್ನಿಸಿ, ತುಟಿ ಅಲುಗಿಸಿ; 'ನೀವು....?' ಎನ್ನುತ್ತೇನೆ.

'ಓಹೋ........ ನನ್ನ ಪರಿಚಯ ಸಿಗಲಿಲ್ವೆ ನಿಮಗೆ?' ಆತ ಇರಿಯುತ್ತಾನೆ; 'ಇಷ್ಟ್ ಬೇಗ ಮರೆತಿರಾ ನನ್ನ, ನಿಜವಾಗ್ಲೂ ನಾನ್ ಬೆಪ್ಪ ನೋಡಿ. ವಿಮ್ಲಾನ ಮರೆತಿರೋ ಹಾಗೆ ನನ್ನ ಇವ್ರು ಮರೆತಿಲ್ಲ ಅಂದ್‌ಕೊಂಡಿದ್ದೆ....ಶುದ್ಧ ಬುಸಾಗ ಸಾಯ್ತು ನನ್ನ ಕಲ್ಪನೆ....' ಆತ ತನ್ನನ್ನು ಬಯ್ದುಕೊಳ್ಳುತ್ತಾ, ನನ್ನನ್ನು ಜರಿಯುತ್ತಾನೆ.

ಇಷ್ಟೆಲ್ಲಾ ಹೇಳಿದವನು ಇನ್ನೂ ತನ್ನ ಪರಿಚಯ ಮಾಡಿಕೊಡುತ್ತಾನೆ ಎಂದು ಉಬ್ಬುತ್ತೇನೆ. ಆತ ತಟ್ಟನೆ ನನ್ನ ಉತ್ಸಾಹದ ಬಲೂನಿಗೆ: 'ಅದೇ ನಿಮ್ಮ ಲೂಸಿ ಈಗೇನು ಮಾಡುತ್ತಿದ್ದಾಳೆ, ಹಡಬೆ?'' ಎಂದು ಸೂಜಿ ಚುಚ್ಚುತ್ತಾನೆ.

ತಥ್ಥೇರಿ....ನನ್ನ ಮನಸ್ಸನ್ನು ಚಿತ್ತಲಿಗೊಳಿಸಿದ್ದಾನೆ. ಲೂಸಿಯ ನನ್ನ ಸಂಬಂಧ ಅವಳು ಧರಿಸುವ ಕ್ರಾಸ್‌ಗೂ ಅರಿವಿಲ್ಲದಷ್ಟು ಗೌಪ್ಯವೆಂದುಕೊಂಡಿದ್ದರೆ, ಬಯಲಿಗೆಳೆವ ನನ್ನ ಹೂರಣ ಹೊರಹಾಕುವ ಈ ಇವನೇ....ನೀನು ಯಾರಯ್ಯಾ?

'ನಿಮಗೆ ಸತ್ಯ ಹೇಳುತ್ತೇನೆ' ಬಾಗಿ, ಕಿವಿಯಲ್ಲಿ ಉಸುರುತ್ತಾ ಉಸಿರುಗಟ್ಟಿಸುತ್ತಾನೆ: 'ಇದೇ ಲೂಸಿಯ ಕಾಲಿನಲ್ಲಿ ಧರಿಸೋ ಬೂಟಿನಿಂದ ಪ್ರಿನ್ಸಿಪಾಲನ ಮುಖದಲ್ಲಿ ಘಾಯವಾದದ್ದು ಗೊತ್ತಾ? ಆದ್ರೆ, ಘಾಯ ಮಾಡಿದ್ದು ಯಾರು ಗೊತ್ತಾ? ಲೂಸಿ ಅಲ್ಲ. ರೂಮಿನಲ್ಲಿ ಬಿಚ್ಚಿಟ್ಟು ಇಬ್ಬರೂ ರಾಸಕ್ರೀಡೆಯಲ್ಲಿ ನಿರತರಾಗಿದ್ದಾಗ ಪ್ರಿನ್ಸಿಪಾಲರ ಹೆಂಡತಿ ಬಂದು ಇಬ್ಬರಿಗೂ ರಾಚಿದ್ದು....'

'ಹೊಲಸು ಸಾಕು' ಎನ್ನುವ ಮುಖ ಮಾಡಿದಾಗ ಆತ ತಿರುಗುತ್ತಾನೆ: 'ಅಂತೂ ಅವನು ತೊಲಗಿದ ಬಿಡಿ. ಈಗಾದರೂ ನೀವು ಟ್ರೈ ಮಾಡಿ. ಈ ವರ್ಷ ಪೇಪರ್ ಸೆಟ್ ಮಾಡೋದು ನಿಮಗೇ ಸಿಗುತ್ತೆ....ಅಲ್ಲಾ, ಇಷ್ಟ ಅನುಭವ ಇರೋ ನಿಮ್ಮನ್ನೂ ನೆಗ್ಲೆಕ್ಟ್ ಮಾಡ್ತಾ ಇಧಾರೆ ಅಂದರೆ ನಂಗೆ ಒಂಥರಾ ಆಗುತ್ತೆ. ಕರ್ಣ ಪಿಶಾಚಿಗಳು ಜಾಸ್ತಿ ಸ್ವಾಮಿ....ನಿಮ್ ಸತ್ಯನ ಅಪಾರ್ಥ ಮಾಡ್ಕೋತವೆ....' ಬಯ್ದು, ಕ್ಯಾಕರಿಸಿ ಉಗುಳುತ್ತಾನೆ.

'ಕಾಯಿಸಿಬಿಟ್ಟೆ ಕ್ಷಮಿಸಿ' ಸೋಗು ಹಾಕಿ, ಎಲ್ಲೋ ಹೊರಟಿದ್ದಿರಿ ಅಂತ ಕಾಣುತ್ತೆ' ಎಂದು ಮತ್ತೆ ಮಾಮೂಲಿಗೆ ಬರುತ್ತಾನೆ.

'ಕಾದದ್ದಂತೂ ನಿಜ, ಹೊರಟಿದ್ದು ನಿಜ. ಆದ್ರೆ....ಎಲ್ಲಿಗೆ ಅಂತ ಅರಿವಿಲ್ಲ' ಎಂದು ಗೊಣಗಿದಾಗ 'ಅರೇ ಇಸ್ಕಿ....ಎಲ್ಲಿಗೆ ಹೊರಟಿಧೀರಿ ಗೊತ್ತಿಲ್ವಾ! ಇದೊಳ್ಳೇ ತಮಾಷೆ ಅಯ್ತಲ್ಲ....ಬಂದಿದ್ದವರೂ ಎಲ್ಲಿಂದ ಗೊತ್ತುಂಟಾ?' ಎಂದು ಕಣ್ಣು ಮಿಟುಕಿಸುತ್ತಾ ವೇದಾಂತಿಯಾಗುತ್ತಾನೆ. ಎಷ್ಟೋ ಜನರಿಗೆ ಅಥ್ವಾ ಬಹುತೇಕ ಎಲ್ಲರಿಗೂ ಹೀಗೇನೇ ಅಲ್ವಾ. ಹೊರಟಿರ್ತಾರೆ. ಎಲ್ಲಿಗೇಂತ ಗೊತ್ತಿರಲ್ಲ. ಎಲ್ ಹೋಗುವ ಬಗ್ಗೇನೂ ಅವರ ಮನಸ್ಸು ತೀರ್ಮಾನ ಮಾಡಿರಲ್ಲ. ಕಡೆಗೆ, ಎಲ್ [illegible] ದವರೂ ಹೋಗಿ ಬಿಡ್ತಾರೆ....ಫರ್ ಎಕ್ಸಾಂಪಲ್....' ಆತ ಗಾಳಿ ನುಂಗಿ, [illegible] ಹೇಳಿದಂತೆ ಕಣ್ಣು ಗುಡ್ಡೆ [illegible] 'ಅಂದ ಹಾಗೆ, ಅದೇ ನಿಮ್ಮ ಹಳೇ ದೋಸ್ತು ಹಾಬು ಈಗ ಏನ್ ಮಾಡ್ತಿಧಾರೆ' ಎಂದು ನಾಡಿ ನೋಡಲು ಯತ್ನಿಸುತ್ತಾನೆ. 'ಅವನಿಗೇನು? ಇದಾನೆ ಆರಾಮಾಗಿ [illegible]' ಎಂದು [illegible] ಬಿಗಿಯಾಗಿ ಹಿಡಿಯುತ್ತಾನೆ. ಆರಾಮಾಗಿ [illegible] ಏನು ಹೇಳಿ....ನಿಮ್ಮ ಕೆಮಿಸ್ಟ್ರಿ

ಡಿಪಾರ್ಟ್‌ಮೆಂಟಿನಿಂದ ವ್ಯಾಲ್ಯುಬಲ್ ಆ್ಯಸಿಡ್‌ಗಳು ಸಿಗುತ್ವೆ. ಮಾರ್ಕೆಟ್‌ನಲ್ಲಿ ಮಾರಿ ಆರಾಮಾಗಿರ್ತಾನೆ....ನೋಡಿದ್ರಾ, ನೀವೇ ತೋರಿಸಿಕೊಟ್ಟ ದಾರಿಯಲ್ಲಿ ಅವನು ಹೇಗೆ ಲಾಭ ಗಳ್ಸಿ, ಈಗ ನಿಮ್ಮನ್ನ ನೂಕಿಥಾನೆ....ಅಟ್ಟ ಏರಿದ ಮೇಲೆ ಏಣಿ ಯಾರಿಗೆ ಬೇಕ್ರಿ?'

ಎಲಾ ಇವನಾ! ನನ್ನನ್ನೇ ಓದುತ್ತಾ, ತೀರಾ ಒಳಗಿನ ಪುಟಗಳನ್ನು ಅವಲೋಕಿಸ ಹತ್ತಿದ್ದಾನಲ್ಲ! ಇವನ ಮುಂಡಾ ಮೋಚಿ ಹೋಗಾ....

'ಅದ್ಕೇ ನಿಮಗೆ ಹೇಳ್ತೀನಿ....ಯಾರನ್ನೂ ನಂಬಬಾರದ್ರಿ' ಎಚ್ಚರಿಸುತ್ತಾ, ತೀರಾ ಹತ್ತಿರಕ್ಕೆ ಬರ್‍ತಾನೆ. ನೋಡಿ, ನಿಮ್ಮ ದೊಡ್ಡಪ್ಪ, ಹೇಗೆ ಧಗಾ ಹಾಕಿ ಬಿಟ್ಟ ಅಂತ. ನಿಮ್ಮ ಅಪ್ಪ ಪಾಪ, ಶುದ್ಧ ಬುದ್ದು ಆಗಿದ್ದಕ್ಕೆ ಅಲ್ಲವಾ ನಿಮಗೆ ಮೂರ್‍ನಾಮ. ಪಾಲುಗಾರಿಕೆ ಎಂಟ್‌ದಿನ ಇರ್‍ತಾ ಬ್ಯಾಂಕಿನಲ್ಲಿ ಬಂಗಾರ ದೀಡು ಇಟ್ಟು ಬಂಗಾರವೆಲ್ಲಾ ದೀಡಾಗಿದೆ ಅಂದು, ಸಾಲ ಹಂಚಿ, ಪೊಸ್ನೆ ಮೊಸ್ನೆ ಬಂಗಾರ ಬಿಡ್ಸಿಕೊಂಡು ಹೋದ್‌ನಲ್ಲ ಅವನು....ಎಂಥಾ ಚಾಲಾಕಿ ಮುದುಕ ಅವ್ನು, ಅಲ್ಲಾ....ತನ್ನಣ್ಣ ಒಳ್ಳೇ ಧರ್ಮರಾಯನಂಥೋನು ಅಂತ ನಂಬಿದ್ದಕ್ಕೆ ನಿಮ್ಮಪ್ಪನಿಗೆ ಸರಿಯಾಗಿ ಆಯ್ತು ನೋಡಿ....ಅದ್ಕೆ....'

ನನ್ನ ನೋವಿನಲ್ಲಿ ಪಾಲುಗಾರನಾಗಲು ಬರುತ್ತಿರುವ ಎಲೈ ಸಹೃದಯನೇ ನೀನು ಯಾರು?

'ಅಲ್ಲ, ಅದನ್ನ ನಂಬಿಯೇ ನೀವ್ ಬದುಕಿಲ್ಲ ಅನ್ನಿ. ಇಷ್ಟ ಒಳ್ಳೇ ನೌಕರಿ ಉಂಟು. ಹುಡುಗರೆಲ್ಲ ವಿಶ್ವಾಸ ಇಟ್‌ಕೊಂಡಿದಾರೆ. ಏನ್ ಮಾಡಿದ್ರೂ ಚಕಾರ ಎತ್ತದೆ ಹೊಂದಿಕೊಂಡ್ ಹೋಗೂ ಗುಣದ ಹೆಂಡತಿ ಇಧಾಳೆ. ಚಿನ್ನದಂಥಾ ಮಗುವಿದೆ....' ಕೊರೆದು, ಮಧ್ಯೆ ನಿಲ್ಲಿಸಿ; 'ಬಹಳ ಅವಸರದಿಂದ ಹೊರಟಿದ್ದೀರಿ ಅಂತ ತೋರುತ್ತೆ. ನಾನು ಮಧ್ಯೆ ಎಡಬಿಡಂಗಿ ಹಾಗೆ ಏನೇನೋ ಹಲುಬುತ್ತಾ ನಿಂತೆ. ಬರ್‍ತೀನಿ....' ಉಪಾಯದ ಭಂಗಿ ಮಾಡಿ 'ಅಂದ್ಹಾಗೆ ಗೀತಕ್ಕನಿಗೆ ಹೇಳಬಿಟ್ರಲ್ಲಾ....' ಎಂದು ನೆನಪಿಸಿಕೊಂಡು ತಿರಗುತ್ತಿದ್ದಾನೆ.

ಕೇಳಬಿಡಲೇಬೇಕು. ಇಷ್ಟೆಲ್ಲಾ ನನ್ನ ಪರಿಚಯ ಇರುವವನ ಪರಿಚಯ ನನಗೇ ಸಿಕ್ಕಿಲ್ಲ ಅಂದರೆ ಎಂಥಾ ತಮಾಷೆ! ಗೀತಳಿಗೆ ಹೇಳಿದರೆ ಹಾಸ್ಯ ಮಾಡಿಯೇ ಮಾಡ್ತಾಳೆ. 'ಯಾರೂಂತ ಕೇಳ್ಳೋಕೆ ನಿಮ್ಮ ನಾಲಿಗೆ ಸೇದಿ ಹೋಗಿತ್ತಾ?' ಅಂತ ತರಾಟೆಗೆ ತೆಗೆದುಕೋತಾಳೆ. 'ನಮ್ಮ ಪೈಕಿ ಯಾರೋ ಏನೋ....ಮನೆಗಾದರೂ ಕರಿಯಬಾರದಿತ್ತಾ?' ಎಂದೂ ದಬಾಯಿಸಿಯಾಳು........

'ನಿಮ್ಮ ಫ್ರೆಂಡು, ಆ ಫೋಟೋಗ್ರಾಫರ್ ನಮ್ಮೂರಿಗೆ ಬರ್‍ತೀನಿ ಅಂತಿದ್ದ. ಮೋಟರ್ ಬೈಕ್ ಉಂಟಲ್ಲ ಹೇಗಿದ್ರೂ, ಒಂದ್‌ಸಾರಿ ಬರೋಕೆ ಹೇಳಿ ನಾನ್ ಕಾ

ಭಾಳಾ ದಿನಗಳೇ ಆಗ್‌ಹೋಯ್ತು' ಎಂದು ನಿಂತು ಫೋಟೋಗ್ರಾಫರನಿಗೆ ಆಮಂತ್ರಿಸಲು ಹೇಳುತ್ತಾನೆ.

'ಬನ್ನಿ ನೀವು ಹಾಗೇ ಬರೋದಿದ್ರೆ....ನಾನೂ ಆಕಡೇನೇ ಹೊರಟಿಧೇನೆ' ನನ್ನ ಮೆಲು ಹೆಜ್ಜೆಗೆ ಗುರುತು ಹಾಕಲು ಮುಂದೆ ನಡೆಯುತ್ತಾನೆ.

ನಡೆಯುತ್ತಿದ್ದೇನೆ....ನನ್ನ ಮಾತಾಡಲಿಕ್ಕೆ ಅವಕಾಶ ಕೊಡದೆ ಆತ ದಾರಿಗುಂಟ ಕೊರೆಯುತ್ತಿದ್ದಾನೆ. ಹತ್ತು ಹಲವಾರು ಗೊಂದಲದ ಬೀಜ ಬಿತ್ತಿ, ಮನಸ್ಸಿನಲ್ಲಿ ಓಡು ಹುಳ ಬಿಟ್ಟಿದ್ದಾನೆ. ಅವು ಮೊಟ್ಟೆ ಮರಿಗಳಾಗಿ ಮುಲುಕಾಡಲಾರಂಭಿಸಿ ಬಿಟ್ಟಿವೆ. ನನ್ನ ಪರಿಚಯ ನನಗಿಂತ ತನಗೇ ಹೆಚ್ಚು ಉಂಟೆಂದು ಒಂದೊಂದು ಮಾತಿನಲ್ಲೂ ಸ್ಪಷ್ಟಪಡಿಸುತ್ತಾ ಸಾಗಿದ್ದಾನೆ. ಆದರೂ ಅವನು ನನಗೆ ಅಪರಿಚಿತ ನಾದನಲ್ಲಾ ಎಂದು ಮಿಜಿಗುಡುತ್ತೇನೆ. ಇಷ್ಟೆಲ್ಲಾ ನನ್ನ ಪರಿಚಯವಿರುವವನನ್ನು ಹತ್ತಿರದವನನ್ನು 'ನೀವು ಯಾರು' ಅಂತ ಹೇಗೆ ಕೇಳುವುದೆಂಬ ಸಂಕೋಚದ ನಡುವೆ ನಾನು ಪ್ರಶ್ನೆ ಅಡಗಿಸುತ್ತೇನೆ.

ತಿರುವಿನ ಬಳಿ ನಿಂತ 'ನಾನಿನ್ನು ಬರ್‌ತೇನೆ. ನೆನಪಿರಲಿ' ಎನ್ನುತ್ತಾನೆ. ಕೈಚಾಚಿ, ಕೈಕೊಡುತ್ತಾನೆ. ವಿಶ್ವಾಸದ ನಗೆ ನಕ್ಕು ಬಿರಬಿರನೆ ನಡೆದುಬಿಡುತ್ತಾನೆ.

ಪ್ರಶ್ನೆಗಳ ಭೂತ ಕುಣಿಯುತ್ತದೆ. ಯಾರು ಆತ? ನನ್ನ ಪರಿಚಯ ಹೇಗುಂಟು? ನನ್ನ ಓದಿದ ಅವನು ನನ್ನ ಹತ್ತಿರದವನೇ ಹೌದು....ಯಾರು ಇಷ್ಟು ಹತ್ತಿರದವನು? ಅವನು ಹೇಳುತ್ತ ಹೋದ. ನನ್ನ ಪರಿಚಯ ನನಗೇ ಮಾಡಿ ಕೊಡುತ್ತಾ ಹೋದ....ಆದರೂ ಅವನ ಪರಿಚಯ ನನಗೆ ಸಿಗಲಿಲ್ಲವೇಕೆ? ಕೇಳಲೂ ಸಾಧ್ಯವಾಗಲಿಲ್ಲ ಯಾಕೆ?

ಪ್ರಶ್ನೆಯಾಗಿಯೇ ಸಾಗುತ್ತಿದ್ದೇನೆ....ನನ್ನ ಪರಿಚಯ ಮಾಡಿಕೊಟ್ಟ ಅವನಿಗೆ ಕೃತಜ್ಞತೆ ಅರ್ಪಿಸುತ್ತಾ ನಡೆಯುತ್ತಿದ್ದೇನೆ. ಆದರೂ....ನನ್ನ ಅವನ ಸಂಬಂಧ ತಿಳಿಯದೆ ಪರಿತಪಿಸುತ್ತಿದ್ದೇನೆ. ಹೀಗನ್ನಿಸುತ್ತಿದೆ: ನಮಗೆ ನಮ್ಮ ಬಗ್ಗೆ ಗೊತ್ತಿ ರುವುದಕ್ಕಿಂತ ಬೇರೆಯವರಿಗೆ ನಮ್ಮ ಬಗ್ಗೆ ಹೆಚ್ಚು ಗೊತ್ತಿರುತ್ತದೆ....

ಅವರ ಬಗ್ಗೆ ಗೊತ್ತು ಪಡೆಯಲು ಹೊರಟಿದ್ದೇನೆ........ನನ್ನ ನಾನು ತಿಳಿಯದೆ ಹೊರಟಿದ್ದೇನೆ .. ....

# ಪಂಪ : ಒಂದು ಅಧ್ಯಯನ

## (ಒಂದು ವಿವೇಚನೆ)

ಗೌರೀಶ ಕಾಯ್ಕಿಣಿ

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು)

ಇನ್ನು ಪಂಪನಲ್ಲಿ ಸಾಮಾಜಿಕತೆಯು ಅರಿವನ್ನು ಗುರುತಿಸಲು ಹೊರಟ ಶ್ರೀ ಎಚ್. ಎಂ. ಚೆನ್ನಯ್ಯ ಕವಿಯ ಕೃತಿಗಳ 'ವಸ್ತು' 'ಸತ್ವ'ಗಳ ಭೇದಾಭೇದ ವಿವೇಕಕ್ಕೂ ತೊಡಗಿದ್ದಾಗಿದೆ. ಪಂಪನ ಎರಡೂ ವಸ್ತುಗಳು ಮೂಲದಿಂದ ಬೇರೆ ಯಾವ ಸತ್ವ ಪಡೆದಿವೆ ಅಂದಿದ್ದಾರೆ. ಆದರೆ ಇದು ಸತ್ಯವೇ ? ವ್ಯಾಸಭಾರತದಿಂದ ಸಮಸ್ತ ಭಾರತವು ವಸ್ತುತಃ ಏನೇ ವ್ಯತ್ಯಾಸ ಹೊಂದಿರಲಿ ಅದು ಸತ್ವದಲ್ಲಿ ಯಾವ ಬೇರ್ಪಾಟು ಪಡೆದಿದೆ ? ಪಾತ್ರ–ಪ್ರಸಂಗ–ಪ್ರಸ್ತುತಾಪ್ರಸ್ತುತಗಳಲ್ಲಿ ಅದು ಹಲ ವಾರು ಹೆಚ್ಚುಕಡಿಮೆ ಕಂಡಿದೆ. ಆದರೂ ಸತ್ವವು ಮೂಲತಃ ಅದೇ ಒಂದೇ ಆಗಿದೆ. ಅದೇ ರೀತಿ ಆದಿಪುರಾಣವು ಪೂರ್ವಪುರಾಣದಿಂದ ಅರ್ಥಪೂರ್ಣತೆಯಲ್ಲಿ ವಿಶೇಷವಾಗಿ ವ್ಯತ್ಯಾಸ ವಿಪರ್ಯಾಸ ಹೊಂದಿಲ್ಲ. ಕಲಾತ್ಮಕತೆಯಲ್ಲಿ ಹೆಚ್ಚಾಗಿದ್ದ ಮಾತ್ರಕ್ಕೆ ಮೂಲದ ಸತ್ವ ಕಳೆದುಕೊಂಡಿಲ್ಲ. ಹೆಚ್ಚು ಭೋಗಪರವೂ ಶೃಂಗಾರ ಪ್ರವಣವೂ ರಸಸ್ಯಂದಿಯೂ ಆಗಿದ್ದ ಮಾತ್ರಕ್ಕೆ ಮೂಲದ ತ್ಯಾಗವೃತ್ತಿ ಮತ್ತು ಶಾಂತಿ ಪರ್ಯವಸಾಯಿತ್ವವನ್ನು ಅದು ಕಾಪಾಡಿಕೊಂಡಿದೆ.

ತಾನು ಬದುಕುತ್ತಿರುವ ಸಮಾಜದ ಜೀವನದ ರೀತಿ–ನೀತಿಗಳನ್ನು ತನ್ನ ಕೃತಿಯಲ್ಲಿ ಎಷ್ಟು ಮಟ್ಟಿಗೆ ಕವಿಯು ಸೇರಿಸಿದ್ದಾನೆ ? ಎಂಬುವದಷ್ಟೇ ಆ ಕೃತಿಗೆ ಮಹತ್ವವನ್ನು ತಂದುಕೊಡುವದಿಲ್ಲವೆಂದಿದ್ದಾರೆ ಪ್ರಬಂಧಕಾರರು. ಆದರೆ ಸಾಮಾಜಿಕತೆಯ ಅರಿವಿಗೆ ಈ ಸಮಕಾಲೀನ ಜೀವನದ ಪ್ರತಿಬಿಂಬ ಸೇರ್ಪಡೆ ಒಂದು ಸೂಚಿ ಯಲ್ಲವೆ ? (ಇಲ್ಲಿ ಕೃತಿಯ 'ಮಹತ್ವ' ಯಾವ ದೃಷ್ಟಿಯಿಂದ ? ಕಾವ್ಯವೆಂತಲೊ ಸಾಮಾಜಿಕತೆಯ ಆವಿಷ್ಕರಣವೆಂತಲೊ ?) ಇಲ್ಲಿ ಕವಿಯ ಸಾಮಾಜಿಕ ದೃಷ್ಟಿ ಧೋರಣೆಗಳೂ ಮುಖ್ಯ.

ಹಾಗೆ ನೋಡಿ ತನ್ನ ರಾಜಕೀಯ ಪ್ರಜ್ಞೆಯನ್ನು ಅದರೊಂದಿಗೆ ಸಮಾವೇಶ ಗೊಳಿಸುವದರಲ್ಲಿ ಕವಿ ಸೋತಿದ್ದಾನೆಂದು ಪ್ರಬಂಧಕಾರರ ತೀರ್ಪು. ಅದು ಹೇಗೆ ? ಪಂಪನ ರಾಜಕೀಯ ಧೋರಣೆ ಅವನ ಪ್ರಭುವಿನ ಧೋರಣೆಯಿಂದ ಬೇರೆ ಇದ್ದಿರ ಬೇಕೆಂದೂ, ಅದನ್ನು ವ್ಯಕ್ತಪಡಿಸಲು ಆತ ತವಕಪಡುತ್ತಿರಬೇಕೆಂದೂ ಗ್ರಹಿಸಲು

ಯಾವ ಆಧಾರ? ಅದನ್ನು ಸಿದ್ಧ ಮಾಡದೆ ಕವಿ ಸೋತಿದ್ದಾನೆಂದರೆ ಅದು ಪ್ರಬಂಧಕಾರರ ತರ್ಕವಾದದ್ದೇ ಸೋಲೆನ್ನಬೇಕು.

ಈ ತರ್ಕದ ಮುಂದಿನ ಉಪ ಸಿದ್ಧಾಂತವೆಂದರೆ, ಪಂಪನ ರಾಜಕೀಯ ಧೋರಣವೇ ಅವನ ಸಾಮಾಜಿಕ ಅರಿವನ್ನು ನಿಯಂತ್ರಿಸುತ್ತಿದ್ದುದರಿಂದ ಅದರ ಆವಿಷ್ಕಾರವೂ ಅವನ ಕಾವ್ಯದಲ್ಲಿ ಆಗಲು ಅಡ್ಡಿಯುಂಟಾಗಿದೆ. ಅಂದರೇನು? ಪಂಪ ಎಲ್ಲಿಗೆ ಹೊರಟೇ ಇಲ್ಲವೋ ಅಲ್ಲಿಗೆ ಮುಟ್ಟಲು ಅಡ್ಡಿ ಆಯಿತೆಂದಂತೆ? ಆಸ್ಥಾನ ವಿದ್ವಾನ್, ದಂಡನಾಯಕ, ರಾಜವಲ್ಲಭ, ರಸಿಕವಿಲಾಸಿ, ಮಾರ್ಗೀಯ ಪಂಡಿತ, ಆತ್ಮ ಸಂಮೋಹಿತ, ಕುಲಪ್ರತಿಷ್ಠಿತನಾದ ಪಂಪನು 'ನಿಲಿಂಪ' ನಂತೆ. ಅವನ ಸಾಮಾಜಿಕ ಪ್ರಜ್ಞೆ ಅಂದಿನ ಪ್ರಭುವರ್ಗದವರಂತೆ ಇತರೇ ಜನರ ಬಹುಜನ ಸಮುದಾಯದ ಕುರಿತು ನಿರ್ಲಿಪ್ತ, ತಟಸ್ಥ. ಆತ ತನ್ನ ವಲಯದಿಂದ ಸಾಂಸ್ಕೃತಿಕ ಜೀವಕೋಶದಿಂದ ಹೊರಗೆ ಬರಲಾರ. ಅಂದಾಗ ಆತ ತಮ್ಮ ಸಾಮಾಜಿಕ ವರ್ಗವನ್ನಲ್ಲದೆ ಇತರ ಜನಜೀವನದ ಸ್ತರಗಳನ್ನು ಆವಿಷ್ಕರಿಸಲಾರದಿದ್ದರೆ ಅದಕ್ಕೆ ಪ್ರತ್ಯೇಕ ಅಡ್ಡಿ–ಆತಂಕಗಳು ಬೇರೆ ಬೇಕಿಲ್ಲ.

ಸೂಳೆಗೇರಿ, Ritual ಮಾದರಿಯ ಕಳ್ಳು ಕುಡಿತ, ಬೇಟೆ, ಕಾಳಗವಿಕಾರ. ಸೈನ್ಯ ಶಿಬಿರದ ಸನ್ನಿವೇಶಗಳು, ಆಯುಧ ಪ್ರಯೋಗ, ತಾನು ಭೋಗಿಸಿದ ಸ್ತ್ರೀಯರು ಇತ್ಯಾದಿಗಳ ಚಿತ್ರಣದಲ್ಲಿಯ ಸಜೀವ ಸಹಜತೆ ಪಂಪನ ಸಾಮಾಜಿಕತೆಯ ಅನುಭೂತಿ ಜನ್ಯವೆಂಬುದನ್ನು ಪ್ರಬಂಧಕಾರರು ವಿಶದವಾಗಿಯೇ ವಿವರಿಸಿದ್ದಾರೆ.

ಆದರೆ ಪಂಪನ ಸುಪ್ರಸಿದ್ಧ "ಚಾಗದ, ಭೋಗದ..." ಪದ್ಯದ ಪ್ರಬಂಧ ಕಾರರು ಮಾಡಿದ ಅನ್ವಯಾರ್ಥ ಯಥಾರ್ಥವೆನಿಸುವದಿಲ್ಲ. "ಗೊಟ್ಟಿ"ಯನ್ನು ಪ್ರತಿ ಶಬ್ದಕ್ಕೂ ಸೇರಿಸಿ ಅರ್ಥೈಸುವದು ಪ್ರಶಸ್ತವೆನಿಸುವುದಿಲ್ಲ. "ಚಾಗದ ಗೊಟ್ಟಿ"ಯನ್ನು ಕಲ್ಪಿಸುವದು ಅಶಕ್ಯ! ಸಂನ್ಯಾಸಿಗಳ ಗುಂಪು ತ್ಯಾಗದ ಗೋಷ್ಠಿಯಾಗಲಾರದು. ತ್ಯಾಗ, ಭೋಗ, ಗೇಯ–ಇತ್ಯಾದಿಗಳ ಅಲಂಪಿನಂತೆ ಗೊಟ್ಟಿಯ ಅಲಂಪು. ಕರ್ಣನಂತೆಯೇ ಬಳ್ಳಿಯ "ಮೇಳದಾಳ್" ಆದ ಕವಿಯ ಅದರ ಮಾನವನಿಗ ಮೆಚ್ಚಿಗೆ. ಅದಕ್ಕೇ 'ಅಲಂಪುಗಳ್' ಎಂಬ ಬಹುವಚನ, ಅವುಗಳೊಂದಿಗೇ ನೇರ ತಳಕು.

ಪಂಪನು ಅಪ್ರತಿಮ ಶೃಂಗಾರರಸಿಕ. ಆದ್ದರಿಂದ ಅವನ ವೇಶ್ಯಾ–ವಿಟ ವಿಲಾಸಗಳ ವರ್ಣನೆ ಸ್ವಾಭಾವಿಕವೆನಿಸಿದರೂ, ಅವನ ಯುದ್ಧ ಶಿಬಿರ ಮೃಗಯಾ ವರ್ಣನೆಗಳಿಗೆ ವ್ಯಾಸ ಭಾರತದ ಆಧಾರವಿರಲೇಬೇಕು (ಮೂಲ ಭಾರತದಲ್ಲಿ "ಯುದ್ಧ ನಿರ್ವಹಣ ಪರ್ವ"ವೇ ಪ್ರತ್ಯೇಕವಿದೆ.) ಅಲ್ಲಿಯ ವಿವರಣ ಕನ್ನಡೀ

ಕಲಕ್ಕೆ ಪಂಪನ ಸ್ವಾನುಭವ ಪಡಿನುಡಿಗಳನ್ನು ಒದಗಿಸಿದ್ದು ಅಲ್ಲಲ್ಲಿ ತನ್ನ ಅವಲೋಕನದ ಜೀವಂತ ಚಿತ್ರಗಳನ್ನು ಆತ ಈ ಪ್ರಸಂಗಗಳ ರಸಪುಷ್ಟಿಗಾಗಿ ಪ್ರಯೋಗಿಸಿದ್ದಾನೆ.

ಅವರೆ ಅವನು ಬಳಸಿದ ಜಾಣ್ಣುಡಿ ನಾಣ್ಣುಡಿಗಳಲ್ಲಿಯೇ ಅವನ ನಿಜವಾದ ಸಾಮಾಜಿಕ ಪ್ರಜ್ಞೆ ಪ್ರತಿಫಲಿಸಿದೆ. ಬದುಕಿನ ವಿವರಗಳನ್ನು ತುಂಬಿದ ಮಾತ್ರಕ್ಕೆ ಅದು ಸಾಮಾಜಿಕ ಪ್ರಜ್ಞೆ ಅಲ್ಲ. ಈ ವಿವರಗಳ ಕುರಿತು ಸಾಮಾಜಿಕ ಆಗು–ಹೋಗುಗಳ ಬಗ್ಗೆ ಕವಿಯ ಪ್ರಜ್ಞೆಯ ಪ್ರತಿಕ್ರಿಯೆ ವೈಚಾರಿಕ ಮಂಥನದ ಉದ್ಗಾರವೇ ಅಂಥ ಪ್ರಜ್ಞೆಗೆ ಪರಿಚಾಯಕ. ಇಲ್ಲಿಯೂ ಆತ ಸೇರಿಸಿದ ಸೂಳೆಗೇರಿ ಕಳ್ಳು–ಕುಡಿತಗಳ ಅಪ್ರಸ್ತುತ ವರ್ಣನೆಗಳು ಕಾವ್ಯದ ಪರಿಧಿಯ ಹೊರಗೆ ಹಾಯ್ದು ಮೂಡಿದ್ದು ಅದು ಕೇವಲ ತನ್ನ ಒಡೆಯನ ವಿನೋದಕ್ಕಾಗಿಯೇ ಮಾಡಿದ್ದು ಎಂಬುದನ್ನು ಮರೆಯಬಾರದು.

ಪಂಪನು ಕ್ರಾಂತಿಕಾರಿಯಲ್ಲವೆಂದು ಪ್ರಬಂಧಕಾರರು ಮಾಡಿದ ಪ್ರತಿಪಾದನೆ ಅದಕ್ಕೆ ಕೊಟ್ಟ ಸಮರ್ಥನೆ ಒಪ್ಪತಕ್ಕದ್ದೇ. (ಇದಕ್ಕೆ ಪ್ರತಿಯಾಗಿ ಮುಂದೆ **ಡಾ॥ ಎಲ್. ಬಸವರಾಜು** ಅವರು ಆತ ಕ್ರಾಂತಿಕಾರಿಯೆಂದು ವಾದಿಸಲು ಆಡಿದ ಆವೇಶದ ಮಾತುಗಳನ್ನು ನೆನಪಿಸಬೇಕು.)

“ಕಥಾಶರೀರದಲ್ಲಿಯೇ ಪಂಪನ ಸಾಮಾಜಿಕ ಪ್ರಜ್ಞೆಯನ್ನು ಗುರುತಿಸಬೇಕಿತ್ತು” ಎಂಬ ಆಕ್ಷೇಪಕ್ಕೆ ಪ್ರಬಂಧಕಾರರ ಉತ್ತರ ತೃಪ್ತಿಕರವಿಲ್ಲ. ಸಾಮಾಜಿಕ ಪ್ರಜ್ಞೆ ರಾಜಕೀಯ ಧಾರ್ಮಿಕ ಪ್ರಜ್ಞೆಗಳನ್ನೂ ಒಳಗೊಳ್ಳುತ್ತದೆ. ಅವರೆಡು ಅನ್ಯ ಪ್ರಬಂಧಗಳಲ್ಲಿ ಬಂದಿವೆ. ಹಾಗಾದರೆ ಇಲ್ಲಿ ಉಳಿದಿದ್ದೇನು ?

ಏಕಮೇವಾದ್ವಿತೀಯ ರಾಜತ್ವದ ದೃಷ್ಟಿಕೋನದ ಕಾವ್ಯದಲ್ಲಿ ಕವಿಯ ಸಾಮಾಜಿಕವೆಂಬ ಪ್ರಜ್ಞೆಯ ಆವಿಷ್ಕಾರಕ್ಕೆ ಆಸ್ಪದವೆಷ್ಟು ? ಅಲ್ಲದೆ ಇಲ್ಲಿಯ ಸಾಮಾಜಿಕ ಚಿತ್ರಣಗಳು ಅಂದಿನ ಯುಗಧರ್ಮಕ್ಕೆ ಸೇರಿದವು; ಪಂಪನ ಸಮಕಾಲೀನತೆಗೇ ವಿಶಿಷ್ಟವಲ್ಲ. ಇದೂ ಅಲ್ಲದೆ ಅಷ್ಟಾದಶ ವರ್ಣನೆಗಳ ನಿರ್ಬಂಧಕ್ಕೆ ಈ ವರ್ಣನೆಗಳು ಕಟ್ಟುಬಿದ್ದಿವೆ. ಆದರೂ ಇಲ್ಲಿಯ ಅಂಥ ವರ್ಣನೆ ಕವಿಯ ಬಣ್ಣ ಹಚ್ಚಿದ್ದು. ಕವಿಯ ಸ್ವ ಅನುಭವ ಅವಲೋಕನದ ಫಲವೆಂಬ ಪ್ರಬಂಧಕಾರರ ಮಾತು ಒಪ್ಪಬೇಕು. ಹೀಗೆ ತಾನಾಗಿ ಅಹೇತುಕವಾಗಿ ಕಥನದಲ್ಲಿ ಮೂಡಿಬಂದಿರುವ ಸಮಕಾಲೀನ ಸಾಮಾಜಿಕ ಬದುಕಿನ ಹಾಸುಹೊಕ್ಕುಗಳೇ ಕವಿಯ ನಿಜವಾದ ಸಾಮಾಜಿಕ ಪ್ರಜ್ಞೆಯ ಪರಿಚಾಯಕ ಅಂಶಗಳು.

**ಶ್ರೀ ಹಂಪ ನಾಗರಾಜಯ್ಯನವರು** ಪಂಪನ ಜೀವನ ದೃಷ್ಟಿಯನ್ನು ಸೊಗಸಾಗಿ ರೂಪಿಸಿದ್ದಾರೆ. ಜೀವನ ದೃಷ್ಟಿ ಎಂಬುದರ ಅವರಿತ್ತ ವ್ಯಾಖ್ಯೆಯೂ ಬಹು ಮನೋಜ್ಞವಾಗಿದೆ. "ವ್ಯಕ್ತಿ ಜೀವನ ಲೋಕಜೀವನವನ್ನು ತಡೆದಾಗ ನಡೆದ ಅನುಭವದ ಸಾರವೇ ಜೀವನ ದೃಷ್ಟಿ." ಹಾಗಾದರೆ ಜೀವನ ದರ್ಶನವೆಂಬುದು ಬೇರೆ ಏನು ? ದೃಷ್ಟಿ–ದರ್ಶನ ಒಂದಾಗುವ ಈ ಪರಿ ಆಧ್ಯಾತ್ಮಿಕವೆನಿಸುತ್ತದೆ. ಜ್ಞಾತಾ–ಜ್ಞೇಯ–ಜ್ಞಾನವೆಂಬ "ತ್ರಿಪುಟಿಯ" ನಿರಾಕರಣೆ ಅದ್ವೈತಾನುಭೂತಿ! ಅದೊಂದು ಬಾಳನ್ನು ನೋಡುವ ಪರಿ. ಬದುಕನ್ನು ಅನುಭವಿಸುವ ಶಕ್ತಿ ವಿಶೇಷ, ವೈದಿಕ ಮತ್ತು ಜೈನ ಇವರಡೂ ಧರ್ಮ ಸಂಪ್ರದಾಯಗಳನ್ನು ದಕ್ಕಿಸಿಕೊಂಡ ಸಮತೆ ಘನತೆ ಸಹಿಷ್ಣುತೆಗಳು ಪಂಪನ ಸಮನ್ವಯ ದೃಷ್ಟಿಯ ಲಕ್ಷಣಗಳು ಅಂದಿದ್ದಾರೆ ಪ್ರಬಂಧಕಾರರು. ಆದರೆ ಪಂಪ ಉಭಯ ಪುರಾಣಗಳನ್ನು ಉಭಯ ದೃಷ್ಟಿಗಳಿಂದ ಪ್ರತ್ಯೇಕವಾಗಿ ಬರೆದದ್ದೂ ಅವನ ಸಮನ್ವಯ ದೃಷ್ಟಿಗೆ ದ್ಯೋತಕವೋ ಕೇವಲ ಸಹಿಷ್ಣುತೆಗೆ ಮತ್ತು ಪರಿಷ್ಕೃತ ಮತ ನಿರಪೇಕ್ಷ ಕವಿತ್ವದ ತತ್ತದೇಕಾಗ್ರತೆಯ ಮನೋಧರ್ಮಕ್ಕೆ ಸಾಕ್ಷಿಯೋ ? ಇದು ಮಹತ್ವದ ಪ್ರಶ್ನೆ.

ಜಾತಿಗಳಲ್ಲಿ ಸಾಮಾನ್ಯ ಪಾತಳಿಯಿಂದ ಪಂಪನಿಗೆ ಕುರುಡು ನಂಬಿಗೆ ಇಲ್ಲ. ಆದಾಗ್ಯೂ ಅಂದಿನ ಯುಗ ಮೌಲ್ಯಾನುಸಾರವಾಗಿ ವಿಪ್ರಕುಲ ಉತ್ತಮ ಜಾತಿಯೆಂದು ಆತ ತಿಳಿಯುತ್ತಾನೆ. ಆದರೆ ಈ ಮಾತ್ರಕ್ಕೆ ಪಂಪ ವರ್ಣದ ವಿಶಿಷ್ಟ ಗುರುತ್ವ ಒಪ್ಪಿಕೊಂಡಿದ್ದಾನೆಂದು ಭಾವಿಸಬೇಕಾಗುವದಿಲ್ಲ. ಇಲ್ಲಿ ಅವನ "ಸಮನ್ವಯ ದೃಷ್ಟಿ"ಯೆಂಬುದನ್ನು ಕಾಣಬೇಕಾಗಿಲ್ಲ. ಆತ ತನ್ನ ಕುರಿತು ಅಂದಿನ ಪ್ರತಿಷ್ಠಿತ ಸ್ವಜನ ವರ್ಗದ ಗ್ರಹಿಕೆಯನ್ನೆ ಇಟ್ಟುಕೊಂಡು ಬಣ್ಣಿಸಿದ್ದಾನೆ. ಅಲ್ಲದೆ ಅಂದಾಗಲೀ ಮುಂದಾಗಲೀ ಈ ವಿಪ್ರಕುಲದವರು ಯಾವ ಮತ ಪಂಥ ಧರ್ಮವನ್ನು ಸ್ವೀಕರಿಸಲಿ ತಮ್ಮ ವಿಪ್ರತ್ವದ ಹೆಗ್ಗಳಿಕೆಯನ್ನು ಕಟ್ಟಿಕೊಂಡೇ ನಡೆಯುತ್ತಿದ್ದರು. ಈ ಹೊಸ ಸಮಾಜದಲ್ಲಿಯೂ ಅಗ್ಗಳಿಕೆಯನ್ನು ಬಯಸುತ್ತಿದ್ದರು, ಪಡೆಯುತ್ತಿದ್ದರು. ಅವರ ಶ್ರೇಷ್ಠತೆ ಈ ಸಮಾಜದಲ್ಲಿ ಬಂದ ಇತರ ವರ್ಗಗಳು ಒಪ್ಪಿಕೊಂಡೇ ಸಾಗುತ್ತಿದ್ದರು. ಈ ಪರಿಸರದ ಶಿಶು ಪಂಪ.

ಜೈನ ವೈದಿಕ ಧರ್ಮ ಸಂಪ್ರದಾಯಗಳನ್ನು ಪಂಪ ಸಮಾನ ಗೌರವದಿಂದ ಆಸಕ್ತಿಯಿಂದಲೂ ನೋಡುತ್ತಿದ್ದನೆಂದಾಕ್ಷಣ ಆತ ಅವೆರಡರ ಸಮನ್ವಯದ ದೃಷ್ಟಿಯುಳ್ಳವನೆಂದೆನ್ನುವದು ಸಾಧುವಲ್ಲ. ಈ ಸಮನ್ವಯ ದೃಷ್ಟಿ ಈ ಜಾಯಮಾನದ್ದಲ್ಲ. ಅದು ತೌಲನಿಕವಾದ ಮೌಲ್ಯ ಸ್ವೀಕಾರದ "ಕರ್ಮಸಂಗಿ"ಯಲ್ಲದ ತತ್ತ್ವಾನ್ವೇಷಣದ ಅರ್ವಾಚೀನ ದೃಷ್ಟಿ. ಅಂದು ಹೆಚ್ಚೆಂದರೆ ಸರ್ವಧರ್ಮ ಸಮಾನತ್ವದ

ಅಥವಾ ಅವರವರ ಪಂಥ ಅವರಿಗೆಂಬ ಉದಾರ ಮತದ ವಿಶಾಲ ಭಾವನೆಯೇ ಅಂತಿಮ ಆದರ್ಶವಾಗಿರುತ್ತಿತ್ತು. ವ್ಯಾಸ ಭಾರತವನ್ನೂ ಪೂರ್ವ ಪುರಾಣವನ್ನೂ ಕೂಡಿಯೇ ಪ್ರೀತ್ಯಾದರಗಳಿಂದ ನೋಡಿ ಸವಿದು, ಅವನ್ನು ಬೇರೆ ಬೇರೆ ನಿರೂಪಿಸಿದ ದೃಷ್ಟಿ ಧರ್ಮ ಸಮನ್ವಯದ್ದಲ್ಲ. ಆ ಕಲ್ಪನೆಯೇ ಅಂದಿಗೆ ಹೊರತಾದದ್ದು ಇರಲಿ.

ಪಂಪನ ರಸಿಕತೆ, ವಿವಿಧ ಲಲಿತ ಕಲಾಭಿಜ್ಞಾನ, ಶಾಸ್ತ್ರಾಭ್ಯಾಸ, ಸಹೃದಯತೆ ಇತ್ಯಾದಿಗಳಿಂದ ಅವನ ಜೀವನದೃಷ್ಟಿಯು ಮಾಗಿ, ತಕ್ಕ ವೈಶಾಲ್ಯವನ್ನೂ ಜ್ಞಾನ ವನ್ನೂ ಪಡೆದದ್ದನ್ನು ಆ ಮೂಲಕ ಅವನ ವ್ಯಕ್ತಿತ್ವಕ್ಕೆ ಬಂದ ಶ್ರೀಮಂತಿಕೆಯನ್ನು ಡಾ. ನಾಗರಾಜಯ್ಯ ಚೆನ್ನಾಗಿ ವಿವರಿಸಿದ್ದಾರೆ.

ಕವಿಯು ಎಂಥ ಪ್ರಸಂಗದಲ್ಲಿಯೂ ಸಿದ್ಧಹಸ್ತ, ನಿಷ್ಕಂಪ. ರಸವೇನು ರಣವೇನು ಆತ ಒಂದೇ ರೀತಿ. ಚತುರಂಗಬಲಭಯಂಕರನೂ ಅಹುದು, ಲಲಿತಾಲಂಕರಣನೂ ಅಹುದು. ಆದರೆ ಇದೆಲ್ಲ ಆತನೇ ತನ್ನ ಕುರಿತು ಮಾಡಿದ ವರ್ಣನೆ ಇದರ ಮೌಲ್ಯ ಮಾಪನ ಹೇಗೆ ಮಾಡಬೇಕು ? ಆದರೂ ಪಂಪನ ಸೌಂದರ್ಯೋಪಾಸಕ ಆಕರ್ಷಕ ವ್ಯಕ್ತಿತ್ವದ ಪರಿಜು ಪಾಂಗುಗಳು ಇಲ್ಲಿ ವ್ಯಕ್ತವಾಗಿದ್ದು,ಆತ ತ್ಯಾಗ-ಭೋಗಗಳ ಸುವರ್ಣ ಮಾಧ್ಯಮವನ್ನು ಸಾಧಿಸಿದ್ದಾನೆ, ಬೋಧಿಸಿದ್ದಾನೆ ಎಂಬುದು ದಿಟವಾಗುತ್ತದೆ. ಭೋಗ ವನ್ನು ಚೆನ್ನಾಗಿ ಅರಿಯದವನು ತ್ಯಾಗವನ್ನು ಚೆನ್ನಾಗಿ ತಿಳಿಯಲಾರನು. ಇದು ಪಂಪನ ದೃಷ್ಟಿಕೋನ. ಹೊರ ಚೆಲುವು ಒಳ ಚೇತನವೂ ಆಗುವಂತೆ ಸೌಂದರ್ಯಧರ್ಮವನ್ನು ಅದರ ಹಲವು ಒಲವು- ನಿಲುವುಗಳಲ್ಲಿ ತೆರೆದು ತೋರುವದು ಅವನ ವೈಶಿಷ್ಟ್ಯ. ಆದ್ದರಿಂದಲೇ ಆತ ಧರ್ಮವನ್ನು ಕಾವ್ಯಧರ್ಮದೊಂದಿಗೆ ಎರಕ ಹೊಯ್ದದ್ದು. ಇದನ್ನು ಪ್ರಬಂಧಕಾರರು ವಿಶದಪಡಿಸಿದ್ದಾರೆ.

ಆದರೆ ಇದರೊಂದಿಗೆ ಅವರು ಪಂಪನ ಆತ್ಮಸಂಮೋಹಿತ್ವವನ್ನು ಸ್ಪಷ್ಟಪಡಿ ಸಿಲ್ಲ. "ಆತ್ಮನಸ್ತು ಕಾಮಾಯ" ಎಂಬ ಉಪನಿಷದ್ವಾಕ್ಯ ಪಂಪನಲ್ಲಿ ಅಕ್ಷರಶಃ ಸಾರ್ಥಕವಾಗಿದೆ.

ದುರ್ಯೋಧನ–ಕರ್ಣರ ಅಪೂರ್ವ ಮೈತ್ರಿಯಲ್ಲಿ ಅರಿಕೇಸರಿ-ಪಂಪರ ಸಖ್ಯದ ಆಖ್ಯಾನ ಒಡಮೂಡಿದೆಯೇ ? ಆದರೆ ಇದು ಆ ಮೈತ್ರಿಯ ಮಟ್ಟಿಗೇ ಇರಬೇಕು. ಇಲ್ಲವಾದರೆ ಕರ್ಣನಲ್ಲಿ ಪಂಪನು ಪ್ರತಿಬಿಂಬಿಸಿದರೆ ಅರಿಕೇಸರಿಯನ್ನು ದುರ್ಯೋಧನ ನಲ್ಲಿ ಕಾಣಬೇಕಾದೀತು. (ಡಾ ದ. ರಾ. ಬೇಂದ್ರೆಯುವರು ಕಕ್ಕರಸ ಬಪ್ಪವನಂಕ ಕಾರರು ದುರ್ಯೋಧನ-ಕರ್ಣರಾಗಿ ಕಾಣಿಸಿಕೊಂಡಿದ್ದಾರೆಂದು ಊಹಿಸಿದ್ದಾರೆ. ತೊತ್ತಿನಮಗನೆಂಬ ಕರ್ಣನ ವರ್ಣನೆಯು ಮಾತುಗಳು ಬಪ್ಪುವನಿಗೆ ಅನ್ವಯಿಸುತ್ತ

ವೆಂದೂ ಒತ್ತಿ ಹೇಳಿದ್ದಾರೆ. ಅಷ್ಟೇ ಅಲ್ಲ. ಕರ್ಣನನ್ನು ಮೇಲೇರಿಸುವದು ಪಂಪನಿಗೆ ಸಮ್ಮತವೆಂಬ ದನಿ ಎತ್ತಬಾರದೆಂದೂ ನಿರ್ಬಂಧಿಸಿದ್ದಾರೆ!)

ಆದರೆ "ನೆನೆವೊಡೆ ಕರ್ಣನಂ ನೆನೆ" ಎಂದುದರಲ್ಲಿ ಪಂಪನ ಇಂಗಿತವೇನು ? ಕರ್ಣಾವಸಾನದಲ್ಲಿ ದುರ್ಯೋಧನ ಸಲ್ಲಿಸುವ ಬಾಷ್ಪಾಂಜಲಿಯಲ್ಲಿ ಪಂಪ ಪರ್ಯಾಯವಾಗಿ ಆ ಹಿಂದೆ, ತನಗಾಗಿ ಅರಿಕೇಸರಿ ಸಾಕಷ್ಟು ಪ್ರೀತಿ ಪ್ರಕಟಿಸಿದ್ದಿಲ್ಲವೆಂಬ ಅನುತಾಪವನ್ನು ದುರ್ಯೋಧನನ ಬಾಯಿಯಲ್ಲಿ ಹಾಕಿ ತನ್ನ ಹೊಗಳಿಕೆಯನ್ನು ಅವನಿಂದ ಮಾಡಿಸಿದಂತೆ ಇದೆಯೆ ? ಇರಲಿ.

ಪಂಪ ದೇವ-ಮಾನವತ್ವಕ್ಕಿಂತ ಮಾನವೀಯತೆಗೇ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾನೆಂಬುದನ್ನು ಶ್ರೀ ಹಂಪರು ತೋರಿಸಲು ಯತ್ನಿಸಿದ್ದಾರೆ.

ಇನ್ನು ಪಂಪನ ಭಾಷೆ ಪುಲಿಗೆರೆಯ ವಲಯದ ತಿರುಳುಗನ್ನಡವೆಂದಾದರೆ ಅವನ ಹಳೆಗನ್ನಡ ಇಂದಿಗೂ ಉತ್ತರ ಕನ್ನಡದ ಮಲೆನಾಡ ಸೀಮೆಯ ಹವ್ಯಕರ ಬಾಯಿಯಲ್ಲಿ ಕೇಳಿಬರುವ ಭಾಷೆಯನ್ನು, ಅಷ್ಟು ಆಶ್ಚರ್ಯಕರವಾಗಿ ಹೋಲುವ ಬಗೆ ಹೇಗೆ ? ಅವನು ಬಳಸಿದ ಅನೇಕ ಶಬ್ದಗಳೂ ಪಡೆನುಡಿ (idioms) ಗಳೂ ಹವ್ಯಕರ ಬಾಯ್ನುಡಿಯಲ್ಲಿ ಜೀವಂತವಿವೆ. ಡಾ. ಹಂಪರಂಥ ಭಾಷಾಶಾಸ್ತ್ರಜ್ಞರಾರೂ ಈ ಕುರಿತು ಚರ್ಚಿಸಿಲ್ಲ.

ವಸ್ತುನಿಷ್ಠ ಕಾವ್ಯದಲ್ಲಿ ಕವಿಯ ಜೀವನ ದೃಷ್ಟಿಯನ್ನು ಗುರುತಿಸುವದು ಸುಲಭವಲ್ಲ. ತನ್ನ ತೀರ್ಮಾನಗಳಿಲ್ಲ ನಿರೀಕ್ಷೆಯೇ ಹೊರತು ಸಿದ್ಧಾಂತಗಳಲ್ಲ. ಕೆಲವು ಪಾತ್ರಗಳೊಂದಿಗೆ ಕವಿಯ ತಾದಾತ್ಮ್ಯವಿದೆಯೆಂದು ಭಾವಿಸಿದರೂ ಅವರ ಯಾವ ಮಾತಿನಲ್ಲಿ ಅವನದೃಷ್ಟಿ ಸ್ಫುಟವಾಗಿದೆಯೆಂಬುದು ಹೇಳುವದು ಕಷ್ಟಸಾಧ್ಯ ಎಂದಿದ್ದಾರೆ ಡಾ. ನಾಗರಾಜಯ್ಯ ಅದೇ ರೀತಿ ಪಂಪನು ವರ್ಣಿಸಿದ ಮನುಷ್ಯತ್ವದ ವ್ಯಾಖ್ಯೆಯ ಮಾತುಗಳೂ ಅವನು ಕಲ್ಪಿಸಿಕೊಂಡ ಆದರ್ಶದ ಮಾತುಗಳೇ ಆಗಿರಬಹುದೇ ಹೊರತು ಅವನ ಜೀವನ ದೃಷ್ಟಿಯಾಗಬೇಕಾಗಿಲ್ಲವೆಂಬುದೂ ಒಪ್ಪಬೇಕು.

ಡಾ. ಚಿದಾನಂದಮೂರ್ತಿಯವರು ಪಂಪಕವಿಯ ಯುಗಧರ್ಮವನ್ನು ಕುರಿತು ಸಮರ್ಥ ರೀತಿಯಲ್ಲಿ ನಿರೂಪಿಸಿದ್ದಾರೆ. ಅಂದಿನ Heroic Age ಸಂಗ್ರಹವಾಗಿ ಬಣ್ಣಿಸಿದ್ದಾರೆ. ಆದರೆ ಸಾಮಗ್ರಿಯ ಪರಿಮಿತಿಯಿಂದಾಗಿ, ಕರ್ನಾಟಕದ ಇತಿಹಾಸ ಯಾವದೇ ಕಾಲದ ಬಗೆಗೆ ಸಕಲ ವಿವರಗಳೊಂದಿಗೆ ಸಂಕೀರ್ಣ ರೂಪದಲ್ಲಿ ತಿಳಿದುಕೊಳ್ಳುವದು ಕಷ್ಟವಾಗಿದೆಯೆಂದೂ ಒಪ್ಪಿಕೊಂಡಿದ್ದಾರೆ. (ಆದರೆ ಇದಕ್ಕೆ ವಚನಕಾರರ ೧೨ ನೆಯ ಶತಮಾನ ಅಪವಾದವೆಂದಿದ್ದಾರೆ. ಈ ವಿಧಾನ ಇತರ ಶತಮಾನ

ಗಳ ಆ ಹಿಂದಿನ ಶತಮಾನಗಳ ತುಲನೆಯು ಮಾರ್ಗದಲ್ಲಿ ನಿಜವಿರಬಹುದು. ಆದರೆ ೧೨ ನೆಯ ಶತಮಾನದಲ್ಲಿಯೂ ಬಸವಣ್ಣನವರ ಹಾಗೂ ಅವರ ಸಮಕಾಲೀನ ಸಮಾಗಮದ ವ್ಯಕ್ತಿಗಳ ಚರಿತ್ರೆಯಲ್ಲಿಯೇ ಅನೇಕ ಅಜ್ಞಾತ ಅಂಥ ಅಂಶಗಳು ಇನ್ನೂ ಉಳಿದಿವೆ ! ) ಆದ್ದರಿಂದ ಪಂಪನ ಕಾಲದ ಬಗೆಗೆ ಹೇಳುವದು ಒಂದು ಸರಳೀಕರಣ ವೆಂದಿದ್ದಾರೆ ಈ ಪ್ರಾಮಾಣಿಕತೆ ಎಂದಿಗೂ ಸ್ತುತ್ಯ. "ಯುಗಧರ್ಮ" ವೆಂದರೇನು ? ಎಂಬುದರ ವಿವೇಚನೆ ಪ್ರಬಂಧಕ್ಕೆ ಹೊಂದದ ಭಾರದ ವಸ್ತುವೆಂದು ಭಾವಿಸಿಯೂ ಸುಶ್ಲಿಷ್ಟವಾಗಿ ಮಾಡಿದ್ದಾರೆ. ಎಥೊ ಸಕರಿಸ್ಮ (ಚರಿಸ್ಮಾ) ಇತ್ಯಾದಿಗಳ ವಿಷಯ ಚೆನ್ನಾಗಿ ಬಂದಿದೆ. ಯುಗಧರ್ಮವನ್ನು ಗುರುತಿಸುವದರಲ್ಲಿಯೂ ನಿಖರತೆ ಸಾಧ್ಯವಿಲ್ಲವೆಂದಿದ್ದಾರೆ. ಅದೊಂದು ಕ್ಷಾತ್ರ ಧರ್ಮದ ವೀರಯುಗವೆಂದು ಅನೇಕ ಶಾಸನಗಳ ಆಧಾರದಿಂದ ಪ್ರಬಂಧಕಾರರು ಇತ್ಯರ್ಥಮಾಡಿದ್ದಾರೆ. "ಇರಿವುದು, ಈವುದು" ಬೀರ, ಚಾಗ ಆಗಿನ ಪರಮ ಮೌಲ್ಯಗಳೆಂಬುದನ್ನು ಧಾರಾಳವಾಗಿ ಸಿದ್ಧಮಾಡಿದ್ದಾರೆ.

ಪಂಪನ ಕಾವ್ಯದಲ್ಲಿ "ಸಮಸ್ತ ಭಾರತ"ವು ಆ ಕಾಲದ ಯುಗಧರ್ಮದ ಮುದ್ರೆ ಹೆಚ್ಚು ಹೊತ್ತಿದೆ. ಆದರೆ ಮಧ್ಯಯುಗದ ಬದುಕಿಗೆ ವೀರದಷ್ಟೇ ಧರ್ಮವೂ ಒಂದು ಮುಖ. ರಾಜನಿಷ್ಠೆಯೊಂದಿಗೇ ಧರ್ಮನಿಷ್ಠೆ--ರಾಜನೇ ದೇವರೆಂಬಂತೆ ದೇವರೇ ರಾಜನಾಗಿರುವನೆಂಬ ನಿಷ್ಠೆ ದೈವಿಕತೆ ಭಾವುಕತೆಗಳ ಅನೇಕ ಉತ್ಕಟತೆ ಆ ಯುಗಧರ್ಮದ ಇನ್ನೊಂದು ಪ್ರಬಲ ಪ್ರಭಾವಿ ಅಂಶ ಅಂದಾಗ "ವಿಕ್ರಮಾರ್ಜುನ ವಿಜಯ" ದಂತೆಯೇ ಆದಿಪುರಾಣ"ವು ಆ ಯುಗದ ಇನ್ನೊಂದು ಮುಖಕ್ಕೆ ಕನ್ನಡಿ ಹಿಡಿದಿದೆಯೆನ್ನಬಾರದೇಕೆ ?

ಕರ್ನಾಟಕದಲ್ಲಿ ವೀರಗಾಥೆಗಳ ಮೌಖಿಕ ಪರಂಪರೆ ರಾಜಸ್ಥಾನ ಆಂಧ್ರಗಳಂತೆ ಇಲ್ಲವೆನ್ನುವಾಗ ಪ್ರಬಂಧಕಾರರು ಮಹಾರಾಷ್ಟ್ರದ "ಪೋವಾಡಾ" ವೀರಗೀತೆಗಳನ್ನು ಅವನ್ನು ಕಟ್ಟಿ ಹಾಡುವ "ಶಾಹೀದ ರನ್ನು ಮರೆತಂತಿದೆ. ಆದರೆ ಈ ಶಾಹೀದರು ರಜಪೂತ "ಚಾರಣ" ರಷ್ಟು ಹಳೆಯವರಿರಲಿಕ್ಕಿಲ್ಲ. (ಕನ್ನಡದಲ್ಲಿ ಚಮತ್ಕಾರವೆಂಬ ಅರ್ಥದ "ಪವಾಡ" ಮರಾಠಿಯಲ್ಲಿ ವೀರಚರಿತ್ರೆಯ ಜಾನಪದ ಕಾವ್ಯ "ಪೋವಾಡಾ" ಆದದ್ದು ಸೋಜಿಗ) ಆದರೆ ಈ ಗಾಥಾ ಪರಂಪರೆಯ ಕೊರತೆಯನ್ನು ಕೆಲಮಟ್ಟಿಗೆ ನಮ್ಮ ಶಿಲಾಶಾಸನಗಳು ತುಂಬಿಕೊಟ್ಟಿವೆ.

ಆಶ್ರಯದಾತ ದೊರೆ ತನ್ನ ಕವಿ ಮಿತ್ರನಿಗೆ ತನ್ನ ಹೆಸರನ್ನು-ಅದರ ಅಂಶವನ್ನಾದರೂ-ಇಡುತ್ತಿದ್ದನೆಂಬ ವೀರಯುಗದ ಒಂದು ಲಕ್ಷಣಕ್ಕೆ ಅರಿಕೇಸರಿಯ "ಗುಣಾರ್ಣವ" ಪಂಪನ "ಕವಿತಾ ಗುಣಾರ್ಣವ" ಈ ಹೆಸರುಗಳನ್ನು ಪ್ರಬಂಧಕಾರರು ಸಮರ್ಪಕವಾಗಿ ಉದಾಹರಿಸಿದ್ದಾರೆ.

ಪಂಪನಲ್ಲಿ ವೀರಕಾವ್ಯಕ್ಕೆ ಬೇಕಾದ ಆವೇಶವಿದೆಯೇ ? ಕ್ಷಾತ್ರ ವಾತಾವರಣ ದಲ್ಲಿ ಬಾಳಿ ಕೆಲ ಕಾಲ ಕ್ಷಾತ್ರವೃತ್ತಿಯನ್ನು ತೋರಿದ ಕ್ಷಾತ್ರ ಸ್ವಭಾವದ ಈ ಕವಿಯು ತನ್ನ ದೊರೆಯನ್ನು ಉಜ್ವಲೀಕರಿಸಿದರೂ ಸತ್ವತಃ ರಸಿಕಭೋಗಜೀವಿ, ಚಿಂತನಶೀಲ ಮತ್ತು ಸಂಯಮಿ. ಪಂಪನು ನನ್ನಿ, ಬೀರ, ಚಾಗ, ಪಳಿಯ ಹೆದರಿಕೆ ಎಲ್ಲಕ್ಕೂ ಮಿಕ್ಕಿ ಜೋಳವಾಳಿ, ಲೆಂಕವಾಳಿ ಇವೆಲ್ಲ ವೀರಗುಣಗಳನ್ನು ಕರ್ಣನಲ್ಲಿ ತುಂಬಿದ್ದಾನೆ ಅರ್ಜುನ ಕಥಾನಾಯಕ.ತನ್ನ ದೊರೆಯ ಎರಕ ಉಜ್ವಲ ವರ್ಣ ಚಿತ್ರಣದ ವಿಷಯ– ಆದಾಗ್ಯೂ ಪಂಪನಿಗೆ ಕರ್ಣನಲ್ಲಿ ನಿಜವಾದ ಆಕರ್ಷಣೆ ಆಸಕ್ತಿ ಎನ್ನುತ್ತಾರೆ ಪ್ರಬಂಧ ಕಾರರು–"ನೆನೆಯದಿರಣ್ಣ ಭಾರತದೊಳ್ ಪೆರರಾರುಮನ್."

ಹಾಗೆಯೇ ಛಲ, ಧೈರ್ಯಗಳ "ಮಹಾಸತ್ವ" ದುರ್ಯೋಧನ. ಇವೆಲ್ಲ Scale of Values ಪಂಪ ಎತ್ತಿ ಹಿಡಿದಿದ್ದಾನೆ. ಕಾವ್ಯದ ಕೊನೆಗೂ ಕರ್ಣ– ದುರ್ಯೋಧನರು ಕವಿಯ ಮನಸ್ಸನ್ನು ತುಂಬಿ ನಿಂತಿದ್ದಾರೆ. ಯುದ್ಧದ ಹಿಂದಿನ ದಿನ ಸೈನಿಕ ಶಿಬಿರದಲ್ಲಿಯ ವೀರಾಲಾಪ, ಪ್ರಣಯ-ಸಲ್ಲಾಪಗಳ ಚಿತ್ರಣ ಆ ಯುಗ ಧರ್ಮದ ಜೀವಂತ ಸ್ವಾರಸ್ಯಗಳೆಂದು ಪ್ರಬಂಧಕಾರರು ಯಥಾರ್ಥವಾಗಿಯೇ ಹೇಳಿದ್ದಾರೆ.

ಆದಿಪುರಾಣದ ಮೇಲೂ ವೀರಯುಗದ ಛಾಯೆ ಬಿದ್ದಿದೆ ಅಂದಿದ್ದಾರೆ. ಆದರೆ ಧರ್ಮವೂ ಈ ಯುಗದಲ್ಲಿ ವಿಜೃಂಭಿಸಿದ ವಾಣಿಯೇ. "ಪಂಪನು ತನ್ನ ಕಾಲದ ಒಟ್ಟು ಅನುಭವವನ್ನು ಮಹಾಭಾರತದ ಕಥೆಯ ಮೂಲಕ ಹಿಡಿದಿಡಲು ಪ್ರಯತ್ನಿ ಸಿದ್ದಾನೆ. ಪಂಪನಿಗೆ ತನ್ನ ಕಾಲವನ್ನು ವ್ಯಕ್ತಪಡಿಸಲು ಮಹಾಭಾರತವು ಉತ್ತಮ ಮಾಧ್ಯಮವಾಯಿತು." ಇವೆರಡೂ ವಿಧಾನಗಳಲ್ಲಿ ಅರ್ಥದಲ್ಲಿ ಸೂಕ್ಷ್ಮ ಭೇದವಿದೆ. ಕಾಲವನ್ನು ವ್ಯಕ್ತ ಮಾಡುವುದೂ ತನ್ನ ಅನುಭವವನ್ನು ವ್ಯಕ್ತ ಮಾಡುವುದೂ ಒಂದೇ ಕ್ರಿಯೆಯಲ್ಲ. ಅಲ್ಲದೆ, ಕವಿಯು ತನ್ನ ಸಮಕಾಲೀನ ಇತಿಹಾಸವನ್ನು ಮಹಾಭಾರತ ಕಥೆಯ ಮಾಧ್ಯಮದೊಳಗಿಂದ ವ್ಯಕ್ತ ಮಾಡಲು ಹೊರಟಿದ್ದನೆ ? ಅವನಿಗೆ ಮುಖ್ಯವಾಗಿ ಅರಿಕೇಸರಿಯನ್ನು "ಸಂದ ಅರ್ಜುನನೋಳ್ ಪೋಲ್ವ ಕಥಾನಾಯಕನನ್ನು ಮಾಡಿ ಭಾರತ ಕಥೆಯ ಗೋಡೆಯ ಮೇಲೆ ತನ್ನ ದೊರೆಯ ಚಿತ್ರವನ್ನು ಬರೆಯುವ ದೊಂದೇ ಉದ್ದೇಶವಾಗಿತ್ತೋ ? ಈ ಉದ್ದೇಶದಿಂದಾಗಿ ಆತ ಮೂಲದ ಕಥಾ ಪಾತ್ರ ಸೃಷ್ಟಿಯಲ್ಲಿ ಸಾಕಷ್ಟು ವ್ಯತ್ಯಾಸ ಮಾಡಿದಂತೆ, ಸಮಕಾಲೀನ ಇತಿಹಾಸವನ್ನು ಸಮರ್ಪಕ ಅಂಶದಲ್ಲಿ ಈ ಕಾವ್ಯದಲ್ಲಿ ಪೋಣಿಸಿಲ್ಲ ಅಂದರೆ ಅನುಭವ ಮತ್ತು ಅದರ ಆವಿಷ್ಕಾರ ಮಾಧ್ಯಮ ಎರಡಕೂ ಸರಿಯಾದ ನ್ಯಾಯವಾಗಿಲ್ಲ. ಹತ್ತನೆಯ ಶತಮಾನದ ಇನ್ನಿತರ ಕವಿಗಳು ತಮ್ಮ ಕಾವ್ಯಗಳಲ್ಲಿ ಅಂದಿನ ಕಾಲಧರ್ಮವನ್ನು ಹೆಚ್ಚು ಸ್ಪಷ್ಟವಾಗಿ ಪಡಿಮೂಡಿಸಿರುವರೆಂಬುದನ್ನೂ ಪ್ರಬಂಧಕಾರರೇ ತೋರಿಸಿ

ದ್ದಾರೆ. ಅಂದಾಗ ಪಂಪನ ಉದ್ದೇಶವೇ ಅಂದಿನ ಇತಿಹಾಸವನ್ನು ತನ್ನ ಸಮಸ್ತ ಭಾರತದಲ್ಲಿ ಪ್ರಕಟಿಸುವದಾಗಿತ್ತು-ಎಂದರೆ ಈ ಕವಿಯ ಮೇಲೆ ಅನ್ಯಾಯವಾಗಿ ಬಹು ದೊಡ್ಡ ಹೊಣೆ ಹೇರಿದಂತೆ.

ಕೃಷ್ಣನ ಪಾತ್ರದ ಪೋಷಣೆಯ ಬಗೆಗೆ ಪಂಪನ ಪರವಾಗಿ ಪ್ರಬಂಧಕಾರರು ಮಾಡಿದ ಸಮರ್ಥನೆ ಮನನೀಯವಾಗಿದೆ. (ಡಾ. ಬೇಂದ್ರೆ ಪುರುಷೋತ್ತಮನನ್ನು ಪಂಪ ಕಡೆಗಣಿಸಿಯೇ ಇಲ್ಲವೆಂದು ವಾದಿಸಿದ್ದುಂಟು!) ವೀರಕಾವ್ಯದಲ್ಲಿ ತಟಸ್ಥ ಕೃಷ್ಣನ ಪಾತ್ರವೇ ಗೌಣವೆಂದು ಪ್ರಬಂಧಕಾರರ ಅಭಿಪ್ರಾಯ.

ಪಂಪ ಭಾರತ ಒಂದನ್ನೇ ಇಟ್ಟುಕೊಳ್ಳುವ ಬದಲು ಆದಿಪುರಾಣದಲ್ಲಿಯ ವೀರ ಯುಗದ ಛಾಯೆಯನ್ನು ಅಲ್ಲಲ್ಲಿ ಕಾಣಿಸಿದ್ದರೆ ಇನ್ನೂ ಚೆನ್ನಾಗಿತ್ತು. ಪ್ರಶ್ನೋತ್ತರ ಗಳಲ್ಲಿ ಮಾಡಿದ "ಪಂಡಿತ" ಶಬ್ದದ ವ್ಯಾಖ್ಯಾನ ಸ್ವಾರಸ್ಯವಾಗಿಯೇ ಬಂದಿದೆ.

[ ಸಶೇಷ ]

# ಅನುನಾಸಿಕ- ಯವಲ
(ಒಂದು ಪ್ರತಿಕ್ರಿಯೆ)

ಸಂಗಮೇಶ ಬಿರಾದಾರ

'ಕರ್ನಾಟಕಭಾರತಿ'ಯ ೬ ನೆಯ ಸಂಪುಟದ ೨ ನೆಯ ಸಂಚಿಕೆಯಲ್ಲಿ ವಿಷ್ಣು ಸುತರು 'ಅನುನಾಸಿಕ-ಯವಲ' ಎಂಬ ಶೀರ್ಷಿಕೆಯ ಕೆಳಗೆ ಒಂದು ಲೇಖನವನ್ನು ಬರೆದು "ಕೇಶವನು ತನ್ನ 'ಶಬ್ದಮಣಿದರ್ಪಣ' ದಲ್ಲಿ ಈ ಎಲ್ಲ ಅನುನಾಸಿಕಗಳನ್ನು ಹೇಳಿ ಉಳಿದ ಕಡೆಗೆ ಎಲ್ಲಿಯೂ ಉಲ್ಲೇಖವಿರದ ಯ, ವ. ಲ ಅಕ್ಷರಗಳನ್ನು ಅನುನಾಸಿಕ ನಿರನುನಾಸಿಕ ಎರಡೂ ಕಡೆಗೆ ಹಾಕಿ, ಅವುಗಳ ಮೇಲೆ ಸಂಶೋಧಕ ಬೆಳಕು ಚೆಲ್ಲಿದ್ದಾನೆ." "ಎಲ್ಲಿಯೂ ದೊರಕದ ಈ ವಿವರಣೆಗೆ ಆಕರವೇನು ? ಕೇಶಿರಾಜನಿಗೆ ಇವುಗಳ ಸೂಚನೆ ತನ್ನ ಹಿಂದಿನ ವೈಯಾಕರಣಿಗಳಿಂದ ದೊರಕಿದೆಯೇ ? ಕಾವ್ಯ ಗ್ರಂಥಗಳಿಂದ ದೊರಕಿದೆಯೇ ? ಮತ್ತೆ ಯಾವುದರಿಂದಲಾದರೂ ದೊರಕಿದೆಯೇ ? ಇದರ ಮೂಲ ಹೇಳುವುದು ಬಹಳ ಕಷ್ಟ. ಸಂಸ್ಕೃತ ವ್ಯಾಕರಣ ಗ್ರಂಥಗಳಿಂದಂತೂ ಮೂಲ ದೊರೆವುದು ದುರ್ಲಭ. ಇವನಿಗಿಂತಲೂ ಮೊದಲಿದ್ದ ನಾಗವರ್ಮ, ಶ್ರೀವಿಜಯರಿಂದ ಇವನಿಗೆ ಈ ಮೂಲ ದೊರಕಿರಲಾರದೆಂದು ಸ್ಪಷ್ಟವಿದೆ" ಎಂದು ಹೇಳಿದ್ದಾರೆ.

"ವಿಷ್ಣುಸುತ"ರ ಈ ಹೇಳಿಕೆ ನಿರಾಧಾರವಾದುದೆಂದೇ ಹೇಳಬೇಕಾಗುತ್ತದೆ. ಏಕೆಂದರೆ. ಕೇಶಿರಾಜನಿಗಿಂತ ಹಿಂದೆಯೇ ಆಗಿಹೋದ ೨ ನೆಯ ನಾಗವರ್ಮನ ಎರಡೂ ವ್ಯಾಕರಣ ಗ್ರಂಥಗಳಲ್ಲಿ-ಕರ್ನಾಟಕ ಭಾಷಾಭೂಷಣ. ಶಬ್ದಸ್ಮೃತಿ-ಈ ವಿಷಯ ಬಂದಿರುತ್ತದೆ. ಬಹುತರವಾಗಿ ವಿಷ್ಣುಸುತರು ನಾಗವರ್ಮನ ಗ್ರಂಥಗಳನ್ನು ನೋಡದೆ ಈ ನಿರ್ಣಯವನ್ನು ಕೊಟ್ಟಂತಿದೆ. ನೋಡಿದರೆ ಈ ಮಾತೇ ಬರುತ್ತಿರಲಿಲ್ಲ.

ನಾಗವರ್ಮನು ತನ್ನ ಕರ್ನಾಟಕ ಭಾಷಾಭೂಷಣದಲ್ಲಿ 'ವಿಭಾಷಯಾ ಯವಲಾಃ' (೯) ಎಂದು ಸೂತ್ರಿಸಿ 'ಯವಲಾ ಇತ್ಯೇತೇ ವರ್ಣಾಃ ವಿಭಾಷಯಾ ವಿಕಲ್ಪೇನ ಅನುನಾಸಿಕ ಸಂಜ್ಞಾ ಭವಂತಿ' ಎಂದು ವೃತ್ತಿಯಲ್ಲಿ ವಿವರಿಸಿದ್ದಾನೆ. ಮತ್ತು ಸಂಯುತ-ಸಯ್ಯುತ, ಯುಂಲೋಕ-ಯುಲ್ಲೋಕ. ಸೇಂವೆ-ಸೇವೆ. ಕಾಂವಂ-ಕಾವಂ, ಕಲ್ಲನೆ ಕನಲ್ದು ಮುಂತಾದ ಉದಾಹರಣೆಗಳನ್ನು ಕೊಟ್ಟು ತನ್ನ ನಿಯಮವನ್ನು ದೃಢೀಕರಿಸಿದ್ದಾನೆ. ಅದರಂತೆ,

**ಅನುನಾಸಿಕಮಕ್ಕುಂ ಙಞ**
**ಣನಮಂಗಳೆ ಯವಲಮನನುನಾಸಿಕಮುಂ ಮ-**
**ತ್ತನುನಾಸಿಕಮುಮ ವಕ್ಕುಂ**
**ಜನೋಕ್ತಿಯಿಂದಱಿವುದವಱ ವಿಷಯಾಂತರಮಂ ||೫||**

ಎಂದು ಕಾವ್ಯಾವಲೋಕನದ ಶಬ್ದಸ್ಮೃತಿಯಲ್ಲಿ ನಿಯಮನಗೊಳಿಸಿದ್ದಾನೆ. ಒಯ್ಯನೆ, ಸೇವೆ, ಕಲ್ಲಸೆ ಈ ಉದಾಹರಣೆಗಳನ್ನು ಪ್ರಯೋಗದೊಂದಿಗೆ ಕೊಟ್ಟಿದ್ದಾನೆ. ಇಷ್ಟು ಸ್ಪಷ್ಟವಿರುವಾಗ ಯವಲಗಳನ್ನು ಅನುನಾಸಿಕ ಮತ್ತು ಅನನುನಾಸಿಕಗಳೆರಡರಲ್ಲಿ ಸೇರಿಸಿದ ಶ್ರೇಯಸ್ಸು ಕೇಶವನಿಗೆ ಸಲ್ಲುತ್ತದೆನ್ನುವ ಮಾತು ಸತ್ಯಕ್ಕೆ ಹೊರತಾದುದೆಂದು ಹೇಳುವ ಕಾರಣವೆ ಇಲ್ಲ.

ಕೇಶಿರಾಜನಲ್ಲಿ ಬರುವ ಮೇಯಿಸಿದಂ, ನೋಯಿಸಿದಂ, ಮಯಣಂ, ನಯಣಂ, ಮಾಯಂ ಎಂಬ ಉದಾಹರಣೆಗಳನ್ನು ನೋಡಿ ವಿಷ್ಣುಸುತರು 'ಅನುನಾಸಿಕದ ಮುಂದಿನ ಯಕಾರವಷ್ಟೇ ಸಾಮಾನ್ಯವಾಗಿ ಅನುನಾಸಿಕದಲ್ಲಿ ಬರುತ್ತದೆಂಬ ಕಲ್ಪನೆಯಾಗುತ್ತದೆ.' ಎಂದು ಹೇಳಿ ಕೇಶಿರಾಜನ ನಿಯಮಕ್ಕೆ ಅರ್ಧಸತ್ಯವನ್ನು ಕಲ್ಪಿಸಿ ನಿರನುನಾಸಿಕದ ಮುಂದೆಯೂ ಯಕಾರವು ಅನುನಾಸಿಕವಾಗುತ್ತದೆಂದು 'ಬೇಯಲ' ಈ ಉದಾಹರಣೆಯನ್ನು ಕೊಟ್ಟು ಪೂರ್ತಿಮಾಡಲು ಪ್ರಯತ್ನಿಸಿದ್ದಾರೆ. ಇದಕ್ಕೂ ಕೂಡಾ ಕಾರಣವಿಲ್ಲ ನಾಗವರ್ಮನು ಅನುನಾಸಿಕದ ಮುಂದಿನ ಯಕಾರಕ್ಕೆ ಉದಾಹರಣೆಯನ್ನೇ ಕೊಟ್ಟಿಲ್ಲ. ಒಯ್ಯನೆ, ಸಂಯುತ ಮುಂತಾದವುಗಳನ್ನಿತ್ತಿದ್ದಾನೆ. ಸೊಯ್, ರೊಯ್ ಎಂಬಂತಹ ಅನುಕರಣವಾಚಕಗಳಲ್ಲಿ ಯಕಾರವು ಅನುನಾಸಿಕದಂತೆ ಉಚ್ಚಾರವಾಗುತ್ತದೆಂಬ ಮಾತನ್ನೂ ನಾಗವರ್ಮನು 'ಒಯ್ಯನೆ' ಎಂಬ ಉದಾಹರಣೆಯಿಂದ ಸ್ಪಷ್ಟಪಡಿಸಿದ್ದಾನೆ.

ವಕಾರವು ಅನುನಾಸಿಕ ಹೇಗಾಯಿತೆಂಬುದನ್ನು ವಿವರಿಸುತ್ತ ವಿಷ್ಣುಸುತರು ಮ->ವ ಆಯಿತೆಂದು ಮಾಮ->ಮಾವ ಉದಾಹರಣೆಯನ್ನು ಕೊಟ್ಟಿರುವಂತೆ ಇದೇ ಉದಾಹರಣೆಯನ್ನು ತದ್ಭವದಲ್ಲಿಯೂ ವ ಅನುನಾಸಿಕವಾಗುತ್ತದೆಂಬಲ್ಲಿಯೂ ಕೊಟ್ಟಿದ್ದಾರೆ. ಇದರಿಂದ ಮ ಅನುನಾಸಿಕವಿದ್ದು ಅದರಿಂದ ವ ಅನುನಾಸಿಕವಾಯಿತೆಂದು ಹೇಳಿದಂತಾಯಿತು. ಆದರೆ ತದ್ಭವದಲ್ಲಿ ಪ>ವ (ಸಪತ್ನಿ-ಸವತಿ), ವ>ವ (ಜೀವ>ಜೀಂವ , ದ>ವ (ಪಾದುಕಾ-ಹಾವುಗೆ) ಆಗುವಲ್ಲಿಯೂ ವಕಾರವು ಅನುನಾಸಿಕವಾಗಿದೆ. ಇದು ಏಕಾಯಿತೆಂದು ಲೇಖಕರು ವಿವರಿಸಿಲ್ಲ. ಸ್ಥಾನ ಠಾಣ ಎಂಬ ಉದಾಹರಣೆಯನ್ನು ಇಲ್ಲಿ ಏಕೆ ಕೊಟ್ಟರೆಂಬುದು ಅರ್ಥವಾಗುವುದಿಲ್ಲ.

ವಕಾರ ಅನುನಾಸಿಕಕ್ಕೆ ತಿರುಗಿದಾಗ, ಬೇರೆ ಅರ್ಥಕೊಡುವ ಸಂಭವವೂ ಉಂಟು ಎಂದು 'ಕಾವು' ಉದಾಹರಣೆಯನ್ನು ಕೊಟ್ಟಿದ್ದಾರೆ. 'ಕಾವು' ಎನ್ನುವುದಕ್ಕೆ ಒಂದರ್ಥ ರಕ್ಷಣೆ ಎಂದಾಗುತ್ತಿದ್ದರೆ, ಇನ್ನೊಂದು ಉಷ್ಣತೆ ಎಂದಾಗುತ್ತದೆ. ಇವುಗಳಲ್ಲಿ 'ರಕ್ಷಣೆ' ಎಂಬರ್ಥದಲ್ಲಿಯ 'ಕಾವು' ಅನುನಾಸಿಕವಾಗುವುದಿಲ್ಲ. ಅಲ್ಲದೆ ಇವೆರಡು ಅರ್ಥಗಳನ್ನು ಕೊಡುವ 'ಕಾವು' ಶಬ್ದವು ಒಂದೇ ಮೂಲದ್ದೂ ಅಲ್ಲ. ರಕ್ಷಣೆ ಎಂಬರ್ಥದಲ್ಲಿ ಅವರು ಹೇಳಿದಂತೆ 'ಕಾಪು' (ಕಾ = ರಕ್ಷಿಸು ಪು ತದ್ಧಿತ ಪ್ರತ್ಯಯ ಇದರಿಂದ ಕಾಪು=ರಕ್ಷಣೆ) ಇದರಿಂದ ಬಂದಿದ್ದರೆ, ಉಷ್ಣತೆ ಎಂಬರ್ಥದಲ್ಲಿ 'ಕಾಯ್' ಎಂಬ ಮೂಲದಿಂದ ಬಂದಿದೆ. ಆದ್ದರಿಂದ ಅರ್ಥ ವ್ಯತ್ಯಾಸಕ್ಕೆ ವಕಾರಾನುನಾಸಿಕವು ಕಾರಣೀಭೂತವಾಗುತ್ತದೆನ್ನುವ ಮಾತು ಫಲಿಸುವುದಿಲ್ಲ

ವಿಷ್ಣುಸುತರು ತಮ್ಮ ಹೇಳಿಕೆಯನ್ನೇ ತಮ್ಮ ಲೇಖನದಲ್ಲಿ ಖಂಡಿಸಿದ್ದಾರೆ ಪ್ರಾರಂಭದಲ್ಲಿ 'ಸಂಸ್ಕೃತ ವ್ಯಾಕರಣ ಗ್ರಂಥಗಳಿಂದಂತೂ ಮೂಲ ದೊರೆವುದು ದುರ್ಲಭ' ಎಂದು ಹೇಳಿದವರು, "ಕೇಶಿರಾಜನಿಗೆ ಅನುನಾಸಿಕ ಲಕಾರ ಸೂಚನೆ ಪಾಣಿನಿಯ ಲಣ್–೬' ಮತ್ತು 'ಉಪದೇಶೇ ಅಜನುನಾಸಿಕ ಇತ್', ೧-೩-೨ ಈ ಸೂತ್ರಗಳಿಂದ ಹೊಳೆದಿರಬಹುದೆ ?" ಎಂದು ಸಂದೇಹಪಟ್ಟು, "ಸ್ವರ ಅನುನಾಸಿಕ ಧ್ವನಿ ಹೊರಡಿಸಿದರೆ 'ಇತ್' ಆಗುತ್ತದೆ 'ಲ' ಕಾರದ 'ಅ' ಅನುನಾಸಿಕವಾಗಿ ಮೊದಲು ಧ್ವನಿಸುತ್ತಿತ್ತು. ಸ್ವಾಭಾವಿಕವಾಗಿ 'ಲ' ಕಾರವೂ ಅದರೊಡನೆ ಕೂಡಿ ಕೊಳ್ಳುತ್ತದೆ. ಕೇಶಿರಾಜನು ಈ ಜಾಡನ್ನೇ ಹಿಡಿದು ಕನ್ನಡ ಅನುನಾಸಿಕ 'ಲ'ಕಾರ ಸಂಶೋಧಿಸಿದ್ದಾನೆಂಬ ಅನುಮಾನ ತಲೆದೋರುತ್ತದೆ." ಎಂದು ಆ ಸಂದೇಹಕ್ಕೆ ವಿವರಣೆಯನ್ನಿತ್ತಿದ್ದಾರೆ. ಇದೇಕೋ ಅಷ್ಟು ಸಮರ್ಥನೀಯವೆಂದು ಕಾಣುವುದಿಲ್ಲ

ವಿಷ್ಣುಸುತರ ಹಕಾರ ಅನುನಾಸಿಕದ ವಿಚಾರ, ಯವಲಹಗಳಿಗೆ ಹಿಂದಿಯಂತೆ ಕನ್ನಡದಲ್ಲಿಯೂ ಒಂದು ಸಂಕೇತವನ್ನು ಬಳಸಬೇಕೆಂಬ ವಿಚಾರ ಸ್ವಾಗತಾರ್ಹ.

●

# ಗೃಹಭಂಗ : ಪ್ರಾದೇಶಿಕ ಕಾದಂಬರಿ
(ವಿವೇಚನೆ)

ಮಹಾದೇವ ಕಣವಿ

ಗೃಹಭಂಗ ಕಾದಂಬರಿಗೆ ಮುನ್ನುಡಿಯನ್ನು ಬರೆಯುತ್ತ ಲೇಖಕ ಶ್ರೀ ಭೈರಪ್ಪನವರು "ಇದೊಂದು ಪ್ರಾದೇಶಿಕ ಕಾದಂಬರಿಯೆಂಬ ಆತುರದ ಕ್ಲಾಸರೂಮು ಬುದ್ಧಿಯ ವರ್ಗೀಕರಣ ಮಾಡಬಾರದು" ಎಂದು ಬರೆಯುತ್ತಾರೆ. ಅವರು ಹೀಗೆ ಹೇಳಿದದುದು ಕಾದಂಬರಿಯನ್ನು ವರ್ಗೀಕರಣದಿಂದ ದೂರಮಾಡುವುದರಲ್ಲಿ ಎಳ್ಳಷ್ಟೂ ಸಹಾಯ ಮಾಡುವುದಿಲ್ಲ ಅಥವಾ ಕ್ಲಾಸಿಫಿಕೇಶನ್ ಬೇಡವೆಂದು ಬರೆದಿರದಿದ್ದರೆ ಅದು ತನ್ನ ಸ್ಥಾನವನ್ನು ತಾನೇ ನಿರ್ಧರಿಸಿಕೊಳ್ಳುತ್ತಿತ್ತು.

ಗ್ರಾಮಾಯಣ, ನಿಸರ್ಗ, ಮರಳಿ ಮಣ್ಣಿಗೆ, ಕಾನೂರು ಹೆಗ್ಗಡತಿ, ರಂ. ಶಾ.ರ ತಾಯಿ ಸಾಹೇಬ್‌ಗಳು ಪ್ರಾದೇಶಿಕ ಕಾದಂಬರಿಗಳೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅವುಗಳ ವಿಮರ್ಶೆಯನ್ನು ಬರೆಯುವಾಗ ಒಂದು ಪರಿಮಿತಿಯನ್ನು ಮಾತ್ರ ಕಾದಂಬರಿಗಳಿಗೆ ಹಾಕುವಂತೆ ತೋರುತ್ತದೆ. ಶ್ರೀ ಗಿರಡ್ಡಿಯವರು ಈಗಾಗಲೇ ಈ ಸಮಸ್ಯೆಯನ್ನು "ಕಾರಂತ ಪ್ರಪಂಚ"ದಲ್ಲಿ ಎತ್ತಿದ್ದಾರೆ. ಜೊತೆಗೆ "ಕಾನೂರು ಹೆಗ್ಗಡತಿ"ಯ ಬಗೆಗೆ ಉಪಸಂಹಾರದಲ್ಲಿ "ಅಂತೆಯೇ ಅದು ಪ್ರಾದೇಶಿಕವಾಗಿರುವುದು ಮಾತ್ರವಲ್ಲದೆ ಸಾರ್ವಲೌಕಿಕ ಮೌಲ್ಯವನ್ನು ಹೊಂದಿದುದಾಗಿದೆ" ಎಂದು ಶ್ರೀ ಎಂ. ರಾಮರಾವ ಬರೆಯುತ್ತಾರೆ ಒಟ್ಟಾಭಿಪ್ರಾಯವೆಂದರೆ "ಪ್ರಾದೇಶಿಕ"ಗಳು ಯಾವುದೋ ಕೊರತೆಯಿಂದ ಬಳಲುತ್ತವೆಯೆನ್ನುವುದು ತಪ್ಪು ನಿರ್ಣಯ. ಪ್ರಾದೇಶಿಕ ಕಾದಂಬರಿಗಳಲ್ಲದ ಇತರ ಕೃತಿಗಳಲ್ಲೆಲ್ಲ 'ಸಾರ್ವಲೌಕಿಕ ಮೌಲ್ಯಗಳು' ಪ್ರತಿಪಾದಿತವಾಗುವುದೂ ಇಲ್ಲ. ಕಾದಂಬರಿಯ ಬೆಲೆ ನಿರ್ಧರಿತವಾಗುವುದು ಲೇಖಕನ ಸಾಮರ್ಥ್ಯದ ಮೇಲೆಯೇ ವಿನಾ ಅದಕ್ಕೆ ಆರೋಪಿಸಿದ ವರ್ಗೀಕರಣದಿಂದಲ್ಲ. ಅಲ್ಲವಾದರೆ 'ಚೋಮನ ದುಡಿ'. 'ಅರ್ನೆಸ್ಟ ಹೆಮಿಂಗ ವೇಯ 'The old man and the Sea' (ನೋಬೆಲ್ ಪ್ರಶಸ್ತಿ ವಿಜೇತ)ಗಳ ಗತಿಯೇನು ?

ಪ್ರಾದೇಶಿಕ ಕಾದಂಬರಿಗಳ ಬಗೆಗೆ ವಿವರವಾದ ಚರ್ಚೆಯಾಗಲೀ ಬರಹವಾಗಲೀ ಬಂದಿಲ್ಲ. ಹೀಗಾಗಿ ಕನ್ನಡದ ಕೆಲವು ಪ್ರಾದೇಶಿಕ ಕಾದಂಬರಿಗಳ ತೌಲನಿಕ ಅಭ್ಯಾಸದ ಹಿನ್ನೆಲೆಯಲ್ಲಿ ನನ್ನ ಚರ್ಚೆಗೆ ಆಸ್ಪದ ದೊರಕಿಸಿಕೊಂಡಿದ್ದೇನೆ. ಪ್ರಾದೇಶಿಕ ಎನ್ನುವುದು ಕಾದಂಬರಿಗೆ ಸಂಬಂಧಿಸಿದಂತೆ ಮಾತನಾಡುವಾಗ ಹಳ್ಳಿ ಇಲ್ಲವೆ

ಪಟ್ಟಣದ ಒಂದು ಭಾಗಕ್ಕೆ ಸೀಮಿತವಾಗಿರುತ್ತದೆ. ಕನ್ನಡದಲ್ಲಿ ಬಂದ ಪ್ರಾದೇಶಿಕಗಳೆಲ್ಲ ಹಳ್ಳಿಯ ಕಥೆಯನ್ನು ಹೇಳುತ್ತವೆ

"The Regional novel as a Serious genre has been developed in many directions since Maria-Edge- worth's studies of Irish provincial life and Balzac's category of scences of provincial life in "La Comedic Humaine" There are for example, the American Novels of South and the many great fictional Studies of rural, urban and metro politan communities George Eliots Middle March, Sindair Lewis's "Main Street" and Balzac's 'La pere Gariot".

ಕೃಷ್ಣಚಂದರ್ ಅವರ ದಾದರಿನ ಮಕ್ಕಳು' ಬೊಂಬಾಯಿಯ ಕೆಳವರ್ಗದ ಜನರ ಜೀವನವನ್ನು ಚಿತ್ರಿಸಿದ ಪ್ರಾದೇಶಿಕ ಕಾದಂಬರಿ. ಚಾರ್ಲ್ಸ್ ಡಿಕೆನ್ಸನು ಲಂಡನ್ ಪಟ್ಟಣದ ಕೆಳವರ್ಗದ ಜನರ ಬಗೆಗೆ ಬರೆದ ಕಾದಂಬರಿಗಳೂ ಅವುಗಳ ಪ್ರಾದೇಶಿಕತೆಗೆ ನಿದರ್ಶನ. ಅಂದರೆ ಪಟ್ಟಣವಾಗಲೀ ಹಳ್ಳಿಯಾಗಲೀ ಒಂದು ಜನಾಂಗದ ಕತೆಯನ್ನು ಅವು ಹೇಳುತ್ತವೆ. ಕೃಷ್ಣಾ ನದಿಯ ದಂಡೆಯ ಮೇಲಿನ ಊರಾದ ಪಾದಳ್ಳಿ, 'ಗ್ರಾಮಾಯಣ'ದ ಕೇಂದ್ರಸ್ಥಳ. ಅಥಣಿ, ಶೇಡಬಾಳಗಳ ಸುತ್ತಮುತ್ತಲಿನ ಪ್ರದೇಶ 'ನಿಸರ್ಗ'ಕ್ಕೆ, ಪಡುವಣ ಕರಾವಳಿಯ ಜನರ ಜೀವನದ ಹೋರಾಟದ ಪ್ರದೇಶ 'ಮರಳಿ ಮಣ್ಣಿಗೆ' ಪ್ರಾದೇಶಿಕ ಹಿನ್ನೆಲೆಗಳಾಗುತ್ತವೆ "ಆ ಮಲೆನಾಡಿನ ಮೂಲೆಯಲ್ಲಿ ಗಗನ ಚುಂಬಿಗಳಾದ ಪರ್ವತಾರಣ್ಯಶ್ರೇಣಿಗಳಿಂದ ಪರಿವೃತ್ತವಾಗಿ, ಪ್ರಪಂಚಕ್ಕೆ ಸೇರದ ಬೇರೊಂದು ಪ್ರಪಂಚವದು ಎನ್ನುವ ಪ್ರಾದೇಶಿಕ ಹೆಗ್ಗಡತಿಯದು". ಭೈರಪ್ಪನವರು ಹೇಳುವ ಕಾದಂಬರಿಯನ್ನು ಹೆಣೆಯುವದಕ್ಕೆ ಯಾವುದಾದರೊಂದು ಸ್ಥಳ ಬೇಕು, ಎನ್ನುವದಾಗಲೀ "ಭಾರತದ ಯಾವುದೇ ಹಳ್ಳಿಯಾದರೂ ಆದೀತು" ಎನ್ನುವ ಮಾತುಗಳಾಗಲೀ ಇದು ಪ್ರಾದೇಶಿಕ ಕಾದಂಬರಿ ಅಲ್ಲ ಎಂದು ಸಮರ್ಥನೆಯನ್ನು ಒದಗಿಸುವಲ್ಲಿ ವಿಫಲವಾಗುತ್ತವೆ. ಅವರು ಕಾದಂಬರಿಗೆ ತಿಪಟೂರೂ, ಚನ್ನರಾಯಪಟ್ಟಣ ತಾಲೂಕುಗಳನ್ನೊಳಗೊಂಡ ಪ್ರಾದೇಶಿಕ ಹಿನ್ನೆಲೆ ಎಂದಿದ್ದಾರೆ. ಭಾರತದ ಯಾವುದಾದರೊಂದು, ಇಲ್ಲವೆ ಪ್ರತಿಯೊಂದು ಹಳ್ಳಿಗೂ ಕಾದಂಬರಿಕಾರರು ಆರಿಸಿಕೊಂಡ ಜನತೆಯ ಜೀವನ, ಸಂಪ್ರದಾಯಗಳು, ವೇಷ-ಭೂಷಣಗಳು ಹಬ್ಬ-ಹರಿದಿನಗಳು ಅನ್ವಯಿಸುತ್ತವೆ ಎಂದು ಹೇಳು

---

* *Encyclopedia Britanica. Volume 16*

ವುಮೂ ತಪ್ಪು. ಹಳ್ಳಿ ಅಥವಾ ಪಟ್ಟಣವೊಂದೇ ಪ್ರಾದೇಶಿಕ ಕಾದಂಬರಿಯ ಮಾನ ದಂಡವಲ್ಲ.

ಪ್ರಾದೇಶಿಕ ಕಾದಂಬರಿಯು ಕಥೆಯನ್ನು ಆ ಪ್ರದೇಶದ ಜನಾಂಗದ ಸರಳ ಜೀವನದ ವಸ್ತುನಿಷ್ಠವಾದ ಕತೆಯ ನೇರ ನಿರೂಪಣೆಯೆನ್ನಬಹುದು. ಜೀವನವನ್ನು ಇದ್ದಂತೆಯೇ ನೋಡುವ, ಅದನ್ನು ಆದರ್ಶಮಯವಾಗಿಸದೆಯೇ ವಾಸ್ತವಿಕತೆಯ ಕಡೆಗೇ ಕಾದಂಬರಿಕಾರರ ದೃಷ್ಟಿ ಕೇಂದ್ರೀಕೃತವಾಗುತ್ತದೆ. ಹಳ್ಳಿಯ ಮುಗ್ಧಜನತೆ, ಅಲ್ಲಿ ನಡೆಯುವ ಅಕ್ರಮಗಳು, ಅವ್ಯವಹಾರಗಳು, ಅವುಗಳಲ್ಲಿ ಸಕ್ರಿಯವಾಗಿ ನಿರತ ವಾದ ದುಷ್ಟ ವ್ಯಕ್ತಿಗಳು, ಇವರ ಬಲೆಯಲ್ಲಿ ಸಿಲುಕಿಕೊಂಡು ಸಂಕಟಪಡುವ ನಿಷ್ಪಾಪಿ ಜೀವಿಗಳು, ರಾಕ್ಷಸವೃತ್ತಿಗೆ ವಿರೋಧವಾಗಿ ಏನನ್ನೂ ಮಾಡಲಾರದಂತಹ ಒಳ್ಳೆಯ ಜೀವಿಗಳು, ಪ್ರಣಯ, ಹಾದರಗಳು ಇಲ್ಲಿಯ ಘಟನೆಗಳು. ಸಣ್ಣ ಮಾತಿಗೆ ಹ್ಯಾಂವ, ಜಿದ್ದುಗಳಿಗಾಗಿ ತಮ್ಮ ದುರಭಿಮಾನವನ್ನವರು ಪಣಕ್ಕೆ ಹಚ್ಚುತ್ತಾರೆ. ಕೋರ್ಟುಗಳಿಗೆ ಅಲೆಯುತ್ತಾರೆ. ಭೀಮಕಾಯ ಹೊಂದಿ ಎದುರಾಳಿಯ ತಲೆ ಒಡೆಮ ಮಂತ್ರಮಾಟಗಳಲ್ಲಿ ಪರಿಣಿತರಾದ ಕಂಠೀಜೋಯಿಸರು, ಒಳ್ಳೆಯತನಕ್ಕೆ ಜೀವನವನ್ನು ಒತ್ತೆ ಇಟ್ಟ ಮಾದೇವಯ್ಯನವರು, ಹರಕುಬಾಯಿಯ ಆದರ್ಶ ಅತ್ತೆ ಗಂಗಮ್ಮ, ಗಂಡಸುಜಾತಿಗೆ: ಅಪಮಾನ ಮಾಡುವ ನಿರ್ಲಜ್ಜ ಚೆನ್ನಿಗರಾಯ, ಜೀವನದ ನಂಜನೆಲ್ಲ ಗೊಣಗದೆ ನುಂಗಿದ ನಂಜಮ್ಮ, ದುರಾಚಾರಗಳಲ್ಲಿ ದಿನಗಳನ್ನು ದೂಡುವ ರೇವಣಶೆಟ್ಟಿ, ಮಾವನನ್ನು ಇಟ್ಟುಕೊಂಡು ಮನೆಯಿಂದ ದೂರಳಾದ ಸರಸಿ, ಥೇಟ್ ಪೋಲಿಸ ಕಲ್ಲೇಶಿ ಇವೆಲ್ಲ ಹಳ್ಳಿಯ ಜೀವನ ರಂಗದಲ್ಲಿ ಕುಣಿಯುವ ಪಾತ್ರಗಳು. ಗೃಹಭಂಗ ಮುಖ್ಯವಾಗಿ ಕಥೆಯನ್ನು ಹೇಳುವ ಕಾದಂಬರಿ.

ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಪಾತ್ರಗಳಿಗೆ ಸೂಚಿಸಿರುವ ಹೆಸರುಗಳು ಆಯಾ ಪ್ರದೇಶಗಳಿಗೆ ಹೊಂದಿಕೊಂಡಂತೆಯೇ ಇರುತ್ತವೆಂಬುವನ್ನು ಕೆಳಗಿನ ಕಾದಂಬರಿಗಳಲ್ಲಿ ಕಾಣಬಹುದು.

**ನಿಸರ್ಗ :** ಚಾಂಗಲವ್ವ, ಭರಮಾ, ತಾಂಬಾ, ಸುಂದರಿ, ಪದ್ಮಾವತಿ, ಬಾಳಗೊಂಡ, ಕಲ್ಲಪ್ಪ.

**ಗ್ರಾಮಾಯಣ :** ದ್ಯಾಮಾ, ಚಿಮಣಾ, ಪಡದಪ್ಪನವರು, ಯಶವಂತರಾಯರು.

**ಮಲೆಗಳಲ್ಲಿ ಮದುಮಗಳು :** ಐತ, ಪಿಂಚಲು.

**ಗೃಹಭಂಗ :** ಅಪ್ಪಣ್ಣಯ್ಯ, ಚೆನ್ನಿಗರಾಯ, ನಂಜಮ್ಮ ನರಸಮ್ಮ.

ಭಾಷೆಯನ್ನು ಕುರಿತು ಒಂದು ಮಾತನ್ನು ಇಲ್ಲಿ ಹೇಳಬೇಕು. ಪ್ರಾದೇಶಿಕ ಕಾದಂಬರಿಗಳಲ್ಲೆಲ್ಲ ಪುಸ್ತಕೀಯ ಭಾಷೆಗಿಂತ ಪ್ರಾಶಸ್ತ್ಯ. ಗ್ರಾಮಭಾಷೆಗೇ ಸಿಕ್ಕುತ್ತದೆ.

ಲೇಖಕನು ಆ ಪ್ರದೇಶಕ್ಕೆ ತೀರ ಪರಿಚಿತ ವ್ಯಕ್ತಿ, ಅಲ್ಲಿಯ ಗಾಳಿಯನ್ನು ಸಿರಾಡಿಸಿದವನಾದುವರಿಂದ ಆಡುಭಾಷೆಯು ಅಲ್ಲಿ ಪ್ರಾಧ್ಯಾನತೆಯನ್ನು ಪಡೆಯುತ್ತದೆ. 'ನಿಸರ್ಗ' ಕಾದಂಬರಿಯು ಬೆಂಗಳೂರಿನ ಓದುಗರಿಗೆ ಓದಲು ಬಾರದಷ್ಟು ಕ್ಲಿಷ್ಟವಾದುದಕ್ಕೆ ಆ ಕಾದಂಬರಿಯ ಭಾಷೆಯಲ್ಲಿರುವ ಕನ್ನಡ-ಮರಾಠಿಗಳ ಮಿಶ್ರಣದಿಂದಾದ ಪ್ರಾದೇಶಿಕತೆಯೇ ಕಾರಣ. ಮರಾಠಿ ಪದಗಳ ಬಳಕೆ, ಶಬ್ದಗಳ ಉಪಯೋಗದಿಂದಾದ ತೀರ ಗ್ರಾಮ್ಯತೆಯೇ ಅದಕ್ಕೆ ಕಾರಣ. ಪ್ರಾದೇಶಿಕ ಕಾದಂಬರಿಗಳಲ್ಲಿ ಬರುವ ಕೆಳಗಿನ ಸಂಭಾಷಣೆಗಳು ಈ ಅಂಶವನ್ನು ಹೆಚ್ಚು ಸ್ಪಷ್ಟಪಡಿಸುತ್ತವೆ.

ಕಾನೂರ ಹೆಗ್ಗಡತಿ : "ಅಯ್ಯಯ್ಯೋ ಏನು ರಯ್ತು ಪೋಯಿತ್ತು ಕಾಣೆ !
ಪಟ್ಟೇಗೌಡ್ರು ಹಂದಿ ಹೊಡ್ಡಿಲ್ಲಂಬ್ರಲ್ಲಾ
ಇಲ್ಲಿ ಬಂದು ಕಾಣೆ !!
ಹಂಗೇ ಮಾಡೂ ಕಾಗೆ ಕಾಣೆ !
ಈವತ್ತೇ ಕಳಿಸಬೇಕೆಂಬ್ರೊ ! ಕಳಿಸಿನಿ, ಬಿಡಿನಿ !
ನಾ ಹೋತೆ !
ನಮ್ಮ ಗೌಡರಿಗೆ ತಲೆ ಕೆಟ್ಟಿತ್ತಂಬ್ರು".

ಗ್ರಾಮಾಯಣ : "ನೆಲಾ ಎದ್ದು ಬಡದರ ಮಾಡೋದೇನೈತಿ. ಜೀವನದ ಗೆಣ್ಯಾರಃ ನನ್ನ ವಿರುದ್ಧ ನಿಂತರ ಹೋಗಬೇಕೆಲ್ಲೆ. ಎಲ್ಲ ಶಿವನಾಟ".
"ಕತ್ತಲಾಗ ಕಳುವು ಮಾಡಾವ ಸಾಕ್ಷಿ ಪುರಾವೆ ಇಟ್ಟ ಮಾಡತಾನೇನ್ರಿ ಕುಲಕಣ್ಯಾರ. ರಾಜರೋಸ ನಡಿಯೋ ದಗದ ಇದಾಗಿದ್ದರ ಇಲ್ಲಿಗ್ಯಾಕ ಬರತಿತ್ತು ಪರಸಂಗ"

ಎದೀ ಬಡಕೊಂಡು ನಾನಾ ಫೋತಿ ಆದಾ ಅಂತ ಶಪ್ಪತಮಾಡಿ ಹೇಳತೀನಿ ರಾವಸಾಹೇಬ. ವಿಷಾ ಹಾಕುವಂಥಾ ಪಾಪಾ ಅಂವಾ ಏನೂ ಮಾಡಿದ್ದಿಲ್ಲ. ಅವನಂಥಾ ಸಂಭಾವಿತರು ಲಾಖಮಂದ್ಯಾಗ ಒಬ್ಬಾವ ಇದ್ದರ ಇರಬೇಕು.

ನಿಸರ್ಗ : "ಮನಿ ಹ್ಯಾಂಗ್ಯೇತಿ ?
"ಮನಿ ಛಲೂ ಐತಿ. ಮನ್ಯಾಗ ಅತ್ತಿ ಇದ್ದರೂ ಇಲ್ಲದ್ದಂಗs ತಿನಕಾ ಉಣಕಾ ಯಾನ ಕಡಿಮೆ ಇಲ್ಲಾ"

"ಹಳ್ಳಿ ಪೋರಿಗೋಳಾ ಯಾನ ಸಿಸ್ತಲೆ ಹಾಕೋತಾವss ನೆಗ್ಗಿಸಿ ನುಚ್ಚ ಮಾಡಿ ಇಟ್ಟಾವ.

ಗೃಹಭಂಗ ಇಂತಹ ಭಾಷೆಗೆ ಅಪವಾದವೆನಿಸುವ ಕಾದಂಬರಿಯೇನಲ್ಲ. ಕಥೆಯನ್ನು ಹೇಳುವ ಸ್ವಾತಂತ್ರ್ಯವನ್ನು ಲೇಖಕ ತೆಗೆದುಕೊಂಡಾಗ ಬರೆಹದ ಭಾಷೆ ಬರುತ್ತದೆ ಪಾತ್ರಗಳು ಮಾತನಾಡುವಾಗ ಭಾಷೆ ಗ್ರಾಮ್ಯವಾಗಿರುತ್ತದೆ. ಓದುವದಕ್ಕೆ ಕಷ್ಟವೆನಿಸಿಸುವುದಿಲ್ಲ ನಿಜ. ಆದರೆ ಭಾಷೆಯಲ್ಲಿಯ ಅಂತರ ನಿಚ್ಚಳವಾಗುತ್ತದೆ.

"ಅವ್ನ ಮೀಸೆ ತಿರವ್‌ಕತ್ತಿರಭೌದು
ಅವನ್ನ ಧಾರೆ ದಿನವೇ ಇಟ್ಟಕೋ ಭೌದೆ ?"

"ನಂಜಮ್ಮನ್ನೋರೆ, ಚ್ವಾಳಗುಡ್ಡದ ತಾವ ಮುತ್ತುಗದೆಲೆ ಬಂಗಾರ ಎಲೆ ಹಂಗವಂತೆ. ಗುಡಿಮಾದೇವಯ್ನೋರು ಹಳ್ಳಿಗೆ ಬಿಕ್ಸಕ್ ಓದೋರು ಕಣ್ಣಲ್ಲಿ ನೋಡಿ ಮುನ್ಸು ತಡೀದೆ ಕಿತ್ಕಂಡ್ ಬಂದಿದ್ದು, ನಾನೇ ನೋಡ್ದೆ" "ಕಂಬನಕೆರೆ ಆ ಕಡೆಲೂ ಇಲಿ ಬಿಳ್ತಾವಂತೆ. ಅಲ್ಲೆಲ್ಲಾ ಇನಾಕ್ಲೇಶಿನ್ ಮಾಡ್ತಾ ಅವ್ರಂತೆ. ಡಾಕ್ಟ್ರು ಈಗ ಬರಾಕ್ ಆಗಕುಲ್ಲ ಖಾಯಲ್ ದೋರ್‍ಸ್ಬೇ ಕರ್ಕಂಡ್–ಬರ್‍ಲಿ ಅಂದ್ರು".

ಪ್ರಾದೇಶಿಕತೆಯೆನ್ನುವುದು ಭಾಷೆಯಲ್ಲಿಯೂ ಕಂಡುಬರುತ್ತದೆ. ಆದುದರಿಂದ ಗೃಹಭಂಗ ಪ್ರಾದೇಶಿಕ ಕಾದಂಬರಿಯೆನ್ನುವುದರಲ್ಲಿ ಯಾವ ಅಭ್ಯಂತರವೂ ಇಲ್ಲ.

ವಿಶ್ಲೇಷಣೆಯನ್ನು ಇನ್ನೂ ಮುಂದುವರೆಸಿದರೆ ಪ್ರಾದೇಶಿಕ ಕಾದಂಬರಿಗಳಲ್ಲಿ ಕಂಡುಬರುವ ಹಬ್ಬ–ಹರಿದಿನಗಳು ಆಯಾ ಹಬ್ಬಗಳಲ್ಲಿ ಆಚರಿಸುವ ಧಾರ್ಮಿಕ ಆಚಾರಗಳು, ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ ಆಯಾ ಪ್ರದೇಶಗಳಿಗೆ ಸಂಬಂಧಿಸಿದ ಸಂಸ್ಕೃತಿಯ ಚಿತ್ರಣವನ್ನು ನಾವು ಕಾಣಬಹುದು. 'ನಿಸರ್ಗ'ದಲ್ಲಿಯ ಮದುವೆಯ ಮಂಟಪದ 'ಮಕರ' ನಮಗೆ ಹೊಸದು. ಜೈನಧರ್ಮಕ್ಕೆ ಸಂಬಂಧಿಸಿದ ಆಚರಣೆಗಳು ಮದುವೆಯ ಸಂದರ್ಭದಲ್ಲಿ ಕಂಡುಬರುತ್ತವೆ. 'ಮರಳಿಮಣ್ಣಿಗೆ' ಈ ಕಾದಂಬರಿಯ ತುಂಬೆಲ್ಲ ಮದುವೆಯ ಗರ್ನಾಲಿನ ಶಬ್ದ, ಮಂಜುರೆ ಹಾಕಿಸಿಕೊಂಡು ಪಡೆಯುವ ದೊಡ್ಡಸ್ತಿಕೆ ಅದೊಂದು ಮಜವೆನಿಸುತ್ತದೆ. 'ಮಲೆಗಳಲ್ಲಿ ಮದುಮಗಳು' ಈ ಕಾದಂಬರಿಯಲ್ಲಿನಂತೆ ಕೋಳಿಯಂಕವನ್ನಾಗಲೀ, ಬೇಟೆಯ ಗಮ್ಮತ್ತನ್ನಾಗಲೀ ಉಳಿದ ಕಾದಂಬರಿಗಳಲ್ಲಿ ಕಾಣುವುದು ಅಸಾಧ್ಯ. ವೇಷ–ಭೂಷಣಗಳನ್ನು ಕುರಿತಾಗಿಯೂ ಇದೇ ಮಾತನ್ನು ಹೇಳಬಹುದು. ಕಂಠೀಜೋಯಿಸರ ರೀತಿಯು ನಮ್ಮ ಮುಂದೆ ಹೊಸ ಚಿತ್ರವನ್ನು ಮೂಡಿಸುತ್ತದೆ.

ಧಾರಾಳವಾಗಿ ಕಂಡುಬರುವ ಬೈಗುಳಗಳು ಪ್ರಾದೇಶಿಕಗಳಲ್ಲಂತೂ ಕಂಡುಬರುವುದು ಒಂದು ವಿಶೇಷ. ಅಶ್ಲೀಲ ಶಬ್ದಗಳನ್ನು ನೀರು ಕುಡಿದಂತೆ ಬಳಸುವ ಹಳ್ಳಿಗರ ಬಾಯಲ್ಲಿ ಬರುವಷ್ಟು ಸುಲಭವಾಗಿಯೇ ಕಾದಂಬರಿಯಲ್ಲಿ ಬರೆಹದ ರೂಪದಲ್ಲಿದೆ. ಹಳ್ಳಿಗರ ಮನೋಭಾವವನ್ನು ಶೀಲದ ಕಟ್ಟು ಹಾಕದೇ ಇಷ್ಟೊಂದು

ಸಮರ್ಥರೀತಿಯಲ್ಲಿ ಚಿತ್ರಿಸಿದ ಶ್ರೇಯಸ್ಸು ಭೈರವಪ್ಪನವರಿಗೆ ಸಲ್ಲುತ್ತದೆ. ಗಂಗಮ್ಮನ ಬಾಯಿಂದ ಬರುವ ಮಾತುಗಳನ್ನು "ನೋಡಿ ಶಿವೇಗೌಡ, ಕಂಡ್ಹೋರ ಹೆಂಡ್ತಿ ಹೇಲು ಎಷ್ಟುದಿನ ತಿನ್‌ಬೇಕು ಅಂತ ಮಾಡಿದಿಯಾ ? ನಿನ್ ಹೆಂಡ್ತಿ ಬಳಿಕುಕ್ ಹೋಗಿ ನಿನ್ ಮನೆ ತೊಳ್ದ ಹೋಗುತ್ತೆ ತಿಳ್ಕ".

"ನನ್ನ ಮುಂಡೆ ಅಂತಿಯೇನೋ ? ನಿನ್ನ ವಂಶವೇ ನಿರ್ವಂಶವಾಗುತ್ತೆ ನೋಡ್ತಿರು ಸೂಳೇಮಗನೇ" ತಾಯಿ ಮಗನನ್ನು ಬಯ್ಯುವ ರೀತಿಯಿದು !

ಕಾನೂರು ಹೆಗ್ಗಡತಿಯಲ್ಲಿ ವಾಸು ಉಪ್ಪಿಟ್ಟು ಕೇಳಿದಾಗ ಸುಬ್ಬಮ್ಮ ನಿರಾಕರಿಸುತ್ತಾಳೆ. ಲೋಟ ನೆಲಕ್ಕೆ ಬಡಿದು

"ಇದ್ರಪ್ಪನ್ಮನೇ ಗಂಟು ಹಡ್ಬೆ ಮುಂಡೇ........ !
ಬಾಯಿಗೆ ಬಂದ್ಹಂಗೆ ಬೈಯ್ತಿಯಾ ? ದಿಂಡೆ ಬಸವಿ ?
ಯಾರೆ ದಿಂಡೇ ಬಸವಿ ಹಾದರಗಿತ್ತಿ !"

ನೀತಿ, ಅನೀತಿ, ಜೀವನದ ಮೌಲ್ಯಗಳ ಬಗೆಗೆ ಇವರಿಗೆ ಇರುವ ಪ್ರಜ್ಞೆ ಪರಿಮಿತವಾದದ್ದೆಂದೇ ಹೇಳಬೇಕು. 'ಜೀವಿಸುವುದು ಯಾತಕ್ಕೆ ಎಂಬ ಪ್ರಜ್ಞೆ ಇಲ್ಲದ ಕೆಲವು ಜೀವಿಗಳು ಇಲ್ಲಿ ಬಂದರೆ ಇನ್ನು ಕೆಲವರು ತತ್ವಗಳಿಗಾಗಿ ಜೀವನವನ್ನೇ ಮುಡುಪಿಡುತ್ತಾರೆ. ತಮ್ಮ ಗಂಡನನ್ನುಳಿದು ಮತ್ತೊಬ್ಬರ ಹತ್ತಿರ ಹೋಗುವುದರಲ್ಲಿ ಅವರಿಗೆ ಯಾವ ದೋಷವೂ ಕಾಣಿಸುವುದಿಲ್ಲ. ಮಗಳನ್ನು ಕಾಸಿಂ ಬಡ್ಡಿಯ ಹತ್ತಿರ ಹೋಗಗೊಟ್ಟು ಊರ ನ್ಯಾಯ ಹರಿಯುವ ಹಿರಿಯನಾಗಿರುತ್ತಾನೆ. ರೇವಣಶೆಟ್ಟಿ. ಗ್ರಾಮಾಯಣದ ಪಡದಯ್ಯನವರೂ ಅಷ್ಟೇ, ಅವರದು ಸಂಭಾವಿತ ಘಟಿಂಗರ ಸೋಗು. ಸುಖದ ಲಾಲಸೆಯೇ ಉಳಿದ ಆಕರ್ಷಣೆಗಳಿಗೆ ಬಲಿಯಾಗಿ ಇಂಥ ಘಟನೆಗಳು ಅನಿವಾರ್ಯವೆನಿಸುತ್ತವೆ. ಸ್ವಾರ್ಥ, ಕ್ಷುದ್ರತೆ, ದೊಡ್ಡಿಸ್ತಿಕೆ, ನಿರ್ಲಜ್ಜಗಳ ಸಂಗಮವಾಗುತ್ತದೆ. ಇಲ್ಲಿಯ ಜೀವನ, ಇಲ್ಲಿಯ ವರೆಗಿನ ಪ್ರಾದೇಕ ಕಾದಂಬರಿಗನ್ನವಲೋಕಿಸಿದಾಗ ಕಂಡುಬರುವ ಇನ್ನೊಂದು ಅಂಶವೆಂದರೆ ಅವುಗಳಲ್ಲಿ ಕಂಡು ಬರುವ ದುರಂತದ ಛಾಯೆ. ಬಹುಶಃ ಪಾದೇಶಿಕ ಕಾದಂಬರಿಗಳು ಇವಕ್ಕೆ ಅಪವಾದವಾಗಿಲ್ಲ. ಅನಂತ, ತಾರಾ, ಹೂವಯ್ಯ, ಸೀತಾ, ಚಿಮಣಾ, ಸುಬ್ಬಮ್ಮ, ಹೆಗ್ಗಡತಿ, ನಂಜಮ್ಮ, ಪುತಳಾಬಾಯಿ, ಚಂದ್ರೇಗೌಡ ಮುಂತಾದ ಪಾತ್ರಗಳೆಲ್ಲ ಯಾವುದೋ ವಿಧಿಯ ಕೈವಾಡಕ್ಕೆ ಒಳಗಾಗಿ ದುರಂತರದಲ್ಲಿಯೇ ಪರ್ಯವಸಾನಗೊಂಡವುಗಳು. ಬರಗಾಲದ ಭೀಕರತೆ, ಹಳ್ಳಿಗಳಲ್ಲಿ ಮೂಕವಾಗಿ ಸಾವು–ನೋವುಗಳನ್ನುಂಟುಮಾಡುವ ಪ್ಲೇಗಿನ ಹಾವಳಿಗಳನ್ನು ಕಂಡುಕೊಳ್ಳುತ್ತೇವೆ. ಬರಗಾಲದ ವಿರುದ್ಧ ಹೋರಾಡಿದ ನಂಜಮ್ಮ, ಪ್ಲೇಗು ಮಾರಿಯಿಂದ ಮಕ್ಕಳನ್ನು ಉಳಿಸಿಕೊಳ್ಳದೇ

ಗೋಳಾಡುತ್ತಾಳೆ. ಕೊನೆಗೆ ತಾನೇ ಅದಕ್ಕೆ ಆಹುತಿಯಾಗುತ್ತಾಳೆ. ಪ್ರಕೃತಿಯ ವಿಕೋಪಕ್ಕೆ ಸಿಕ್ಕಿ ಅಸ್ತವ್ಯಸ್ತಗೊಂಡ ಜೀವನ, ನಂತರ ತಾನೇ ಒಂದು ಸಮಸ್ಥಿತಿಗೆ ತಲಪುತ್ತದೆ.

ಮೇಲಿನ ಎಲ್ಲ ಅಂಶಗಳ ಮೇಲಿಂದ ಗೃಹಭಂಗವನ್ನು ಒಂದು ಪ್ರಾದೇಶಿಕ ಕಾದಂಬರಿಯೆಂದು ಹೆಸರಿಸಿದರೆ ಹಾನಿಯೇನೂ ಇಲ್ಲ. ಮೊದಲೇ ಸೂಚಿಸಿದಂತೆ ಈ ದಿಶೆಯಲ್ಲಿ ಮಾಡಿದ ಒಂದು ಪ್ರಯತ್ನವಿದು. ಪರಿಪೂರ್ಣ ಲೇಖನವೆಂದು ಹೇಳಲಾಗದಿದ್ದರೂ ಚರ್ಚೆಗೆ ಅದು ಸಹಕಾರಿಯಾದೀತೆಂದು ನನ್ನ ಅನಿಸಿಕೆ.

# ಶೀಲವಂತಯ್ಯನ ಕಂದ

ಎಸ್. ಶಿವಣ್ಣ

'ಶೀಲವಂತಯ್ಯನ ಕಂದ' ಅಥವಾ 'ಸಬವನ ಕಂದ'ದ ಕರ್ತೃ, ಚೆನ್ನಮಲ್ಲ. ವೀರಶೈವಧರ್ಮ ನಿರೂಪಣೆ, ಕೃತಿಯ ವಸ್ತು. ೧೦೪ ಕಂದಪದ್ಯಗಳಿದ್ದು ಪ್ರತಿ ಕಂದಪದ್ಯವೂ ಪ್ರಾಯಿಕವಾಗಿ 'ಬಸವಾ', 'ಗುರುಬಸವಾ' ಹಾಗೂ 'ಗುರುಬಸವೇಶಾ' ಎಂಬ ಅಂಕಿತಗಳೊಂದಿಗೆ ಮುಗಿಯುತ್ತವೆ. ಕೃತಿಕಾರ ತನ್ನ ಹೆಸರನ್ನು ೧೦೩ ನೆಯ ಕಂದದಲ್ಲಿ ತಿಳಿಸಿದ್ದಾನೆ. ಇದನ್ನುಳಿದ ಕವಿಯ ವೈಯಕ್ತಿಕ ಜೀವನದ ಸಂಗತಿಗಳಾಗಲಿ ಅಥವಾ ಜೀವಿಸಿದ ಕಾಲದ ಬಗೆಗಾಗಲಿ ಕೃತಿ ಸಂಪೂರ್ಣ ಮೌನವನ್ನು ತಾಳಿದೆ.

'ಕರ್ನಾಟಕ ಕವಿಚರಿತೆ'ಯ ಪ್ರಥಮ ಸಂಪುಟ (೧೯೬೧), ಪುಟ ೨೦೨-೨೦೩ ರಲ್ಲಿ 'ಆತ್ಮಲಿಂಗ ಪ್ರಣವ ಸಂಯೋಗಸ್ಥಲದ ತ್ರಿವಿಧಿ' ಅಥವಾ 'ಶೀಲವಂತನ ತ್ರಿವಿಧಿ' ಅಥವಾ 'ಗುರುಸ್ತೋತ್ರ' ಎಂಬ ಕೃತಿಯೊಂದರ ವಿವರಗಳಿದ್ದು ಆರ್. ನರಸಿಂಹಾಚಾರ್ಯರೂ 'ತ್ರಿವಿಧಿ'ಯ ಕರ್ತೃ, ಶೀಲವಂತಯ್ಯ ( ಸು./೧೧೬೦ ) ಎಂದಿದ್ದಾರೆ. ಆದರೆ ಕೃತಿಯ ಅಂತ್ಯದ ೧೧೧ನೆಯ ತ್ರಿಪದಿಯಲ್ಲಿ ಕೃತಿಕಾರ ಚೆನ್ನಮಲ್ಲ[1] ನೆಂಬ ಸಂಗತಿ ಸುಪ್ಪಷ್ಟವಾಗಿದೆ. ಅಲ್ಲದೆ ಮೇಲಿನ 'ತ್ರಿವಿಧಿ'ಗೆ ವ್ಯಾಖ್ಯಾನ ಮಾಡಿರುವ ಪರ್ವತಶಿವಯೋಗಿಯು ವ್ಯಾಖ್ಯೆಯಲ್ಲೂ ಕೃತಿಕಾರ ಚೆನ್ನಮಲ್ಲ[2] ನೆಂದಿರುವುದು ಗಮನಾರ್ಹ.

'ಶೀಲವಂತಯ್ಯನ ಕಂದ' ಹಾಗೂ 'ತ್ರಿವಿದಿ'ಗಳಲ್ಲಿ ಕೆಲವು ಸಮಾನ ಅಂಶಗಳಿರುವುದು ಗಮನಾರ್ಹ. ಅವುಗಳನ್ನು ಈ ರೀತಿ ಗುರುತಿಸಬಹುದು :

೧) ಕೃತಿ ಗಳೆರಡಕರ ಕರ್ತೃವಿನ ಹೆಸರಿನಲ್ಲಿನ ಸಮಾನತೆ

೨) ಕೃತಿಗಳೆರಡರ ವಸ್ತುವಿನ ಏಕತೆ.

೩) ಕೃತಿಗಳೆರಡಕ್ಕೂ ಶೀಲವಂತಯ್ಯನೆಂಬ ವ್ಯಕ್ತಿಯ ಹೆಸರಿನೊಡನೆ ಇರುವ ಜೋಡಣೆ.

೪) ಕೃತಿಗಳೆರಡಕ್ಕೂ ಇರುವ ಬೇರೆಬೇರೆ ಹೆಸರುಗಳು.

---

೧, ೨. ಶೀಲವಂತಯ್ಯನ ತ್ರಿಪದಿ (ಟೀಕಾಸಹಿತ): ಸಂ. ಶಿವಬಸವ ಸ್ವಾಮಿಗಳು (೧೯೫೪) ಪುಟ ೧೭, ೬೦.

ಈ ಮೇಲಿನ ಅಂಶಗಳಿಂದ 'ಕಂದ' ಹಾಗು 'ತ್ರಿವಿಧಿ' ಗಳನ್ನು ಚೆನ್ನಮಲ್ಲ ರಚಿಸಿರಬಹುದೆಂದು ಕಾಣುತ್ತದೆ.

'ಶೀಲವಂತಯ್ಯನ ಕಂದ'ದ ಪದ್ಯಗಳು ಮುಂದಿನ ಕಾಲದ ಸಂಗ್ರಹ ಕೃತಿಗಳಲ್ಲಿ ಸಂಕಲನಗೊಂಡಿವೆ. ಬೆಂಗಳೂರು ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ ಕೇಂದ್ರ'ದ ಸಂಗ್ರಹದಲ್ಲಿ "ಬಸವಸ್ತೋತ್ರ ಕಂದ" ಎಂಬ ಓಲೆ ಕೃತಿಯಿದೆ. ( K ೨೦೧/೩ ) ಇದರಲ್ಲಿ 'ಶೀಲವಂತಯ್ಯನ ಕಂದ' ದಿಂದ ಸಂಕಲಿಸಿರುವ ೨೫ ಕಂದಗಳಿವೆ. (ವಿವರಗಳಿಗೆ 'ಅನುಬಂಧ' ನೋಡಿ)

'ಕನ್ನಡ ಅಧ್ಯಯನ ಸಂಸ್ಥೆ' (ಮೈಸೂರು)ಯ ಸಂಗ್ರಹದಲ್ಲಿ 'ಚಿತ್ಕಲಾಲಿಂಗ ಚಿತ್ರಾಣವ ಸಂಯೋಗ ಚಿದಮೃತಸಾರ' ಎಂಬ ಸಂಕಲಿತ ಓಲೆ ಕೃತಿಯೊಂದಿದ್ದು (K ೯/೮೧). ಇದರಲ್ಲಿ ಹಲವಾರು ಕಂದ ಹಾಗೂ ಅಷ್ಟಕ ಕೃತಿಗಳ ಸಂಗ್ರಹವಿದೆ (ಉದಾ : 'ಮರುಳದೇವರ ಕಂದ', 'ಕೊಟ್ಟೂರಯ್ಯನ ಅಷ್ಟಕ' ಇದರಲ್ಲಿ 'ಶೀಲ ವಂತಯ್ಯನ ಕಂದ' ದಿಂದ ಆರಿಸಿರುವ ೬೪ ಕಂದಗಳಿವೆ. (ವಿವರಗಳಿಗೆ 'ಅನುಬಂಧ' ನೋಡಿ) ಪ್ರಸ್ತುತ ಕೃತಿಯನ್ನು ೭ ಓಲೆ ಪ್ರತಿಗಳ ಸಹಾಯದಿಂದ ಪರಿಷ್ಕರಿಸ ಲಾಗಿದೆ.

ಕ) ಡಾ. ಡಿ. ಎಲ್. ನರಸಿಂಹಾಚಾರ್ ಅವರ ಸಂಗ್ರಹ. ಶ್ರೀ. ಎನ್. ಬಸವಾರಾಧ್ಯರ ಮೂಲಕ ದೊರೆತದ್ದು. ಕೃತಿ ೭೦–೭೭ ನೆಯ ಗರಿಗಳಲ್ಲಿದೆ. ಕೃತಿಯ ಪ್ರಾರಂಭದಲ್ಲಿ 'ಶೀಲವಂತಯ್ಯನ ಕಂದ' ವೆಂದಿದ್ದು ಅಂತ್ಯದಲ್ಲಿ 'ಬಸವ ಶತಕ' ವೆಂದಿದೆ, ೧೦೪ ಕಂದಗಳಿವೆ. ಶಕಟರೇಫವಿದೆ. ಕೃತಿ ಅಲ್ಲಲ್ಲಿ ತ್ರುಟಿತ ವಾಗಿದೆ.

ಗ) ಕರ್ನಾಟಕ ವಿಶ್ವವಿದ್ಯಾಲಯ(ಧಾರವಾಡ)ದ 'ವಚನ ವಾಙ್ಮಯ ಭಂಡಾರ'ದಲ್ಲಿನ ಓಲೆ ಕೃತಿ. ಕ್ರಮಾಂಕ ೧೩೧/೧೭ (ಗದಿ ೧೮೨-೨೦೩). ಕೃತಿಯನ್ನು ಆದಿ, ಅಂತ್ಯಗಳಲ್ಲಿ 'ಬಸವ ಕಂದ' ವೆಂದು ಕರೆದಿದೆ. ೧೦೩ ಕಂದ ಗಳಿವೆ. ಶಕಟರೇಫವಿದೆ.

---

೧. ಎಸ್. ಆರ್. ಗುಂಜಾಳ : ಬಸವ ಸಾಹಿತ್ಯ ದರ್ಪಣ (೧೯೬೭) ನಂ. ೪೬ (ಪು. ೫೦)

* ಮೇಲಿನ ಕೃತಿಗಳನ್ನು ಉಪಯೋಗಿಸಿಕೊಳ್ಳಲು ಅನುವುಮಾಡಿಕೊಟ್ಟ ವ್ಯಕ್ತಿಗಳೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

# ಶೀಲವಂತಯ್ಯನ ಕಂದ

●

ಶ್ರೀಮಹದೇವನೆ ಶಂಕರ
ಸೋಮನೆ ಸುಖಪೂರ್ಣಧಾಮ ನಿತ್ಯನೆ ನಿರಘನೆ
ಕಾಮಿತ ವರಸುರಭೂಜನೆ
ಪ್ರೇಮದಿ ಸಲಹೆನ್ನ ಪರಮಗುರು ಬಸವೇಶಾ ೧

ಶಶಿಧರಕೆ ಶಿಖಿ ವಿಲೋಚನ
ಶಶಿಶೇಖರ ಮದನಕಾಲ ಪುರಹರ ಶಂಕರ
ಭಸಿತಾಂಗನೆನ್ನ ಮಾನಸ
ಬಿಸರುಹ ಚಿತ್ಸೂರ್ಯದೇವ ಸಲಹೈ ಬಸವಾ ೨

ಭವ ಭೇಕೋರಗ ಬಸವಾ
ಭವ ಘನ ಜಾಲಕ್ಕೆ ದಂಡ ಮರುತಂ ಬಸವಾ
ಭವ ವಿಪಿನದಾವ ಬಸವಾ
ಭವಕೈರವ ಸೂರದೇವ ಸಲಹುಗೆ ಬಸವಾ ೩

ನಿತ್ಯನೆ ನಿರಘನೆ ನಿರ್ಮಲ
ತತ್ವನೆ ನಿರ್ಗುಣ ನಿರೀಹ ಪರಮ ನಿರಂಜನ
ಸತ್ಯನೆ ಪರತರ ಬ್ರಹ್ಮನೆ
ಅತ್ಯಧಿಕನೆ ಕರುಣನಿಧಿಯೆ ಗುರುಬಸವೇಶಾ ೪

ನಿರವಯನೆ ನಿರ್ಮಲಾತ್ಮನೆ
ನಿರುಪಮ ನಿರ್ಲಕ್ಷ್ಮಕುಲಶೂನ್ಯನೆ ಮದ್ವಯ
ದುರು ನಿರ್ನಾಮನೆ ನಿತ್ಯನೆ
ಚಿರನಿಃಕಲ ಆದಿ ಅಂತ್ಯರಹಿತನೆ ಬಸವಾ ೫

ಪರಶಿವನು ತನ್ನ ಲೀಲೆಗೆ
ಸ್ಮರಿಸಿದ ನಿಜ ಚಿತ್ತುನಾದಕಲೆಬಿಂದುಗಳಿವು
ಬೆರದು ಮಹಲಿಂಗವಾದುದ
[ನ]ಱಿ[ವು]ದು ಸಾಕಾರ ಪಂಚವಾನನ ಬಸವಾ ೬

---

*ಬಸವ ಕಂದ (ಗ) ೧. ಸಸಿ (ಕ) ೨. ವೆ (ಗ) ೩. X (ಕ)
೪. X (ಕ). ೫. X (ಕ) ೬. ಳಿ (ಗ) ೭. (ಕ, ಗ) ೮. X (ಕ)

ಐದು ಮುಖದಿಂದ ಭೂತ[1]ವು[2]
ಸುಯ್ದಾನದೊಳುದಿನಿ ಒಂದನೊಂದನು ಕೂಡಲು
ಐದು ಯಿಪ್ಪತ್ತನೈದುವ
ನೈದಲು ತಾಂ ಪ್ರಕೃತಿ ಪಿಂಡವಾದುದು ಬಸವಾ ೭

ಸಲೆ ಪಿಂಡದಲ್ಲಿ ಪರಶಿವ
ಕಲೆಯದು ನಿಜಕಾಷ್ಠವಹ್ನಿ ಬೀಜದೊಳಂಕುರ
ತಿಲ ಮಧ್ಯದಲ್ಲಿ ತೈಲದ
ನಿಲವನು ಅಱಿಯಲಿಕೆ ಮಧ್ಯ ಪಿಂಡವು ಬಸವಾ ೮

ಪರಶಿವನು ತನ್ನ ಚಿತ್ತಿಗೆ
ಕರುಣಿಸಲದು ಪಿಂಡ ವಿವರ ನಿತ್ಯಾನಿತ್ಯದ
ಅಱಿವು ಅಱಿವಿಂದ ಸಂಶ್ಯೃತಿ
ಪರಿವುದು ತಮ ಇನನ ಕಂಡ ತೆಱದೊಳು ಬಸವಾ ೯

ಶರಿರಾದಿ ದೃಶ್ಯ ಜಡವ ಡು[3]
ಪರಮನು ನಾ ನಿತ್ಯ ನಿರಘ ನಿರ್ಮಲ ತಾನೆಂ
ದಱಿದ ಅಱಿವಿಂದ ಸಂ ಶ್ಯೃ ತಿ
ಪರಿವು ದೆ[4] ನಿಜಭಕ್ತಿ ಭಾವವಿಲ್ಲದೆ ಬಸವಾ ೧೦

ಹರಿಯಜರು ಅರಸಿ ಕಾಣರು
ಸುರಮುನಿಗಳು ಸುರಪ ವೇದ ಶಾಸ್ತ್ರಗಳಱಿಯವು
ಪರಮಗುರು ನಿಮ್ಮ ಚರಣವ
ನಱಿವಡೆ ನಾನೇತರವನು ಗುರು ಬಸವೇಶಾ ೧೧

ಅಱಿಯದ ಕಾರಣ ಭವದೊಳು
ತಿರುಗಿದೆ ನಾನಱಿದ ಬಳಿಕ ತಿರುಗುವದೆಲ್ಲವ
ಪರಿಹರಿಪೆನೆನ್ನ ಚಲದೊಳು
ಗುರುಚರಣವ ಪಿಡಿದು ಪಡೆವೆ ಭಕ್ತಿಯ ಬಸವಾ ೧೨

---

೧. ವೆ (ಗ) ೨. ನು (ಗ) ೩. ಸ್ಮೃ (ಕ) ೪. ದು (ಗ)

ಹಾ ಎನ್ನ ಜೀವವೆ ಪರವೇ
ಹಾ ಎನ್ನಯ ನಿಜದ ನಿಲವೆ ಭಕ್ತಿಯ ಮೇರುವೆ
ಹಾ ಎನ್ನ ಗತಿಯೆ ಮತಿಯೇ
ಹಾ ಎನ್ನಯ ಸುಖದ ಮುಖವೆ ಗುರು ಬಸವೇಶಾ ೧೩

ಹಾ [1]ಎನ್ನ[1] ಕುಲವೆ ಛಲವೇ
ಹಾ ಎನ್ನಯ ತಾಯಿ ತವರೆ ಬಂಧುವೆ ಭವನೇ
ಹಾ ಎನ್ನ ಕಣ್ಣ ಪುಣ್ಯವೆ
ಹಾ ಎನ್ನಯ ಪರವೆ ಚರವೆ ಗುರು ಬಸವೇಶಾ ೧೪

ಬಂದೆನು ನಾನಾ ಭವದೊಳು
ನೊಂದೆನು ಕಂದಿದೆನು ಕುಂದಿ ತಗ್ಗಿದೆ ಕುಗ್ಗಿದೆ
ಬೆಂದೆನು ತಾಪದಿ ನಾನೆಲೆ
ತಂದೆಯೆ ಬಸವಯ್ಯನೆನ್ನನುದ್ಧರಿ[2]ಸಭವಾ[3] ೧೫

ಪಾಪಿಯು ತಾಪಿಯು ವಿಷಯ
ವ್ಯಾಪಾರಿಯು ನಿಜವನರಿಯದಜ್ಞನು ಪಿಸುಣನು
ಕೋಪಿಯಿವನೆಂದು ಎನ್ನದೆ
ಶ್ರೀಪತಿನಯನಾಂಕಪಾದ ರಕ್ಷಿಸು ಬಸವಾ ೧೬

ಕರಗಿದೆ ಕಾಮಕ್ರೋಧದಿ
ಕೊರಗಿದೆ ನಾ ಲೋಭಮೋಹಮದಮತ್ಸರದಿಂ
ದುರಿದ ಉರಿದೆನ್ನ ತಾಪವ
ಪರಿಹರಿಸಾ ಕರುಣಿ ಪರಮಗುರು ಬಸವೇಶಾ ೧೭

ಅಯ್ಯೋ ಕಾಮನ ಬಾಣದ
ಹುಯ್ಯಲು ಘನ ಭಂಗ ಬಟ್ಟೆ ತನುವನು ಕಾಲನು
ವೊಯ್ಯದ ಮುನ್ನ[4]ವೆ[5] ಎನ್ನಯ
ಕಯ್ಯಂ ಪಿಡಿದೆತ್ತಿ ರಕ್ಷಿಸಾ ಗುರು ಬಸವಾ ೧೮

---

೧. × (ಕ) ೨. ಕ× (ಕ) ೩. ಮು (ಗ) ೪. ಸುಬಸವ (ಕ)
೫. ಲೆ (ಗ)

ಅಯ್ಯೋ ಶಿವಧೋ ಕೆಟ್ಟೆನು
ಅಯ್ಯೋ ನಾ ದುಷ್ಟನಾದೆ ಮನ ಮ[1]ದದಿಂದಲಿ
ಅಯ್ಯೋ ಅಯ್ಯೋ ಎನ್ನಯ
ಹುಯ್ಯಲ ಕೇಳಯ್ಯ ಪರಮಗುರು ಬಸವೇಶಾ ೧೯

ಎಂದು ಗುರುವರನನಗಲದೆ
ಸಂದೇಹವನಳಿದು ಬಸ[2]ವ[3] ಗುರುಚರ ಪರವೇ
ತಂದೆ ಬಸವಣ್ಣ ಬಾರಾ
ಬಂಧುವೆ ಬಾರೆಂದು ತೋನವುದೆಂ ದಾ ದಪುದೋ ೨೦

ಅಡಿಗಡಿಗೆ ನಿಮ್ಮ ಚರಣವ
ಎಡಬಿಡವಿಲ್ಲ ದೆ ಯು ಪೂಜೆಮಾಡು[4]ತ[5] ಕಣ್ಬನಿ
ಕಡಲಾ ಗಿ[6] ಸುರಿದು ಹರಗುರು
ಮೃಡ ಬಸವನ ಅಡಿಯ ಕಂಡು ಸುಖಿಯಾ[7]ದಪೆನೋ ೨೧

ಹಿಗ್ಗುತ ಹೆಚ್ಚುತ ಕರ್ಮವ
ನುಗ್ಗುನು ಮಾಡುತ್ತ ಕರಗಿ ಕೊರಗುತ ಶಿವಸುಖ
ಸುಗ್ಗಿಯು ಮೆಯ್ಯೊಳು ಹೇರುತ
ಭರ್ಗನು ಬಸವಣ್ಣ ಗುರುವದೆಂದರ್ಚಿಪೆನೋ ೨೯

ಅಳಲದೆ ಬಳಲದೆ ನೀ ಕಳ
ವಳಿಸದೆ ಕಾತಳಿಸಬೇಡವಾನಿರುತಿರೆ ನೀ
ನೆಲೆ ಮಗನೆಯೆಂದು ಎನ್ನಯ
ತಲೆದಡವುತ ನೋಡಿ ರಕ್ಷಿಸೈ ಗುರು ಬಸವಾ ೨೩

ಅಂಜೆನು ಮಾಯಾಪಾಶದ
ರಂಜನೆ ಘನತಿಮಿರಸೂರ ಝುಂಝಾಮಾರುತ
ಸಂಜೀವನೆನ್ನ ಕಣ್ಣಿನ
ಮಂಜನು ಹರಹಿಸಿದೆ ಬಸವದಂಡಾಧೀಶಾ ೨೪

---

೧. ವು (ಗ) ೨. ವಾ (ಗ) ೩. ತಾ (ಕ) ೪. × (ಕ)
೫. ವ (ಗ) ೬. ಗೆ (ಕ) ೭. × (ಕ)

ಹರಿದೆನು ಮಾಯಾಪಾಶವ
ತೊಱೆದೆನು ಶರಿರಾದಿ ಕರಣಗುಣಗಣವೆಲ್ಲವ
ಅಱಿದೆನು ನಿಜ ಸುಜ್ಞಾನವೆ
ಗುರು ಬಸವನ ಚರಣಕಮಲಕೆಱಗಿದ ಫಲದಿಂ ೨೫

ಶಿರ ಉರ ಭುಜಕರಯುಗಳಂ
ಚರಣದ್ವಯ ಶರಿರ ಧರೆಯ ಸೋಂಕುತ ನಯನದಿ
ಗುರುವನೆ ನೋಡುತ ಪಾಡುತ
ಎಱಗುವೆ ನಾಂ ಭಕ್ತಿಯಿಂದ ಶಿವ ಬಸವೇಶಾ ೨೬

ಗಿರಿಯೊಳ್ ವಜ್ರವು ತಮದೊಳು
ಕರಕಿರಣವು ಕರಿಯ ಹಿಂಡಿನೊಳು ಹರಿ ಹೊಕ್ಕಾ
ತೆಱ ಗುರು ಕರುಣದಿ ನುಡಿದಡೆ
ಕರದಲಿ ಮುಟ್ಟಿದಡೆ ನೋಡಿದಡೆ ಗುರು ಬಸವಾ ೨೭

ಶಿರದೊಳು ಹೊಣೆಹ ಕಳೆಯಂ
ಗುರುವರ ಕರತಲದೊಳಿರಿಸಿ ಕರ್ಣದಿ ಮಂತ್ರವ
ನೊರೆದು ತಲೆಯಲ್ಲಿ ಹಸ್ತವ
ನಿರಿಸಲು ತ್ರಯದೀಕ್ಷೆಯಿಂದ ಗುರು ಬಸವೇಶಾ ೨೮

ಹರಣದೊಳಿಹ ಶಿವಕಲೆಯಂ
ಗುರುಲಿಂಗದೊಳಿರಿಸಿ ಲಿಂಗಕಲೆಯನು ಹರಣದೊ
ಳಿರಿಸಿ ಹರಣಾಧಿಕರಣವ
ಬೆರಸಲು ಉರಿ ತೃಣವದುಂಡ ತೆಱನದು ಬಸವಾ ೨೯

ಉರಿವ ಶಿಖಿಯೊಳಗೆ ತೃಣವನು
ಇರಿಸಲು ತೃಣ ಶಿಖಿಯದಾದ ತೆಱದೊಳು ಗುರುವಿನ
ಚರಣದೊಳಗಿರಿಸೆ ತನುವದು
ಗುರುವಿನ ಯಿರವಹುದು ತಪ್ಪಂದನು ಬಸವಾ ೩೦

*ಮೂಱು ನಿಜದೀಕ್ಷೆಯಲಿ ಗುರು
ಮೂಱಂಗಕೆ ಮೂಱು ಲಿಂಗದಿರವನು ಕರುಣಿಸಿ
ಮೂಱಱು ಒಂದೆಯೆಂಬುದ
ತೋಱಿದ ಶಿವಲಿಂಗ ಲಕ್ಷಣವ ಗುರು ಬಸವಾ ೩೧

ಲಿಗದೊಳನಾದಿ ಭಕ್ತನು
ಲಿಂಗದಿ ಚರಮಕುಟ ಶೂನ್ಯಲಿಂಗವದಾದಿ[1]ಯ[2]
ದಂಗಸ್ಥಿತಿ ಮೂಱಱನುಪನು
ಲಿಂಗದೊಳಱಿಯೆಂದ ಪರಮಗುರು ಬಸವೇಶಾ ೩೨

ಗುರುಲಿಂಗ ಚರವು ಶೇಷವು
ಚರಣೋದಕದ ಭಕ್ತಹೃದಯದೊಳು ಚರಮಕುಟವು
ಚರ ಶೂನ್ಯಲಿಂಗ ಚಿನ್ನಭ (?)
ಪರಶಿವಶಕ್ತಿಗಳು ಪಂಚ[3]ನಾದವು[4] ಬಸವಾ ೩೩

ಕಲೆ ಪಂಚವೈದುವಾನನ
ಸಲೆ ಸಾದಾಖ್ಯಗಳು ಪಂಚನಾದವು ಮೂರ್ತಿಯು
ತಿಳಿಯಷ್ಟಮೂರ್ತಿ ಈಶ್ವರ
ಸುಲಲಿತದುಮೆಯಾಣ್ಮ ಪಂಚವಿಂಶತಿ ಬ'ಸ'ವಾ ೩೪

ಹತ್ತೇಕಮೂರ್ತಿರುದ್ರರು
ಮತ್ತಾಭವ ಮೃಡನು ಹರನು ಹಿರಿಯಣಗರ್ಭ'ವು'
ನಿತ್ಯಂ ವಿರಾಟಮೂ"ರ್ತಿ"ಯು
ಸತ್ಯವು ಸಿತಿ ಮೂಱದೇಕಮೂರ್ತಿಯು ಬಸವಾ ೩೫

ಮೂಱು ಸಿತಿ ಲಿಂಗ ವೃತ್ತವು
ತೋಱುವ ವರ್ತುಳವು ಮಕುಟ ಜಂಗಮ ಗೋಮುಖ
ಸಿರ ನಿಜಭಕ್ತಹೃದಯವು
ಬೇರಿಲ್ಲದು ತ್ರಿವಿಧಲಿಂಗ ಗುರು ಬಸವೇಶಾ ೩೬

---

* ಈ ಪದ್ಯ 'ಗ' ಪ್ರತಿಯಲ್ಲಿಲ್ಲ.
೧. ಯು (ಗ) ೨. ಶಕ್ತಿಯು (ಗ) ೩. × (ಕ) ೪. ರು (ಕ)
೫. × (ಕ)

ಹರ ಬಿಂದು ಸತ್ತುವೃತ್ತವು
ಚರನಾದವು ಚಿತ್ತುವರ್ತುಳವು ಸುಖಗೋಮುಖ
ಪರಮ ಪ್ರಸಾದ ಕಲೆತ್ರಯು
ಕರಮನಭಾವದೊಳು ನಿಂದೆ ಗುರು ಬಸವೇಶಾ ೩೭

ವರ ತ್ರಿಪುಟ ಲಿಂಗ ಜಂಗಮ
ಗುರು ಸಚ್ಚಿತ್ಸುಖವು ತತ್ವತ್ರಯು ತತ್ವಮಸಿ
ಪರಮನುವಂತ ರಿ ಸರ್ವನು
ಕರಮನ ಭವದೊಳದೊಂದೆ ಗುರು ಬಸವೇಶಾ ೩೮

ಕರಮನಭಾವತ್ರಯದೊಳು
ಕರಣತ್ರಯು ಶರಿರ ಮೂಜಿವಸ್ಥಾತ್ರಯದೊಳು
ಬೆರಸಿಹ ಲಿಂಗ ವ ನರ್ಚಿಪ
ಪರವ ಶ ದನುಭವದ ಸುಖವ ಕೊಡು ಗುರು ಬಸವಾ ೩೯

ಕೊಟ್ಟೆನು ಕರಮನಭಾವಕೆ
ಇಷ್ಟ ಪ್ರಾಣವನು ಭಾವಲಿಂಕೆನಾವಗ
ದೃಷ್ಟಿಯೊಳನ ವು ಮಾನಸ
ಮುಟ್ಟ ರೆ ನಿಜ ನೀನೆಯೆಂ ದ ಗುರು ಬಸವೇಶಾ ೪೦

ತನು ಕ ರ ಯ ಜನ ನಿರೀಕ್ಷಣ
ಮನ ಸೂಕ್ಷ್ಮಜ್ಞಾನಯೊಳ ನ ನಿಜಭಾವವು
ನೆನವದ ಕಾರಣ ನಿಃಪ ತಿ
ಅನು ವಿ ದು ತ್ರಿವಿಧಾತ್ಮಲಿಂಗದರ್ಶನೆ ಬಸವಾ ೪೧

ತ್ಯಾಗಾಂಗ ಭಕ್ತನಿ ಟ್ಟ ರು
ಯಿಾಗ ಲಾ ಚಾರ ಗುರುಪದಿಷ್ಟ ದ ಕ್ರಮವದು
ರಾಗದಿ ನಾಲ್ವತ್ತೆರಡರ
ಆಗದು ನಿಜಲಿಂಗಪೀಠ ಗುರು ಬಸವೇಶಾ ೪೨

---

೧ × (ಕ) ೨. ಗೆ (ಗ) ೩. × (ಕ) ೪. ಸ (ಗ)
೫. ಯೊಳ (ಕ) ೬. ದೆ (ಕ) ೭. ದು (ಗ) ೮. ರಣ (ಗ)
೯. ನವು (ಗ) ೧೦. ನಿಷ್ಪ (ಗ) ೧೧. ವ (ಕ) ೧೨. ಪ್ಪ (ಗ)
೧೩. ಲದಾ (ಕ) ೧೪. × (ಕ)

ಲಿಂಗಪ್ರಾಣಿಯು ಶೇಷೆಯು
ಅಂಗವು ಭೋಗಾಂಗ ಲಿಂಗ ಶಿವ ಚರ ಪ್ರಾಣವು
ಸಂಗವು ತ್ರಿಂ[೧]ಶ[೧]ವು ಮೂಜಿವು
ಲಿಂಗದ ಗೋಮುಖವು [೨]ಮ[೨]ಧ್ಯ ಗುರುಬಸವೇಶಾ ೪೩

ಸರಣೈಕ್ಯರುಭಯಯೋಗದ
ಶರಿರವು ಘನಲಿಂಗ ಶೇಷಭಾವದ ನಿಜವದು
ಅಜಿವದು ವಿಂಶತಿಯಾಬಿಟಿ
ತೆಜಿನದು ನಿಜಲಿಂಗವೃತ್ತಗೋಳಕ ಬಸವಾ ೪೪

ಗುದಲಿಂಗ[೩]ಶಿ[೩]ಖಿಯು ವೃತ್ತದ
ಸದನದೊಳಿಹ ವರ್ನನವವದಿಷ್ಟವು ಗೋಮುಖ
ಹೃದಯು ಮಣಿಪೂರ ಪಶ್ಚಿಮ
ಸದನ[೪]ದ[೪] ದಶಲಿಂಗ ಪ್ರಾಣ ಮಧ್ಯವು ಬಸವಾ ೪೫

ಗಳ ಭೃಕುಟಿ ಬ್ರಹ್ಮರಂಧ್ರದ
ನಿಲಯುದೊಳಿಹ ಹತ್ತದೇಕಬೀಜವು ಗೋಳಕ
ಸಲೆ ತೃಪ್ತಿ ವರ್ತುಳದೊಳಿವ
ತಿಳಿ ಕರ ಮನಭಾವವೇಕಧಾರಣ ಬಸವಾ ೪೬

ಇದು[೫]ಧಾ[೫]ರಣ ಶಿವಲಿಂಗವ
ಹೃದಯುದ ಮಧ್ಯದೊಳ[೬]ಗಿ[೬]ರಿಸಿ ಚರಿಸುವ ಜೀವನ
ಪುದಿದು ನಿಜಂಗದೊಳು ಸುಖ
ಪಡಗಲು ದಿವರಾತ್ರೆಯ[೭]ಜ[೭]ಯ ಗುರು ಬಸವೇಶಾ ೪೭

ಮನ[೮]ವ[೮]ದು ತನುಗುಣಗಣಗಳ
ಜಿನುಗಿಸೊಳಿರುತಿರಲು ಭವಿಯು ಮನ ಶಿವಲಿಂಗವ
ನೆನಹಿಸೊಳಿರುತಿರಲಾವಗ
ಘನಮುಕ್ತನು ಶಕ್ತ ಭಕ್ತ ಗುರ ಬಸವೇಶಾ ೪೮

---

೧. ಸ (ಕ) ೨. × (ಕ) ೩. ಸಿ (ಗ) ೪. ಪ (ಕ) ೫. ಕು (ಗ)
೬. ದಿ (ಕ) ೭ ರೆ (ಕ) ೮. ಮ (ಕ)

ಹಗ[1]ಲುವೆ ಇ[2]ರು[2]ಳುವೆಲಿಂಗವ
ನಗಲದೆ ಚಿಂತಿಸುತ ಕೀಟ ಭೃಂಗ [3]ನ್ಯಾಯದಿ[3]
ನಿಗಮಾಗಮಾದಿರಹಿತನ
ಬಗೆಯುದು ಭಾವನೆಯ ನಿಜವು ಗುರು ಬಸವೇಶಾ ೪೯

ಕೀಟಕ ತುಂಬಿಯ ಚಿಂತಿಸಿ
ಕೀಟಕ ತನುವಳಿದು ತುಂಬಿಯಾಯಿತು ಮತ್ತಾ
ನೋಟ ನೆನಹೆಲ್ಲ ಲಿಂಗದ
ನಾಟಸೆ ನಿಜ ನೀನೆ [4]ಎಂ[4]ದ ಗುರು ಬಸವೇಶಾ ೫೦

ಅರೆಮುಗಿದ ನೇತ್ರ ಲಿಂಗದಿ
ಸ್ಥಿರಚಿತ್ತವು ನಿ[5]ಸ್ಚ[5]ಲಾಂಗ ಹೃದಯದೊಳಾವ[6]ಗ
ಪ ರಮಶಿವಲಿಂಗ ಚಿಂತನೆ
ಕರಿಗೊಂಡರೆ ನಿಜವು ತಾನೆ ಗುರು ಬಸವೇಶಾ ೫೧

ಚಿತ್ತನನಾವಗ ಲಿ[6]ಂಗ[6]ದಿ
ನ್ಯಸ್ತವ ಮಾಡುತ್ತ ಬಸವ ಅ ಉ ಮಾ ಬಸವ
ನುತ್ತ ಶಿವಯನಮ[7] ಓಂ[7] ಮಯ
ನುತ್ತಲು ಜಪಿಸುವನೆ ಮುಕ್ತ ಗುರು ಬಸವೇಶಾ ೫೨

ಶಿವಯನಮ ಅ ಉ ಮ ಓಂ ನಮ
ಶಿವ ಎನಲದು ಬಸವಲಿಂಗ ಭಕ್ತನು ಪೂರಕ
ತವೆ ರೇಚಕ ಷಡುವರ್ಣವ
ಸವೆಯದೆ ಜಪಿಸುವನೆ ಮುಕ್ತ ಗುರು ಬಸವೇಶಾ ೫೩

ತಾರೆ ತ್ರಿವರ್ನ ಪೂರಕ
ಆರೈಯಲ್ತ್ರಿವಿಧ ಪಂಚವರ್ಣವೆ ರೇಚಕ
ಮೂ[8]ಜಾಜು ವೇಳೆ ಜಪಿಸಲು
ನೂ[8]೩ಂಟರ ಗಣನೆ ಮಾ[9]ತ್ರ[9]ಗುರು ಬಸವೇಶಾ ೫೪

---

೧. ಲಿರುಳು ಬಸವ (K. 201/3) ೨. × (ಕ) ೩. ಜ್ಞಾನದಿಂ(ಗ,
೪. ಆ (ಕ) ೫. ಚ್ಚ (ಕ) ೬. × (ಕ) ೭. × (ಕ)
೮. ಜ (ಗ) ೯. × (ಕ)

ನವನಾಳದಲ್ಲಿ ಚರಿಸುವ
ಪವನವು ಶಿವಮಂತ್ರಲಿಂಗವಿವರದೊಳಾವಗ
ತವೆ ಸೂಸಿ ತುಂಬಿ ನಿಲಲದು
ಕವಿವುದು ಉನ್ಮನಿಯ ಬೆಳಗು ಗುರು: ಬಸವೇಶಾ ೫೫

[೧]ನಿರುತವಿದು [ಘ][೧]ನ ಶಿವಸುಖ
ಪರವ[೨]ಶ[೨]ದನುಭವದ ಸರಧಿಯೊಳು ಮುಳುಗುತ ಮನ
ಕರಣಗುಣವಳಿದ ಚಿತ್ತದ
ಸರಿಯದು ಶಿವಯೋಗ ಸಮತೆ ಗುರು ಬಸವೇಶಾ ೫೬

ಮನ ಶಿವಲಿಂಗವ ನೆನವುತ
ಮನವದು ಘನವಾ[೩]ಗಿ[೩] ನಿಜವ ಕಂಡಾ ಮನವದು
ಘನವನವಗವಿಸಿನಿಂದಾ
ಅನುವದು ಮನಲಯದ ಇರವು ಗುರು ಬಸವೇಶಾ ೫೭

ಸಕಲೇಂದ್ರಿಯಾದಿ ಗುಣಗ[೪]ಣ[೪]
ವಿಕಳತೆಯನ[೫]ದ[೫]ಳಿದ ಚಿತ್ತವ ಕಲದೊಳಾವಗ
ಸುಖಿಯಾದೆನೆಂಬ ಹಂತೆಯ
ಸುಖಭಾವವದಳಿಯೆ ಯೋಗಸಮತೆಯು ಬಸವಾ ೫೮

ಪರಿಪೂರ್ಣ ನಿಜದಿ ಮಾನಸ
ದಱಿವುಂ ಮಱವುಗಳದೆಂಬ ಉಭಯುವನಱಿಯದೆ
ಕುಱು ಹಳಿದ ನಿರತಿಶಯ ಸುಖ
ಕರಿಗೂಂಡುದು ತನ್ನ ತಾನೆ ಸಮತೆಯು ಬಸವಾ ೫೯

ಹೊರಗೊಳಗದೆಂಬ ಉಭಯವ
ನರಿಯದೆ ನಿಜಬೆಳಗು ಬೆಳಗಿನೊಳು ಕಳೆಯಳಿದಾ
ಅಱಿವುಅಱಿವಿ[೬]ನೊಳು[೬]ನಿಂದಾ
ತೆಱನ ಱಿಯದ ಇರವು ಸಮತೆ ಗುರು ಬಸವೇಶಾ ೬೦

---

೧. × (ಕ). ದಾ (ಗ) ೨. ಸ (ಗ) ೩. ಗೆ (ಕ) ೪. ಳು (ಗ)
೫. × (ಗ) ೬. ನಲಿ (ಕ)

ತನು ಗುರು ಯಜನವು ಧಾರಣ
ಮನ ಲಿಂಗವು ಜ್ಞಾನಧ್ಯಾನ ಪ್ರಾಣವು ಜಂಗಮ
ದನುಭವದಿ ಮನವು [1]ಲಯ[1]ಸಿದ
ಅನುವದು ಸಮಾಧಿ ತ್ರಿವಿಧಭಕ್ತಿಯು ಬಸವಾ ೬೧

ಮೂಱು ತನು ಅ ಉ ಮವಂಗಂ
ಮೂಱಾತ್ಮನು ಬಸವಲಿಂಗ ಸಂಗವದೆನಿಸುವ
ಆಱಿಹ ವ[2]ರ್ನ[2]ಪ ಜಪಿಸುತ
ಮೂಱಿಕೆ ಮೂಱೀವನವನೆ ಭಕ್ತನು ಬಸವಾ ೬೨

ತ್ರಿವಿಧದ ಭಕ್ತಿಗಳಿಂದಲಿ
ತ್ರಿವಿಧವನರ್ಚಿಸುತ ತ್ರಿವಿಧದನುಭದ ಸುಖದಾ
ನೆವದೊಳು ಮನವಳಿದಿರುತಿಹ
ವಿ[3]ವ[3]ರವು ತ್ರಿವಿಧದೊಳು ನಾಲ್ಕುಪದ ಗುರು ಬಸವಾ ೬೩

ಭೂತಿ ಮಣಿ ಮಂತ್ರ ಧಾರಣ
ಪ್ರೀತಿಯು ಭಯ ಭಕ್ತಿ ಶಾಂತಿ ದಾಂತಿಯು ದಯ ಕ್ಷಮೆ
ಈ ತೆಱನನಱಿದು ತ್ರಿವಿಧಕೆ
ವೋತಾ ತ್ರಿವಿಧವನು ಕೊಡಲು ಭಕ್ತನು ಬಸವಾ ೬೪

ಗುರು ಲಿಂಗ ಚರಕೆ ತ್ರಿವಿಧವ
ಯಿರದಿತ್ತಾಚರಿಪ ಭಕ್ತನೆಡರುಂ ಬಡತನ
ಪರಿಣಾಮ ವಿಷವದಮೃತವು
ಶರಿರದ ಸಂಶ್ಕೃತಿಯು ಮೋಕ್ಷ ಗುರು ಬಸವೇಶಾ ೬೫

ಪರಿಣಾಮ ಕ್ಷಮೆಯು ಧೈರ್ಯವು
ಆಱುವುಂ ತ್ರಿವಿಧವನು ತ್ರಿವಿಧಕೀವತಿ ನಿಶ್ಚಯ
ಪರತರ ವಿರತಿ[4]ಯು[4] ಶಾಂತಿಯು
ಯಿರೆ ಭಕ್ತನೆ ಶಿವನು ಭಕ್ತ [5]ಶಿವ[5] ಗುರು ಬಸವೇಶಾ ೬೬

೧. ಲೈ (ಕ) ೨. ರ್ಣ (ಕ) ೩. × (ಕ) ೪. × (ಗ) ೫. < (ಕ)

ಗುರುವಾಚಾರವು ನಿಷ್ಠೆಯು
ಹರಚರ ಸುಜ್ಞಾನ ತ್ರಿವಿಧದೇಕ ಪ್ರಸನ್ನತೆ
ಚಿರ ಶೇಷದೇ [೧]ಕರಸ[೧]ವದು
ಚರಣೋದಕ ರೂಪ ಭಕ್ತವ್ರತವದು ಬಸವಾ ೬೭

ಇಂತು ನಿಜವ್ರತವು ತನ್ನಯು
ಸ್ವಾಂತದಿ ನೆಲಸಿರಲು ಅವಚಿನೊಳನುಭವಸುಖದಾ
ಸಂತಸದಿ ದೃಢವು ಜಿಟಸಿದ
ಚಿಂತಾಯಕನವನೆ ಲಿಂಗನಿಷ್ಟನು ಬಸವಾ ೬೮

ನಾನು ಪರಶಿವಗೆ ಭಿನ್ನನು
ನಾನೇಕನದೆನ್ನ ಕರ್ಮಯೋಗವ ಭಜಿಸನು
ಮೌನವಾದ್ಯಷ್ಟಪದ ತೃಣ
ತಾನ[೨]ವ[೨]ಸರಿಗಾಬ ಲಿಂಗನಿಷ್ಟನು ಬಸವಾ ೬೯

ಮನ ಘನಕೆ ಶರಣುವೊಕ್ಕುದು
ತನು ನಿಹಿತಾರ್ಪಿತದಿ ಸುಪ್ರಸಾದಮದಾದುದು
ಧನ ಚರಸೇವೆಗೆ ಸಂದುದು
ತನು ಮನ ಧನ ಭಯುವದೆನಗದುಂಟೇ ಬಸವಾ ೭೦

ಸ್ಮರಕಾಲ ಜಿತ ಸ್ವತಂತ್ರನು
ಅರಿಯಾಜನು ಗೆಲಿದ ಸೂರ ಇಂದ್ರಿಯವೈದಂ
ತೊರೆದ ಶಿವಜ್ಞಾನಿ ಸಮರಸಿ
ಗುರು[೩]ಚರ ಪರ[೩] ತ್ರಿವಿಧ ಶೇಷನಿಷ್ಟನು ಬಸವಾ ೭೧

ಇಂತು ನಿಷ್ಠೆಯೊಳು ಸಮರಸ
ವಾಂತಾ ತ್ರಿವಧವನು ಸಾವಧಾನದಿ ತ್ರಿವಿಧಕೆ
ಸಂತಸದೊಳಿತ್ತು ಶೇಷವ
ಸಂತತ ಭೋಗಿಪನೆ ಸುಪ್ರಸಾದಿಯು ಬಸವಾ ೭೨

---

೧. × (ಕ) ೨. × (ಕ) ೩. ಪರಚರ (ಕ)

ತನು ಮನ ಪ್ರಾಣ ತ್ರಿವಿಧವು
ಘನಚರಗುರು ತ್ರಿವಿಧಲಿಂಗಕರ್ಪಿತವಾಗಲು
ತನು ಶುದ್ಧ ಸಿದ್ಧ ಮನವದು
ಧನವದು ಪ್ರಸಿದ್ಧ ತ್ರಿವಿಧ ಶೇಷವು ಬಸವಾ ೭೩

ಸತ್ತು ನಿಜ[೧]ವಂಗ ಲಿಂ[೧]ಗಂ
ಚಿತ್ತದು ಶಕ್ತಿಗಳು ಭಕ್ತಿ ಸುಖವದು ಕರ ಮುಖ
ಮತ್ತೆ ವಿಷಯಾದಿ ದ್ರವ್ಯವ
ನಿತ್ಯವ ಭೋಗಿಸಲು ಸುಪ್ರಸಾದಿಯು ಬಸವಾ ೭೪

ಪಂಚಾಚಾರವು ಭಕ್ತಿಯು
ಪಂಚಕ ಶಕ್ತಿಗಳು ಪಂಚವಕ್ಷರ ಬಿಂದದು
ಪಂಚಮುಖವೈದು ಲಿಂಗವ
ರಂ[೨]ಚಿತ ತತ್ವಗಳು[೨] ದಿಕ್ಕು ನಾದ[೩]ವು ಬಸವಾ[೪] ೭೫

ಐದಕ್ಷ[೪]ರ[೪] ಪಂಚಹಸ್ತಗ
ಳೈದೈದುಂ ದ್ರವ್ಯವೈದು ನೈವೇದ್ಯಗಳುಂ
ವೈದು ಸ್ನಾನವು ಕಲೆಯೊಳ
ಗೈ[೫]ದುವ ತೆಱ ಅಷ್ಟ[೫] ಸಿತಿಗಳರ್ಪಿತ ಬಸವಾ ೭೬

ಉರಗನೆಡೆಗೊಂಡ ಹುತ್ತವು
ಉರಗನ ಹುತ್ತೆಂಬ ತೆಱದಿ ಮನದೊಳು ಲಿಂಗವು
ಬೆರದು ಸಕಲೇಂದ್ರಿಯಗಳೊಳು
ಚರಿಸಲು ಸರ್ವಾರ್ಪಿತಗಳು ಗುರು ಬಸವೇಶಾ ೭೭

ಇಂತುವವಧಾನದಿಂದಲಿ
ಸಂತತ ಸರ್ವಾರ್ಪಿತದೊಳು ಸಮರಸವಾದಾ
ಸ್ವಾಂತದನುಭವದ ಸಮರಸ
ವಾಂತದು ನಿಜಪ್ರಾಣಲಿಂಗಿಯನುವದು ಬಸವಾ ೭೮

---

೧. ಲಿಂಗವಂ (ಕ) ೨. ಱಂ (ಕ) ೩. × (ಕ) ೪. × (ಕ)
೫. × (ಕ)

ಲಿಂಗದಿ ಮನ ಮುಕ್ತ[1]ನು[1] ಚರ
ಲಿಂಗದಿ ತಾಂ ಹರಣ ಮುಕ್ತ ಲಿಂಗವೆ ತಾ ಸ್ವಯ
ಲಿಂಗಪ್ರಸಾದ ಕಾಯುವು
ಲಿಂಗದಿ ತಾಂ ಮುಕ್ತವೆಂದ ಗುರು ಬಸವೇಶಾ ೭೯

ಪರಮ ಶಿವಕಲೆಯ ಗುರುವರ
ಕರದೊಳಗಿರಿಸುತಲು ಲಿಂಗಕಲೆಯನು ನಿಜಗುರು
ಹರಣಮನಭಾವಜ್ಞಾನದೊ
ಳಿರಿಸಲು ತಿಲ ಕುಸುಮ ಜ್ಞಾಯದಿರವದು ಬಸವಾ ೮೦

ಮರುತ ಪರಿಮಳವನಪ್ಪಿದ
ಪರಿ[2]ಜೋ[2]ತಿಯ ತೈಲ ಉಂಡ ತೆಱ ಲಿಂಗಾಂಗದ
ಇರವನಱಿದಮಲ ಲಿಂಗದಿ
ಹರಣವ ಬೆರಸಿದನೆ ಪ್ರಾಣಲಿಂಗಿಯು ಬಸವಾ ೮೧

ಅಜಗಣನು ತ[3]ನ[3] ಲಿಂಗವ
ನಿಜಹೃದಯದೊಳಿರಿ[4]ಸಿ[4] ಲಿಂಗಧ್ಯಾನದಿ ಬಾಹ್ಯದ
ಭಜನೆಗಳ[5]ನುಳಿದು[5] ಕಳೆದನು
ನಿಜತನುವನು ತಿಲದ ಹಿಪ್ಪೆಯಂದದಿ ಬಸವಾ ೮೨

ಕರದ ಶಿವಲಿಂಗದಲಿ ಮನ
ಹರ[6]ಣ[6]ವು ಕರಣಾದಿ ಶರಿರಗುಣಗಣವೆಲ್ಲವು
ಬೆರ[7]ದಿ[7] ದಿರು ತಾನದೆಂಬಾ
ಅಱಿವಱಿತುದೆ ಲಿಂಗಪ್ರಾಣದಿರವದು ಬಸವಾ ೮೩

ನಡೆನುಡಿಗಳೆರಡನಱಿಯದ
ಒಡಿವು[8]ದು[8] ಬಿಡುವೆಡೆಯು ಕೊಡುವ ಕೊಂಬುದನಱಿಯದ
ನ್ನುಡನು ತಾನಿದಿರನಱಿಯದ
ಬೆಡಗದು ನಿಜಲಿಂಗಪ್ರಾಣದಿರವದು ಬಸವಾ ೮೪

---

೧. ಉ (ಗ) ೨. ಜ್ಯೋ.(ಗ) ೩. ×(ಕ) ೪. ಸಿದನೆ ಪ್ರಾಣ(ಕ)
೫. ×× ದು (ಕ) ೬. × (ಕ) ೭. ×(ಕ) ೮. (ದಗ)

ಭೃಂಗ ಚಂಪ[೧]ಕ[೧] ಸ್ನೇಹದ
ಯಿಂಗಿತದೊಲು ಹರಣಕರಣವೆಲ್ಲವು ಲಿಂಗದ
ಸಂಗದೊಳು ಬೆರಸಿ ತನ್ನಯ
ಅಂಗವ ಮರೆದವನೆ ಲಿಂಗಪ್ರಾಣಿಯು ಬಸವಾ ೮೫

ಅನುಮಿಷನು ತನ್ನ ಹಸ್ತದ
ಚಿನುಮಯಲಿಂಗದೊಳು ಹರಣ ಬೆರದಾ ಲಿಂಗವೇ
ತನುವಾಗಿಯಿರಲು ಅಲ್ಲಮ
ವಿ[೨]ನ[೨]ಯದಿ ಕೊಳೆ ಪ್ರಭುವಿನೊಡನೆ ಬೆರದನು ಬಸವಾ ೮೬

ರಸ ಕುಂಭನ ಬೈಚಿಡು[೩][ವೊ][೩]ಲು
ವಸು ರಜಗಳ [೪]ಶೋ[೪]ಧಿಪಂತೆ ಸುಪ್ತಿಯು ಶಾಂತಿಯ
ಹೊಸ ಬಿಂದ ಗ್ರಹಿಸಿನಿಂದೊಲು
[೫]ಸ[೫]ಶಿವನ ಶೇಷವನು ಸಾವಧಾನದಿ ಬಸವಾ ೮೭

ಹರಗ[೬]ಣ[೬] ಶೇಷವ ಬಸವನು
ಹರುಷದಿ ತಾಂ ಸವಿದು ಮಿಕ್ಕ ಶೇಷವ ಗೃಹಚರ
ಚರ[೭]ಭೃತ್ಯಗೊಕ್ಕ[೭] ಶೇಷವ
ಚಿರಕಾಲವು ಸವಿದ ಮ[೮]ರು[೮]ಳಶಂಕರ ಬಸವಾ ೮೮

ಮರು[೯]ಳ ಶಂಕರನದಾ[೯]ವಗ
ಗುರುಪರ ಚರ ಶೇಷಭೋಗದಿಂದಲಿ ತನ್ನಯ
ಶರಿರವದು ಮುಕ್ತವಾದುದು
ಉರಿಯೊಳು ಕರ್ಪು[೧೦]ರವು[೧೦] ಬೆರದ ತೆಱದೊಳು ಬಸವಾ ೮೯

ಇಂತು ಅನುಭವ ಸುಖದೊಳು
ಸಂತತ ವಡವೆರದು ನಿಂದು ಮನ ಘನವಾದ
ಸ್ವಾಂತ ಪರಿಣಮದ ಸಮರಸ
ವಾಂತುದು ನಿಜಶರಣನಿರವು ಗುರು ಬಸವೇಶಾ ೯೦

---

೧. ಕದ (ಕ), ೨. ನಿ(ಗ) ೩. ವ (ಕ) ವವ (ಗ) ೪. ಸೋ(ಗ)
೫ ಶ (ಗ) ೬. × (ಕ) ೭ × (ಕ) ೮ ರ (ಗ) ೯. × (ಕ)
೯. × (ಕ)

ಜಲಧಿಯೊ[೧]ಳ್ಮುಳುಗಿದಾತಗೆ
ಜಲತೃಷ್ಣೆಯದಿಲ್ಲದಂತೆ ಮನ ಶಿವಲಿಂಗದಿ
ಮು[೨]ಳು[೨]ಗಿ ಮನವಳಿದ ಶರಣಗೆ
ತಿಳಿವರೆ ನಿಜವುಂಟೆ ಬೇರೆ ಗುರು ಬಸವೇಶಾ ೬೧

ಕೃತಿ ಶಿವಸೇವೆಯು ಶರಣನ
ಗತಿ ಯಾತ್ರೆಯು ಮತಿಯೆ ಲಿಂಗಧ್ಯಾನವು ನಾಡಿಗ೬೦
ಸ್ತುತಿ ಸ್ಥಾಣು ಪೂರ್ಣನೆಂಬುದೆ
ಅತಿ[೩]ಶ[೩]ಯ ಸರ್ವತ್ರಪೂಜೆ ಗುರು ಬಸವೇಶಾ ೬೨

ಸರಧಿಗಳೆ[೪][ಏ][೪]ಕವಾಗುತ
ಹರಿಯುಲಿ ಹರಿಪ್ರಳಯುವೆ[೫]ಯ್ದಿ[೫] ಬೀಸಲಿ ದ್ವಾದಶ
ಕರನುರಿಯುನುಗುಳೆ ಮನದೊಳು
ಹರಶರಣನಿಗುಂಟೆ ಕ್ಷತಿಯು ಗುರು ಬಸವೇಶಾ ೬೩

ಶಶಿಕಿರಣ ಬಿಸಿಯದಾಗಲಿ
ಯುಸಗಲಿ ರವಿಕಿರಣ [೭]ಶೈ[೭]ತ್ಯವನು ತಾ ಹವಿಯದು
ಪಸರಿಸಲಿ ಕೆಳಗೆ[೬][ಮು][೬]ಖದೊಳು
[೮]ಸ[೮]ಶಿವನ ಶರಣರಿಗದೇನು ಛೋದ್ಯವು ಬಸವಾ ೬೪

ಇಂತು ಪರಿಣಮದ ಇನಪ್ರಭೆ
ಸಂತತ ಸಮರಸದಿ [೯]ಬೆ[೯]ರದನವಿರಳನದ್ವಯ
ಶಾಂತ ಶ[೧೦]ಶಿ[೧೦]ವೆಳಗು ಇನಪ್ರಭೆ
ಅಂತದು ಹವಿ ಉಷ್ಣದಂತದೈಕ್ಯನು ಬ[೧೧]ಸವಾ[೧೧]

ಜಲ[೧೨]ಶಿ[೧೨]ಲೆಯ ಕಡಿದು ಪ್ರಥುಮೆಯ
ನಿಲಿಸುವ ತೆಜಿ ಓಮದ ಪ್ರಣೆತೆಯೊಳು ತಾ [೧೩]ಜ್ಯೋ[೧೩]ತಿಯು
ಬೆಳಗುಬ ಬಗೆ ಲವಣ[೧೪]ವ[೧೪]ವನ
ದೊಳು [೧೫]ಬ್ಬೈ[೧೫]ಚಿಡುವಂತೆ ಲಿಂಗಗ್ರಾಹಕ ಬಸವಾ ೬೬

---

೧. ಳು ಮುಂಗುಳುಮು (ಕ) ೨. ಳಗೆ (ಕ) ೩. ಸ (ಗ) ೪. ೬: (ಕ, ಗ) ೫. ಝ್ದೆಯ್ದಿ (ಗ) ೬. ಶಯಿ (ಗ) ೭. ವು (ಕ, ಗ) ೮. ಶ (ಗ) ೯. × (ಕ) ೧೦. ಸಿ (ಕ) ೧೧. × (ಕ) ೧೨. ಸಿ (ಗ) ೧೩. ಜೋಗ ೧೪. ಮಾ (ಕ) ೧೫. ಬಯಿ (ಗ)

ಲಿಂಗಗ್ರಾಹ[೧]ಕ[೧] ಮನವದು
ಲಿಂಗದಿ ನಿಃಪತಿಯನ್ನೈದಿದಂಗದ ಲಿಂಗದ
ಸಂಗಸುಖದಱಿವು ಮಱವೆಯು
ಹಿಂಗಲು ನಿಜ[೨]ಲಿಂ[೨]ಗದೈಕ್ಯ ಗುರು ಬಸವೇಶಾ ೯೭

ಇಂತು ಸಮರಸದ ಸುಖದಾ
ಸಂತಸ ತಾ ಹಿಂ[೩]ಗಿ[೩] ಜೋತಿರ್ಮಯತಾನಹಚಿದ
ಹಂತೆ ಯಳಿದಱಿವು ನಿಃಪತಿ
ಅಂತದು ನಿಜಜ್ಞಾನಶೂನ್ಯದಿರವದು ಬಸವಾ ೯೮

ತಾ[೪]ನಿ[೪]ದಿರದೆಂಬ [೫]ಉ[೫]ಭಯವ
ದೇನುವ ತಾನಱಿಯದಚಲಚಿತ್ತ ಧ್ಯಾತೃ
ಧ್ಯಾನಧ್ಯೇಯಗಳಱಿತು[೬]ದೆ[೬]
ತಾನದು ಘನ [೭]ಜ್ಞಾನ[೭] ಶೂನ್ಯ[೮]ದಿರುವ[೮]ದು ಬಸವಾ ೯೯

ಎನ್ನೊಡೆಯ ತ್ರಿಜಗದೊಡೆ[೯]ಯನೆ[೯]
ಎನ್ನಯ ಗುರು ಮೂಱುಲೋಕಗುರು ಎನ್ನಾತ್ಮನೆ
ಸನ್ನುತತ್ರಯ ಲೋಕಾತ್ಮನೆ
ನಿನ್ನಯ ಶ್ರೀಚರಣ ಶರಣು ಗುರು ಬಸವೇಶಾ ೧೦೦

ಶರಣಜನ ಕಾಮಧೇನುವೆ
ಶರಣರಕುಲ ಕಲ್ಪತರುವೆ ಭಕ್ತಿಯ ನಿಧಿಯೇ
ಶರಣಕುಲ ಪರುಷಕಣಿಯೇ
ಶರಣಾಗತ ರಕ್ಷಮಣಿಯೆ ಗುರು ಬಸವೇಶಾ ೧೦೧

ಜಯ ಕರುನಿಧಿಯೆ ಬಸವಾ
ಜಯ ಕರುಣಸಿಂಧು ಕರುಣಾ ಬಂಧುವೆ ಬಸವಾ
ಜಯ ಕರುಣಧಾಮ ಬಸವಾ
ಜಯ ಕರುಣಾಭರಣವೆನ್ನ ರಕ್ಷಿಸು ಬಸವಾ ೧೦೨

---

೧. × (ಕ) ೨. × (ಕ) ೩. ಗೆ (ಕ) ೪. × (ಕ)
೫. ದು (ಕ) ೬. ದು (ಗ) ೭. × (ಗ) ೮. ವೆಂದು (ಕ)
೯. ಯಾ (ಗ)

ಕಂದ ಶತವೊಂದು ಕುಸುಮವ
ಚಂ[1]ದದಿ ಚೆನ್ನಮಲ್ಲ ಬಸವ ಗುರುವಿನ ಚರ[2]ಣ[2]
ದ್ವಂದ್ವನು ತನ್ನ ಹೃದಯುದ
ಮಂದಿರದೊ[3]ಳ[3]ಗಿರಿಸಿ ಸ್ಮರಿಸಿ [4]ಭಜಿ[4]ಸಿದ ಸತತಂ ೧೦೩

ಇದು ಬಸವ ಪದ ಪದಾಂಕಿತ
ವಿದನಾವವನೋದಿ ಕೇಳುತಿಹ ಸದ್ಭಕ್ತರ
ವದನವದು ಸ[5]ಶಿ[5]ವ ನಿರುತಿಹ
ಸದನವು ನಿಜ ಬಸನ ಗುರುವ ಭಜಿಸಿರೆ ಸತತಂ ೧೦೪

ಬಸವ [6]ಶತಕ[6] ಸಂಪೂರ್ಣ ಮ[7]ಂ[7]ಗಳ ಮಹಾ ಶ್ರೀ ಶ್ರೀ ಶ್ರೀ

## ಅನುಬಂಧ

೧. ಶೀಲವಂತಯ್ಯನ ಕಂದದ ಕ್ರಮಾಂಕ
೨. ಚಿತ್ಕಲಾಲಿಂಗ ಚಿತ್ತ್ರಣವ ಸಂಯೋಗ ಚಿದಮೃತಸಾರ (ಕೆ/೯/೮/೧)ದ ಕ್ರಮಾಂಕ
೩. ಬಸವಸ್ತೋತ್ರ ಕಂದದ ಕ್ರಮಾಂಕ

| ೧ | ೨ | ೩ | ೧ | ೨ | ೩ |
|---|---|---|---|---|---|
| ೧ | ೨ | ೩ | ೮ | ೧೧೩ | — |
| ೨ | — | ೪ | ೯ | ೧೧೪ | — |
| ೩ | — | ೧೦ | ೧೦ | ೧೧೫ | — |
| ೪ | ೧೧ | ೧ | ೧೧ | — | ೬ |
| ೫ | ೧೨ | ೨ | ೧೨ | ೧೧೬ | — |
| ೬ | ೧೧೦ | — | ೧೩ | — | ೨೪ |
| ೭ | ೧೧೨ | — | ೧೪ | — | ೨೩ |

೧ × (ಕ) ೨. ಣಾ (ಗ) ೩. × (ಕ) ೪. (ಕ)
೫. ಸಿ (ಗ) ೬. ಕಂದ (ಗ) ೭ × (ಕ)

| ೧ | ೨ | ೩ | ೧ | ೨ | ೩ |
|---|---|---|---|---|---|
| ೧೬ | ೧೨೧ | ೭ | ೬೩ | ೧೯೧ | — |
| ೧೭ | ೧೧೯ | ೮ | ೬೪ | ೧೮೭ | — |
| ೧೮ | ೧೨೦ | — | ೬೬ | ೧೯೪ | — |
| ೨೦ | ೧೨೨ | ೧೮ | ೬೭ | ೧೯೫ | — |
| ೨೧ | ೧೨೩ | ೧೯ | ೬೮ | ೧೯೬ | — |
| ೨೨ | — | ೨೦ | ೬೯ | ೧೯೯ | — |
| ೨೩ | — | ೯ | ೭೦ | ೨೦೧ | — |
| ೨೪ | ೧೨೪ | ೧೧ | ೭೧ | ೨೦೨ | — |
| ೨೫ | ೧೨೫ | ೧೨ | ೭೨ | ೨೦೩ | — |
| ೨೬ | ೧೨೬ | ೨೧ | ೭೩ | ೨೦೫ | — |
| ೨೮ | ೧೨೭ | — | ೭೪ | ೨೦೬ | — |
| ೩೧ | ೧೨೯ | — | ೭೫ | ೨೦೭ | — |
| ೩೨ | ೧೮ | — | ೭೬ | ೨೦೮ | — |
| ೩೩ | ೨೩ | — | ೭೭ | ೨೦೯ | — |
| ೩೪ | ೨೪ | ೫ | ೭೮ | ೨೧೦ | — |
| ೩೫ | ೨೫ | — | ೭೯ | ೨೧೨ | — |
| ೩೬ | ೨೬ | — | ೮೦ | ೨೧೩ | — |
| ೩೭ | ೨೭ | ೧೬ | ೮೧ | ೨೧೪ | — |
| ೩೮ | ೨೮ | — | ೮೩ | ೨೧೫ | — |
| ೩೯ | — | ೧೭ | ೮೫ | ೨೧೬ | — |
| ೪೨ | ೪೭ | — | ೯೦ | ೨೧೭ | — |
| ೪೩ | ೪೮ | — | ೯೧ | ೨೧೯ | — |
| ೪೪ | ೪೯ | — | ೯೫ | ೨೨೪ | — |
| ೪೫ | ೧೧೦? | — | ೯೭ | ೨೩೧ | — |
| ೪೬ | ೧೧೧ | — | ೯೮ | ೨೩೨ | — |
| ೪೯ | — | ೨೨ | ೯೯ | ೨೩೭ | — |
| ೫೨ | ೧೮೧ | ೨೨ | ೧೦೦ | ೨೪೩ | ೧೫ |
| ೫೩ | ೧೮೪ | — | ೧೦೧ | ೨೪೪ | ೧೪ |
| ೫೪ | ೧೮೫ | — | ೧೦೨ | ೨೪೫ | ೧೩ |
| ೫೫ | ೧೮೬ | — | ೧೦೪ | — | ೨೫ |
| | | | | ೬೪ | ೨೫ |

# ಸಂಗ್ಯಾಬಾಳ್ಯಾ

## (ಅಪರೂಪ ಗೀತರೂಪಕ)

ಪ್ರಭುಸ್ವಾಮಿಮಠ

ಕನ್ನಡ ಜಾನಪದರಂಗಭೂಮಿಯ ಅಪರೂಪ ಗೀತರೂಪಕ ಸಂಗ್ಯಾ ಬಾಳ್ಯಾ, ಸುಮಾರು ನೂರು ವರ್ಷಗಳ ಹಿಂದೆ ನಡೆದ ನೈಜ ಘಟನೆಯೊಂದನ್ನಾಧರಿಸಿ ರಚಿತವಾಗಿ ಉತ್ತರಕರ್ನಾಟಕ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಇಂದಿಗೂ ಅತ್ಯಂತ ಜನಪ್ರಿಯ ರಂಗಕೃತಿಯಾಗಿ ಪ್ರಯೋಗಗೊಳ್ಳುತ್ತಿದೆ. ನಾಟಕದ ಹುಟ್ಟು, ಉತ್ತರಕರ್ನಾಟಕದಲ್ಲಾದರೂ ಅದನ್ನು ಭಿನ್ನಭಿನ್ನ ರಂಗ ಸಾಧ್ಯತೆಗಳಿಗೆ ಅಳವಡಿಸಿಕೊಂಡು ಅನೇಕ ಹವ್ಯಾಸಿತಂಡಗಳು ಅಲ್ಲಲ್ಲಿ ಪ್ರಯೋಗಿಸುತ್ತಿರುವುದು ಕಂಡುಬರುತ್ತದೆ. ಒಂದುಕಾಲಕ್ಕೆ ಕೇವಲ ಹಳ್ಳಿಗಳಲ್ಲಿ ಸಾಮಾನ್ಯ ಜನತೆಯ ಮನೋರಂಜನೆಗೆ ಸೀಮಿತವಾಗಿದ್ದ ನಾಟಕ, ದಿನದಿನಕ್ಕೆ ಹಲವು ಹವ್ಯಾಸಿ ಕಲಾವಿದ ರನ್ನು ಆಕರ್ಷಿಸುತ್ತಿರುವುದು, ಕನ್ನಡ ರಂಗಭೂಮಿಯ ದೃಷ್ಟಿಯಿಂದ ಒಳ್ಳೆಯ ಲಕ್ಷಣವಾಗಿದೆ. ಈ ದಿಶೆಯಲ್ಲಿ ಈ ನಾಟಕದ ಬಗ್ಗೆ ಆಸಕ್ತಿ ಹೆಚ್ಚಿಸಲು ಕಾರಣವಾದ ಕಲಾವಿದರ ತಂಡಗಳು, ಇಂತಿವೆ :

೧. ಶ್ರೀ ವಿಜಯ ನ್ಯಾಟ್ಯಸಂಘ ಶಿವಾಪೂರ (ಘೋಡಗೇರಿ)
೨. ಶ್ರೀ ನೀಲಕಂಠೇಶ್ವರ ನಾಟ್ಯ ಸಂಘ ಹೆಗ್ಗೋಡು.
೩. ಭಾರತೀ ಕಲಾವಿದರು ಕೆಳದಿ.
೪. ಶ್ರೀ ಚಂದ್ರಶೇಖರ ಕಂಬಾರ ಹಾಗೂ ಗೆಳೆಯರು, ಬೆಂಗಳೂರು.

ಇವು ಮಹತ್ವದವುಗಳಾಗಿವೆ. ಒಂದು ಕಾಲಕ್ಕೆ ಉತ್ತರಕರ್ನಾಟಕಕ್ಕೇ ಸೀಮಿತವಾಗಿದ್ದ ನಾಟಕ ಕಾಲಕ್ರಮದಲ್ಲಿ ಕಾರವಾರ, ಶಿವಮೊಗ್ಗ ಜಿಲ್ಲೆಗಳಿಗೂ ವ್ಯಾಪಿಸಿ, ಇತ್ತೀಚೆಗೆ ದಕ್ಷಿಣಕನ್ನಡಕ್ಕೂ ಕಾಲು ಚಾಚಿರುವುದು ಈ ನಾಟಕದ ಹೆಚ್ಚುತ್ತಿರುವ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಅದರಂತೆ ಮಹಾರಾಷ್ಟ್ರದ ಗಡಿ ಭಾಗಗಳಾದ ಗಡೀಂಗ್ಲಜ, ಈಚಲಕರಂಜಿ ಪ್ರದೇಶಗಳಲ್ಲಿಯೂ ಈ ನಾಟಕ ಪ್ರಯೋಗಗೊಳ್ಳುತ್ತಿರುವುದನ್ನು ನೆನೆಯಬಹುದು. ಹೀಗೆ ದಿನದಿಂದ ದಿನಕ್ಕೆ ಕನ್ನಡ ನಾಡಿನ ಒಳ-ಹೊರಗೆ ವ್ಯಾಪ್ತಿಯನ್ನು ಪಡೆಯುತ್ತಿರುವ ಈ ನಾಟಕದ ಬಗ್ಗೆ ಪ್ರಸ್ತುತ ಸಂದರ್ಭದಲ್ಲಿ ತಿಳಿದುಕೊಳ್ಳುವುದು ಅವಶ್ಯವೆನಿಸುತ್ತದೆ.

**ನಾಟಕದ ವಸ್ತು :**

ನಾಟಕದ ಮುಖ್ಯ ವಸ್ತುಹಾದರ ಕೊಲೆಗೆ ಸಂಬಂಧಿಸಿದ್ದು. ಮಾನವ ಸಹಜ ಲೈಂಗಿಕಪ್ರವೃತ್ತಿಯೊಂದು ಎಂಥ ದಾರುಣಸ್ಥಿತಿಗೆ ಮುಟ್ಟುವುದೆಂಬುವನ್ನು ನಾಟಕಕಾರ ಅತ್ಯಂತ ಕಲಾತ್ಮಕವಾಗಿ ಪದ್ಯರೂಪದಲ್ಲಿ ಮೂಡಿಸಿಕೊಡುತ್ತಾನೆ.

**ಪರಿಸರ :**

ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಬೈಲವಾಡ ಹಾಗೂ ಮರಡಿ ಬಸವಣ್ಣನ ದೇವಸ್ಥಾನದ ಸುತ್ತಮುತ್ತಲಿನ ಜೀವನದಿಂದ ಉದ್ದೀಪಿತವಾದದ್ದು. ನಾಟಕದ ರಚನೆ, ಗದುಗಿನ ಶಾಪೂರ ಓಣಿಯ ಬಸವಣ್ಣನ ಭಕ್ತರಾದ ಪತ್ತಾರ ಮಾಸ್ತರದು ಎಂದು ತಿಳಿಯುತ್ತದೆ.

**ರಂಗಸಂಪ್ರದಾಯ :**

ಉತ್ತರಕರ್ನಾಟಕದಲ್ಲಿ ಪ್ರಚಲಿತವಾಗಿರುವ ಬೈಲಾಟ (ದೊಡ್ಡಾಟ) ಹಾಗೂ ಶ್ರೀ ಕೃಷ್ಣ ಪಾರಿಜಾತದಂಥ ಜಾನಪದ ಪೌರಾಣಿಕ ರಂಗಸಂಪ್ರದಾಯಕ್ಕೆ ಹೊಂದಿ ಕೊಂಡು ರಚಿತವಾದ ಈ ಕೃತಿಯು ವಸ್ತು ಸಮಕಾಲೀನ, ಸಾಮಾಜಿಕ. ಸಂಪ್ರದಾಯ ದಂತೆ ಮುಂದುವರಿಯುವ ನಾಟಕ,

"ಗಜವದನಾ ! ನಿಮ್ಮ ಧ್ಯಾನ ಮಾಡುವೆನಾ"

ಎಂದು ಗಣಪತಿಯ ಆರಾಧನೆಯಿಂದ ಪ್ರಾರಂಭವಾಗಿ ಮಂಗಳದೊಂದಿಗೆ ಕೊನೆಗೊಳ್ಳುತ್ತದೆ. ಈ ಮಧ್ಯೆ ನಾಟಕದ ಕ್ರಿಯೆ ನಡೆಯುತ್ತದೆ. ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಮೂಡಲಪಾಯದಿಂದ ಪ್ರಭಾವಿತವಾದ ಈ ರಂಗಕೃತಿಯ ಒಂದು ಪ್ರಯೋಗವನ್ನು ಇತ್ತೀಚೆಗೆ ನೋಡಿದಾಗ, ನಾಟಕದ ಮೇಲೆ ಬಯಲಾಟ, ಶ್ರೀಕೃಷ್ಣ ಪಾರಿಜಾತಗಳಲ್ಲದೆ ಮಹಾರಾಷ್ಟ್ರದಲ್ಲಿ ಪ್ರಚಲಿತವಾದ 'ತಮಾಷಾ'ದ ಪ್ರಭಾವವೂ ಇದ್ದಂತೆ ಕಂಡುಬಂದಿತು. ಆದರೆ ಈ ಬಗ್ಗೆ ಪರ್ವತ ವಾಣಿಯವರು ಕನ್ನಡ ಜಾನಪದ ರಂಗಭೂಮಿಯ ಪರಂಪರೆಯನ್ನು ಕುರಿತು ಬರೆ ಯುತ್ತ : "ಕನ್ನಡದ ದಾಸರಾಟದಿಂದ ಮಹಾರಾಷ್ಟ್ರದ ತಮಾಷಾಕ್ಕೆ ಪ್ರೇರಣೆ ದೊರೆತಿದ್ದು, ಅದೇ ನಂತರ ಕನ್ನಡಕ್ಕೆ ರಾಧಾನಾಟವಾಗಿ ಕಾಲಿಟ್ಟಿದೆ. ಈ ಸಂಪ್ರ ದಾಯದಿಂದಲೇ ರೂಪಸಿಂಗನಾಟ, ಮುಕುಂದ-ಗೋವಿಂದ, ಸಂಗ್ಯಾಬಾಳ್ಯಾದಂಥ ಗೀತರೂಪಕಗಳು ಮೂಡಿಬಂದಿವೆ" ಎನ್ನುತ್ತಾರೆ(ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ. ಪು. ೯೦). ಬಹುಶಃ ನಾನು ನೋಡಿದ 'ಸಂಗ್ಯಾಬಾಳ್ಯಾ' ನಾಟಕ ಅಭಿನಯಿಸಿದ ಕಲಾವಿದರ ತಂಡ, ಬೆಳಗಾವಿ ಜಿಲ್ಲೆಯವರಾದುದರಿಂದ ಗಡಿ ಭಾಗದಲ್ಲಿ ಒಂದರಿಂದ ಮತ್ತೊಂದು ರಂಗಭೂಮಿ ಪ್ರಭಾವಿತವಾಗುವುದು

ಅನಿವಾರ್ಯವೆಂದು ಭಾವಿಸಿದರೂ ತವರೂರಾದ ಮೂಲ, ಕರ್ನಾಟಕದ ಜಾನಪದರಂಗ ಭೂಮಿ ಎಂಬುದನ್ನು ಗಮನಿಸಲೇಬೇಕಾಗುತ್ತದೆ. ಈ ಬಗ್ಗೆ ಇನ್ನೂ ವಿವರವಾದ ಸಂಶೋಧನೆಯ ಅಗತ್ಯವೂ ಇದೆ.

ನಾಟಕದ ಭಾಷೆ, ಉತ್ತರಕರ್ನಾಟಕಕ್ಕೆ ವಿಶಿಷ್ಟವಾದ ಶಕ್ತಿಯುತ ಭಾಷೆ. ನಾಟಕದಲ್ಲಿ ೨೫ ದೃಶ್ಯಗಳು ೧೪ ಪಾತ್ರಗಳು ಮುಮ್ಮೇಳ, ಹಿಮ್ಮೇಳ. ಮೇಳದಲ್ಲಿ ಪ್ರಧಾನವಾಗಿ ದಪ್ಪನ್ನು ಬಳಸವುದರಿಂದ ಇದನ್ನು ದಪ್ಪಿನಾಟವೆಂದೂ ಕರೆಯುವ ರೂಢಿಯುಂಟು. ಮುಖ್ಯವಾಗಿ ರಂಗದ ಎಲ್ಲ ಕ್ರಿಯೆಯನ್ನು ಈ ಮೇಳವೇ ನಿಯಂತ್ರಿಸುತ್ತದೆ. ಇಲ್ಲಿನ ಒಂದು ವೈಶಿಷ್ಟವೆಂದರೆ, ಪಾತ್ರಗಳ ಆಗಮನ ನಿಷ್ಕ್ರಮಣಗಳ ಗೊಂದಲವಿಲ್ಲದೆ ಎಲ್ಲವೂ ರಂಗದ ಮೇಲೆ ನಮ್ಮೆದುರಿನಲ್ಲೇ ಸಹಜವಾಗಿ ಸಂಯೋಜನೆಗೊಂಡು ಒಂದು ಸಾಮೂಹಿಕ ಅನುಭವವಾಗಿ ನಮ್ಮ ಮಧ್ಯದಲ್ಲೇ ನಾಟಕ ಪುನಃ ಸೃಷ್ಟಿಗೊಳುತ್ತದೆ.

**ಕಥಾಪ್ರವಾಹ :**

ಬೈಲಹೊಂಗದಲ್ಲಿ ಲಗಳೇರ ಎಂಬ ಮನೆತನ. ಈರ್ಯಾ (ವೀರಣ್ಣ), ಇರಪಾಕ್ಷಿ (ವಿರೂಪಾಕ್ಷಿ), ಬಸವಂತ ಅಣ್ಣತಮ್ಮಂದಿರು. ಇರಪಾಕ್ಷಿ, ಬಸವಂತ ಹೊಲಮನೆ ಕೆಲಸ ಮಾಡುತ್ತ ಪೈಲವಾನಕಿ ಮಾಡುತ್ತಿದ್ದರು. ಅಣ್ಣ ಈರ್ಯಾ,ಊರಿನ ಶ್ರೀಮಂತ ವ್ಯಾಪಾರಿ. ಆತನಿಗೆ ಗಂಗಾ, ಚಲುವೆ ಹೆಂಡತಿ. ಇನ್ನೂ ಮಕ್ಕಳಾಗಿರಲಿಲ್ಲ. ಬೈಲಹೊಂಗಲದ ಸಮೀಪದ ಬೈಲವಾಡ, ಅವಳ ತವರೂರು.

ಅದೇ ಊರಿನ ಶ್ರೀಮಂತ ತರುಣ ಸಂಗ್ಯಾ, ಸುಂದರ ರಸಿಕ. ಆತನ ಗೆಳೆಯ ಬಾಳ್ಯಾ ಬಡವ, ಆತ್ಮೀಯ ಸ್ನೇಹಿತ. ಇದ್ದೂರಲ್ಲೇ ಪರಮ್ಮನೆಂಬ ಮುದಿಕಿ ಸಂಗ್ಯಾನ ಸೋದರತ್ತೆ ಇರುತ್ತಾಳೆ. ಬಡವ ಗೆಳೆಯ ಬಾಳ್ಯಾನಿಗೆ ಸಂಗ್ಯಾ ಊರ ಮಾರವಾಡಿ ಅಂಗಡಿಯಲ್ಲಿ ಅರಿವೆ ಆಭರಣಗಳನ್ನು ಕೊಡಿಸಿ, ಸಮೀಪದ ಮರಡಿ ಬಸವಣ್ಣನ ಜಾತ್ರೆಗೆ ಹೋಗುವುದೆಂದು ನಿಶ್ಚಯಿಸುತ್ತಾನೆ.

ಇತ್ತಕಡೆ ಈರ್ಯಾನಿಗೆ ವ್ಯಾಪಾರದ ಪ್ರಯುಕ್ತ ಬಳ್ಳಾರಿಗೆ ಹೋಗಲು ಪತ್ರ ಬರುತ್ತದೆ. ದೊಡ್ಡಮನೆ, ಅಂಗಡಿ, ಹೊಲಗೆಲಸ, ಅನನುಭವಿಕ ತಮ್ಮಂದಿರು, ಹರೆಯದ ಹೆಂಡತಿಯೊಬ್ಬಳನ್ನೇ ಬಿಟ್ಟುಹೋಗಬೇಕು. ಮುದ್ದುಹೆಂಡತಿ ಗಂಗಾ ದುಃಖಿಸುತ್ತಾಳೆ. ಸಮಾಧಾನ ಹೇಳಿ ಪರಮ್ಮನನ್ನು ಜೊತೆಗಿರಲು ಬಿಟ್ಟು, ಬೇಸರಾದರೆ ಮರಡಿ ಜಾತ್ರೆಗೆ ಹೋಗಿಬರಲು ಹೇಳಿ ಈರ್ಯಾ ವ್ಯಾಪಾರಕ್ಕೆ ಹೋಗುತ್ತಾನೆ.

ಈಕಡೆ ಪರಮ್ಮ, ಗಂಗಾ ಜೊತೆಯಾಗಿ ಬಸವಣ್ಣನ ಜಾತ್ರೆಗೆ ಹೋಗುತ್ತಾರೆ. ಗುಡಿಯಲ್ಲಿ ಪೂಜಾರಿ ಗಂಗಾಳ ಚಲುವಿಕೆ ಕಂಡು ಲವಲವಿಕೆ ತೋರಿಸಿ ಛೀ ! ಹಾಕಿಸಿ ಕೊಳ್ಳುತ್ತಾನೆ. ಅಷ್ಟರಲ್ಲಿ ಸಂಗ್ಯಾ–ಬಾಳ್ಯಾ ಅಲ್ಲಿಗೆ ಬರುತ್ತಾರೆ. ಅಪರೂಪದ ತುಂಬುಯೌವನೆ ಗಂಗೆಯನ್ನು ಕಂಡು ಸಂಗ್ಯಾ ಮೋಹಗೊಳ್ಳುತ್ತಾನೆ. ಅವಳಿಗೆ ತಿಳಿಯದಂತೆ ಕೊರಳಸರ ಕದಿಯುತ್ತಾನೆ. ಬಾಳ್ಯಾನಿಗೆ ಸರ ತೋರಿಸಿ ಆ ಚಲುವೆ ಯಾರೆಂದು ತಿಳಿದುಬರಲು ಜಾತ್ರೆಯಲ್ಲಿ ಕಳಿಸುತ್ತಾನೆ. ಲಗಳೇರ ಈರ್ಯಾನ ಹೆಂಡತಿ ಎಂದು ಬಾಳ್ಯಾನಿಂದ ತಿಳಿದುಬರುತ್ತದೆ. ಕಾಮದ ಕಾತರತೆಯನ್ನು ತಾಳಲಾರದೆ ಸಂಗ್ಯಾ ಸರ ಕೊಟ್ಟು ಬಾಳ್ಯಾನನ್ನು ಅವಳ ಹತ್ತಿರ ಮನ ಒಲಿಸುವುದಕ್ಕೆ ಕಳಿಸುತ್ತಾನೆ. ಬಾಳ್ಯಾನಿಂದ ಸರ ಪಡೆದು, ಕಿವಿಹಿಂಡಿ ಛೀ ! ಥೂ !! ಹಾಕಿ ಗಂಗಾ ಕಳಿಸುತ್ತಾಳೆ. ಇನ್ನೂ ಕಾತರಗೊಂಡ ಸಂಗ್ಯಾ ಕೊರವಂಜಿಯಿಂದ ವಶೀಕರಣ ತಿಳಿದು ಪರಮ್ಮನ ಕುಂಟಿಣಿತನದಿಂದ ವಶಪಡಿಸಿಕೊಳ್ಳಲು ಪ್ರಯತ್ನಿಸಿ ಮೊದಲ ಸಲ ವಿಫಲನಾಗುತ್ತಾನೆ.

ಮತ್ತೂ ಬಿಡದೆ ಪರಮ್ಮ ಸಂಗ್ಯಾನಿಂದ ವಸ್ತ್ರ, ಒಡವೆ ಪಡೆದು ಗಂಗಾನ ಮನ ಒಲಿಸಲು ಪ್ರಯತ್ನಿಸಿ, ಸಾಧ್ಯವಾಗದಾಗ ಉಪಾಯ ಒಡ್ಡಿ, ನೀನು ಈಗಾಗಲೆ ಸಂಗ್ಯಾನ ಕೂಡಿದೆಂತ ಮೈದುನರಿಗೆ ಹೇಳುತ್ತೇನೆಂದು ಹೆದರಿಸುತ್ತಾಳೆ. ಹುಲಿಯಂಥ ಮೈದುನರು, ಗಂಡ ಊರಲಿಲ್ಲ, ಮೇಗಿಲಾಗಿ ಅಪವಾದ. ಇಡುಕರಿನಲ್ಲಿ ಸಿಕ್ಕ ಗಂಗಾ ಅತ್ತರೂ ಕರೆದರೂ ಪರಮ್ಮ ಬಿಡುವುದೇ ಇಲ್ಲ. ನಿಸ್ಸಯಕಳಾಗಿ ಗಂಗಾ ಹೆದರಿ ಕೂಡಲೊಪ್ಪುತ್ತಾಳೆ. ಯಾರ ಮುಂದೆ ಹೇಳದಂತೆ ಪರಮ್ಮನ ಕೈಕಾಲು ಹಿಡಿದು ಕೊಳ್ಳುತ್ತಾಳೆ. ಸಂಗ್ಯಾನಸಂಗ ಅನಂತರ ಏರ್ಪಡುತ್ತದೆ.

ಹೀಗೆ ಅನಿವಾರ್ಯ ಪರಿಸ್ಥಿತಿಯಲ್ಲಿ ಕೂಡಿದರೂ ದಿನನಿತ್ಯ ಇಬ್ಬರ ರತಿಕ್ರೀಡೆ ಮುಂದುವರಿದು ಅನ್ಯೋನ್ಯತೆ ಬೆಳೆಯುತ್ತದೆ. ಇತ್ತ ಈರ್ಯಾನಿಗೆ ದಾರಿಯಲ್ಲಿ ಅಪಶಕುನವಾಗಿ ಮರಳಿ ಊರಿಗೆ ಬರುತ್ತಾನೆ. ಊರಲ್ಲಿ ಬರುತ್ತಲೆ ಹೆಂಡತಿಯ ಹಾದರದ ಹಗರಣ ಕೇಳಿ, ದಿಕ್ಕುತೋಚದೆ ಕಿಡಿಕಿಡಿಯಾಗುತ್ತಾನೆ. ಆಳು ಹ್ಯಾಗಾರಿ ಯೊಂದಿಗೆ ಕುಡಗೋಲು, ಕೊಡಲಿ ಹಿಡಿದೇ ಬರುತ್ತಾನೆ. ಗಂಡನ ರೋಷ ತಿಳಿದ ಗಂಗಾ ಸಂಗ್ಯಾನನ್ನು ಬಚ್ಚಿಡಲು ಪ್ರಯತ್ನಿಸುತ್ತಾಳೆ. ಸಾಧ್ಯವಾಗದೇ ಸಂಗ್ಯಾ ತಪ್ಪಿಸಿಕೊಂಡು ಓಡುವಾಗ ಅವನ ಜರದ ಪಟಗ ಬೀಳುತ್ತದೆ. ಅದು ಸಂಗ್ಯಾನದೇ ಎಂದು ಗೊತ್ತಾದಾಗ ಈರ್ಯಾ ಅಪಮಾನದ ರೋಷದಿಂದ ಅಲ್ಲೋಲ ಕಲ್ಲೋಲ ವಾಗುತ್ತಾನೆ. ತಮ್ಮಂದಿರ ಸಮಕ್ಷಮ ಗಂಗೆಯ ಸೀರೆ ಆಭರಣಗಳನ್ನು ಕಸಿದು ಕೊಂಡು ತವರೂರಾದ ಬೈಲವಾಡಕ್ಕೆ ಅಟ್ಟುತ್ತಾನೆ. ಸಂಗ್ಯಾನನ್ನು ಜೀವಸಹಿತ ಕಡಿದು ಚಲ್ಲದೆ ಸಮಾಧಾನವಿಲ್ಲೆಂದು ಪ್ರತಿಜ್ಞೆ ಮಾಡುತ್ತಾನೆ. ಬಾಳ್ಯಾನನ್ನು ಕರೆ-



ಗಂಗಿಯು ಮನವೊಲಿಸಲು ಬಾಳ್ಯಾನಿಗೆ ಸಂಗ್ಯಾ ಹೇಳುತ್ತಿರುವ ದೃಶ್ಯ.

(ಭಾರತಿ ಕಲಾವಿದರ ಪ್ರದರ್ಶನ)



ಗಂಗಿ ಮೊರೆಯಿಡುವ ದೃಶ್ಯ

(ಹೆಗ್ಗೋಡಿನ ಶ್ರೀ ನೀಲಕಂಠೇಶ್ವರ ನಾಟ್ಯಸಂಘದವರ ಪ್ರದರ್ಶನ)



ಸಂಗ್ಯಾನನ್ನು ಕೊಲ್ಲುತ್ತಿರುವ ದೃಶ್ಯ
(ಶಿವಾಪುರದ ಶ್ರೀ ವಿಜಯ ನಾಟ್ಯಸಂಘದವರ ಪ್ರದರ್ಶನ)

ಹೇಗಾದರೂ ಸಂಗ್ಯಾನನ್ನು ತಂದೊಪ್ಪಿಸದಿದ್ದರೆ ನಿನ್ನ ಸಿರ ಹರಿಯುವುದಾಗಿ ಹೇಳಿ ಕಳಿಸುತ್ತಾನೆ. ಭಯಗೊಂಡ ಬಾಳ್ಯಾ ಹುಂಚಿಕೆಮಾಡಿ ಪಂಚಮಿಗೆ ಗಂಗಾ ಕುಬಸ್ಯ ಕೊಬ್ಬರಿ ತಗೊಂಡು ಬಾ ಎಂದು ಬರೆದಿದ್ದಳೆಂದು ಸುಳ್ಳುಪತ್ರ ತೋರಿಸಿ ಸಂಗಾ, ನನ್ನು ಬೈಲವಾಡಕ್ಕೆ ಕರೆದೊಯ್ಯುತ್ತಾನೆ. ಪೂರ್ವನಿಯೋಜಿತದಂತೆ ಈರ್ಯಾ, ಇರಪಾಕ್ಷಿ, ಬಸವಂತ ಪಿಲಾಲು ಹಿಡಿದು ಕೇದಗಿ ಹಳುವಿನ ಹಳ್ಳದಲ್ಲಿ ಸಂಗ್ಯಾನನ್ನು ನಿಲ್ಲಿಸಿ ಕುಡಗೋಲು, ಕೊಡಲಿಯಿಂದ ಕಡಿದು ಚೂರುಚೂರು ಮಾಡಿ ತಮ್ಮ ಸೇಡನ್ನು ತೀರಿಸಿಕೊಳ್ಳುತ್ತಾರೆ. ಅನಂತರ ತಾವೇ ಪೋಲೀಸ ಕಚೇರಿಗೆ ಹಾಜರಾಗುತ್ತಾರೆ. ಇಲ್ಲಿಗೆ ಕಥೆ ಕೊನೆಗೊಳ್ಳುತ್ತದೆ.

**ಸನ್ನಿವೇಶಗಳು :**

ನಾಟಕದಲ್ಲಿ ಮುಖ್ಯವಾಗಿ ಕ್ರಿಯೆ ಪ್ರಾರಂಭವಾಗುವುದು, ಸಂಗ್ಯಾಬಾಳ್ಯಾ ಗಂಗಾಳನ್ನು ಮುರಡಿಬಸವಣ್ಣನ ಜಾತ್ರೆಯಲ್ಲಿ ಮೊದಲಸಲ ಕಂಡಾಗ. ಗಂಗಾ ಸಹಜ ಚಲುವೆ. ಪರಮ್ಮನ ಜೊತೆ ದೇವಸ್ಥಾನಕ್ಕೆ ಗಂಗಾ ಬಂದಾಗ ಅವಳ ರೂಪ ಕಂಡು ಪೂಜಾರಿಯೂ ಮೋಹಗೊಳ್ಳುತ್ತಾನೆ.

**ಹಿಂದಿನ ಹುಡುಗಿ ನೈಬಣ್ಣಾ**
**ಥೇಟ ಲಿಂಬಿಯ ಹಣ್ಣಾ**
**ನೋಡಿ ಮುಚ್ಯಾವ ಕಣ್ಣಾ**
**ಏ ಎವ್ವಾ ! ಯಾರಅದಿ ಹೇಳ ನೀನಾ ॥**
**ಹುರಿಗೆಜ್ಜಿ ಎತ್ತಿನ್ಹಾಂಗ ಏರಿಬರ್ತಿ ನೈಯ**
**ಮ್ಯಾಲ ನಡಸಣ್ಣ ಕಾಡಿಗಿಗಣ್ಣಾ ।**
**ನಾಗರಬಣ್ಣ । ನೋಡಲಾರ್ಯೊ ಈಕಿ ವರ್ಣಾ**
**ಯಾರದಿ ಹೇಳ ನೀನಾ ।**

ಗಂಗೆಯ ಚಲುವಿಗೆ ಥೇಟ ಲಿಂಬೆಹಣ್ಣಿನ ಹೋಲಿಕೆ ಅವಳ ಉನ್ಮತ್ತ ಯೌವನಕ್ಕೆ ಏರಿಬರುವ ಹುರಿಗೆಜ್ಜಿಹೋರಿ ರಭಸ. ನಡಸಣ್ಣ, ಕಾಡಿಗಿಗಣ್ಣ, ನಾಗರಬಣ್ಣ, ಎಂಬ ಪದಪುಂಜಗಳ ನಾದಗುಣದಿಂದ ಉಂಟಾಗುವ ಸೌಂದರ್ಯದ ಅನುಭವವನ್ನು ಗಮನಿಸಬೇಕು. ಇಂಥ ಚಲುವೆಯನ್ನು ಕಂಡು ಸಂಗ್ಯಾ ಗೆಳೆಯನಿಗೆ ಹೇಳುತ್ತಾನೆ.

ಒಂದ ಹೆಣ್ಣ । ಒಂದ ಹೆಣ್ಣ ಕಂಡಿನೊ ಬಾಳಣ್ಣ
ಊರವ್ರೊಳಗ । ಊರವ್ರೊಳಗ ಇದ್ದಾಂಗೊ ರತಿದೇವೀನ ॥
ನಾಗರ ಹಾವ । ನಾಗರ ಹಾವಿನ್ಹಾಂಗ ನಡಸಣ್ಣ ॥

**ನಡಿನಾಗ । ನಡಿವಾಗ ಇಟ್ಟೇಳೊ ವಡ್ಯಾಣ ।**
**ಹುವ್ವಿನ ಕುಬಸ । ಹುವ್ವಿನ ಕುಬಸ ಇತ್ತಪ್ಪಾ ಎದಿಮ್ಯಾಲ ॥**
**ಡಾಳಿಂಬರಿ । ಡಾಳಿಂಬರಿ ಹಲ್ಲ ಕನ್ನಡಿಗಲ್ಲಾ ॥**

ನಡುವಿಗೆ ವಡ್ಯಾಣ, ಎದಿಮ್ಯಾಲ ಹುವ್ವಿನ ಕುಬಸ, ಡಾಳಿಂಬರ ಹಲ್ಲು, ಕನ್ನಡಿಯಂಥ ಹೊಳಪು ಗಲ್ಲದ ಹುಡಿಗೆಯನ್ನು ಸಂಗ್ಯಾ ಮೋಹಿಸಿ ಕಾಡುತ್ತಾನೆ.

**ಗಂಡನುಳ್ಳ ಬಾಲ್ಯಾರನಾ । ಬಂದ ಕೇಳುವರೇನ**
**ಹರಿಸಿಬಿಟ್ಟ್ಯೆಯೋ ಹೋಗೊ ಜಗತಾನ ॥**
**ಬಿಡೊ ದಾರಿ । ಹುಡುಗಾಟ ತರವಲ್ಲ ॥**
**ಹೊತ್ತ ಏರಿ । ಬಂದೀತೊ ನೆತ್ತಿಮ್ಯಾಲ ॥**

ಎಂದು ಗಂಗೆ ಗರತಿಧರ್ಮ ಹೇಳಿ ಸಂಗ್ಯಾನಿಂದ ತಪ್ಪಿಸಿಕೊಂಡು ಹೋದರೂ ಸಂಗ್ಯಾನಿಗೆ ಯಾವಾಗಲೂ ಗಂಗೆಯದೇ ಚಿಂತೆ, ಸದಾ ಅವಳದೇ ಧ್ಯಾನ.

**ರಾತ್ರಿ ಹಗಲಿ ಬೀಳ ತಾವೊ ಗಂಗಿ ಕನಸಾ**
**ಆದರ ಕೈವಾಸಾ**
**ಕಡಕೊಂಡ ಬಿದ್ದಾಂಗಪ್ಪಾ ಕೈಲಾಸಾ ॥**

ಗಂಗೆ ಸಿಕ್ಕರೆ ಕೈಲಾಸ ಸಿಕ್ಕಂತೆ ಸಂಗ್ಯಾನಿಗೆ. ಬಾಳ್ಯಾನಿಂದ ಹೇಳಿ ಕಳಿಸಿದರೂ ಅವಳು ಸಿಗಲಿಲ್ಲ. ಒಮ್ಮೆ ಅನಿರೀಕ್ಷಿತವಾಗಿ ಗಂಗೆ ತಾನೆ ಹೊರಬೀಳುತ್ತಾಳೆ.

**ಏನಿಬಗಿ ಬೈಲಕ ಬಿದ್ದಿ ಬಾಳ ದಿನಕಾ ।**
**ಹುಣಿವಿ ಚಂದ್ರ ಮೂಡಿಧಾಂಗ ಮರತೀಕಾ**
**ಕಣ್ಣೀಗಿ ದೀಪಹಚ್ಚಿಧಾಂಗ ನಿನ್ನ ಬೆಳಕಾ ॥**
**ಜರದ ಶಲ್ಲೆ ಹಾಸಲೇನ ಪಾದ ಬುಡಕಾ**
**ಇದನೇನ ಸುಡಬೇಕ ।**
**ಹುಡಗಿ ನೀ ಮಾತನಾಡ ಜರಾ ಸೋಕ ।**
**ಬಾಳೆ ಬದುಕು ಜಿಂದಗಾನಿ ಯಾತಕ ಬೇಕ ।**
**ಅವನೇನ ಹುಗಿಬೇಕ**
**ಮಾನಾಪಮಾನ ಎಲ್ಲಾ ಒಂದ ಸಮಕ ॥**

ಹುಣ್ಣಿವಿ ಚಂದ್ರ ಮೂಡಿಧಾಂಗ, ಕಣ್ಣಿಗೆ ಝಗ್ಗನೆ ದೀಪಹಚ್ಚಿಧಾಂಗ, ಕಂಡ ಗಂಗೆಯು ಎದರು ಅವನಿಗೆ ಎಲ್ಲವೂ ನಶ್ವರವಾಗಿ ಕಾಣಿಸುತ್ತದೆ. ಅವಳಿಲ್ಲದ ಬಾಳಿ ಬದುಕು, ಜಿಂದಗಾನಿ ಎಲ್ಲ ವ್ಯರ್ಥವೆನಿಸುತ್ತದೆ. ಜರದ ಶೆಲ್ಲೆಯನ್ನೇ ಹಾಸಿ ಪಾದದ ಬುಡಕ್ಕೆ, ಪ್ರಣಯಭಿಕ್ಷೆಯನ್ನು ಬೇಡುತ್ತಾನೆ. ಅವಳಿಗಾಗಿ ಮಾನಾಪಮಾನ ಒಂದೇ ಎಂಬ ಉನ್ಮಾದದ ಪರಾಕಾಷ್ಠೆಯನ್ನು ಮುಟ್ಟುತ್ತಾನೆ ಸಂಗ್ಯಾ.

ನೀ ಒಲ್ಲೆನೆಂಬೊ ಬಗೆ ಹೇಳ। ನೀ ಯಾವ ದೊಡ್ಡ ಗರತಿ।
ನಾಳಿ ಯಮದೂತರ ಒಯ್ಯ್ಯಾಗ। ಏನ ತಗೊಂಡ
ಹೋಗಲೇ॥ ಈ ಜನಮದಾಗ ಏನತಿ। ಮೂರs ದಿನದ ಸಂತಿ॥

ಎಂದು ತನ್ನ ಜೀವನ ತತ್ವವನ್ನು ಸಾರುತ್ತಾನೆ.

ನನಗೇನ ಗಂಟ ಬಿದ್ದೊ ಸಂಗ್ಯಾ
ನಾ ಅತ್ತೀಮನಿ ಸೊಸಿ ಹರಿಸೀಯೊ ಒಗತಾನಾ।
ನಾಳಿ ಸುಣ್ಣಾ ತಿಂದ ಮಂಗ್ಯಾನಂಗ
ಹಲಕಿಸದೀಯೊ ನೀನಾ॥

ಎಂದು ಎಚ್ಚರಿಸಿದರೂ

ಊರಾಗಿದ್ದ ಬಾಳೇ ಮಾಡ। ಬಿಡುದುಲ್ಲ ಗಂಗಿ ನಿನ್ನಾ।
ನಿನ್ನ ಮ್ಯಾಲ ಹೋಗಲೇ ನನ್ನ ಪ್ರಾಣಾ॥
ಫೇಟ್ ಪಾತರದಕ್ಕಿ ಹಾಂಗ। ಕಾಣಸತಿ
ಮಾತಾಡ ಒಂದ ಸರತಿ
ತೆಕ್ಕಿ ಹಾಯೋ ಹಾಂಗ ನನಗ ಆಗೇತಿ॥
ಕೋಲ್ ಮಿಂಚ ಹೊಡಧಾಂಗಾತ ಏಕಾಏಕಿ।
ಸಿಗವಲ್ಲೆ ಕಟಬೆರಕಿ।
ಎದೀ ಬಾಗಲಾ ದೂಡಿಕ್ಯಾರಿ ಒಳಗಹೊಕ್ಕಿ
ಬೆಳ್ಳೀ ಚಿಕ್ಕಿ

ಎದೀ ಬಾಗಲ ದೂಡಿ ಹೃದಯ ಹೊಕ್ಕ ಅವಳನ್ನು ಕಂಡು ತಡೆಯಲಾರದೆ 'ತೆಕ್ಕಿ ಹಾಯೋ ಹಾಂಗ ನನಗ ಆಗೇತಿ' ಎಂದು ಹೇಳುವಲ್ಲಿ ಅವನ ಕಾಮದ ಕಾತರ ತೆಯ ರಭಸ ಇಡೀ ಮೈಯಾಗಿ ನುಗ್ಗುವುದನ್ನು ನೋಡಬೇಕು.

ಆಗ ಗಂಗೆ :

ಅಲ್ಲೇಳೊ ನಿನ್ನ ರೀತಿ। ಮಾಯಕ ಬಿದ್ದ ಕೆಡತಿ
ದಶಮುಖದ ರಾವಣ। ಒಯ್ದಾನೊ ಸೀತಾನ
ಆತೇನೊ ಏ ಕ್ಯಾಣ ಅವನ ಗತಿ॥
ದುರಪತಿನೆಳದೊಯ್ದಾ। ದುಶ್ಶಾಸನೇನಾದಾ ಹುಚ್ಚಾ ತಿಳಿ॥

ಎಂದು ಬುದ್ಧಿವಾದ ಹೇಳಿದರೂ

ಸಂಗ್ಯಾ :

ದುಂಡಮೋತಿ। ದುಂಡಮೋತಿ ತುಟಿಯು ತೊಂಡಿಯು ಹಣ್ಣಾ
ಬಟ್ಟಮುಲಿಯು। ಬಟ್ಟಮುಲಿಯು ಹಾಲನಗಿ ಹೆಣ್ಣಾ।

ಕೈಯ ಮುಗಿವೆ । ಕೈಯ ಮುಗಿವೆ ಮಾಡ ಗೆಣೆತಾನ ॥
ಕಾಲ ಬೀಳುವೆ । ಕಾಲ ಬೀಳುವೆ ತೋರಿಸ ದಯ ಕರುಣಾ ॥

ಎಂದು ಅಂಗಲಾಚಿ ಬೇಡಿಕೊಳ್ಳುತ್ತಾನೆ. ಅನಂತರ ಪರಮ್ಮನ ಪ್ರಯತ್ನದಿಂದ ಗಂಗಿ ಸಂಗ್ಯಾನನ್ನು ಕೂಡುವುದಕ್ಕೆ ಸಿದ್ಧತೆಯಾಗುತ್ತದೆ.

ಸಂಗ್ಯಾ ನೀವು ತಡವ ಮಾಡೂದ್ಯಾಕ
ಅಂದ ಚೆಂದವ ನೋಡು । ಸಂಗ್ಯಾ ಮೈಗೆ ಗಂಧಾ ಕಸ್ತೂರಿ ತೀಡು ॥
ಈರ್ಯಾನಂಜಿಕೆ ಇಂದ ನಾವು ದೂಡಿ । ಹಾಲ ಹಣ್ಣಿನ್ಹಾಂಗ
ನಾವು ಕೂಡಿಕೂಡಿ । ರಂಗಮಂಚಕ ಹೋಗುಣ ನಡಿ
ಅಲ್ಲಿ ವಿಲಾಸ ಮಾಡೋಣು ಕೂಡಿ ॥
ಹಾಲೀಗಿ ಹಾಕಿದಾಂಗ ಹೆಪ್ಪಾ
ಕಣ್ಣೀಗಿ ಹತ್ತಿಧಾಂಗ ಜಂಪಾ ॥

ಹಾಲು ಹಣ್ಣಿನಂತೆ, ಹಾಲೀಗಿ ಹೆಪ್ಪ ಹಾಕಿದಂತೆ, ಕಣ್ಣಿಗೆ ಜಂಪು ಹತ್ತಿದಂತೆ ಸಂಗ್ಯಾ ಗಂಗಿ ಅಪೂರ್ವ ಆನಂದದಲ್ಲಿ ತೇಲುತ್ತಾರೆ. ಸಂಗ್ಯಾನ ಸಂಗದಲ್ಲಿ ಮೈ ಮರೆತ ಗಂಗೆ 'ಗಂಡನ ಮ್ಯಾಲ ಇಲ್ಲೊ ಎನ್ನ ಕರುಣಾ!' ಎಂದು ಭರವಸೆಯನ್ನು ಕೊಡುತ್ತಾಳೆ. ಹೀಗೆ ಇಬ್ಬರೂ ಪ್ರಣಯೋನ್ಮಾದದ ತುರ್ಯಸ್ಥಿತಿಯಲ್ಲಿದ್ದಾಗ ಬಳ್ಳಾರಿಗೆ ಹೋದ ಈರ್ಯಾ ಮನೆಗೆ ಬರುತ್ತಾನೆ. ಮನೆಯ ಕದ ಮುಚ್ಚಿದೆ. ಊರಲ್ಲಿ ಹೆಂಡತಿಯ ಶೀಲದ ಬಗ್ಗೆ ಗುಜುಗುಜು ಮಾತನಾಡಿಕೊಳ್ಳುತ್ತಿದ್ದಾರೆ.

ಏನಮಾಡತಿದ್ದಾಳಪ್ಪಾ ಗಂಗಿ ಒಳಗ
ಕದ ತಗಿವಾಳೊ ಎನಗ
ಬಂದನಿಂತ ಬಾಳ್ಹೊತ್ತಾತ ಬಾಗಿಲ ಹೊರಗ ॥
ಮಾಳಿಗಿ ಹತ್ತಿ ನೋಡಲೇನ ಕಿಡಿಕ್ಯಾ
ಸಂಶೆ ಬಂದೀತೊ ಎನಗ
ಸಂಗ್ಯಾನ ಸುದ್ದಿ ಮಾತಾಡತಾರೊ ಊರವೊಳಗ

ಅಷ್ಟರಲ್ಲಿ ಗಂಡ ಬಂದ ವಿಷಯ ತಿಳಿದು ದಿಕ್ಕು ತೋಚದಾದ ಗಂಗೆ :

ಅಯ್ಯೊ ಸಂಗ್ಯಾ ಮಾಡಲ್ಹೆಂಗಾ
ಮಾಡಲ್ಹೆಂಗಾ ಈರ್ಯಾ ಬಂದಾನ ಹೊರಗ ॥

ಎಂದು ಗಂಗೆ ಕಳವಳ ಪಡುತ್ತಿದ್ದಂತೆ, ಸಂಗ್ಯಾ "ಹ್ಯಾಂಗ ಮಾಡಲಿ । ಎತ್ತ ಪೋಗಲೆ" ಎಂದಾಗ, ಗಂಗೆ :

ಅಯ್ಯಯ್ಯೋ ಎನ್ನ ಸಂಗ್ಯಾ ಅಂಜಬ್ಯಾಡಿರಿ ನೀವಾ
ಗಚ್ಚಿನ ಬಚ್ಚಲಾಗ ಮುಚ್ಚಿ ಇಡುವೇನೊ ನಿನ್ನಾ

**ಕಪ್ಪು ಕತ್ತಲದೊಳು ಗಪ್ಪ ಮಾಡುವೆ ನಾನಾ**
**ಚಾಪಿಯ ಸುರಳ್ಯಾಗ ಮುಚ್ಚಿ ಇಡುವೆನೊ ನಿನ್ನ ।**

ಎಂದು ಅಭಯ ಕೊಟ್ಟರೂ ಈರ್‍ಯಾನ ಆಟೋಪ ಹೆಚ್ಚಾಗುತ್ತದೆ. ಗಂಗೆ ಕದ ತೆಗೆಯುತ್ತಾಳೆ. ಸಂಗ್ಯಾ ತಪ್ಪಿಸಿಕೊಂಡು ಓಡುತ್ತಾನೆ. ಜರದ ರುಮಾಲು ಓಡುವ ಗಡಿಬಿಡಿಯಲ್ಲಿ ಕೆಳಗೆ ಬೀಳುತ್ತದೆ. ಜರದ ರುಮಾಲು ಗುರುತು ಹಿಡಿದ ಈರ್‍ಯಾ :

**ಈ ಜರಕಟ ರುಮಾಲ ಯಾವ ಚೋದಿಯ ಮಗಂದಾ ।**
**ಆವರ ತಾಯಿ ಹೊಟ್ಟ ತಣ್ಣಗಿತ್ತೊ, ಓಡಿಹ್ವಾದಾ। ನಮ್ಮ ಕೈಯಾಗ**
**ಸಿಕ್ಕಿದರ ಕಡದ ಮಾಡುವೆ ಚೂರಾ ॥**

ಎಂದು ಆರ್ಭಟಿಸಿ, ತಮ್ಮಂದಿರ ಸಮಕ್ಷಮದಲ್ಲಿ ಗಂಗೆಯ ಆಭರಣ ಕಸಿದು ಕೊಂಡು ಉಟ್ಟ ಬಟ್ಟೆಯ ಮೇಲೆ ತವರಿಗೆ ಅಟ್ಟುತ್ತಾನೆ. ಅನಂತರ ಬಾಳ್ಯಾನ ಸಹಾಯದಿಂದ ತಮ್ಮಂದಿರೊಡನೆ ಸಂಗ್ಯಾನನ್ನು ಕೊಲ್ಲುವುದಕ್ಕೆ ಹಳ್ಳದ ಪೊದೆಯಲ್ಲಿ ಕಾಯುತ್ತಾನೆ. ಅಷ್ಟರಲ್ಲಿ ಸಂಗ್ಯಾ ಬಾಳ್ಯಾ ಬರುತ್ತಾರೆ :

**ಹಾ ಗೆಳೆಯಾ ನೀ ನನ್ನ । ಹಾ ಮೈತ್ರಾ ನೀ ಎನ್ನ**
**ಎಲ್ಲಿಗಿ ಕರೆದುಯ್ಯುವಿಯೊ**
**ಊರದಾರಿಯ ಬಿಟ್ಟು । ದೂರ ಬಂದೆವೊ ನಾವಾ**
**ಸುಳಿವಿಲ್ಲ ಯಾರ್‍ಯಾರದಾ ॥**
**ಹಳ್ಳದ ಜರಿ ಹಿಡಿದ**
**ಬಾಳ್ಯಾ ಇತ್ತೆಲ್ಲಿ ಹೊಂಟ**
**ಕಾಳರಾತ್ರಿಯ ಕತ್ತಲಿ ॥**

ಆಗ ಪೊದೆಯಿಂದ ಒಮ್ಮೆಲೆ ಈರ್‍ಯಾ, ಇರಪಾಕ್ಷಿ, ಬಸವಂತ ಅವನ ಮೇಲೆ ಎರಗುತ್ತಾರೆ, ಈರ್‍ಯಾ :

**ತಡವು ಯಾಕೆ ಮುಂಡಿಮಗನ ಚಂಡ ಕೊಯ್ಯುವಾ**
**ಕಾಲಮೀಟ ಸೀಳಿ ಅವನ ಚೆಲ್ಲಿ ಪೋಗುವಾ ।**
**ಇರಪಾಕ್ಷಿ ಬಸವಂತ ಬರ್‍ರೊ ಬೇಗ**
**ಕಲ್ಲ ಒಗದ ಮುರಿರೆಪ್ಪಾ ಕೈಕಾಲ**
**ಕಡಿಯಿರಿರೊ ನೆತ್ತಿಮ್ಯಾಲ**
**ಹ್ವಾದ ಅಬರು ಬಂತೊ ಇಂದು ಕುಶಿಯಾಲಾ ॥**

ಎಂದು ಒಮ್ಮೆಲೆ ಮೂರುಜನ ಸಂಗ್ಯಾನ ಮೇಲೆ ಎರಗಿ, ಕೊಡಲಿ ಕುಪಗೋಲು ಹಿಡಿದು ಸೇಡಿನಿಂದ ರೌದ್ರಕುಣಿತ ಕುಣಿಯುತ್ತ :

ಸಂಗ್ಯಾ ಕೊಬರಿ
ಕುಬಸದಗಂಟ ತಗೀ ತಗಿ ॥
ಸಂಗ್ಯಾ ಗಂಗಿ
ಕರದಾ ಳೊ ಹೀಂಗ ನಡೀ ನಡಿ ॥
ಕಾಲ ಹಿಡದ
ಕೋಲ್ಯಾಗ ಇವನ ಎಳೀ ಎಳಿ ॥
ಒತ್ತಿ ಹಿಡಿದ
ಇವನ ಶಿರಾ ಹರೀ ಹರಿ ।
ಸಂಗ್ಯಾ ಕೊಬರಿ
ಕುಬಸದ ಗಂಟ ತಗೀ ತಗಿ ।

ಎಂದು ಕುಣಿಯುತ್ತಿದ್ದಂತೆ

"ನಿಮ್ಮ ಮೂವರೊಳಗ
ನಾವೊಬ್ಬ ಸಣ್ಣ ತಮ್ಮ
ಕಾಲರ ಬೀಳುವೆನು ಕೈಯುರೆ ಮುಗಿವೆನು ॥*

ಎಂದು ಅಂಗಲಾಚಿದರೂ ಕಡಿದು ತುಂಡುತುಂಡು ಮಾಡಿ ಚೆಲ್ಲಿ, ಕಣ್ಮರೆಯಾಗುತ್ತಾರೆ.

**ಒಂದುಮಾತು :** ನಾಟಕವನ್ನು ಕುರಿತು ಕೊನೆಯಲ್ಲಿ ಒಂದು ಮಾತು ಸ್ಪಷ್ಟಪಡಿಸುವುದು ಅವಶ್ಯವೆನಿಸುತ್ತದೆ. ಇಂದಿಗೂ ಕೆಲವು ಮಡಿವಂತಜನ, 'ಸಂಗ್ಯಾಬಾಳ್ಯಾ' ಒಂದು ಅಶ್ಲೀಲ ನಾಟಕ. ಅದು ಸಮಾಜದ ಕೆಳದರ್ಜೆಜನ ಆಡುವಂಥದು, ನೋಡುವಂಥದು. ಒಂದು ನೀತಿ ಇದೆಯೇ ? ಕಲೆಗಾರಿಕೆ ಇದೆಯೇ? ಇಂಥ ನೀತಿಗೆಟ್ಟ ನಾಟಕ ಆಡುವವರು, ನೋಡುವವರು, ಒಂದು ರೀತಿಯಲ್ಲಿ ತಲೆ ತಿರುಕರೆಂಬರ್ಥದಲ್ಲಿ ಆಡುವಂಥ ಜನ ಇಂದಿಗೂ ಇದ್ದಾರೆ. ಅವರಲ್ಲೇ ಕೆಲವರು ನಾಟಕ ನೋಡಿ, ಸಂತೋಷಪಟ್ಟು ಅಭಿಪ್ರಾಯ ಬದಲಿಸಿಕೊಂಡವರೂ ಇದ್ದಾರೆ. ಅವರ ಅಭಿಪ್ರಾಯಕ್ಕೆ ಎರಡು ಕಾರಣಗಳಿವೆ. ೧. ಮೇಲುನೋಟಕ್ಕೆ ನಾಟಕದಲ್ಲಿ ಕಾಣುವ ಐಂದ್ರಿಕಸ್ಪರ್ಶ. ೨, ಅದನ್ನೇ ಪ್ರಧಾನವಾಗಿ ಮಾಡಿಕೊಂಡು ತಮ್ಮ ಲೈಂಗಿಕ ಪ್ರವೃತ್ತಿಗೆ ನಾಟಕದ ಮುಖಾಂತರ ದಾರಿ ಕಲ್ಪಿಸಿಕೊಂಡು, ಅತಿ ರಂಜಿತವಾಗಿ ಆಡುತ್ತಬಂದ ಕಲಾಪ್ರಜ್ಞೆ ಇಲ್ಲದ ಜನರು.

ಗಂಡನುಳ್ಳ ಬಾಲ್ಯಾರನಾ । ಬಂದಕೇಳುವರೇನ, ಹೋಗೊ ಒಗತಾನ''
ಹರಿಸಿಬಿಟ್ಟೆಯೋ "ಅಲ್ಲೇಳೊ ನಿನ್ನ ರೀತಿ । ಮಾಯುಕ
ಬಿದ್ದ ಕೆಡತಿ, ದಶಮುಖ ರಾವಣ । ಒಯ್ದಾನೊ ಸೀತಾನ

* ಶ್ರೀ ಕಂಬಾರ-ಕುರ್ತಕೋಟಿಯವರ ಸಂಗ್ರಹದಿಂದ ಆಯ್ದುಕೊಂಡ ಪದ್ಯಗಳು.

**ಆತೇನೊ ಏ ಕ್ವಾಣ ಅವನ ಗತಿ । ದುರಪತಿನೆಳದೊಯ್ದಾ ।**
**ದುಶ್ಯಾಸನೇನಾದಾ ಹುಚ್ಚಾ ತಿಳಿ ॥**

ಎಂಬ ಮಾತುಗಳಲ್ಲಿ ನೈತಿಕಮೌಲ್ಯದ ಎಚ್ಚರದ ಧ್ವನಿ ಇದ್ದೇ ಇದೆ. ಆದರೆ ಇಂಥ ಮೌಲ್ಯವನ್ನು ನಂಬಿ ಬಾಳುತ್ತಿದ್ದರೂ, ಸಂಗ್ಯಾ–ಗಂಗೆ, ಈರ್ಯಾರಂಥ ಮುಗ್ಧ ಜೀವಿಗಳ ಬದುಕು, ತಡೆಯಲಾಗದ ಆದಮ್ಯ ಪ್ರವೃತ್ತಿಯ ಸಹಜ ಒತ್ತಡಕ್ಕೆ ಸಿಕ್ಕು ಹೇಗೆ ದಾರುಣವಾಗುತ್ತದೆಂದು ಚಿತ್ರಿಸುವಲ್ಲಿ, ನಾಟಕಕಲೆಯ ದೃಷ್ಟಿಯಿಂದ ಮಹತ್ವದ್ದಾಗಿ ಕಾಣಿಸುತ್ತದೆ. ಈ ನಾಟಕದಲ್ಲಿ ಬರುವ ದುರಂತ ವಿನ್ಯಾಸ ರುದ್ರ ನಾಟಕಗಳಷ್ಟು ಅದ್ಭುತವಲ್ಲದಿದ್ದರೂ ಒಂದು ಬಗೆಯ ಭಯದ ವಾತಾವರಣವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗುತ್ತದ. ನಾಟಕವನ್ನು ಬರೆದ ನಾಟಕಕಾರ ಈ ಬಗೆಯ ಕಲಾಪ್ರಜ್ಞೆಯಿಂದ ನಾಟಕ ರಚನೆಗೆ ತೊಡಗಿದನೋ ಹೇಗೆಂದು ಹೇಳುವುದು ಕಷ್ಟ. ಆದರೆ ಅವನು ಬದುಕಿದ ಸಮಾಜದಲ್ಲಿ ಈ ಘಟನೆ ಅದೇ ಆಗ ನಡೆದು, ಭಾವನೆಗಳು ಇನ್ನೂ ಜನತೆಯಲ್ಲಿ ಜೀವಂತವಾಗಿದಾಗಲೇ ಅತಿ ಜಾನಪದ ಸಹಜಶೈಲಿಯಲ್ಲಿ ನಾಟಕವನ್ನು ಸೃಷ್ಟಿಮಾಡಿದ್ದಾನೆ. ಮುಖ್ಯವಾಗಿ ನಾಟಕ ಪ್ರಸ್ತುತವಾಗುವುದು, ಅದರ ಬದುಕಿಗೆ ಹತ್ತಿರವಾದ ವಸ್ತುವಿನಿಂದ, ಅದು ಭಾಷೆಯಲ್ಲಿ ಮೈದೋರಿದ ನೈಜತೆಯಿಂದ.

●

# ಪರ್ವಗೀತೆ

ಬಿ. ಎಂ. ರಮೇಶ

ತೆಕ್ಕೆಗೊಗ್ಗದ ಗಾಳಿಯಲ್ಲಿ ರಕ್ತ ಬೀಜಾಸುರನ ತಾಣ
ಮಣ್ಣಿನೊಳಪದರಲ್ಲಿ ಬಿದ್ದ ಬೀಜಕ್ಕೆ ಶಿಖಂಡಿತನ–
ಇದು ನಿಯಮ ?
ಅಣಕವಾದ, ಮುಖವಾಡ, ಕ್ರೌರ್ಯಗಳು ಒತ್ತಿಕ್ಕಿನಷ್ಟು ಉಬ್ಬಿ,
ನೀತರೆ ನೆನಪಾಗಿ, ಬದುಕು ಬೆತ್ತಲೆಯಾಗಿ ಬೆನ್ನಟ್ಟಿ
ಶೂನ್ಯದಂಚಿನಲ್ಲಿ
—ಅಯ್ಯೋ ನಾನು ದೇಹಿ
ಇದ್ದಷ್ಟು ಕಾಲ ಕೊಠಡಿಯ ಏಕಾಕಿತನದಲ್ಲಿ
ಅಂಗತ್ತಲಾಗಿ, ಬೋರಲಾಗಿ, ಮಗ್ಗುಲಾಗಿ
ಹೇಗೆಂದರೆ ಹಾಗೆ ಹೊರಳಿ ತುಯ್ಯಬೇಕೆಂದರೆ
ಸುತ್ತ ಮುತ್ತು ಭಯ ಬಾಂಬುದಾಳಿ
ಯ ನಟ್ಟಿರುಳುಗಳು.
ಕಣ್ಣು ಕತ್ತಲೆಯ ಭಾರದಲ್ಲಿ
ನನ್ನ ನಾನು ಹೊತ್ತಾಗ ಕಾಲಡಿಯಲ್ಲಿ
ಕಾಣಸಿಗುವುದು ಅರೆ ಸುಟ್ಟ ರಾಶಿ ನಕ್ಷತ್ರಗಳು.
ಭೂಮಿಯಂಚಿನ ಆ ಅಪ್ಪಟ ಮೌನವ
ಮಂಜಿನ ಕಂದಕಗಳಲ್ಲಿ ಹೆಪ್ಪುಗಟ್ಟಿ ಬಿಕ್ಕಿರದೆ
ಬಿದ್ದ ಅತೃಪ್ತಿ, ಕನಸುಗಳು ಕೊನೆಗೂ ಕೊನರಿಸಿಯಾವೇ
ಬೇರೂ ಸಹ ಕೊಳೆತು ಕುಸಿಯುತ್ತಿರುವ ಬದುಕ ?

●

# ಕೃಷ್ಣ ಚರಿತ

ಎಚ್. ಜಿ. ಲೋಕೂರ

ನಾವು ದೇವನೆಂದು ನಂಬಿದ ಕೃಷ್ಣನ ಚಾರಿತ್ರಿಕತೆಯನ್ನು ಪ್ರಶ್ನಿಸುವುದೂ ಅಪರಾಧವೆನಿಸುವ ಪರಂಪರೆಯಲ್ಲಿ, ಅವನು ಕಳ್ಳ– ಕಾಮಿ – ಕಪಟಿ ಎಂಬ ತಪ್ಪು ದೃಷ್ಟಿಯನ್ನು ತಂದುಕೊಂಡಿರುವುದು ಚರಿತ್ರೆಯ ಚೋದ್ಯವಲ್ಲವೇ ? ಆತ ಚಾರಿತ್ರಿಕನಾದರೂ ನಮಗೆ ಚರಿತ್ರೆಯ ವಿವರ ಸಿಗುವ ಬುದ್ಧನ ಕಾಲಕ್ಕಿಂತ ಪೂರ್ವದವನಾಗಿ, ಪೌರಾಣಿಕಕಲ್ಪನೆಗಳಿಂದಾವೃತನಾಗಿದ್ದಾನೆ ( ರಾಮಾಯಣ – ಭಾರತಗಳೂ ಚರಿತ್ರೆಯ ಚೌಕಟ್ಟಿನಲ್ಲಿ ಕಲ್ಪಿಸಿದ ಕಾವ್ಯಚಿತ್ರ ). ಪುರಾಣಪುರುಷನೆನಿಸಿ ತನ್ನ ಪೂರ್ವಾವತಾರಗಳಲ್ಲಿ ಕ್ರಮವಾದ ವಿಕಾಸದೋರುತ್ತ, ರಾಮಾವತಾರದಲ್ಲಿ ಪರಾರ್ಥಕ್ಕಾಗಿ ಸ್ವಾರ್ಥತ್ಯಾಗಗೈದು ಹೆಚ್ಚು ಮಾನುಷಗುಣ ಕಾಣಿಸಿದರೂ, ಗೋ – ಗೋಪಿಯರಿಗೂ ನಿಲುಕಿ, ಕಾಮಾದಿ ದೋಷ ಪ್ರಸಕ್ತಿಯೊದಗಿದಾಗ ಮನುಷ್ಯ ನಡೆದುಕೊಳ್ಳಬೇಕಾದ್ದಕ್ಕೆ ಆದರ್ಶ ಹಾಕಿಕೊಟ್ಟು, ಸತ್ಯ– ನ್ಯಾಯ – ಧರ್ಮಗಳಿಗೆ ಹೋರಾಡದಿರುವುದೂ ಅಧರ್ಮವೆಂದು ನಡೆದು ತೋರಿಸಿದ ಕರ್ಮಯೋಗಿ, ಶ್ರೀಕೃಷ್ಣನೇ ಸರಿ. ಆದ್ದರಿಂದ ಮಿಕ್ಕವು ಅಂಶ (ಕಲ) ಅವತಾರಗಳೆನಿಸಿ, ಭಾಗವತವು ‘ ಕೃಷ್ಣಸ್ತು ಭಗವಾನ್ ಸ್ವಯಂ ’ ( ಎಂದರೆ ಪೂರ್ಣಾವತಾರಿ ) ಎನ್ನುವಂತಾಗಿದೆ.

ಕಾಲಮಾನದಲ್ಲಿ ಹಿಂದಿನ ಕೃತಿಗಳು ಅವನನ್ನು ಆದರ್ಶಮಹಾಪುರುಷನೆಂದೂ ಈಚಿನವು ಅದ್ಭುತ ಪವಾಡಗಳ ಪುರುಷೋತ್ತಮನೆಂದೂ ಚಿತ್ರಿಸಿವೆ. ಋಜುವಾತನ್ನಪೇಕ್ಷಿಸುವ ಪವಾಡಗಳ ನಂಬಿಕೆ ದೈವಿಕವಾದ್ದರಿಂದ ಚಾರಿತ್ರಿಕವಾಗಿ ಅಲ್ಲಗಳೆಯಬೇಕಿಲ್ಲ. ಆದರೆ ಇವುಗಳಿಂದ ಕವಿಕಲ್ಪನೆ ಕೃಷ್ಣನ ಸುತ್ತ ಕ್ರಮೇಣ ಹೇಗೆ ಕೆಲಸ ಮಾಡಿದೆ ಎಂಬುದನ್ನು ಯಾರಾದರೂ ಸುಲಭವಾಗಿ ತಿಳಿಯಬಹುದು. ಹೀಗೆ ಕೃಷ್ಣತತ್ವದ ಪೋಷಣೆಗೆ ಹಲವು ಕಲ್ಪನೆಯೊದಗುವಲ್ಲಿ, ಅಪ್ರತಿಬೋಧ್ಯವರಿಂದ ಅವನ ಭಗವತ್ ಸ್ವರೂಪವೂ ಮರೆಯಾಗುವಂಥ ವಿರೋಧಾಭಾಸದ ಕಥೆ ಕೆಲವು ಮೂಡಿವೆ. ಈ ಬಂಗಾರದ ಕವಚಗಳನ್ನೋರೆ ಮಾಡಿದರೆ ಅವನ ಸತ್ಯಸ್ವರೂಪದ ಸೌಂದರ್ಯದರ್ಶನವಾಗಿ ಆನಂದವೆನಿಸುತ್ತದೆ.

ವಿಷ್ಣುಪುರಾಣದ ೫ನೆಯ ಅಂಶದ ಕೊನೆಗೆ ಕೃಷ್ಣನು ದಿವಕ್ಕೆ ಹೋದಂದು ಕಲಿಯು ನೆಲವನಪ್ಪುವ ಧೈರ್ಯ ಮಾಡಿದನೆಂಬ ನುಡಿ ( ೩೫, ೩೬ ) ಇದ್ದು. ಅದರಿಂದ

ಕೃಷ್ಣನು ಕ್ರಿ.ಪೂ.ಸು. ೩೧೦೧ ರ ಹಿಂದಿನವನೆನಿಸಿದರೂ ವಾಸ್ತವಿಕವೆನಿಸದು, ಏಕೆಂದರೆ ಕಲಿಯುಗದಲ್ಲಿಯೂ ಕಲ್ಕಿ ಅವತರಿಸುವವನೇ. ಅಲ್ಲದೆ ಇದೇ ಗ್ರಂಥ ಭಾಗವು ಪರೀಕ್ಷಿತನ ಕಾಲಕ್ಕೆ ಕಲಿಯು ೧೨೦೦ ವರ್ಷಗಳಾಗಿದ್ದುವೆಂಬಲ್ಲಿ ( ಪಾರೀಕ್ಷಿತೇ ಕಾಲೇ ಕಲಿಃ ದ್ವಾದಶಾಬ್ದ ಶತಾತ್ಮಕಃ ॥ ೩೪ ॥ ) ಕ್ರಿ.ಪೂ.ಸು. ೧೯೦೧ ಆಗುತ್ತದೆ : ಮತ್ತು ಪರೀಕ್ಷಿತನ ಹುಟ್ಟು ಹಾಗೂ ನಂದಮೌರ್ಯನ ಅಭಿಷೇಕಗಳ ನಡುವೆ ೧೫೦೦ ವರುಷಗಳ ಅಂತರವೆಂಬ ಉಕ್ತಿ ( ೩೪ ) ಐತಿಹಾಸಿಕವೆನಿಸಿ, ಕೃಷ್ಣನು ಕ್ರಿ.ಪೂ.ಸು. ೧೯೧೫ ರ ಮೊದಲಿನವನಾಗುತ್ತಾನೆ. ಆ ವೇಳೆಗೆ ರಚಿತವಾದ ಅಥರ್ವವೇದದಲ್ಲಿ ಕೃಷ್ಣಕೇಶಿ ರಕ್ಕಸನನ್ನು ಕೊಂದ ವಸುದೇವನಂದನ ಕೃಷ್ಣನ ಉಲ್ಲೇಖವಿದೆ ( ೮. ೮೫. ೩-೪ ). ಛಾಂದೋಗ್ಯೋಪನಿಷತ್ತಿನಲ್ಲಿ ಘೋರ ಆಂಗೀರಸನು ಶಿಷ್ಯನಾದ ದೇವಕೀ ಪುತ್ರನಿಗೆ ‘ ಅಚ್ಯುತಮಸಿ ’ ( ೪.೩ ,೯೮ ) ಎಂದಿರುವನು. ಪಾಣಿನಿಯ ಸೂತ್ರದಲ್ಲಿ ವಾಸುದೇವಾರ್ಜುನರ ಹೆಸರು ಪೂಜ್ಯವಾಗಿದ್ದು ( ೩. ೧೭–೬ ). ಮಹಾಭಾರತ–ಪಾಂಡವರ ಹೆಸರೂ ಇರುವುದರಿಂದ ಕ್ರಿ.ಪೂ. ೫ ನೆಯ ಶತಮಾನದ ಒಂದೆಯೇ ಮಹಾಭಾರತವು ರಚಿತವಾಗಿ ಕೃಷ್ಣಚರಿತವನ್ನು ಚಿತ್ರಿಸಿತ್ತು. ಕ್ರಿ.ಪೂ. ೩ ನೆಯ ಶತಕದ ಹಥಿಥಿ ಬಾಡ ಶಾಸನ, ೨ ನೆಯ ಶತಕದ ಬೇಸನಗರ ಶಾಸನಗಳಲ್ಲಿ ಕುಶಾನ ರಾಜನೂ ಶುಂಗರಾಜನಲ್ಲಿದ್ದ ಗ್ರೀಕ್ ರಾಯಭಾರಿ ಹಿಲಿಯಾಡೋರಸನೂ ತಮ್ಮನ್ನು ‘ ಭಾಗವತ’ರೆಂದುಕೊಂಡು ವಾಸುದೇವನಿಗೆ ಗರುಡಗಂಬ ನಿಲ್ಲಿಸಿದರೆಂದಿದೆ : ಅಲೆಗ್ಝಾಂಡರನೊಡನೆ ಬಂದ ಮೆಗಸ್ತನಿಸ್ ಕೂಡ ಈ ಪಂಥದ ಪ್ರಸ್ತಾಪವೆತ್ತಿದ್ದಕ್ಕೆ ೧ ನೆಯ ಶತಮಾನದ ಘೋಸುಂಡಿ – ನಾನಾಘಾಟ್ ಶಾಸನಗಳು ಪೋಷಕವಾಗಿವೆ. ಅಲ್ಲದೆ ( ಋಗ್ವೇದದ ೧. ೨೨. ೧೮ ರಲ್ಲಿಯಂತೆ ) ಮೇಘದೂತವು ವಿಷ್ಣುವಿನ ಗೋಪವೇಷವನ್ನೂ ಮೃಚ್ಛಕಟಿಕದ ಶಕಾರನು ವಾಸುದೇವನಂಥ ತನ್ನ ಪ್ರೀತ್ಯಾವರ್ತನೆಯನ್ನೂ ತಿಳಿಸುವಲ್ಲಿ ಕೃಷ್ಣಚರಿತೆ ಸಾಹಿತ್ಯಿಕವಾಗತೊಡಗಿತು.

ಜೈನ ಬೌದ್ಧ ಸಾಹಿತ್ಯದಲ್ಲಿ ಕೃಷ್ಣನನ್ನು ಮಾನುಷವಾಗಿಯೇ ಪರಿಭಾವಿಸಿರುವ ಪಕ್ಷ ಪಂಥದಲ್ಲಿ ಸಾಕ್ಷಿಯಿದೆ. ಆದರೆ ವೈದಿಕಮತದವರು ಮಾತ್ರ ಅವನು ಅವತಾರಿಯಾದ್ದರಿಂದ ಅಲೌಕಿಕವಾಗಿ ನಡೆದುಕೊಂಡಂತೆ ಕಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಲೋಕವಾರ್ತೆಗಳಿಂದ ಸಂಕಲಿತವಾದ ಮಹಾಭಾರತವು ಮೂಲತಃ ಇತಿಹಾಸ ಹಾಗೂ ಸ್ಮೃತಿಯಲ್ಲಿ ಕಾವ್ಯವೆನಿಸಿದ್ದು. ಸಾವಿರ ವರುಷದ ತನ್ನ ಬೆಳವಣಿಗೆಯಲ್ಲೇ ಕೃಷ್ಣನನ್ನು ದಿವ್ಯಪುರುಷನನ್ನಾಗಿಸಿದೆ. ಅವನ ವಿಷಯವನ್ನು ತಿಳಿಸುವ ಮುಂದಿನ ಮುಖ್ಯ ಗ್ರಂಥಗಳೆಂದರೆ, ಕಾಲಕ್ರಮದಲ್ಲಿ ವಿಷ್ಣುಪುರಾಣ – ಹರಿವಂಶ ( ಇದು ಭಾರತದಲ್ಲಿ ಕೃಷ್ಣಕಥೆ ಪೂರ್ಣ ಬಾರದ್ದರಿಂದ ಪೂರಕವೆನಿಸಿದ ಖಿಲಪರ್ವ ) ಹಾಗೂ ಭಾಗವತ. ಇವುಗಳಲ್ಲಿ ಕೊನೆಯದು ಭಕ್ತಿಪೂರ್ಣವಾಗಿ ಕೃಷ್ಣನ ಅಂತರಂಗದ ಜೀವನವನ್ನು ಸುಂದರವಾದ ಉತ್ಪ್ರೇಕ್ಷೆಗಳಿಂದ ಶೃಂಗರಿಸಿ ಕಾವ್ಯದಂತೆ ವರ್ಣಿಸಿದೆ.

## ೨

ಮಧುರೆಯ ಯಾದವಕುಲದ ವೃಷ್ಣಿಸಂತತಿಯಲ್ಲಿ, ಕ್ರೂರ ಕಂಸನಿಂದ ಸೆರೆಗೊಂಡ ವಾಸುದೇವ ದೇವಕಿಯರ ಬಯಕೆ, ಕೃಷ್ಣನನ್ನು ಅಷ್ಟಮಸುತನಾಗಿ ಅವತರಿಸಿಕೊಂಡಿತ್ತು. ಶ್ರಾವಣ ಬಹುಳ ಅಷ್ಟಮಿಯ ಮಳೆ ಮೋಡಗಳ ಆ ನಟ್ಟಿರುಳು ಗಳಿಗೆ ಅರ್ಥಪೂರ್ಣ ಆವರಣವನ್ನು ಕಲ್ಪಿಸಿಕೊಂಡಿತ್ತು. ಎಲ್ಲರೂ ನಿದ್ರಾವಶರಾಗಿರುತ್ತ ಅವತರಿಸಿದ ಮಗುವನ್ನು ಬಂಧನ ಕಳೆದ ವಸುದೇವ, ಗೋಕುಲಕ್ಕೆ ಸಾಗಿಸಿ ನಂಟನಾಗಿದ್ದ ನಂದನ ಮನೆಯಲ್ಲಿರಿಸಿ. ಯಶೋದೆಯ ಹೆಣ್ಣು ಮಗುವನ್ನು ಬದಲಿಸಿಕೊಂಡು ಬಂದ. ಕಂಸಭಯದಿಂದ ಗೋಕುಲದಲ್ಲಿರಿಸಿದ್ದ ಅವನ ಮೊದಲ ಹೆಂಡತಿ ರೋಹಿಣಿಯಲ್ಲಿ ಹುಟ್ಟಿದ್ದ ಬಲರಾಮನಾಗಲೇ ಬೆಳೆಯುತ್ತಿದ್ದ. ಅಲ್ಲಿಂದ ಕೃಷ್ಣನೂ ಗೋಕುಲದಲ್ಲಿದ್ದುದನ್ನರಿತ ಕಂಸ, ಹಲವು ಹಂಚಿಕೆಗಳಿಂದ ಅವನನ್ನು ಕೊಲಿಸಲೆಳಸಿದ. ಇದರಿಂದ ಶಕಟ – ತೃಣಾವರ್ತ ಮೊದಲಾದ ಹಲವಾರು ರಕ್ಕಸ ರೂಪಗಳನ್ನು ಕೃಷ್ಣ ನಾಶಪಡಿಸಿದ ಕಥೆ ಕಲ್ಪಿತವಾದುದು. ನಂದನು ಅಂಜಿ ತನ್ನ ಬಿಡಾರವನ್ನೇ ಬೃಂದಾವನಕ್ಕೆ ಬದಲಿಸಿದ. ಯಮುನೆಯ ಮಡುವಿನಲ್ಲಿದ್ದ ಕಾಳಿಂಗನಿಗೆ ವಿಷ್ಣುಪುರಾಣದಲ್ಲಿ ತಾಪತ್ರಯದಂತಿದ್ದ ೩ ಹೆಡೆ, ಹರಿವಂಶದಲ್ಲಿ ಪಂಚೇಂದ್ರಿಯಗಳಂತೆ ೫ ಆಗಿ, ಭಾಗವತದಲ್ಲಿ ದುರ್ವಿಷಯಸಹಸ್ರದಂತೆ ೧೦೦೦ ಆಗಿವೆ; ಅವನನ್ನು ಕೃಷ್ಣ ಮರ್ದಿಸಿದ್ದೂ ಅಭಯ ರೂಪಕವೆನಿಸಿದೆ. ಸಾಂಪ್ರದಾಯಿಕ ಇಂದ್ರಪೂಜೆಯನ್ನು ತಡೆದು ಬೆಟ್ಟವನ್ನು ಪೂಜಿಸಲು ಸುರಿದ ಮಳೆಗೆ ೭ ದಿನ ಗೋವರ್ಧನವೆತ್ತಿ ಹಿಡಿದದ್ದೂ ಸಾಂಕೇತಿಕ ಕಥೆ; ಯಾವುದರ ಪೂಜೆಯಾದರೇನು, ಬೇಸಾಯದ ಬಡಬಗ್ಗರೂ ದನಕರುಗಳೂ ಸದಾ ಸುಖವಾಗಿರಬೇಕೆಂಬ ಸಮದೃಷ್ಟಿಯವ ಕೃಷ್ಣ (ಸರ್ವಜೀವ ಹಿತೇ ರತಃ). ಅಂತೆಯೇ ಗೋಪಿಜನಪ್ರಿಯನಾದರೂ ಅವನು ಅವರು ಬಚ್ಚಿಟ್ಟ ಹಾಲು, ಮೊಸರು, ಬೆಣ್ಣೆ ಕದ್ದು ಗೆಳೆಯರಿಗೂ ಬೆಕ್ಕು – ಕೋತಿಗಳಿಗೂ ಹಂಚುತ್ತಿದ್ದ. ಬಾಯಲ್ಲಿ ಬ್ರಹ್ಮಾಂಡ ತೋರಬಲ್ಲವನ ಈ ಕಾರ್ಯವನ್ನು ಚೌರ್ಯವೆನ್ನಬಹುದೇ ? ಗೋಪಿಯರು ಅವನನ್ನು ಹಿಡಿದು 'ಛೀ ಕಳ್ಳಾ' ಎಂದರೆ, 'ನೀವೇ ಕಳ್ಳರು. ನಾನೇ ಮನೆಯವ' ಎಂದು ನಗಿಸುವಾತ ತನ್ನದನ್ನು ತಾ ಕೊಳುವ: ಅವನಿಂದ ಯಾವುದನ್ನೂ ಬಚ್ಚಿಡಬಲ್ಲೆವೆಂದ ಗೋಪಿಯರದೇ ತಪ್ಪಲ್ಲವೇ ? ಈ ಭಾಗವತೋಕ್ತ ಬಾಲಲೀಲೆಯು ತುಂಟಾಟ ಕೃಷ್ಣನನ್ನು ಭಗವಂತನೆಂದೇ ಬಗೆದಿರುವುದರಿಂದ ಅವನು ಕಳ್ಳನೆನ್ನಲು ನಮಗಧಿಕಾರವಿಲ್ಲ, ಬರಿ ಮಗುವೆಂದೆಣಿಸಿದರೂ ಆಗಿನ ಅಜ್ಞಾನಕ್ಕೆ ಕಳವು ಅಪರಾಧವಲ್ಲ. ಬಾಲ್ಯ ಸಹಜ ಲೀಲೆಗಳನ್ನು ಪರಿಣಾಮಕರ ನಿರೂಪಣೆಗೆ ಕವಿ ಉತ್ಪ್ರೇಕ್ಷಿಸಿದ್ದಾನೆ. ಅಲ್ಲವೇ?

ಈ ಸಂದರ್ಭದಲ್ಲಿ ಕಲ್ಪಿತವಾದ ಗೋಪಿಯರ ವಸ್ತ್ರಾಪಹರಣವು ರೂಪಕ ವೃತ್ತಾಂತವಾಗಿದೆ. ಕೃಷ್ಣನ ಕೊಳಲಗಾನಕ್ಕೆ ಗೊಲ್ಲ ಮಡದಿಯರು ಮನಸೋತಿದ್ದರೆಂದು ಭಾಗವತವು ರಾಸಕ್ಕೆ ಮೊದಲೇ ಭೂಮಿಕೆ ಹಾಕಿದೆ ( ೧೦ . ೨೧ ). ಕಾತ್ಯಾಯನಿ

ಯನ್ನು ಕುರಿತು ವ್ರತ ಮಾಡಿದ ಅವರು 'ನಂದಗೋಪಸುತಂ ದೇವಿ ಪತಿಂ ಮೇ ಕುರು ತೇ ನಮಃ' (೨೨-೪) ಎಂದು ಬೇಡಿಕೊಂಡಿದ್ದರು. ವ್ರತದ ಕೊನೆಯ ದಿನವೂ ಬೆಳಿಗ್ಗೆ ನದಿಗಿಳಿದಾಗ ಅಲ್ಲಿಗೈತಂದ ಕೃಷ್ಣ ಅವರ ಬಟ್ಟೆಗಳನ್ನೆತ್ತಿಕೊಂಡು ಮರವೇರಿ ನಗತೊಡಗಿದ. ಹುಡುಗಿಯರು ನಾಚಿ ತಲೆವಾಗಿ ಬಟ್ಟೆ ಬೇಡಿದರು, ಕೊಡದಿದ್ದರೆ ನಂದನಿಗೊರೆವೆವೆಂದರು. ' ನೀರಿಂದೇಳದವರು ನಂದನೆಡೆ ಹೋಗುವಿರಾ ? ವ್ರತಹಿಡಿದು ಬರಿಮೈಯಲ್ಲಿ ಮಿಾವ ನಿಮ್ಮ ಪಾಪ ಪರಿಹಾರವಾಗಲು ಕೈಮುಗಿದು ಬನ್ನಿ ' ಎಂದವನಿಗೆ. ಅವರು ಒಂದೊಂದೇ ಕೈ ಎತ್ತಿ ಇಬ್ಬಿಬ್ಬರು ಕೂಡಿಸಿದರು. ' ಒಕ್ಕೈ ನಮನ ಪಾಪಕರ, ಅದು ಛೇದ್ಯವೆನ್ನುತ್ತದೆ ಶಾಸ್ತ್ರ ' ಎಂದೊಡನೆ ಎರಡೂ ಕೈ ಜೋಡಿಸಿ ಪೂರ್ಣ ಶರಣರಾದರು. ಯಾರೂ ನೋಡರೆಂದು ನಾಚಿಕೆಗೆಟ್ಟು ನಡೆದವರೂ ' ನೈವ ಕಿಂಚಿತ್ ಪರೋಕ್ಷಂ ತೇ ಪ್ರತ್ಯಕ್ಷೋಽಸಿ ನ ಕಸ್ಯಚಿತ್' ಎಂಬಂಥ ದೈವಸಾಕ್ಷಿಯನ್ನರಿತು ಶರಣಾಗಬೇಕಲ್ಲವೇ ? ' ಎಲ್ಲ ಧರ್ಮಗಳನುಳಿದು ನನಗೆ ಶರಣಾಗು ' ಎಂಬ ಗೀತಾಚಾರ್ಯನೀಗ. ದೇಹಭಾನದ ಉಪಾಧಿಯನ್ನೇ ಕಳೆದುಕೊಂಡು ಮಾನ – ಪ್ರಾಣಗಳನ್ನರ್ಪಿಸಿದ ಗೋಪಿಯರಿಗೆ ಬಟ್ಟೆಗಳನ್ನಿತ್ತು, ವ್ರತದ ಪ್ರಕಾರ ಅವರಿಚ್ಛೆಯನ್ನು ಪೂರೈಸುವಂತೆ ಹೇಳಿದ : " ನನ್ನಲ್ಲಿ ಮನಸ್ಸಿಟ್ಟವರ ಆಶೆ ಕಾಮಕ್ಕೆ ಕಾರಣವಾಗದೆ. ಹುರಿದ ಬೇಯಿಸಿದ ಬೀಜದಂತಾಗಿ ಮೊಳಕೆಯೊಡೆಯದಿರುತ್ತದೆ —

ನ ಮಯ್ಯಾವೇಶಿತಧಿಯಾಂ ಕಾಮಃ ಕಾಮಾಯ ಕಲ್ಪತೇ ।
ಭರ್ಜಿತಾಃ ಕ್ವಥಿತಾ ಧಾನಾಃ ಪ್ರಾಯೋ ಬೀಜಾಯ ನೇಷ್ಯತೇ ॥ ೨೬ ॥

ನನ್ನ ಬಗೆಗಿನ ಕಾಮ, ಬರಿ ದೈಹಿಕಸುಖವೀಯದೆ ಇತರ ಕಾಮಗಳನ್ನಳಿಸಿ ಪರಮ ಸುಖವೀವುದು. ಈ ಶರದ್ರಾತ್ರಿಗಳಲ್ಲಿ ನನ್ನ ಸಹವಾಸ ಪಡೆವಿರಿ. " ಹೀಗೆ ಭಕ್ತಿಯೋಗಕ್ಕೆ ಅಧಿಕಾರಿಯಾದ ಅವರು ಸಾಧನಗೈದು ಪರಮಪತಿಯನ್ನು ಪಡೆಯಲು ಸಿದ್ಧರೆನಿಸಿದರು.

ಇವಕ್ಕಿಂತ ಅದ್ಭುತವೂ ವಿವಾದ್ಯವೂ ಆದುದು ಗೋಪಿಯರೊಡನೆಯ ರಾಸ. ಭಾಗವತವು ಕಲ್ಪಿಸಿದ ರಾಸ. ಕೃಷ್ಣ ಗೋಪಿಯರನ್ನು ಚಾರಿತ್ರಿಕವಾಗಿ ಬಗೆದರೆ ಆಗಿನ ಆಭೀರರಲ್ಲಿದು ಇಂದಿನ ಪಾಶ್ಚಾತ್ಯರಲ್ಲಿರುವಂತೆ ಸಹಜಕ್ರೀಡೆಯಾಗಿತ್ತೆಂದರಿಯಬೇಕು. ಪುರಾಣಕಾವ್ಯಗಳಲ್ಲಾದರೆ ಅವರು ದಿವ್ಯದೇಹಿಗಳೆಂದೇ ಗುರುತಿಸಿದ ಚಿತ್ರಣ ಎಲ್ಲೆಲ್ಲಿ ಹೇಗೆ ಬೆಳೆದುಬಂದಿರುವುದೆಂಬುದನ್ನು ಸರಿಯಾಗಿ ಗ್ರಹಿಸಿ ವಿಮರ್ಶಿಸಬೇಕು. ಪೂರ್ಣದೃಷ್ಟಿಯ ಸಹೃದಯರಾಗಿ (ಭಾವಯಿತ್ರೀ ಪ್ರತಿಭೆಯ ಬಲದಿಂದ) ಏಕೆಂದರೆ ಮನುಜ ದೃಷ್ಟಿಗೆ ತಪ್ಪೆನಿಸಿದ್ದು ದೈವೀದೃಷ್ಟಿಗೆ ಸರಿಹೋಗುವುದು.

ಮಹಾಭಾರತದಲ್ಲಂತೂ ರಾಸಕ್ರೀಡೆಯ ಪ್ರಸಂಗವಿಲ್ಲ: ಇದ್ದರೆ ಶಿಶುಪಾಲನು ಕೃಷ್ಣನ ನಿಂದೆಯಲ್ಲಿ ಅದನ್ನು ಖಂಡಿತ ಬಳಸುತ್ತಿದ್ದ ( ಭಾರತದಲ್ಲಿ ಧರ್ಮಾರ್ಥ

ಮೋಕ್ಷಗಳಷ್ಟು ಕಾಮಭಾಗದ ಚಿತ್ರಣವಿಲ್ಲ). ವಿಷ್ಣುಪುರಾಣದಲ್ಲಿ (ಪಂಚಮಾಂಶ ೧೩: ೧೪–೬೧) ಗೋಪಿಯರ ಭಕ್ತಿಯೋಗವನ್ನಾಧರಿಸಿದಂತೆ ಈ ಕ್ರೀಡೆಯು ಪವಿತ್ರ ಭಾವದಲ್ಲಿದ್ದರೆ, ಹರಿವಂಶದಲ್ಲಿ (ವಿಷ್ಣುಪರ್ವ–೨೨ : ೨೧ ಪದ್ಯಗಳ) ಈ ಸಂಕ್ಷಿಪ್ತ ಭಾಗಕ್ಕೆ ತುಸು ವಿಲಾಸಭಾವ ಸೇರಿದೆ: ಭಾಗವತದಲ್ಲಿ (೧೦ : ಪೂರ್ವಾರ್ಧ, ೨೯-೩೩ ರಾಸಪಂಚಾಧ್ಯಾಯ) ಇದು ವಿಷ್ಣುಪುರಾಣದ ತಡಿಕೆಯ ಮೇಲೆ ವಿವರಗೊಂಡ ಶೃಂಗಾರವಾದರೂ ಗಂಭೀರ ಭಕ್ತಿತತ್ವವನ್ನು ಕಾವ್ಯಸಂಕೇತವಾಗಿ ಹೊಮ್ಮಿಸಿದೆ. ಆದರೆ ತರುವಾಯದ ಬ್ರಹ್ಮವೈವರ್ತಪುರಾಣ ಹಾಗೂ ಗೀತಗೋವಿಂದಗಳಲ್ಲಿ ಭಕ್ತಿ ಗೀತ ತತ್ಸಾಧಕವಾದ ಶೃಂಗಾರವು [ ಮನವು ಕರಗಿ (ಕರುಣ) ಲೌಕಿಕ ವಿಷಯದೆಡೆ ಹರಿದರೆ ಶೃಂಗಾರ. ಅಲೌಕಿಕದೆಡೆ ಹರಿದರೆ ಭಕ್ತಿ: ಒಂದು ಪ್ರಕೃತಿ, ಇನ್ನೊಂದು ಸಂಸ್ಕೃತಿ. ಶೃಂಗಾರದ ಆರ್ತತೆ ಭಕ್ತಿಯತ್ತ ತಿರುಗಿಸುತ್ತದೆ. ದೈಹಿಕಶಕ್ತಿ ಕುರುಡಾದರೂ ಅನಿರ್ದೇಶ್ಯವಪ್ರವಿಸತ್ತ ವಿಚಾರಪೂರ್ವಕ ಶ್ರದ್ಧೆಯಿಂದ ತಿರುಗಿ ಭಕ್ತಿ ಎನಿಸುತ್ತದೆ. ಇಂತು ಭಕ್ತಿಗೆ ಶಕ್ತಿ ಪೂರ್ವದ ಮೆಟ್ಟಿಲು. ಈ ಲೋಕಸಾಧನದ ಮೂಲಕವೇ ಬ್ರಹ್ಮಪ್ರಾಪ್ತಿ. ಮಧುರ ಸಂಸ್ಕಾರಕಕಾಮವೂ ಸೇವ್ಯಯೋಗ ] ಮುಖ್ಯವೆನಿಸುತ್ತ ಹೋಗಿ ಕೃಷ್ಣನು ಜಾರನೆನಿಸುವಂಥ ಕಥೆಗಳಿಗೆ ಎಡೆಯಾಯಿತೇನೋ ಎನಿಸುತ್ತದೆ. (ಜಾರ ಚೋರತ್ವದಾರೋಪ ಸಂತೋಷದ ನಿಂದಾಸ್ತುತಿರೂಪದಲ್ಲಿದ್ದರೂ ತಪ್ಪು ಅರ್ಥಗ್ರಹಣಕ್ಕೆಡೆಗೊಡಬಾರದಲ್ಲವೇ ?) ಆದ್ದರಿಂದ ಈ ಸನ್ನಿವೇಶವನ್ನು ತೌಲನಿಕವಾಗಿ ವಿವರವಲ್ಲಿ ಪರಿಶೀಲಿಸುವುದಗತ್ಯ.

## ೩

ವಿಷ್ಣುಪುರಾಣದ ರಾಸಕ್ರೀಡಾರಂಭದಲ್ಲಿ ಕೃಷ್ಣನ ದಿವ್ಯಾದ್ಭುತ ಲೀಲೆಗಳನ್ನು ಕಂಡ ಗೆಳೆಯರು ‘ನೀನು ನಿಜವಾಗಿ ಯಾರು’ ಎನ್ನಲು, ಅವನಿತ್ತ ಉತ್ತರವಿಷ್ಟೇ ‘ನಾನು ನಿಮ್ಮೊಬ್ಬ ಆತ್ಮೀಯ ಬಂಧು ಎಂದುಕೊಳ್ಳಿ, ಸಾಕು.’ ಭಾಗವತದಲ್ಲಿ ಅವರಿಗೆ ಬ್ರಹ್ಮಹ್ರದ ಮಡುವಿನಲ್ಲಿ ಮುಳುಗಿರೆಂದು ಸ್ವಸ್ವರೂಪದೋರುತ್ತಾನೆ. ವಿಷ್ಣುಪುರಾಣದಂತೆ ಹರಿವಂಶದಲ್ಲೂ ಮಾನವೀಯವಾಗಿರುವ ಕೃಷ್ಣ, ಶರದ್ರಾತ್ರಿಯ ತಿಂಗಳು ಬರಲು ತನ್ನ ಕೈಶೋರಕವನ್ನು ಮನ್ನಿಸಲೆಂದು ಗೋಪಿಯರೊಡನೆ ಆಟವಾಡಲೆಳಸಿದನು (‘ಮನಶ್ಚಕ್ರೇ ರತಿಂ ಪ್ರತಿ’ ಎಂಬ ಈ ಸಂದರ್ಭದಲ್ಲಿ ರತಿಗೆ ಆಟವೆಂದಲ್ಲದೆ ಕಾಮಕ್ರೀಡೆಯ ಅರ್ಥ ಹೊಂದದು ; ಗೊಲ್ಲರ ಹುಡುಗರು ರತಿಪ್ರಿಯರೆಂಬಲ್ಲೂ ಆಟವೇ ಗಮ್ಯ ). ಬಾಲ್ಯಸಹಜವಾದ ಈ ಭಾವ, ಭಾಗವತದಲ್ಲಿ ಭಗವಂತನ ಯೋಗಮಾಯೆಯನ್ನಾಧರಿಸಿ ಸಾಗಿದೆ (ಭಗವಾನಪಿ ತಾ ರಾತ್ರೀಃ ಶರದೋತ್ಫುಲ್ಲಮಲ್ಲಿಕಾಃ। ವೀಕ್ಷ್ಯ ರಂತುಂ ಮನಶ್ಚಕ್ರೇ ಯೋಗಮಾಯಾಮುಪಾಶ್ರಿತಃ॥ ೨೯–೧.). ವಸ್ತ್ರಾಪಹಾರದಲ್ಲಿ ಗೋಪಿಯರಿಗಿತ್ತ ಮಾತಿನಂತೆ ಆ ಸತ್ಯಸಂಕಲ್ಪನು ವಿಷಯೇಚ್ಛೆ

ಯಿಂದಲ್ಲದೆ ಯೋಗಮಾಯೆಯಿಂದ ಅವರಿಷ್ಟವನ್ನು ಸಲಿಸಲೆಳಸಿದನು. 'ರಂಗ ಕೊಳಲನೂದಲಾಗಿ ಮಂಗಳಮಯವಾಯ್ತು ಧರೆಯು.' ಅದರ ಮಧುರನಾದ ನಾದ ಅನಂಗವರ್ಧನನಾಗಿ ಗೋಕುಲ ಸತಿಯರನ್ನು ಸೆಳೆಯಿತು. 'ಕೃಷ್ಣನ ಕೊಳಲಿನ ಕರೆ' ಕೇಳಿದ ಅವರು 'ಕೊಳಲನೂದುವ ಚದುರನಾರೇ' ಎನ್ನುತ್ತ ಊಟ-ಉಡಿಗೆ ಬಿಟ್ಟು, ಅಸ್ತವ್ಯಸ್ತವಾಗಿ ಇದ್ದಕ್ಕಿದ್ದ ಹಾಗೆ ಒಬ್ಬರಿನ್ನೊಬ್ಬರಿಗರಿಯದಂತೆ, ವೃಂದಾವನಕ್ಕೆ ಓಡೋಡಿ ಬರುವ ಭಾಗವತದ ವರ್ಣನೆ, ಕಾಳಿದಾಸನ ಪುರಸ್ತ್ರೀಯರು ಮೆರವಣಿಗೆಯ ರಾಜಕುಮಾರನನ್ನು ಕಾಣಬರುವ ಚಿತ್ರಗಳಂತೆಯೇ ಇದೆ. ಕೃಷ್ಣಗೃಹೀತಮಾನಸರೂ ಗೋವಿಂದಾಪಹೃತಾತ್ಮರೂ ಆಗಿ ಹೊರಟವರು ಹಿರಿಯರಡ್ಡಿಯನ್ನೂ ಕೇಳದೆ ಪರಮನಲ್ಲಿಗೈತಂದರು. ಆದರೆ ಅವನನ್ನು ಉಪಪತಿಯಾಗಿ ಭಾವಿಸಿದವರು ಪತಿಭಾವ ಪ್ರಾಬಲ್ಯದಿಂದಡಗಿಸಲ್ಪಟ್ಟು, ಮನೆ–ಮನಗಳಲ್ಲೇ ಕೃಷ್ಣಧ್ಯಾನಗೈಯುತ್ತ ವಿರಹದುರಿಗೆ ಬೆಂದ ದೇಹದಿಂದ ಮುಕ್ತರಾದರು

ತಮೇವ ಪರಮಾತ್ಮಾನಂ ಜಾರಬುದ್ಧ್ಯಾಪಿ ಸಂಗತಾಃ ।
ಜಹುರ್ಗುಣಮಯಾ ದೇಹಂ ಸದ್ಯಃ ಪ್ರಕ್ಷೀಣ ಬಂಧನಾಃ ॥ ೨೯–೧೧

ಪರೀಕ್ಷಿತನಿಲ್ಲಿ 'ಕೃಷ್ಣದೇವರೆಂದಲ್ಲದೆ ಉಪಪತಿ ಎಂದೆಣಿಸಿದವರಿಗೆಂತು ಮೋಕ್ಷವಾಯಿತು' ಎನ್ನಲು, ಶುಕರೆಂದರು 'ಎಲ್ಲರಿಗೂ ಪ್ರಿಯತಮನಾದ ಪರಮಾತ್ಮನನ್ನು ಭಕ್ತಿಯಿಂದಷ್ಟೇ ಅಲ್ಲ, ಕಾಮ-ಕ್ರೋಧ-ಭಯಾದಿಗಳಿಂದ ಭಾವಿಸಿದರೂ ತದನವರತ ಭಾವನಾವಿಶೇಷವೇ ತನ್ಮಯತೆ – ಮುಕ್ತಿಗಳನ್ನೀವುದು. ಕಂಸನೂ ಶಿಶುಪಾಲನೂ ಭಯ–ದ್ವೇಷಗಳಿಂದ ಸದಾ ಸರ್ವತ್ರ ಕೃಷ್ಣಧ್ಯಾನದಲ್ಲಿದ್ದು, ಜಗವೇ ತನ್ಮಯವಾಗಿ, ಯೋಗಿಗಳಿಗೂ ಕಠಿಣವಾದ ಭಗವತ್ಸಾರೂಪ್ಯ ಹೊಂದಿದರು. ಇನ್ನು ಪ್ರಿಯಕರನೆಂದ ಗೋಪಿಯರು ಮುಕ್ತರಾಗದಿರುವರೇ ?'

ಕೃಷ್ಣನು ತನ್ನತ್ತ ಬಂದವರಿಗೆ 'ಈ ಹೊತ್ತಿನಲ್ಲೇಕೆ ಬಂದಿರಿ ? ಪತಿಸೇವೆಯೇ ನಿಮ್ಮ ಪರಮಧರ್ಮ. ನನ್ನಲ್ಲಿ ಭಕ್ತಿಯಿಂದಲೇ ಬಂದಿದ್ದರೂ ಅದು ಮನೆಯಲ್ಲಿ ಶ್ರವಣ-ದರ್ಶನ-ಧ್ಯಾನ-ಕೀರ್ತನೆಗಳಿಂದ ಸಾಧಿತವಾಗುವಷ್ಟು ಸನ್ನಿಕರ್ಷದಲ್ಲಾಗದು. ( ವಿರಹದಲ್ಲಿ ತನ್ಮಯತೆ ಹೆಚ್ಚಲ್ಲವೇ ? ) ಕಾರಣ ಮನೆಗೆ ಮರಳಿರಿ.

ಶ್ರವಣಾದ್ದರ್ಶನಾತ್ ಧ್ಯಾನಾತ್ ಮಯಿ ಭಾವೋಽನು ಕೀರ್ತನಾತ್ ।
ನ ತಥಾ ಸನ್ನಿಕರ್ಷೇಣ. ಪ್ರತಿಯಾತ ತತೋ ಗೃಹಾನ್ ॥ ೨೯–೨೭

ಎಂದ. ಆದರೆ ಆರ್ತಭಕ್ತರಾಗಿ ಬಂದ ಗೋಪಿಯರು ಇಷ್ಟಕ್ಕೆ ಹಿಂದಿರುಗಲಿಲ್ಲ. [ಹಿಂದೊಮ್ಮೆ ಹಸಿದ ಗೋವಳರು ಕೃಷ್ಣನಾದೇಶದಂತೆ ಯಜ್ಞನಿರತ ಬ್ರಾಹ್ಮಣರಲ್ಲಿಗೈದಿ ಅನ್ನ ಸಿಗದೆ, ಅವರ ಸ್ತ್ರೀಯರನ್ನು ಕಂಡು ಆಹಾರ ಪಡೆದರು; ಅಲ್ಲದೆ ಆ

ಸ್ತ್ರೀಯರೂ ಕೃಷ್ಣನೆಡೆ ಬಂದರು ಆಗಲೂ ಹೀಗೆಯೇ ಗೃಹಿಣೀಧರ್ಮವನ್ನೊರೆದು ಅಂಗಸಂಗ ಒಂದೇ ಅನುರಾಗಾಸ್ಪದವಲ್ಲ, ವಿಯೋಗದ ಮನಸ್ಸು ಸದಾ ಶ್ರವಣ–ಮನನ–ನಿಧಿಧ್ಯಾಸಗೈದು ಬಂಧಮುಕ್ತವಾಗಿ ಬೇಗ ನನ್ನ ಬಳಿ ಸಾರುವುದು

ನ ಪ್ರೀತಯೇನುರಾಗಾಯ ಹ್ಯಂಗಸಂಗೋ ನೃಣಾಮಿಹ ।
ತನ್ಮನೋಮಯಿಯುಂಜಾನಾನ ಚಿರಾನ್ಮಾಮವಾಪ್ಸ್ಯಥ ॥ ೨೩–೩೧

ಎಂಬ ಕೃಷ್ಣನ ಅಭಿಪ್ರಾಯದಂತೆ ಅವರು ಹಿಂದಿರುಗಿ ಸಾಧನ ಮಾಡತೊಡಗಿದರು. ಒಬ್ಬಳು ಅಂತೆ ನಡೆದು ಮುಕ್ತಳಾದಳು. ಅವರಿಗಾದ ದರ್ಶನವೂ ತಮಗಿಲ್ಲವೆಂದು ಬ್ರಾಹ್ಮಣರು ಪಶ್ಚಾತ್ತಾಪಪಟ್ಟರು ]. ವಸ್ತ್ರಾಪಹಾರ ಸಂದರ್ಭದಲ್ಲೇ ಸರ್ವಾರ್ಪಣಗೈದು ಸಿದ್ಧಭಾವದಲ್ಲಿದ್ದ ಗೋಪಿಕೆಯರು ಈಗ ಮೆಲ್ಲನೆ ಸಾವರಿಸಿಕೊಂಡು ಉಸುರಿದರು.—ಎಲ್ಲ ವಿಷಯ ಬಿಟ್ಟು ನಿನ್ನಡಿಗೆ ಬಂದವರನ್ನೀತು ಬಿಡಬೇಡ ಪ್ರಭೂ. ಎಂಥ ಕುಶಲರೂ ಪರಮಾಪ್ತಿ ಎಂದು ನಿನ್ನಲ್ಲಿ ಅನುರಕ್ತರಾಗಿರಲು, ಈ ಲೋಕದ ದುಃಖದಾಯಕ ಪತಿ–ಸುತರಿಂದ ನಮಗೇನು ? ನೀನು ಮನಸ್ಸನ್ನು ಸೂರೆಗೊಂಡಿರುತ್ತ ನಮಗಿಲ್ಲಿಂದ ಕಾಲೇ ಏಳವು. ಮನೆಗೈದಿ ಏನು ಮಾಡೋಣ ? ಈ ಹೃದಯದುರಿಯನ್ನಾರಿಸದಿದ್ದರೆ ನಾವೇ ಧ್ಯಾನದಿಂದ ಬಂದು ನಿನ್ನ ಪಾದ ಸೇರುತ್ತೇವೆ. ದೇವಲೋಕ ರಕ್ಷಿಸಲು ವಾಮನಾದ್ಯವತಾರ ತಳೆದಂತೆ, ಗೋಕುಲದವರ ದುಃಖಶಮನಕ್ಕೇ ಈ ರೂಪದಲ್ಲಿರುವ ಆದಿಪುರುಷನೇ, ಈ ದಾಸಿಯರ ಕುದಿವ ಎದೆ ಹಾಗೂ ತಲೆಯ ಮೇಲೆ ನಿನ್ನ ಕರಕಮಲವಿರಿಸಿ ಅನುಗ್ರಹಿಸು.

ವ್ಯಕ್ತಂ ಭವಾನ್ ವ್ರಜಭಯಾರ್ತಿಹರೋಽಭಿಜಾತೋ
ದೇವೋ ಯಥಾದಿಪುರುಷಃ ಸುರಲೋಕಗೋಪ್ತಾ ।

ತನ್ನೋ ನಿಧೇಹಿ ಕರಪಂಕಜಮಾರ್ತ ಬಂಧೋ
ತಪ್ತಸ್ತನೇಷು ಚ ಶಿರಸ್ಸು ಚ ಕಿಂಕರೀಣಾಂ ॥ ೨೯–೪೧

ಕರುಣಾಕರ ಕೃಷ್ಣನು ಯೋಗೇಶ್ವರನೂ ಆತ್ಮಾರಾಮನೂ ಆದ್ದರಿಂದ, ಅವರ ಮೊರೆಗೇಳಿ. ತದನುಗ್ರಹಾರ್ಥವೇ ನಸುನಕ್ಕು ಆಟವಾಡಲಣಿಯಾದ. ಉಡುಗಣವೇಷ್ಟಿತ ಚಂದ್ರನಂತೆ ಗೋಪಿಯರಿಂದಾವೃತನಾಗಿ ಹಾಡುತ್ತ ನಲಿಯುತ್ತ ನದಿಯ ದಡಕ್ಕೆ ಸರಿದ. ಇಲ್ಲಿ ಗೋಪಿಯರು ಕೃಷ್ಣನನ್ನು ಪತಿಭಾವದಲ್ಲೇ ಪಡೆದರಾಗಿ ( ವಿಷ್ಣುಪುರಾಣದಲ್ಲಿರದ ) 'ಬಾಹುಪ್ರಸಾರ ಪರಿರಂಭ ಕರಾಲ ಕೇಲೀ ನೀವೀಸ್ತನಾಲಭನ ನರ್ಮ ಕರಾಗ್ರಪಾತೈಃ । ಕ್ಷ್ವೇಲಾವಲೋಕ ಹಸಿತೈರ್ವ್ರಜಸುಂದರೀಣಾಂ ಉತ್ತಂಭಯನ್ ರತಿಪತಿಂ ರಮಯಾಂಚಕಾರ ॥ ೨೯–೪೬ ' ಎಂಬಂಥ ವರ್ಣನೆಗಳಿವೆ. ಭಗವಂತನ ಬಾಹುಪ್ರಸಾರ – ಆಲಿಂಗನ – ನರ್ಮಕರಪಾತಾದಿ ಪ್ರಣಯಲೀಲೆಗಳಿಂದ ತಮಗಿಂತ

ಹೆಚ್ಚಾರು ಎಂದುಕೊಂಡ ಹೆಂಗಳ ಹೆಮ್ಮೆ ಇಳಿಸಿ ಕರುಣಿಸಲು ಕೃಷ್ಣನಲ್ಲಿಯೇ ಕಾಣದಾದನು.

ಸರಿ, ಸಲಗ ಕಾಣದ ಕರಿಣಿಗಳಂತಾದ ಗೋಪಿಯರು ಕೃಷ್ಣನನ್ನರಸುತ್ತ ಗಿಡಬಳ್ಳಿಗಳಿಗೆಲ್ಲ ' ನೀವು ಕಂಡಿರಾ ' ಎಂದು ಪ್ರಶ್ನಿಸುತ್ತ ವಿಪರಿಸಿದ ವಿವರ ಭಾಗವತದಲ್ಲಿ ಬಂದರೆ, ತಮ್ಮ ವಿರಹ ಮರೆಯಲು ತಾವೇ ಒಂದೊಂದು ಪಾತ್ರವಹಿಸಿ ಕೃಷ್ಣಲೀಲೆಗಳನ್ನು ಅನುಕರಿಸಿ ನೋಡಿದ ವಿವರ ವಿಷ್ಣುಪುರಾಣದಲ್ಲಿದೆ. ಅಷ್ಟರಲ್ಲಿ ಅವರಿಗೆ ಧ್ವಜವಜ್ರಾಂಕು ಶಾಂಭೋಜ ಚಿಹ್ನಿತ ಪಾದಮುದ್ರೆ ಕಂಡವು. ಪುಲಕಿತರಾಗಿ ಅವನ್ನು ಅನುಸರಿಸುವಲ್ಲಿ ಕಿರುವಡಿಗಳೂ ಮೂಡಿರಲು ಹೆಣ್ಣೊಬ್ಬಳೊಡನೆ ಹೋದುದರಿಯಿತು; ಮುಂದೆ ಮುಂಗಾಲೂರಿದ್ದಲ್ಲಿ ಕೃಷ್ಣನವಳಿಗೆ ಹೂ ಕುಯ್ದು ಮುಡಿಸಿದ್ದನ್ನರಿತು ಅವಳ ಪುಣ್ಯಕ್ಕೆ ಮತ್ಸರಿಸಿದರು. ಹೆಣ್ಣ ಹೆಜ್ಜೆ ಕಾಣದಲ್ಲಿ ಅವಳೇ ಸಿಕ್ಕು, ಹೆಮ್ಮೆಯಿಂದ ತಾನು ' ನಡೆಯಲಾರೆ, ಹೊತ್ತುಕೊಂಡೊಯ್ ' ಎನ್ನಲು ಭುಜವೇರೆಂದ ಕೃಷ್ಣ ಅದೃಶ್ಯನಾದನೆಂದಳು. ಎಲ್ಲರೂ ಸಮದುಃಖಿಗಳಾಗಿ ನದೀತೀರಕ್ಕೆ ಬಂದು ಅವನ ಗುಣಗಾನ ಮಗ್ನರಾದರು. ಇಲ್ಲಿಯೇ ಭಾಗವತವು ಒಂದು ಅಧ್ಯಾಯವಾಗಿ ಶೃಂಗಾರ-ಭಕ್ತಿಪೂರ್ಣ ಗೋಪೀಗೀತವನ್ನಳವಡಿಸಿಕೊಂಡಿದೆ. ಗೋಪಿಯ ಭಕ್ತಿಯ ಮಟ್ಟವನ್ನು ಮನಮುಟ್ಟಿಸಲು ಒಂದೆರಡು ಪದ್ಯ ಸಾಕು :

ನ ಖಲು ಗೋಪಿಕಾನಂದನೋ ಭವಾನ್ ಅಖಿಲದೇಹಿ ನಾಮಂತರಾತ್ಮದೃಕ್ ।
ವಿಖನಸಾರ್ಥಿತೋ ವಿಶ್ವಗುಪ್ತಯೇ ಸಖ ಉದೇಯಿವಾನ್ ಸಾತ್ವತಾಂಕುಲೇ ॥ ೩೧-೪

ಸುರತವರ್ಧನಂ ಶೋಕನಾಶನಂ ಸ್ವರಿತ ವೇಣುನಾ ಸುಷ್ಠು ಚುಂಬಿತಂ ।
ಇತರ ರಾಗ ವಿಸ್ಮಾರಣಂ ನೃಣಾಂ ವಿತರ ವೀರ ನಃ ತೇಧರಾಮೃತಂ ॥ ೩೧-೧೪

( ನೀನು ನಿಜಕ್ಕೂ ಯಶೋದೆಯ ಮಗನಲ್ಲ. ಎಲ್ಲ ಜೀವರ ಅಂತರ್ಯಾಮಿ: ಬ್ರಹ್ಮನ ಕೋರಿಕೆಯಂತೆ ಲೋಕರಕ್ಷಣೆಗಾಗಿ ಯದುಕುಲದಲ್ಲಿ ಹುಟ್ಟಿದೆ. ಎಲ್ಲ ದುಗುಡವನ್ನಳಿಸಿ, ಸುರತಸುಖವನ್ನು ಹೆಚ್ಚಿಸಿ, ಇತರ ಸುಖದಾಸೆಯನ್ನು ಮರೆಯಿಸುವ ಮುರಳೀಚುಂಬಿತ ಅಧರಾಮೃತವನ್ನೆಮಗೆ ನೀಡು ).

ಗೋಪಿಯರಿಂತು ಮಧುರಭಾವದುಂಬಿ ಶೌರಿಯ ಪಾದಕಮಲಗಳಲ್ಲಿ ನವೆಯುತ್ತಿಪೆಯೋ ಎಂದು ಕಾತರಿಸುತ್ತಿರಲು, ಆತ ಮನ್ಮಥ ಮೋಹನಾಕಾರನಾಗಿ ಅವರ ನಡುವೆ ಕಾಣಿಸಿಕೊಂಡನು. ಗೋಪಿಯರಿಗೆ ಪ್ರಾಣ ಬಂದಂತಾಯಿತು. ಒಡನೆ ಒಬ್ಬಾಕೆ ಭಕ್ತಿಯ ಉದ್ರೇಕದಲ್ಲಿ ' ಕೃಷ್ಣ ಕೃಷ್ಣ ಕೃಷ್ಣ ' ಎಂದರೆ, ಒಬ್ಬಳು ಅವನ ಕರಕಮಲವನ್ನೂ ಇನ್ನೊಬ್ಬಳು ತೋಳನ್ನೂ ಮತ್ತೊಬ್ಬಳು ಪದಕಮಲಗಳನ್ನೂ

ವಹಿಸಿ ಸುಖಿಸಿದರು ; ಮಗುದೊಬ್ಬಾಕೆ ಕಂಗಳಿಂದ ಅವನನ್ನು ಹೃದಯಕ್ಕಿಳಿಸಿ, ಹೊರಬಿಡದಂತೆ ಕಣ್ಮುಚ್ಚಿಕೊಂಡು, ಅಪ್ಪಿ ಪುಲಕಿತಳಾಗಿ, ಯೋಗಿಯಂತೆ ಧ್ಯಾನಿಸಿ, ಆನಂದತುಂದಿಲಳಾದಳು –

ತಂ ಕಾಚಿನ್ನೇತ್ರರಂಧ್ರೇಣ ಹೃದಿ ಕೃತ್ಯ ನಿಮೀಲ್ಯ ಚ ।
ಪುಲಕಾಂಗ್ಯುಪಗುಹ್ಯಾಸ್ತೇ ಯೋಗೀವಾನಂದ ಸಂಪ್ಲುತಾ ॥ ೩೨-೮

ನಂತರ ಗೋಪಿಯರು ತಮ್ಮ ಕುಚಕುಂಕುಮಾಂಕಿತ ಉತ್ತರೀಯ ಹಾಸಿ ಕೃಷ್ಣನನ್ನು ಕೂರಿಸಿಕೊಂಡು ಕೇಳಿದರು : ತನ್ನನ್ನು ಭಜಿಸುವವರಲ್ಲಿ ಅನುಗ್ರಹಿಸುವನೊಬ್ಬ, ಭಜಿಸದವರಲ್ಲೂ ಅನುಗ್ರಹಿಸುವವನೊಬ್ಬ, ಇವರಿಬ್ಬರಿಗೂ ಅನುಗ್ರಹಿಸದವನಿನ್ನೊಬ್ಬ -- ಇವರಲ್ಲಿ ಯಾರು ಸರಿ ? ಕೃಷ್ಣನೆಂದ : ತನ್ನನ್ನು ಭಜಿಸುವವರಲ್ಲಿ ಅನುಗ್ರಹಿಸುವಾತ ಸ್ವಾರ್ಥಿ, ಭಜಿಸದವರಲ್ಲೂ ತಂದೆಯಂತೆ ಕರುಣೆದೋರುವಾತ ಸೌಹೃದ ಧರ್ಮವುಳ್ಳವ, ಇನ್ನು ಭಜಿಸಿದರೂ ಅನುಗ್ರಹಿಸದ ನಿಷ್ಕಾಮಿ ಅಥವಾ ಕೃತಘ್ನ, ಭಜಿಸದವರಲ್ಲಿ ಅನುಗ್ರಹಿಸುವನೆ ? ನಾನು ಭಜಿಸದವರಲ್ಲಿ ಸ್ವಾರ್ಥದಿಂದ ಅನುಗ್ರಹಿಸುವವನಲ್ಲ. ಆದರೆ ಅವರವರ ಸೇವೆಗೆ ತಕ್ಕ ಫಲವನ್ನು ಕೊಡುವೆ ಕಲ್ಪವೃಕ್ಷದಂತೆ ( ಯೇ ಯಥಾ ಮಾಂ ಪ್ರಪದ್ಯತೇ ತಾಂಸ್ತಥೈವ ಭಜಾಮ್ಯಹಂ – ಗೀತೆ.) ನೀವು ಭಜಿಸಿದರೂ ಕೃತಘ್ನನಾಗದೆ ನಾನು ಅಡಗಿ ನಿಮ್ಮ ಭಕ್ತಿ ಹೆಚ್ಚುವಂತೆಸಗಿದೆ. ಹಣ ಕಳೆದುಕೊಂಡವ ಅದನ್ನೇ ನೆನೆಯುವಂತೆ, ನಾನಡಗಲು ನೀವು ನನ್ನನ್ನೇ ನೆನೆದಿರಿ; ನಿಮ್ಮ ಭಕ್ತಿ ಸುದೃಢವಾಯಿತು. ನಿಮ್ಮ ಸೇವೆ–ಫಲ ಉತ್ತಮವಾಗಲೆಂದೇ ಹೀಗೆ ಮಾಡಿದೆನಾಗಿ ಕೋಪಿಸಬೇಡಿರಿ. ನಿಮ್ಮ ಶುದ್ಧಭಕ್ತಿಗೆ ಪ್ರತಿಯಾಗಿ ನಾನೇನು ಕೊಟ್ಟರೂ ತೀರದು; ಹೀಗೆ ನನ್ನನ್ನು ಭಜಿಸಿದವರು ಪ್ರಾಕೃತದೇಹ ಕಳಚಿಕೊಂಡು ಜೀವನ್ಮುಕ್ತರೆನಿಸುವರು.

ಈ ಮಾತು ಕೇಳಿ ಪ್ರಿಯನ ಸಂಗವೇ ಸಿಕ್ಕ ಗೋಪಿಯರು ಸಂತುಷ್ಟರಾದರು. ಕೃಷ್ಣ ರಾಸಕ್ರೀಡೆಗಿಳಿದನು. ಗೋಪಿಯರು ತನ್ನ ಪಕ್ಕ ಬಿಡದೆ ರಾಸಮಂಡಲವಾಗದಿರಲು, ಅವರ ಕೈ ಹಿಡಿಸಿ ದುಂಡಗೆ ನಿಲ್ಲಿಸಿದನು ( ವಿ. ಪು. ). ಅವರೆಲ್ಲ ಮನೋಹರವಾಗಿ ಆಡುತ್ತ, ಇಬ್ಬಿಬ್ಬರು ಗೋಪಿಯರು ಕೃಷ್ಣಚರಿತ್ರೆಯನ್ನು ಹಾಡತೊಡಗಿದರು ( ಹರಿವಂಶಹಲ್ಲೀಶಕ್ರೀಡೆ ). ಭಾಗವತದಂತೆ ಕೃಷ್ಣ ಯೋಗೇಶ್ವರನಾದ್ದರಿಂದ ವರ್ತುಲದ ನಡುವೆಯೂ, ಇಬ್ಬರು ಗೋಪಿಯರ ನಡುವೆಯೂ ಆಗಿ ( ಇಬ್ಬರು ಕೃಷ್ಣರ ನಡುವೆ ಒಬ್ಬ ಗೋಪಿಯಾಗಿ ), ಅವರೆಲ್ಲ ಚಲಿಸುತ್ತ ನಲಿಯತೊಡಗಿದರು –

ರಾಸೋತ್ಸವಃ ಸಂಪ್ರವೃತ್ತೋ ಗೋಪೀಮಂಡಲ ಮಂಡಿತಃ ।
ಯೋಗೇಶ್ವರೇಣ ಕೃಷ್ಣೇನ ತಾಸಾಂ ಮಧ್ಯೇ ದ್ವಯೋರ್ದ್ವಯೋಃ ॥ ೩೩-೩

ಮುಗಿಲು, ದೇವತೆಗಳಿಂದಲೂ ಕೈಬಳೆ–ಗೆಜ್ಜೆಗಳುಲಿಯಿಂದಲೂ ತುಂಬಿ ಹೋಯಿತು. ಕೃಷ್ಣ ಹೊನ್ನಮಣಿಗಳ ನಡುವಣ ನೀಲಮಣಿಯಂತೆ ಕಂಗೊಳಿಸಿದರೆ, ಅಂಗಾಂಗ

ಸ್ಪರ್ಶ ಹೊಂದಿ ಸುಖಿಸುತ್ತಿದ್ದರು. ಮಗು ತನ್ನ ಪ್ರತಿಬಿಂಬದೊಡನಾಡುವಂತೆ ಲಕ್ಷ್ಮೀಪತಿಯು ಗೋಪಿಯರೊಡನಾಡುತ್ತಿದ್ದನು. (ರೇಮೇ ರಮೇಶೋ ವ್ರಜ ಸುಂದರೀ ಭಿಃ ಯಥಾರ್ಭಕಃ ಸ್ವಪ್ರತಿಬಿಂಬ ವಿಭ್ರಮಃ ॥ ೩೩–೧೮). ಆತ ಆತ್ಮಾ ರಾಮನಾದರೂ ಕೇವಲ ಲೀಲೆಗಾಗಿ ಗೋಪಿಯರಿಗೊಬ್ಬೊಬ್ಬ ಕೃಷ್ಣನಾಗಿ ನಲಿದನು: ಸ್ವರತ–ಸ್ವರಮಣನಾದರೂ ಕೊನೆಗೆ ದಣಿದ ಗೋಪಿಯರೊಡನೆ ನದಿಗಿಳಿದು ಗಜರಾಜನಂತೆ ನೀರಾಟವಾಡಿದನು. ಶರತ್ಕಥಾರಸಾಶ್ರಯವಾದ ಬೆಳ್ದಿಂಗಳಿನಿರುಳು ಗಳನ್ನು ಕಳೆಯುವಲ್ಲಿ, ಕೃಷ್ಣನು ಸತ್ಯಸಂಕಲ್ಪನಾದ್ದರಿಂದ ಸ್ತ್ರೀಪರಿವೃತನಾದರೂ ಜಿತೇಂದ್ರಿಯನಾಗಿ, ವೀರ್ಯವನ್ನು ತನ್ನಲ್ಲೇ ತಡೆದಿರಿಸಿಕೊಂಡಿದ್ದ.

ಏವಂ ಶಶಾಂಕಾಂಶು ವಿರಾಜಿತಾನಿಶಾಃ ಸ ಸತ್ಯಕಾಮೋನುರತಾಬ–
ಲಾಗಣಃ ।
ಸಿಷೇವ ಆತ್ಮನ್ಯವರುದ್ಧ ಸೌಭಗಃ ಸರ್ವಾಃ ಶರತ್ಕಾವ್ಯಕಥಾರಸಾಶ್ರಯಾಃ ॥
೩೩–೨೬

ಇದು ಬಳಸಿಯೂ ಬ್ರಹ್ಮಚಾರಿಯಾದವನ ಕಾಮವಿಜಯ. ಮನಮಥನಸ್ಯೆವ ಕಾಮನನ್ನೇ ಗೆಲಿದನಾಗಿ ಗೋಪಿಯರೊಡನೆಯು ಅವನ ನಡೆ ಉದಾತ್ತವಾದುದು. ಕಾಮಪ್ರಸಕ್ತಿ ಇದ್ದಾಗಲೂ ಮನುಜನಾಗಿ ನಡೆದುಕೊಳ್ಳಬೇಕಾದ ಆದರ್ಶವಿದು. ಆ ಕರ್ಮಯೋಗಿಗೆ ಸಹಜಲೀಲೆ.

ಈ ರಾಸಕ್ರೀಡೆ ಕೃಷ್ಣನ ದೈವೀಭಾವದ ಚಿತ್ರಣವಾದರೂ ತಮ್ಮ ಕಾಲದ ಸಾಮಾಜಿಕ ನೈತಿಕತೆ ಪುರಾಣಕಾರರ ಮನಸ್ಸಿನಲ್ಲೂ ಪ್ರಶ್ನೆಗಳನ್ನೆಬ್ಬಿಸಿದೆ. ವಿಷ್ಣು ಪುರಾಣವು ರಾಸದ ಕೊನೆಗೆ ಇಬ್ಬಗೆಯ ಸಮರ್ಥನೆಗೆತ್ತಿಸಿದೆ : ೧) ಕೃಷ್ಣನನ್ನು ಚಾರಿತ್ರಿಕವಾಗಿ ಬಗೆದು, ಅವನಿನ್ನೂ ಕಿಶೋರನಾಗಿದ್ದರಿಂದ ಗೋಪಿಯರೊಡನೆ ಸ್ವಚ್ಛಂದ ವಿಹಾರಗೈಯಲು ಸಂಕೋಚವಿರಲಿಲ್ಲೆಂಬುದು

ಸೋಪಿ ಕೈಶೋರಕ ವಯೋಮಾನಯನ್ ಮಧುಸೂದನಃ ।
ರೇಮೇ ತಾಭಿರಮೇಯಾತ್ಮಾ ಕ್ಷಪಾಸು ಕ್ಷಪಿತಾಹಿತಃ ॥ ೫–೧೩:೫೯

ಜೊತೆಗೆ ಕೃಷ್ಣನ ಕಾಲದ ಆಭೀರ ಸಮಾಜದಲ್ಲಿ ಬರ್ಹಿಭೂಷಣ–ಪರ್ವತಪೂಜೆ–ರಾಸಕ್ರೀಡೆಯಂಥ ಅನಾರ್ಯ ಅಂಶಗಳಿದ್ದಿರಬಹುದೆಂಬುದೂ ಗಮನಾರ್ಹ (ಪಾಶ್ಚಾತ್ಯ ಸ್ತ್ರೀಪುರುಷರು ಒಟ್ಟಾಗಿ ನಲಿವಂತೆ). ಆದ್ದರಿಂದ ಕೃಷ್ಣನತ್ತ ಹೊರಟ ಗೋಪಿಯರನ್ನು ಹಿರಿಯರು ಅಡ್ಡಪಡಿಸಿದ ಮಾತು ಪುರಾಣಕಾರರ ಕಾಲದ ಸಮಾಜಕ್ಕಷ್ಟೇ ಅನ್ವಿತ. ೨) ಕೃಷ್ಣನು ಪರಮಾತ್ಮನಾಗಿ ಸರ್ವಭೂತಗಳಲ್ಲೂ ವ್ಯಾಪ್ತನಾದ್ದರಿಂದ,

ಗೋಪಿಯರೊಡನಾಡಿದ್ದು ಬೇರೆಯವರೊಡನಾಡಿದಂತಲ್ಲ, ತಾನೇ ತನ್ನೊಡನಾಡಿದಂತೆ–ಎಂಬ ಅಂಶ :

ತದ್ಭರ್ತೃಷು ತಥಾ ಸರ್ವಭೂತೇಷು ಚೇಶ್ವರಃ ।
ಆತ್ಮಸ್ವರೂಪೋಽಸೌ ವ್ಯಾಪೀ ವಾಯುರಿವಸ್ಥಿತಃ ॥ ೫–೧೩:೬೦

ಈ ದೃಷ್ಟಿಯ ಆಧ್ಯಾತ್ಮಿಕ ನಿರೂಪಣೆ ಭಾಗವತದಲ್ಲಿ ಪ್ರಶಸ್ತವಾಗಿದೆ. ನಮ್ಮ ಪರವಾಗಿ ಪರೀಕ್ಷಿತನೇ ಪ್ರಶ್ನಿಸಿದ್ದಾನೆ – 'ಧರ್ಮ ಸಂಸ್ಥಾಪನೆಗೆಂದೇ ಅವತರಿಸಿದವನು ಆತ್ಮಾರಾಮನಾಗಿಯೂ ಪರಸ್ತ್ರೀ ಸ್ಪರ್ಶವನ್ನೆಂತು ಮಾಡಿದ ?' ಶುಕರುತ್ತರಿಸುತ್ತಾರೆ: "ಕರ್ಮವಶರಾಗಿ ಹುಟ್ಟಿದವರಿಗೆ ದೇಹಾಭಿಮಾನ–ಶಾಸ್ತ್ರವಶ್ಯತ್ವ–ಸುಖದುಃಖ–ಪುಣ್ಯ ಪಾಪಗಳ ಸಂಬಂಧವಿಲ್ಲ. ಮಹಿಮಾವಂತರು ಲೋಕಧರ್ಮ ಮೀರಿಯೂ ಅಧಿಧರ್ಮ ಮೋರಿ ಪರಮಧರ್ಮಿಗಳಾಗಿದ್ದಾರೆ. ಎಲ್ಲ ತಿಂದು ತೇಗುವ ಅಗ್ನಿಯಂತಹ ತೇಜಸ್ವಿಗಾವ ದೋಷವಿದೆ ? ಅಸಮರ್ಥನು ರುದ್ರನಂತೆ ವಿಷ ಕುಡಿಯಲಾದೀತೇ ? ದೊಡ್ಡವರ ನುಡಿ ಸರಿ, ನಡೆ ಕೂಡದು(ಈಶ್ವರಾಣಾಂ ವಚಃ ಸತ್ಯಂ ತಥೈವಾ ಚರಿತಂ ಕ್ವಚಿತ್ ॥ ೩೩–೩೨).

[ಭಾರ್ಗವೇಣ ಹತಾಮಾತಾ ಏಕಜಾಯಾಶ್ಚ ಪಾಂಡವಾಃ ।
ಪರದಾರರತಃ ಕೃಷ್ಣೋ ನ ದೇವ ಚರಿತಂ ಚರೇತ್ ॥

ಪರಶುರಾಮ ತಾಯಿಯನ್ನು ಕೊಂದ, ಪಾಂಡವರಿಗೊಬ್ಬಳೇ ಮಡದಿ, ಕೃಷ್ಣ ಪರಸ್ತ್ರೀ ರತನಾದ; ದೇವಪುರುಷರಂತೆ ಇತರರು ನಡೆಯಕೂಡದು –ಅಲ್ಲವೇ ? ಅವರು ಸತ್ಯ ಹೇಳಿದರೂ ತತ್ತ್ವವನ್ನು ಜೀವಾಧಿಕಾರಕ್ಕೆ ತಕ್ಕಂತೆ ನಡೆಸಬೇಕಾಗಿ ನಮಗೆ ಸರ್ವತ್ರ ಪ್ರಮಾಣ ಅವರ ನಡೆಯಲ್ಲ, ನುಡಿ ಮಾತ್ರ. ಅವರ ವಿಶೇಷಧರ್ಮ ಸಾಮಾನ್ಯ ಲೋಕಕ್ಕಲ್ಲ, ನಮ್ಮ ವಿಧಿ ನಿಷೇಧ ಅವರಿಗಿಲ್ಲ]. ಅಹಂಕಾರವಿಲ್ಲದವರಿಗೆ ಇಲ್ಲಿ ಸತ್ಕಾರ್ಯದಿಂದ ಪ್ರಯೋಜನವೂ ಇಲ್ಲ, ಅಸತ್ಕಾರ್ಯದಿಂದ ಹಾನಿಯೂ ಇಲ್ಲ. ಇನ್ನು ಅಖಿಲಸತ್ವನಿಯಾಮಕನಿಗೆಲ್ಲಿಯ ಶುಭಾಶುಭ ಸಂಬಂಧ ? ಯಾರ ಪದಾರವಿಂದ ಪರಾಗ ಸೇವಿಸಿ ತೃಪ್ತರಾಗಿ, ತದ್ಧ್ಯಾನಯೋಗದಿಂದಲೇ ಕರ್ಮಬಂಧ ಕಳೆದ ಮುನಿಗಳು ಸ್ವಚ್ಛಂದವಾಗಿ ಚರಿಸುವರೋ, ಆತ ಸ್ವೇಚ್ಛೆಯಿಂದ ಲೀಲಾದೇಹ ಧರಿಸಿರಲು ಕರ್ಮ ಬಂಧಕ್ಕೊಳಗಾಗುವನೇ ? ಗೋಪಿಯರಿಗೂ ಅವರ ಪತಿಗಳಿಗೂ ಎಲ್ಲ ದೇಹಿಗಳಿಗೂ ಅಂತರಾತ್ಮನಾಗಿರುವ ಆ ಅಧ್ಯಕ್ಷನೇ ಈ ಲೀಲಾದೇಹಿ. (ಎಂದ ಮೇಲೆ ಪರದಾರಾ ಸ್ಪರ್ಶವೆಲ್ಲಿ ಬಂತು ? ಆಡುವವ ಆಡಿಸುವವ ತಾನೇ ಆಗಿ ಗೋಪಿಯರೊಡನಾಡಿದ್ದು ತನ್ನೊಡನೆ ತಾನೇ ಆಡಿದಂತಲ್ಲವೇ ?) ಪೂರ್ಣ ಕಾಮನಾದ ಆತ ಮಾನುಷದೇಹ ತಳೆದಿರುವುದೂ ಭಕ್ತರ ಅನುಗ್ರಹಕ್ಕಾಗಿ. ಈ ವಿಶೇಷ ಕರ್ತವ್ಯಧರ್ಮದ ಕಾರಣ

ಅವರು ತನ್ನತ್ತ ಒಲಿಯುವ ಲೀಲೆಯನ್ನೇ ಆತ ಕೈಗೊಳ್ಳುವ (ಗೋಪಿಯರಿಗೆ ಭಗವತ್ಕೃಪೆ ಕಾಮ್ಯಾರ್ಥಪ್ರದಾನರೂಪದಲ್ಲಿ ಒದಗಿತು ). ಗೋಪರು ಅವನ (ಗೋಪಿರೂಪಧಾರಣದಂಥ) ಮಾಯೆಯಿಂದ ಮೋಹಿತರಾಗಿ (ಪ್ರತಿ) ಗೋಪಿಯರು ತಮ್ಮ ಮಗ್ಗುಲಲ್ಲೇ ಇರುವರೆಂದುಕೊಂಡು ಕೃಷ್ಣನಲ್ಲಿ ಕೋಪಗೊಳ್ಳಲಿಲ್ಲ. ಗೋಪಿಯರಿಗೂ ಗೋಪರಿಗೂ ಸಲ್ಲಬೇಕಾದ್ದು ಕೃಷ್ಣನ ಮಾಯಾಶಕ್ತಿಯಿಂದ ಕೂಡಿಯೇ ಸಂದಿತು. ಬಳಿಕ ಬ್ರಾಹ್ಮೀಮುಹೂರ್ತದಲ್ಲಿ ಇಷ್ಟವಿಲ್ಲದಿದ್ದರೂ ಕೃಷ್ಣನಪ್ಪಣೆಯಂತೆ ಗೋಪಿಯರು ಮನೆ ಸೇರಿದರು.” ಈ ಪ್ರಸಂಗವನ್ನು ಶ್ರದ್ಧೆಯಿಂದ ಹೇಳಿ, ಕೇಳುವವರು ಕೃಷ್ಣನಲ್ಲಿ ಪರಮಭಕ್ತಿ ಹೊಂದಿ ಕಾಮ ಕಳೆದುಕೊಂಡು ಉದ್ಧೃತರಾಗುವರೆಂದು ಭಾಗವತವು ಮಂಗಲ ಹಾಡಿದೆ.

ಭಾಗವತದಲ್ಲಿ ಲೋಕೋತ್ತರವಾಗಿ ಕಲ್ಪಿತವಾದ ರಾಸಕ್ರೀಡೆ ನಿಜಕ್ಕೂ ಪರಮಾತ್ಮನ ಅಲೌಕಿಕ ಲೀಲೆಯಾಗಿರುವುದರಿಂದ, ಅದನ್ನು ಚಾರಿತ್ರಿಕವಾಗಿಯೂ ಲೌಕಿಕವಾಗಿಯೂ ಪರಿಗಣಿಸಲಾಗುವುದಿಲ್ಲ. ಧರ್ಮಸೂತ್ರಕ್ಕಿಂತ ಪರಿಣಾಮಕರವಾಗಿ ಪರತತ್ತ್ವವನ್ನು ಜನಸಾಮಾನ್ಯರಿಗೆಟುಕಿಸಲು ಕಾವ್ಯದಂತೆ ಲಾಕ್ಷಣಿಕ( ಸಾಂಕೇತಿಕ )ವಾಗಿ ಕಟ್ಟಿದ ಪ್ರಸಂಗವಿದು. ಸಂಭಾವ್ಯವಾದ ಕಾವ್ಯಸತ್ಯವನ್ನು ವಾಸ್ತವವಾದ ಲೋಕಸತ್ಯವೆನ್ನಲಾದೀತೇ ? ಆದರೆ ಜನ ಹೀಗೆ ಭ್ರಮಿಸಿದ್ದೇ ಈ ಕಾವ್ಯಭಾಗದ ಯಶಸ್ಸಿಗೆ ಸಾಕ್ಷಿ. ಭಾಗವತದ ಚಿತ್ರ ತನ್ನಷ್ಟಕ್ಕೆ ಸುಸಂಗತವಾಗಿದೆ. ಅದರಲ್ಲಿನ ರಾಸಕ್ರೀಡೆಯು ಬರಿ ಹೆಣ್ಣು ಗಂಡುಗಳ ಸ್ವಚ್ಛಂದ ನೃತ್ಯಗೀತವಾಗದೆ. ಭಗವಂತನನ್ನು ಹೊಂದಿ ಮುಕ್ತರಾದ ಜೀವಗಳ ಬ್ರಹ್ಮಾನಂದದ ಅಭಿವ್ಯಕ್ತಿಯಾಗಿದೆ, ದೃಷ್ಟಾಂತವಾಗಿ ಪ್ರತಿಮೆಗೊಂಡಿದೆ. ಪತಿವ್ರತೆಯರಾದ ಗೋಪಿಯರು ಸ್ವೈರಿಣಿಯರಾಗದೆ ಮಾನುಷಪತಿಗಿಂತ ದೈವಾಂಶಪತಿಯಲ್ಲಿ ನೈಜಪ್ರೀತಿದೋರಿದ್ದು ತಪ್ಪಲ್ಲ, ಮೀರಾ–ಅಂಡಾಳ್–ಮಹದೇವಿಯಂತೆ. ರೂಪದಲ್ಲಿ ಮನುಜನಾದರೂ ಸತ್ತ್ವದಲ್ಲಿ ಪುರುಷೋತ್ತಮನಾದ ಅಪ್ರಾಕೃತದೇಹಿಗೆ ಪ್ರಾಕೃತದೇಹಿಗಳೊಡನೆ ಎಂಥ ಸಂಬಂಧ, ಆನಂದ ? ಇಲ್ಲಿ ಸಾಮಾನ್ಯದೃಷ್ಟಿಗೆ ಲೋಕಧರ್ಮ ಮೀರಿದಂತೆನಿಸಿದರೂ ಆ ಲೀಲಾಭಾವದ ಕರ್ಮಯೋಗಿ ಗೀತೆಯ ಪರಮಧರ್ಮವನ್ನೇ ಮೆರೆದಿರುವನು. ನಿಷ್ಕಾಮಪ್ರೇಮವು ಪರಮಾತ್ಮನಿಗೆ ಸಹಜಲಕ್ಷಣ. ಗೋಪಿಯರು ವಸ್ತ್ರಾಪಹಾರದಲ್ಲಿ ಶರಣಾದಂತೆ, ಇಲ್ಲಿಯ ಪ್ರಾಕೃತದೇಹ ಗೇಹಗಳಲ್ಲಿದ್ದಿರಬಹುದಾದರೂ ಆತ್ಮತಃ ( ಅಪ್ರಾಕೃತದೇಹಿಗಳಾಗಿ ) ಮನೆಮಾರುಗಳನ್ನೆಲ್ಲ ತೊರೆದು ಅವನಿಗೇ ಶರಣುಹೋದರು. ಉಳಿದುದೇನೂ ಇಲ್ಲವೆಂದರಿತವರಿಗೇ ದೇವಭಾವ; ಅವನ ಸಂಗಸುಖವೊಂದೇ ಸತ್ಯ, ಮಿಕ್ಕುದು ಮಿಥ್ಯವೆಂದರಿವುದೇ ಸಮ್ಯಗ್ಜ್ಞಾನ. ಜಿಜ್ಞಾಸುಜ್ಞಾನಿಗಳಂತೆ ಆರ್ತ–ಅರ್ಥಾರ್ಥಿಗಳೂ ಅನುಗ್ರಹಾರ್ಹರಲ್ಲವೇ ? ಗೋಪಿಯರು ಪುಣ್ಯವಶಾತ್ ಕೃಷ್ಣನಲ್ಲಿ ಪರಮಪುರುಷನನ್ನು ಕಂಡು ಆ ದಿವ್ಯಪ್ರೇಮದಲ್ಲಿ ಅಹಂಕಾರ ಕಳೆದುಕೊಂಡು, ಜೀವನ್ಮುಕ್ತರಾಗಿ

ಬ್ರಹ್ಮಾನಂದ ಹೊಂದಿದ್ದನ್ನೋದಿದರೆ ತತ್ಸಹೋದರವಾದ ಕಾವ್ಯಾನಂದವಾಗದಿರುತ್ತದೆಯೇ ?

೪

ಚಾರಿತ್ರಿಕವಿರದಿದ್ದರೂ ಗೋಪಿಯರ ಮಧುರಭಕ್ತಿ ಭಾಗವತದಲ್ಲಿ ಕಾವ್ಯಸತ್ಯವಾಗಿ ಕಂಡರಿಸಲ್ಪಟ್ಟಂತೆ, ರಾಧಾವೃತ್ತಾಂತವೂ ನಂತರದ ಪುರಾಣಗಳಲ್ಲಿ ಕಲ್ಪಿತವಾಗಿದೆ (ನರಕಾಸುರನಿಂದ ಉದ್ಧರಿಸಿದ ೧೬೦೦೦ ಹೆಂಗಳೆಯರೊಡನೆಯೂ ಭಿನ್ನ ವ್ಯಾಪಾರಗಳಲ್ಲಿರುವ ಕೃಷ್ಣ ಒಂದೇ ಪರತತ್ವವೆಂದು ನಾರದರ ನೆಪದಲ್ಲಿ ನಮಗೆ ತಿಳಿಸುವಕಥೆ, ಅಷ್ಟಮಹಿಷಿಯರೆಂಬ ಕಥೆ–ಎಲ್ಲ ಕಲ್ಪಿತವೇ. ಇವು ಅಂತಃಪುರ ಬಾಹುಳ್ಯದ ಮೇಲೆ ಭಾಗವತಕಾರನ ಉತ್ಪ್ರೇಕ್ಷೆ, ಅಷ್ಟೇ). ಕೃಷ್ಣನು ರುಕ್ಮಿಣಿಯನ್ನು ಮಾತ್ರ ಅವಳ ಪ್ರೀತಿಗಾಗಿ ಆಗಿನ ಪದ್ಧತಿಯಂತೆ ಅಪಹರಿಸಿ ವರಿಸಿದ್ದು ದಿಟ; ಅಂತೆಯೇ ಆಕೆ ಪಟ್ಟಮಹಿಷಿ ಎನಿಸಿದಳು. ಆದರೆ ಕೃಷ್ಣನೊಡನೆ ರಾಧೆಯಷ್ಟು ಇನ್ನಾರ ಹೆಸರೂ ಸೇರದಿರುವುದು ಇನ್ನೊಂದು ಐತಿಹಾಸಿಕ ಅಚ್ಚರಿಯಾಗಿದೆ. ಭಾರತ–ವಿಷ್ಣುಪುರಾಣ–ಭಾಗವತಗಳಲ್ಲಿರದ ರಾಧೆ, ಒಮ್ಮೆಲೆ ಬ್ರಹ್ಮವೈವರ್ತಪುರಾಣದ ೧೫ನೆಯ ಅಧ್ಯಾಯದಲ್ಲಿ ಗೋಚರಿಸುತ್ತಾಳೆ. ಹಿಂದೊಮ್ಮೆ ಕೃಷ್ಣನು ವಿರಜೆಯೊಡನಿರುವಾಗ ಬಾಗಿಲಿಗೆ ಬಂದ ರಾಧೆಯನ್ನು ಶ್ರೀದಾಮನು ತಡೆಯಲು, ಆಕೆ ಕೃಷ್ಣನ ಅವತಾರಕ್ಕೂ ಶ್ರೀದಾಮನ ಅಸುರತ್ವಕ್ಕೂ ಶಾಪವಿತ್ತು, ಶ್ರೀದಾಮನಿಂದ ತಾನೂ ರಾಯಣ ಪತ್ನಿಯಾಗಿ ಕಲಂಕಿತೆ ಎನಿಸಲು ಶಾಪವಿತ್ತು, ಕೃಷ್ಣನಿಗಿಂತ ಮೊದಲೇ ಭೂಮಿಗಿಳಿದಳು. ಅದರಿಂದ ಆಕೆ ಕೃಷ್ಣನಿಗಿಂತ ವಯಸ್ಸಿನಲ್ಲಿ ಹಿರಿಯಳು. ನಂದನೊಮ್ಮೆ ಕೃಷ್ಣನೊಡನೆ ಕಾಡಿನಲ್ಲಿದ್ದಾಗ, ಮೋಡ ಮಳೆ ಹಿಡಿದು ಅಂಜಿ, ತನ್ನೆಡೆಗೈತಂದ ರಾಧೆಗೆ 'ಕೃಷ್ಣನನ್ನು ಕೊಂಡೊಯ್ದು ಗಂಡನೆಂದು ಸುಖಿಸಿಕೊಡು' ಎನ್ನುವ ಪುರಾಣಭಾಗವೇ ಗೀತಗೋವಿಂದದ 'ಮೇಘೈರ್ಮೇದುರಮಂಬರು' ಎಂಬ ಮೊದಲ ಪದ್ಯಕ್ಕೆ ಆಧಾರ. ನಮಗೆ ಉಪಲಬ್ಧವಾಗಿರುವ ಪುರಾಣದಲ್ಲಿ ರಾಧೆಯು ರಾಯಣನನ್ನು ವರಿಸದಿದ್ದರೂ 'ಶ್ರೀ–ಶಕ್ತಿ–ಲಕ್ಷ್ಮಿ' ಎಂದು ವರ್ಣಿತಳಾಗಿ ಕೃಷ್ಣನ ಕೈಹಿಡಿದಿರುವಳು; ಅಲ್ಲದೆ ಇಲ್ಲಿ ರಾಧಾ ಶಬ್ದಕ್ಕೆ ವಿಚಿತ್ರ ವ್ಯುತ್ಪತ್ತಿ ಹೇಳುವ ಪ್ರಯತ್ನಗಳಿರುವುದರಿಂದ ಇವಳು ಬಹುಶಃ ಮೂಲ ಬ್ರಹ್ಮವೈವರ್ತದಲ್ಲಿ ಕಲ್ಪಿತವಾಗಿ, ಕೃಷ್ಣನನ್ನು ಬಹಳವಾಗಿ ಆರಾಧಿಸಿದ ಆದರ್ಶ ಗೋಪಿಯಂತೆ ಚಿತ್ರಿತಳಾಗಿರಬೇಕು. ನಂತರದ ಕೃತಿಗಳಲ್ಲಿ ಈಕೆ ಅಯನಘೋಷನ ಸತಿ ಎಂದು ಉಕ್ತವಾಗಿದ್ದರೂ, ಕೃಷ್ಣಸಖಿ ಎನಿಸಿದ್ದೂ ಮುಖ್ಯವಾಗಿದೆ. ಗೀತಗೋವಿಂದದಂಥ ಶೃಂಗಾರಸಾಹಿತ್ಯದಲ್ಲಿವರು ನಾಯಕ ನಾಯಿಕೆ, ಅನುಭಾವದ ಪರಿಭಾಷೆಯಲ್ಲಿ ರಾಧೆ ನಮ್ಮೊಳಗಿನ ದೈವೀ ಕೃಪಾಕಾಂಕ್ಷೆಯ ಪ್ರತಿನಿಧಿ. ಬಂಗಾಲದ ಭಕ್ತಕವಿಗಳಿಂದ ಬೆಳೆದ ಬಳಿಕ, ಕೃಷ್ಣನೊಡನೀಕೆ ಅವಿನಾಭಾವ ಪಡೆದಿದ್ದಾಳೆ. ಸೀತಾ–ರಾಮರಂತೆ ರಾಧಾ–ಮಾಧವರ ಜೋಡಿ ನಮ್ಮ ಆದರ್ಶವಾಗಿದೆ.

೫

ಇಷ್ಟೆಲ್ಲ ಸಾಹಿತ್ಯಕಥೆಗಳಿಂದ ತಿಳಿವ ಚರಿತೆ ಎಂದರೆ, ವಸುದೇವ ಕಂಸನಿಗಂಜಿ ಕೃಷ್ಣನನ್ನು ಗೋಕುಲದಲ್ಲಿರಿಸಿದ್ದು, ಆತ ವ್ರಜವಾಸಿಗಳಿಗೆ ಬಂದ ತೊಂದರೆಗಳನ್ನೆಲ್ಲ ನೀಗಿ ಸರ್ವಾದರಣೀಯನಾಗಿ ಸರ್ವಸಂತೋಷಕರನಾಗಿದ್ದನೆಂಬುದು ಮಾತ್ರ. ಮುಂದೆ ಅವನ ಕಿರುಪ್ರಾಯದಲ್ಲಿನ ಮುಖ್ಯಘಟನೆ, ಕಂಸನಾಶ. ಕಂಸನು ಕೊನೆಗೆ ಕೃಷ್ಣ ಬಲರಾಮರನ್ನು ಮುಗಿಸಲು ಅಕ್ರೂರ ಯಾದವನ ಮೂಲಕ ಬಿಲ್ಲ ಹಬ್ಬಕ್ಕೆಂದು ಕರೆಯಿಸಿದನು ( ಗೋಕುಲ ನಿರ್ಗಮನದಲ್ಲಿ ಗೋಪಿಕಾವಿರಹವನ್ನು ಅಕ್ರೂರನಿಗೆ ನದಿಯಲ್ಲಿ ಮಿಾಯುವಾಗ ವಿಶ್ವರೂಪದೋರಿದ್ದನ್ನು ಭಾಗವತ ವಿಸ್ತರಿಸಿದೆ. ಮಥುರಾ ಪುರದಲ್ಲಿ ಬಂದ ಗೋವಿಂದನು ಕಂಸನ ಘಟ್ಟಿವಳ್ತಿ ಮನೆಗೆ ಕರೆದಾಗ ನಕ್ಕು ಮುಂದ ರಿದ ವಿಷ್ಣುಪುರಾಣದ ವೃತ್ತಾಂತ, ಭಾಗವತದಲ್ಲಿ ತ್ರಿವಕ್ರೆಯ ಗೂನು ಸರಿಪಡಿಸಿದ ಕಥೆಯಾಗಿದೆ ). ಅರಮನೆಯ ಆನೆ–ಮಲ್ಲರನಿಕ್ಕಿದ ಆ ಸೋದರರು, ಬಹುಜನಹಿತ ಪ್ರಜಾಪೀಡಕನೆನಿಸಿದ್ದ ಸೋದರಮಾವನನ್ನೂ ಮುಗಿಸಿ, ತಾಯ್ತಂದೆಗಳ ಸೆರೆ ಬಿಡಿಸಿ ದರು. ಬಳಿಕ ಆ ರಾಜ್ಯವನ್ನು ತಾನು ತೆಗೆದುಕೊಳ್ಳದೆ ಉಗ್ರಸೇನನಿಗೆ ಪುನಃ ಪಟ್ಟ ಗಟ್ಟಿದ ಕೃಷ್ಣ, ಪುರುಷೋತ್ತಮನೇ ಸರಿ.

ಹಿಂದೆ ವೈಶ್ಯರಿಗೂ ವೇದಾಧಿಕಾರವಿತ್ತು. ಘೋರ ಆಂಗಿರಸನಲ್ಲಿ ಕೃಷ್ಣನಿಗೆ ವೇದಾಧ್ಯಯನವಾದಂತೆ ಛಾಂದೋಗ್ಯೋಪನಿಷತ್ತೂ, ಉಪನಯನಾನಂತರ ರಾಮ ಕೃಷ್ಣರು ಅವಂತಿ (ಕಾಶಿ)ಯ ಸಾಂದೀಪನಿಯಲ್ಲಿ ೬೪ ದಿನ ವಿದ್ಯೆಗಲಿತಂತೆ ಪುರಾಣಗಳೂ ತಿಳಿಸುತ್ತವೆ. ವೇದ ವೇದಾಂಗಗಳಲ್ಲೂ ಬಲದಲ್ಲೂ ಕೃಷ್ಣನನ್ನುಳಿದು ಯಾರಿವ ರೆಂದು ಭೀಷ್ಮನೇ ಕೇಳುವ ರಾಜಸೂಯ ಕಾಲಕ್ಕೆ (೩೮). ಬ್ರಹ್ಮಾಸ್ತ್ರದಿಂದ ಉತ್ತರೆಯ ಗರ್ಭಪಾತಗೈದ ಅಶ್ವತ್ಥಾಮನಿಗೆ ೧೦ ವರ್ಷ ತಪವೆಸಗಿದ್ದ ಕೃಷ್ಣನು ತನ್ನ ತಪೋಬಲ ನೋಡೆಂದು, ಮೃತ ಶಿಶುವನ್ನು ಬದುಕಿಸಿದ್ದು ಭಾರತೋಕ್ತ. ಕಪ್ಪು ವಿದೇಶೀಯ ಕಾಲಯವನನೆಂಬ ಶತ್ರು ಗುಹೆಯುವರೆಗೂ ಬೆನ್ನಟ್ಟಿ ಬರುವಂತೆ ಓಡಿ, ಅಲ್ಲಿ ಅವನನ್ನು ತೀರಿಸಿದ ಕೃಷ್ಣನ ದೇಹಬುದ್ಧಿ ಬಲಗಳೆರಡೂ ಅಸಮಾನವೇ. ಕಂಸನ ಮಾವ ಮಾಗಧ ಜರಾಸಂಧನಿಂದ ತೊಂದರೆಯಾಗಲು ಕೃಷ್ಣ ಉಪಾಯ ವಾಗಿ ದುರ್ಗಮ ದ್ವಾರಕೆಗೆ ಸೇರಿದ. ಅಸ್ತ್ರ ಹಿಡಿದು ಅನಗತ್ಯ ಹಿಂಸೆಗೆಂದೂ ಆತ ಮುಂದಾಗಲಿಲ್ಲ.

ಮಹಾಭಾರತ ಸಭಾಪರ್ವದಲ್ಲಿ ಪಾಂಚಾಲಿಯ ಸ್ವಯಂವರಕ್ಕೆ ಬ್ರಾಹ್ಮಣ ವೇಷದಿಂದ ಬಂದಿದ್ದ ಪಾಂಡವರನ್ನು ಕೃಷ್ಣ ಮಾತ್ರ ಗುರುತಿಸಿದನು. ದ್ರೌಪದಿ ಯನ್ನು ಧರ್ಮತಃ ಪಡೆದುದನ್ನರುಹಿ ನರನ ಮೇಲೇರಿಬಂದವರನ್ನು ಯುದ್ಧ

ವಿಮುಖಗೊಳಿಸಿದನು. ಸೋದರತ್ತೆಯ ಮಕ್ಕಳು ಈಗ ಬಡವರಾಗಿದ್ದರೂ ಯಥೇಚ್ಛ ಕಾಣಿಕೆಗಳನ್ನಿತ್ತು ಮರಳಿದನಾ ಬಡವರ ಕೈವಾರಿ.

ಅರ್ಜುನ ಸನ್ಯಾಸಿ ಅಲೆಯುತ್ತ ಇಂದ್ರಪ್ರಸ್ಥದಿಂದ ದ್ವಾರಕೆಗೈತರಲು, ಸುಭದ್ರಾಕಲ್ಯಾಣದ ಮೂಲಕ ಕೃಷ್ಣಾರ್ಜುನರಲ್ಲಿ ಅನ್ಯೋನ್ಯ ಹೆಚ್ಚಿತು. ಖಾಂಡವ ದಹನದಲ್ಲುಳಿಸಿದ ಮಯನಿಂದ ಧರ್ಮರಾಜನಿಗೆ ಸಭಾಭವನ ಸಿದ್ಧವಾಯಿತು. ಧರ್ಮನು ರಾಜಸೂಯಕ್ಕೆ ಸಲಹೆ ಕೇಳಲು ಕೃಷ್ಣನು 'ಮಗಧ ಸಾಮ್ರಾಟನನ್ನು ಗೆಲ್ಲದೆ ನೀನಿದಕ್ಕೆ ಅಧಿಕಾರಿಯಾಗಲಾರಿ' ಎಂದ. ಜರಾಸಂಧನೂ ಬಂಧಿಸಿದ್ದ ೮೬ ರಾಜರು ನೂರಾದೊಡನೆ ರಾಜಸೂಯ ಬಲಿ ಕೊಡಲು ಸನ್ನದ್ಧನಾಗಿದ್ದ. ಧರ್ಮಸಮ್ಮತಿ ಯಿಂದ ಕೃಷ್ಣನು ಭೀಮಾರ್ಜುನರೊಡನೆ ಮಾಗಧನಲ್ಲಿಗೈದಿ 'ರಾಜರನ್ನು ಬಿಡು ವಿಯೋ ಪ್ರಾಣವನ್ನು ಬಿಡುವಿಯೋ' ಎಂದರೆ, ಆತ ರಾಜರನ್ನು ಬಿಡಲೊಪ್ಪಲಿಲ್ಲ; ಭೀಮನನ್ನಾಯ್ದುಕೊಂಡು ದ್ವಂದ್ವಕ್ಕಿಳಿದು ೧೪ ದಿನಗಳಲ್ಲಿ ಬಳಲಿ ಪ್ರಾಣಬಿಟ್ಟನು. ಹೀಗೆ ೨೦ ಅಕ್ಷೋಹಿಣಿ ಸೈನ್ಯದೊಡೆಯನನ್ನು ಉಪಾಯವಾಗಿ ಕೊಲ್ಲಿಸಿದ ಕೃಷ್ಣ ಚರಿತೆ, ಧರ್ಮಕಾರ್ಯ ಪ್ರಧಾನವಾದುದು. ಸೆರೆ ಬಿಡಿಸಿದ ರಾಜರ ನೆರವಿನಿಂದ ಧರ್ಮನು ರಾಜಸೂಯ ನಡಿಸುವಲ್ಲಿ, ಕೃಷ್ಣನ ಅಗ್ರಪೂಜೆಗೇ ಅಡ್ಡಿಯಾದ ಶಿಶುಪಾಲನನ್ನು ಕಾದಿ ಕೊಂದು, ಯಾಗವನ್ನು ರಕ್ಷಿಸಿ, ಧರ್ಮರಾಜ್ಯ ಸ್ಥಾಪಿಸಿದವನು ಆ ಕರ್ಮಯೋಗಿ.

ದ್ರೌಪದಿಯ ವಸ್ತ್ರಪ್ರದಾನ – ಅಕ್ಷಯಪಾತ್ರೆಯಂಥ ಕಾವ್ಯಕಥೆಗಳೆಷ್ಟೋ ಅವನ ಮಹಿಮೆದೋರಲೆಳಸಿದ್ದರೂ, ಮಹಾಭಾರತದಲ್ಲಿಯ ಅವನ ನಡೆ ತುಂಬ ಮಾನುಷವಾದದ್ದು. ಕುಂತಿಗೂ ಧರ್ಮನಿಗೂ ನಮಿಸುವ ಆತ ಉದ್ಯೋಗ ಪರ್ವದಲ್ಲಿ 'ನಾನು ಸಾಧ್ಯವಾದಷ್ಟೂ ಪೌರುಷದೋರುವೆ, ದೈವಾನುಷ್ಠಾನದಲ್ಲಿ ನನಗಿನಿತೂ ಶಕ್ತಿಯಿಲ್ಲ

ಅಹಂ ಹಿ ತತ್ ಕರಿಷ್ಯಾಮಿ ಪರಂ ಪುರುಷಕಾರತಃ ।
ದೈವಂ ತು ನ ಮಯಾ ಶಕ್ಯಂ ಕರ್ಮಕರ್ತುಂ ಕಥಂ ಚ ನ ॥ ಅ. ೭೮

ಎನ್ನುವನಲ್ಲ ? 'ದೇವನೆಂದೇ ನೀವು ಬಗೆವಿರಿ, ದೇವತನ ನಮ್ಮಲ್ಲಿ ಲವವಿಲ್ಲಾವು ಬಲ್ಲೆವು' ಎಂದೇ ಕುಮಾರವ್ಯಾಸನೂ ಅವನಿಂದಾಡಿಸುತ್ತಾನೆ. ಆತ ಬರಿ ಮನುಜ ನೆಂಬವರು ಮಂದಮತಿಗಳೆಂಬ ಭೀಷ್ಮವಾಕ್ಯಕ್ಕಿದು ವಿರುದ್ಧವಾದರೂ, ಮಾನುಷ ನಡೆಯು ಚರಮಸೀಮೆಯಾಗಿದೆ. ದೈವೀ ನಡೆಯನ್ನವಲಂಬಿಸುವುದಾದರೆ ಮಾನುಷ ರೂಪದಲ್ಲವತರಿಸುವ ಅಗತ್ಯವೇನಿತ್ತು ? ಮಹಾಭಾರತದಂಥ ಯುದ್ಧ ಒದಗಲು ಈ ಆದರ್ಶ ಮನುಜನೆಂತು ನಡೆದುಕೊಂಡ ? ಕೌರವರು ಅಧರ್ಮದಿಂದ ಕಿತ್ತುಕೊಂಡ ರಾಜ್ಯವನ್ನು ಬಲದಿಂದಾದರೂ ಹೊಂದದಿದ್ದರೆ ಪಾಂಡವರ ಸ್ವಧರ್ಮಪಾಲನೆಯಾ

ದೀತೇ ? ಆದರೂ ಯುದ್ಧ ತಪ್ಪಿಸಲು ಕೃಷ್ಣ ಸಂಧಾನವೆಸಗಿದನು. ಪ್ರಾಪದಿಗುಸು ರುವಲ್ಲಿ ಅದು ಸಿದ್ಧಿಸದೆಂಪರಿತರೂ ಸಿದ್ಧಿ ಅಸಿದ್ಧಿಗಳನ್ನು ಸಮನಾಗಿ ಬಗೆದು ಕರ್ಮ ಯೋಗಿಯು ಕರ್ತವ್ಯಗೈದನು. ಹಸ್ತಿನಾವತಿಯಲ್ಲಿ ವಿದುರನ ಆತಿಥ್ಯ ಪಡೆದು ಸಭೆಗೆ ಹೋಗಲು, ತನ್ನನ್ನು ಬಂಧಿಸಬೇಕೆಂದ ಕೌರವನಿಗೆ ಹಿರಿಯರು ಬುದ್ಧಿ ಹೇಳುತ್ತಿರು ವಂತೆಯೇ ಗಹಗಹಿಸಿ ಹೊರಟುಬಿಟ್ಟನು (ಗೀತೆಯಲ್ಲೇ ಯಾರೂ ನೋಡಿಲ್ಲವೆಂಬ ವಿಶ್ವರೂಪದರ್ಶನದಲ್ಲೂ ಪ್ರಕ್ಷಿಪ್ತವಾಗಿದೆ). ಬರುವಾಗ ತನ್ನ ಸೋದರತ್ತೆಯ ಮಗನೇ ಎಂದರಿತಿದ್ದ ಕರ್ಣನನ್ನು ಭೇದಿಸಲೆತ್ನಿಸಿದನು. ಆದರೆ ಯುದ್ಧ ಅನಿವಾರ್ಯ ವಾಗಲು, ತಾನಿತ್ತ ಮಾತಿನಂತೆ ಅಸ್ತ್ರ ಧರಿಸದೆ ಪಾರ್ಥಸಾರಥ್ಯ ವಹಿಸಿದನು.

ಕುರುಕ್ಷೇತ್ರದಲ್ಲಿ ಪುನಃ ಕರ್ತವ್ಯವಿಮುಖನಾದ ನರನಿಗೆ ಸ್ವಧರ್ಮಪಾಲನೆಯ ದಾರಿದೋರಿದ ಕೃಷ್ಣಾರ್ಜುನ ಸಂವಾದವನ್ನು ನಂತರದ ಮಹಾಭಾರತವು ಬಳಸಿ, ಭಗವದ್ಗೀತೆಯನ್ನಾಗಿಸಿದೆ. ಕಾರಣ ಇಂದಿನ ಗೀತಾವಾಕ್ಯ, ಚಾರಿತ್ರಿಕವಾಗಿ ಕೃಷ್ಣನವೇ ಅಲ್ಲದಿದ್ದರೂ ಅವನ ಮತವನ್ನನುಸರಿಸಿವೆ. ಧರ್ಮಕ್ಕೆ ಹೋರಾಡದಿರುವುದೂ ಅಧರ್ಮ ವೆಂಬಷ್ಟು ಉನ್ನತ ಮನುಷ್ಯಧರ್ಮವನ್ನೊರೆದ ಅವನ ನಡೆ–ನುಡಿಗೆ ಮಹಾ ಭಾರತವೇ ವ್ಯಾಖ್ಯಾನವಾಗಿದೆ. ಅಂತೆಯೇ ಗೀತಾಚಾರ್ಯನ ಪಾತ್ರ ನಮ್ಮಲ್ಲಿ ಬಹು ಮಹತ್ವ ಪಡೆದಿದೆ. ಆದರಲ್ಲೂ ಗೀತೋಕ್ತವೆಲ್ಲ ಕೃಷ್ಣನದೆಂಬಂತೆ ಕವಿಗಳು ನಿರ್ಮಿಸಿದ ಕೌಶಲ ಅದ್ಭುತ ಪ್ರಭಾವ ಬೀರಿ ಬೆಳೆದು ಬಂದಿದೆ. ವೇದೋತ್ತರ ಕಾಲದ ಭಿನ್ನ ತತ್ವಪ್ರಣಾಲಿಗಳ ಬೌದ್ಧಿಕ ಸಂಘರ್ಷವು ಕೃಷ್ಣಮುಖದಲ್ಲಿ ಸುಂದರವಾಗಿ ಸಮನ್ವಯ ಗೊಂಡಿದೆ. ಅದರಿಂದ ವೈದಿಕ ಯಜ್ಞಯಾಗಾದಿ ಕರ್ಮಕಾಂಡ – ತಪಸ್ಸು ಎಂಬರ್ಥದ ಕರ್ಮಯೋಗವನ್ನಿಲ್ಲಿ ಸ್ವಧರ್ಮ– ಕರ್ಮಕೌಶಲ ಎಂಬರ್ಥಕ್ಕೆ ಬಳಸಲಾಗಿದೆ. ಹೀಗೆ ವೇದೋಪನಿಷತ್ತುಗಳನ್ನೇ ಹಸುವನ್ನಾಗಿಸಿ, ನರನನ್ನೇ ಕರುವಾಗಿಸಿ, ಗೋವಿಂದನು ಕರೆದ ಗೀತಾಮೃತವು ಯಾರಿಗೆ ಪ್ರಿಯವಾಗದು ? ಜ್ಞಾನಯುಕ್ತ ನಿಷ್ಕಾಮಕರ್ಮವನ್ನು ಬೋಧಿಸಿದರೂ ಭಕ್ತಿ ತತ್ವವನ್ನೆತ್ತಿ ತೋರಿದ ಭಗವದ್ಗೀತೆ, 'ಎಲ್ಲ ಧರ್ಮಗಳನ್ನುಳಿದು ನನಗೆ ಶರಣಾಗು' ಎಂಬಂಥ ಸರ್ವಾರ್ಪಣವನ್ನೊರೆದುದು ಸಹಜ. ವಿಶ್ವರೂಪ ದೋರಿ ಕೃಷ್ಣ ಇದನ್ನು ನರನಲ್ಲಿ ಸಾಧಿಸಿದಂತೆ, ಸಹಜರೂಪದಲ್ಲಿ ಗೋಪಿಯರಿಂದ ಸಾಧಿಸಿದ ಚಿತ್ರವೂ ರಮ್ಯವೇ. ದುಷ್ಟದಮನ – ಶಿಷ್ಟರಕ್ಷಣ – ಧರ್ಮಶಿಕ್ಷಣಗಳೆಂಬ ಅವತಾರೋದ್ದೇಶಗಳಲ್ಲಿ ಕೊನೆಯದು ಜೀವಸಂಸ್ಕಾರ – ತತ್ವನಿರೂಪಣಗಳಿಂದ ಕೂಡಿದ್ದು, ಒಂದಕ್ಕೆ ಗೋಪೀಮನಶ್ಶೋಧನವೂ ಇನ್ನೊಂದಕ್ಕೆ ಗೀತೋಪದೇಶವೂ ನಿದರ್ಶನ.

೬

ಭಾರತ ಯುದ್ಧದಲ್ಲಿಯೂ ಕೃಷ್ಣನ ದೈವೀಭಾವದ ಕಥೆ ಕೆಲವು ಕಲ್ಪಿತವಾಗಿವೆ. ಭೀಷ್ಮರೊಡನೆ ಕಾದುವಾಗ ಕೃಷ್ಣನೇ ಚಕ್ರಹಿಡಿದು ಮುನ್ನುಗ್ಗಿದಂತೆ ೩–ನೆಯ

ದಿನಗಳ ಯುದ್ಧದಲ್ಲಿ ಪುನರುಕ್ತವಾಗಿದೆ. ಇದರ ಮೇಲೆ ಭೀಷ್ಮರು ಅಸ್ತ್ರ ಓಡಿಸುವೆನೆಂಬ ಉಪಕಥೆ ಹುಟ್ಟಿದೆ. ಆದರೆ ಕೃಷ್ಣನು ಪ್ರತಿಜ್ಞೆಯಂತೆ ಯುದ್ಧ ಮಾಡಲಿಲ್ಲವೆಂಬುದನ್ನೂ, ಅರ್ಜುನನೇ ಉತ್ಸಾಹದುಂಬಿ ಯುದ್ಧ ಪ್ರಚೋದಿತನಾಗಬೇಕಿದ್ದ ಉದ್ದೇಶ ಈಡೇರಿತೆಂಬುದನ್ನೂ ಈ ಘಟನೆಯಿಂದರಿತರೆ ಸಾಕು. ಶಿಖಂಡಿ ವೃತ್ತಾಂತವೂ ಅಲ್ಲಿ ಕಲ್ಪಿತವಾದುದು.

ಸರ್ವೇಶನಾದ ಕೃಷ್ಣನು ಜ್ಞಾನದಂತೆ ಭ್ರಾಂತಿ, ಬುದ್ಧಿಯಂತೆ ದುರ್ಬುದ್ಧಿ, ಸತ್ಯದಂತೆ ಅಸತ್ಯ, ನ್ಯಾಯದಂತೆ ಅನ್ಯಾಯ ಇವುಗಳನ್ನು ಉಂಟುಮಾಡುವನೆಂಬುದಕ್ಕೆ ಕೆಲವು ಕಥೆ ಹುಟ್ಟಿವೆ; ನಂತರ ಕೃಷ್ಣ ಕಪಟಿ ಎಂಬುದಕ್ಕೆಡೆಮಾಡಿವೆ. ಮಗನ ಕೊಂದವನನ್ನು ಸೂರ್ಯಾಸ್ತದೊಳಗೆ ಕೊಲುವೆನೆಂಬ ಅರ್ಜುನನ ಶಪಥಕ್ಕೆ, ಚಕ್ರಧಾರಿ ಯೋಗಮಾಯೆಯಿಂದ ಸೂರ್ಯನನ್ನು ಮುಚ್ಚಲು, ಸೂರ್ಯಾಸ್ತ ಭ್ರಮಿಸಿ ಹೊರಬಿದ್ದ ಜಯದ್ರಥನನ್ನು ತೀರಿಸಿದಾಗ ಅನಾಚ್ಛಾದಿತ ಸೂರ್ಯ ಹೊಳೆಯುತ್ತಿದ್ದನಂತೆ! ಕೌರವನ ಬಲವಂತದಿಂದ ಘಟೋತ್ಕಚವಧೆಗೆ ಕರ್ಣನು ಅರ್ಜುನನಿಗಾಗಿಟ್ಟುಕೊಂಡಿದ್ದ ಏಕಪುರುಷಘಾತಿನಿಯನ್ನುಪಯೋಗಿಸಿದ್ದೂ ಕೃಷ್ಣನ ದುರ್ಬುದ್ಧಿಯ ಪ್ರೇರಣೆ! ದ್ರೋಣರು ಪಾರ್ಥನೊಡನೆ ಕಾದುತ್ತ ಸಹಜವಾಗಿ ಬಳಲಿ ಬಿದ್ದರೂ 'ಅಶ್ವತ್ಥಾಮೋ ಹತಃ' ಎಂಬ ಕೃಷ್ಣಪ್ರೇರಿತ ಭೀಮನ ಸುಳ್ಳುನುಡಿಗೇಳಿ, ಮಗ ಚಿರಂಜೀವಿ ಎಂದರಿತೂ 'ನರೋವಾ ಕುಂಜರೇ ವಾ' ಎಂದು ಪ್ರಶ್ನಿಸಿ, ಧರ್ಮನ 'ಕುಂಜರ' ಎಂಬುತ್ತರ ಕೇಳಿದಾಗ ಕೆಳಗುರುಳಿದರಂತೆ! ಕರ್ಣನೊಡನೆ ಕಾದುತ್ತ ಸೋತು ಶಿಬಿರದಲ್ಲಿದ್ದ ಧರ್ಮನು, ತನ್ನ ಭೆಟ್ಟಿಗೆ ಬಂದ ಪಾರ್ಥನಿಗೆ ಕರ್ಣನನ್ನು ಕೊಲ್ಲದೆ ಬಂದವ ಬಿಲ್ಲು ಚೆಲ್ಲಬೇಕೆನ್ನಲು, ಹಾಗೆಂದವರನ್ನು ಕೊಂದು ತನ್ನ ಪ್ರತಿಜ್ಞೆಯ ಸತ್ಯ ಉಳಿಸಿಕೊಳ್ಳ ಹೊರಟ ತಮ್ಮನಿಗೆ, ಸತ್ಯ ಅಹಿಂಸೆಗಳೂ ಲೋಕಹಿತವನ್ನವಲಂಬಿಸಿರುವುವೆಂಬ ಅತ್ಯಂತ ವ್ಯಾವಹಾರಿಕಧರ್ಮವನ್ನೊರೆದವ ಕೃಷ್ಣ. ಅಂಥವನು ಕರ್ಣನ ಸರ್ಪಾಸ್ತ್ರಕ್ಕೆ ಪಾರ್ಥ ತಲೆ ತಗ್ಗಿಸಿದರೂ ತಪ್ಪಬಹುದಾಗಿರಲು, ರಥ ಒತ್ತಿದ ಕಥೆ! ಕರ್ಣನ ರಥ ಹೂತಾಗ ಅರ್ಜುನನನ್ನು ತಡೆದು ನಿಲ್ಲಿಸಿಯೂ, ಹಿಂದೆ ಅಧರ್ಮಗೈದು ಈಗ ಧರ್ಮತಃ ಕ್ಷಮೆ ಕೇಳಿದವನನ್ನು ಮಾತ್ರ ಹೊಡೆಯಿಸಿದ ಕೃಷ್ಣನೇ ಅಧರ್ಮಿ. ಇನ್ನು ಭೀಮನಷ್ಟೇಸಲ ಗದೆಯಿಂದ ಕೌರವನನ್ನು ಸೋಲಿಸಿದ್ದರೂ, ಕೊನೆಗೆ ಮಾತ್ರ ಹತಾಶನಾಗಿ ವೀರಾವೇಶದಿಂದ ಹೋರಾಡುವ ಕೌರವನಿಗೆ ತಾನೇ ಸೋಲುವಂತಾಗಲು, ಕೃಷ್ಣನು 'ಭೀಮ ಹೇಗಾದರೂ ಗೆಲ್ಲದಿದ್ದರೆ ರಾಜ್ಯ ಸಿಕ್ಕದು' ಎನ್ನುವಂತೆ ಅಶ್ವತ್ಥಾಮೋ ಹತಃ—ಎಂಬ ಸುಳ್ಳಾಡಲಂಜಿದ್ದ ಅರ್ಜುನನೀಗ ಆ ಸುಳ್ಳಾಡಿದ್ದ ಭೀಮನಿಗೆ ತನ್ನ ತೊಡೆ ತಟ್ಟಿಕೊಂಡು ತೋರಿದಂತೆ, ಅದರಿಂದ ಭೀಮನು ಅನ್ಯಾಯಯುದ್ಧ ಮಾಡಿ ಕೌರವನ ತೊಡೆ ಮುರಿದು ಪ್ರತಿಜ್ಞೆ ಪೂರೈಸಿಕೊಂಡಂತೆ, ಹಿರಿಯರಾಕ್ಷೇಪಿಸಿದರೂ ಅವನ ತಲೆಗೊದ್ದಂತೆ ಬರುವ ಕಥೆ ಕೂಡ, ಕೃಷ್ಣನನ್ನೇ

ಅನ್ಯಾಯಮೂಲವೆನ್ನುತ್ತದೆ. ಆದರೆ ಈ ಸಂದರ್ಭದಲ್ಲಿ ಕೌರವನನ್ನು ಬಯ್ಯುವವರಿಗೆ 'ಸಾಯುವ ಶತ್ರುವನ್ನು ಮೂದಲಿಸಬಾರದು' ಎನ್ನುವ ಕೃಷ್ಣ, ತಾನೇ ಅವನನ್ನು ಬಯ್ದಂತೆಯೂ ಹೇಳಿರುವುದು ಪ್ರಕ್ಷೇಪಗಳಿಗೆ ಸಾಕ್ಷಿ. ಮುಂದೆ ಕೌರವನು ಕೃಷ್ಣನ ಕುಹಕಗಳನ್ನು ಪಟ್ಟಿಮಾಡುವುದೂ, ಶಿಶುಪಾಲ ವಾಕ್ಯಗಳನ್ನೆಲ್ಲ ಸಹಿಸದ ಕೃಷ್ಣ ಅವನಿಗೆ ವಿವರವಾಗಿ ಉತ್ತರಿಸಿ 'ನಿನ್ನ ದುಷ್ಕೃತ್ಯಗಳ ಫಲ ಉಣ್ಣು' ಎನ್ನುವುದೂ, ಸೋತ ಕೌರವನು 'ಧರ್ಮಯುದ್ಧ ಮಾಡಿ ನಾನೇ ಗೆದ್ದೆ, ನೀವು ದುಃಖಿತರಾಗಿ ಇರಿ' ಎನ್ನುವುದೂ, ದೇವತೆಗಳು ಹೂಮಳೆಗರೆದು ಕೌರವನನ್ನು ಕೊಂಡಾಡುವುದೂ, ಪಾಂಡವರು ಈಗ ನಾಚಿ ತಮ್ಮ ಅಧಮಾಚರಣೆಗೆ ದುಃಖಿಸುವುದೂ, ಕೃಷ್ಣನು 'ಕಪಟದಿಂದಲ್ಲದೆ ಅವರನ್ನು ಗೆಲ್ಲಲಾಗುತ್ತಿರಲಿಲ್ಲ' ಎಂದು ಸಮರ್ಥಿಸಿಕೊಳ್ಳುವುದೂ ಎಂಥ ವಿಪರ್ಯಾಸ? 'ಯತೋ ಧರ್ಮಃ ತತೋ ಕೃಷ್ಣಃ ಯತೋ ಕೃಷ್ಣಃ ತತೋ ಜಯಃ' ಎಂದ ವ್ಯಾಸರು ಕೌರವರ ಅಧರ್ಮ, ಪಾಂಡವರ ಧರ್ಮಗಳನ್ನು ಹೇಳ ಹೊರಟವರಲ್ಲವೇ? ಧರ್ಮ ದೊಡ್ಡದು, ಗೆಲ್ಲತಕ್ಕ ಧರ್ಮಕ್ಕೆ ಹೊಂದಿಕೊಳ್ಳುವುದು ನೀತಿ (ಚತುರೋಪಾಯ ಅದರ ಅಂಗ ಮಾತ್ರ). ಅಧರ್ಮಾಧರ್ಮಗಳ ಪಕ್ಷ ಇಲ್ಲಿ ತಿರುವು ಮುರುವಾಗಿ ಗ್ರಂಥದ ಗುರಿ ಮರೆಯಿಸಿವೆ. ಅಂತೆಯೇ ಯುದ್ಧಾನಂತರ ಪಾರ್ಥ ಸಾರಥಿ ಇಳಿದ ರಥ ಉರಿದುದೂ, ಕೃಷ್ಣ ಧೃತರಾಷ್ಟ್ರನಿಗೆ ಭೀಮನ ಪ್ರತಿಮೆಯನ್ನು ಪುಡಿಮಾಡಗೊಟ್ಟುದೂ, ಗಾಂಧಾರಿಯಿಂದ ಯದುವಂಶ ನಾಶಕ್ಕೆ ಶಾಪ ಪಡೆದುದೂ ಪ್ರಕ್ಷೇಪಗಳಾಗಿವೆ.

ಧರ್ಮರಾಜ್ಯ ಸ್ಥಾಪಿಸಿದ ಕೃಷ್ಣನು ಭೀಷ್ಮರಿಂದವನಿಗೆ ಧರ್ಮೋಪದೇಶ ಕೊಡಿಸಿ, ಅವರು ದೇಹವಿಟ್ಟಾಗ 'ದುಃಖಿಸದೆ ಕಾಯವನ್ನು ಧರ್ಮಯಜ್ಞದಲ್ಲಿ ಪ್ರವರ್ತಿಸು' ಎಂದು ಕಾಮಗೀತೆಯನ್ನುಸುರಿ ಹೊರಡುತ್ತಾನೆ. ಆಗ ಅರ್ಜುನ ಮರೆತಿದ್ದ ಗೀತೆಯನ್ನು ಮತ್ತೆ ಹೇಳೆಂದು ಅನುಗೀತೆಯನ್ನು ಹುಟ್ಟಿಸಲಾಗಿದೆ. ಮತ್ತೆ ಕೊನೆಯದಾಗಿ ಅಶ್ವಮೇಧಕ್ಕೆ ಬಂದಾಗ ಉತ್ತರೆಯ ಮೃತಶಿಶುವನ್ನು ಬದುಕಿಸಿದ ಧನ್ವಂತರಿಗೆ ತಪೋಬಲವಿದ್ದಿತೆಂಬುದು ಪವಾಡವೆನಿಸಬೇಕೇ?

ಮೌಸಲಪರ್ವದ ಯಾದವರು ಕುಡಿದು ಪರಸ್ಪರ ಕಾದಾಡಿ ಮಡಿಯುವಾಗ ಅಧರ್ಮಿಗಳೆನಿಸಿದರಾಗಿ, ಕೃಷ್ಣನು ಸ್ವಜನಪಕ್ಷಪಾತದೋರಿ ಉಳಿಸಲಿಲ್ಲ. ಕಡೆಗೆ ಜರಾ ವ್ಯಾಧ(ಧಿ) ನಿಮಿತ್ತವಾಗಿ, ಕಾಡಿನಲ್ಲಿ ಧ್ಯಾನಮಾಡುತ್ತ ಸ್ವೇಚ್ಛೆಯಿಂದ ದೇಹವಿಟ್ಟ ನೆಂಬಲ್ಲಿ ದಿವ್ಯದೇಹ ಅದೃಶ್ಯವಾದುದನ್ನರಿಯಬಹುದು.

ಈ ವಿವೇಚನೆ ಕೃಷ್ಣನ ಮೂರ್ತಿಸ್ವರೂಪ ಗ್ರಹಿಸುವಲ್ಲಿ, ಆತ ಪವಾಡಪುರುಷ ನೆಂಬುದಕ್ಕಿಂತ ಅನರ್ಘಮಾನವಚರಿತೆಯ ಪುರುಷೋತ್ತಮ ಎಂಬುದನ್ನು ತಿಳಿಸಿ ತೋರುವುದು. ಕಳ್ಳ – ಕಾಮಿ – ಕಪಟಿ ಎಂಬಂಥ ಕಲ್ಪನೆಯ ವಿರೋಧಾಭಾಸಗಳ

ಸುವರ್ಣಕವಚ ಕಳಚಿ, ಅವನ ಸತ್ಯಸ್ವರೂಪ ಕಂಡೊಡನೆ ಆನಂದವೆನಿಸುವುದು. ಬಾಲ್ಯದಿಂದಲೂ ಬಲವಂತನಾದ ಅವನು ಅಪರಾಜಿತ; ಶಸ್ತ್ರಾಸ್ತ್ರವಿದ್ಯೆ ಬಲ್ಲವನಾದರೂ ಅವನ್ನು ತುಂಬ ಸಂಯಮದಿಂದ ಬಳಸಿದ ರಾಜ – ರಣನೀತಿಜ್ಞ; ವೇದ – ಧರ್ಮ– ಶಾಸ್ತ್ರಗಳನ್ನರಿತು ಲೋಕಹಿತಕ್ಕೆ ವ್ಯಾವಹಾರಿಕವಾಗಿ ಅರುಹಿದ ಸರ್ವಜ್ಞ; ಸತ್ಯ – ನ್ಯಾಯ – ದಯ – ಪ್ರೀತಿ – ಶಾಂತಿಯಂಥ ಭಾರತಸಂಸ್ಕೃತಿಯ ಶ್ರೇಷ್ಠ ತತ್ವಗಳೆಲ್ಲ ಸಾಕಾರಗೊಂಡ ಗುಣವಂತ. ಚರಿತ್ರೆಯಿಂದುದ್ಧೃತರಾದ ರಾಮ–ಕೃಷ್ಣರಿಬ್ಬರೂ ಕವಿಗಳಿಂದ ಆದರ್ಶೀಕೃತರಾದ ಮಹಾಪುರುಷರಾದುದರಿಂದ, ಇವುಗಳಲ್ಲಿ ಹಲವು ಅಂಶ ಆದಿಕಾವ್ಯದಲ್ಲಿ ಚಿತ್ರಿತವಾಗಿ ರಾಮನೂ ನಮ್ಮ ಆದರ್ಶನೆನಿಸಿದ್ದಾನೆ ನಿಜ. ಆದರೆ ಭಾರತದಲ್ಲಿ ಮೂಲತಃ ಮೂಡಿದ ಕೃಷ್ಣನ ಕೆಚ್ಚು ರಾಮನ ಪಾತ್ರದಲ್ಲಿಲ್ಲ. ರಾಮ–ಸೀತೆಯರು ಸಾತ್ವಿಕ ಆದರ್ಶದ ಸೌಮ್ಯರೂಪಗಳಾದರೆ, ಕೃಷ್ಣ–ಕೃಷ್ಣೆಯರು ಉಜ್ವಲ ಕ್ರಿಯಾಶೀಲತೆಯ ವ್ಯಾವಹಾರಿಕ ಮೂರ್ತಿಗಳು. ರಜಸ್ತೋಮ ಗುಣಗಳ ಸನ್ನಿಧಿಯಲ್ಲೂ ಆದರ್ಶವಾಗಿ ನಡೆದ ಇವರು ಸಾಮಾನ್ಯ ಲೋಕವ್ಯವಹಾರಕ್ಕೂ ಮಾದರಿ ಎನಿಸಿದ್ದಾರೆ. ಗೋಪಿಯರು ಹಾಗೂ ಕೌರವರೊಡನೆಯ ನಡೆ, ಕೃಷ್ಣನ ಪರಿಪೂರ್ಣತೆಗೆ ಸಾಕ್ಷಿ. ಇದರಿಂದ ಆತ ತನ್ನ ಕಾಲದಲ್ಲೇ ಅತಿಮಾನುಷ ದೈವೀಪುರುಷನೆನಿಸಿ ಲೋಕಪೂಜ್ಯನಾದದ್ದು ಸಹಜ. ಭಾರತದಂಥ ಇತಿಹಾಸಕಾವ್ಯದಲ್ಲೇ ಅವನ ಮಾನುಷಚರಿತೆ ದಿವ್ಯವಾಗತೊಡಗಿ, ಭಾಗವತಾದಿ ಪುರಾಣಕಾವ್ಯದಿಂದ ತುಂಬ ಬಣ್ಣ ಪಡೆದು, ಚೈತನ್ಯ–ಮೀರಾ–ಜಯದೇವ–ಕುಲಶೇಖರ–ಲೀಲಾಶುಕ–ಪುರಂದರ–ಕುಮಾರವ್ಯಾಸಾದಿ ಸಂತಕವಿಗಳಲ್ಲಿ ಅಪಾರ ಭಾವಕೋಶದ ಪರಿಧಿಯನ್ನು ಪಡೆದುಕೊಂಡಿದೆ. ಭಕ್ತರ ಬಾಳಿನ ಪ್ರಯೋಗಶಾಲೆಯಲ್ಲಿ ಪರಮತತ್ವವೆಂದು ಸಿದ್ಧನಾದ ಶ್ರೀಕೃಷ್ಣ, ತನ್ನ ಜೀವನಚರಿತದಿಂದ ನಮ್ಮ ಮನವನ್ನೂ ಆಕರ್ಷಿಸಿದ್ದಾನೆ. ಅಂತೆಯೇ ನಾವಿಂದಿಗೂ ಕೃಷ್ಣನಾಮವನ್ನು ಧ್ಯಾನಿಸುವುದು ರೂಢಿಯಾಗಿದೆ. ಅವನ ಕಥೆ ಹೇಳಿ–ಕೇಳುವವರನ್ನು ಗಂಗಾಜಲದಂತೆ ಉದ್ಧರಿಸುವುದಾಗಿದೆ. (ಭಾಗವತ ೧೦: ೧–೬).

## ಗ್ರಂಥಋಣ

೧ ಶ್ರೀಕೃಷ್ಣಚರಿತ್ರೆ–ಬಂಕಿಮರ ಅನುವಾದ ಆರ್. ವ್ಯಾಸರಾವ್. ೨ ಶ್ರೀಕೃಷ್ಣಪರೀಕ್ಷಣಂ—ಡಿ. ವ್ಹಿ. ಜಿ. ೩ ಶ್ರೀಮದ್ಭಗವದ್ಗೀತಾ ತಾತ್ಪರ್ಯ —ಡಿ. ವ್ಹಿ. ಜಿ. ೪ ವಿಷ್ಣುಪುರಾಣ—ಭಾಗವತ—ಮೂಲ, ಅನುವಾದ. ೫ ಪ್ರಸಂಗ (೩) ಶ್ರೀಕೃಷ್ಣಭಾವ —ಶ್ರೀನಿವಾಸ. ೬ ದ್ರೌಪದಿಯ ಶ್ರೀಮುಡಿ (ಜನ್ಮಾಷ್ಟಮಿ, ಇದಾವ ನ್ಯಾಯ)—ಕುವೆಂಪು. ೭ ಕೃಷ್ಣ ಐತಿಹಾಸಿಕ ವ್ಯಕ್ತಿಯೇ ?—ಎ. ಡಿ. ಪುಸಾಳ್ಕರ. (ಅನು—ಬಿ. ಪಾಂಡುರಂಗಯ್ಯ, ಸುಧಾ ೧೯–೮–೭೨)
೮ Story of Krishna—R. G. K. (weekly 27-8-72).

# ಮೈಮನಗಳ ಸುಳಿಯಲ್ಲಿ

(ವಿವೇಚನೆ)

ಸರಪು ರಾಮ ಭಟ್

"ಮೈ ಮನಗಳ ಸುಳಿಯಲ್ಲಿ", ಕನ್ನಡದ ಕಾದಂಬರಿಕಾರ ಕಾರಂತರು ಇತ್ತೀಚೆಗೆ ಬರೆದ ಕಾದಂಬರೀ ಶ್ರೇಣಿಗಳಲ್ಲಿ ಒಂದು ಕೃತಿ. ಇದು ಬಸರೂರು, ಅಂಪಾರು, ಕುಂದಾಪುರ ಸರಹದ್ದಿನ ದಕ್ಷಿಣಕನ್ನಡ ಜಿಲ್ಲೆಯ ಪ್ರಾದೇಶಿಕ ಹಿನ್ನೆಲೆಯಲ್ಲಿ ರಚಿತವಾದ ಬರೆಹ. ಆರಿಸಿಕೊಂಡ ವಸ್ತು, ವೇಶ್ಯಾಸಮಸ್ಯೆ. ಕನ್ನಡದಲ್ಲಿ ಈಗಾಗಲೇ ಹಲವು ಕಾದಂಬರಿಗಳು ಈ ಸಮಸ್ಯೆಯ ಮೇಲೆ ರೂಪುಗೊಂಡಿವೆ. ವಿಮರ್ಶಕರ ಕೃಪೆ, ಅವಕೃಪೆಗಳೆರಡಕ್ಕೂ ಪಾತ್ರವಾಗಿ ಕೋಲಾಹಲವೇ ಉಂಟಾಗಿದೆ. ಅದು ಕೇವಲ ರಚನಾವಿನಾಸಕ್ಕೆ ಮಾತ್ರ ಮೀಸಲಾಗಿತ್ತೇ ವಿನಹ, ಈ ಸಮಸ್ಯೆ ಜನಜೀವನದಲ್ಲಿ ಹಾಸುಹೊಕ್ಕಾಗಿ ಇದ್ದ ಮೇಲೆ, ಕಾದಂಬರಿಯ ವಸ್ತುವಾಗಿ ಅದನ್ನು ಸ್ವೀಕರಿಸಿದ ಬಗೆಗೆ ವಿರೋಧವಾಗಲೀ ಕೋಲಾಹಲವಾಗಲೀ ಯಾರದೂ ಬಂದಿಲ್ಲ. ಕಾರಂತರು ಆರಿಸಿಕೊಂಡ ವಸ್ತು, ವೇಶ್ಯಾಸಮಸ್ಯೆಯಾದರೂ ಅವರು ಸಮಸ್ಯೆಯನ್ನು ನೋಡುವ ದೃಷ್ಟಿ ಮಾತ್ರ, ಈ ಮೊದಲಿನ ಕಾದಂಬರಿಗಳಿಗಿಂತ ತೀರ ಭಿನ್ನವಾಗಿದೆ.

ಕಾರಂತರ ಚೊಚ್ಚಲಕೃತಿ "ಕನ್ಯಾಬಲಿ"ಯೂ ವೇಶ್ಯಾಸಮಸ್ಯೆಯ ಮೇಲೆಯೇ ರೂಪುಗೊಂಡ ಕಾದಂಬರಿ. ಸುಮಾರು ನಾಲ್ಕುದಶಕಗಳ ಹಿಂದೆಯೇ ಕಾರಂತರ ದೃಷ್ಟಿಯನ್ನು ಸೆಳೆದ ಈ ಸಮಸ್ಯೆ, ಕಾರಂತರು ಅಂದು ನೋಡಿದ ದೃಷ್ಟಿಗೂ ಇಂದು ನೋಡುವ ದೃಷ್ಟಿಗೂ ತುಂಬ ವ್ಯತ್ಯಾಸವಿದೆ. ಪರಿಪೂರ್ಣತೆಯ ದೃಷ್ಟಿಯಿಂದ ನೋಡಿದರೆ "ಕನ್ಯಾಬಲಿ" ಎಳಸು ಬರೆಹವೆನಿಸಿದರೂ ಕಾದಂಬರಿಕಾರ ಆ ಕಾಲಕ್ಕೆ ಆರಿಸಿಕೊಂಡ ವಸ್ತು ಮಾತ್ರ ನವನವೀನವಾಗಿತ್ತು. ಕಾರಂತರ "ಹುಚ್ಚು ಮನಸ್ಸಿನ ಹತ್ತುಮುಖಗಳು" ಎಂಬ ಆತ್ಮವೃತ್ತ ಓದಿದ ಜನಕ್ಕೆ ಇದರ ಪ್ರೇರಣೆಯೇನೆಂಬುದೂ ಅರಿಯದಿರದು. ಸ್ವತಂತ್ರ ಚಳವಳಿಯ ಸ್ಫೂರ್ತಿಯ ಹಿನ್ನೆಲೆಯಲ್ಲಿ ಕಾಲೇಜು ಬಿಟ್ಟ ಕಾರಂತರು ಖಾದಿ ಪ್ರಚಾರ, ಸಮಾಜಸುಧಾರಣೆ, ಹರಿಜನೋದ್ಧಾರ, ವೇಶ್ಯಾ ಕನ್ಯೆಯರಿಗೆ ಮದುವೆಯ ಪ್ರಯತ್ನ– ಎಂಬೆಲ್ಲಾ ಕಲ್ಪನೆಗಳನ್ನೂ ಕಾರ್ಯರೂಪಕ್ಕಿಳಿಸುವ ಯತ್ನದಲ್ಲಿ ತೊಡಗಿದವರು. ಆ ಕಾಲಕ್ಕೆ ಹರಿಜನ ಸಮಸ್ಯೆಯ ಮೇಲೆ "ಚೋಮನ ದುಡಿ" ಬಂತು. ವೇಶ್ಯಾಸಮಸ್ಯೆಯ ಮೇಲೆ "ಕನ್ಯಾಬಲಿ"ಯಾಯಿತು

ಕಾರಂತರು ಕನ್ಯಾಬಲಿಯಲ್ಲಿ ವೇಶ್ಯಾಸಮಸ್ಯೆಯ ಮೂಲಪರಿಸರದ ಸಮಾಜ, ಅರ್ಥಹೀನ ಕಟ್ಟು ಕಟ್ಟಳೆ ಎಂಬ ನಿರ್ಣಯಕ್ಕೆ ಬಂದು ಕ್ರೋಧಗೊಂಡು, ಲೆಕ್ಕಣಿಕೆಯನ್ನು ಕೊಡಲಿಯಂತೆ ಹಾಯಿಸಿದ್ದಾರೆ. ವಿಧವೆಯೊಬ್ಬಳನ್ನು ಸಮಾಜ ಸೂಳೆಯಾಗಿ ಪರಿವರ್ತಿಸಿದ ಬಗೆಗೆ, ಸಮಸ್ಯೆಯಿಂದ ಹೊರಗೆ ನಿಂತುಕೊಂಡು ಸಮಾಜ ಸುಧಾರಕನ ದೃಷ್ಟಿಯಿಂದ ನೋಡುವ ಪ್ರಯತ್ನ ಮಾಡಿದ್ದಾರೆ. ಸಮಾಜ ಸುಧಾರಣೆಯ ಅತಿ ಉತ್ಸಾಹ ಕಾರಂತರನ್ನು ವಿದ್ವಿಷ್ಟತೆಯ ಮಟ್ಟಕ್ಕೆ ಕೊಂಡೊಯ್ದಿದೆ. ಅದೇ ಕಾರಂತರು ಕಾಲದ ಅಂತರದಿಂದ, ತುಂಬಿಬಂದ ಜೀವನಾನುಭವಗಳಿಂದ ಪರಿಪಕ್ವತೆಗೊಂಡು ಹೊರಬಂದ "ಮೈಮನಗಳ ಸುಳಿಯಲ್ಲಿ". ವೇಶ್ಯೆಯೊಬ್ಬಳ ಮನದ ಆಳವನ್ನು ಹೊಕ್ಕು ಬಿದಕಿನೋಡುವ ಸಾಹಸಮಾಡಿದ್ದಾರೆ. ಸಮಸ್ಯೆಯಲ್ಲಿ ತಾದಾತ್ಮ್ಯ ಹೊಂದಿ ಕೃತಿ ರಚಿಸುವ ಯತ್ನ ಇಲ್ಲಿ ನಡೆದುದಾಗಿದೆ. ಸೂಳೆಯೂ ಒಂದು ಹೆಣ್ಣು. ಅವಳಿಗೆ ಮೈ ಇದ್ದಂತೆ. ಮನಸ್ಸೂ ಇದೆ. " ಅವಳ ಮೈ ಬೇರೆ, ಮನುಸ್ಸು ಬೇರೆ" ಎನ್ನುವ ಹಿನ್ನೆಲೆಯಲ್ಲಿ, ಮನಸ್ಸಿನ ಪೃಥಕ್ಕರಣ ನಡೆದು, ರತಿಸಮಸ್ಯೆಗಳ ಸೆಲೆಯನ್ನು ಹೊರಗೆಳೆದು ತೋರಿದ್ದಾರೆ. ಹೊಂದಿಕೊಂಡು ಜನಸ್ವಭಾವಗಳನ್ನು, ಕಪಟ ಕೊಕ್ಕುಗಳನ್ನು, ಸಾಚಾ ಸಜ್ಜನಿಕೆಗಳನ್ನ ವಿಮರ್ಶಿಸಿದ್ದಾರೆ. ಕೆಸರಿನಲ್ಲಿ ಕಮಲ, ಮಣ್ಣಿನಲ್ಲಿ ಚಿನ್ನವನ್ನು ತೋರಿಸುವ ಯತ್ನ ನಡೆದಿದೆ.

"ಕನ್ಯಾಬಲಿ" ಚೊಚ್ಚಲಕೃತಿಯಾಗಿ, ಅನುಭವದ ಅಭಾವದಿಂದಲೋ ಸಮಾಜ ಸುಧಾರಣೆಯ ಅದಮ್ಯ ಉತ್ಸಾಹದಿಂದಲೋ ಕಸುಗಾಯಿಯೆನಿಸಿದೆಯಾದರೂ, ಆಳವಾದ ಅನುಭವ-ಅಭ್ಯಾಸಗಳಿಂದ ಮೈಗೂಡಿದ ಪಕ್ವಫಲ " ಮೈ ಮನಗಳ ಸುಳಿಯಲ್ಲಿ".

ಕಾದಂಬರಿಯ ಕಥೆ ಸ್ಥೂಲವಾಗಿ ಇಷ್ಟು : ಬಸರೂರು ಪರಿಸರದಲ್ಲಿ ಹುಟ್ಟಿ ಬೆಳೆದ ವೇಶ್ಯೆ, ಮಂಜುಳೆ. ಅವಳ ಸಾಕುಮಗಳು ಶಾರಿ. ಕಾದಂಬರಿಯ ಆದಿ ಭಾಗದಲ್ಲಿ ಶಾರಿಯ ಕಥೆ ಬರುತ್ತದೆ. ಅವಳ ನಾಟಕದ ಗೀಳು, ಅವಳ ಸಾಕುತಾಯಿ ಮಂಜುಳೆಯಿಂದ ಬಂದ ಸ್ಥಿರ ಚರ ಸೊತ್ತಿನ ಪೋಲಿನಲ್ಲಿ ಪರ್ಯವಸಾನಗೊಳ್ಳುತ್ತದೆ ಇವಳ ಹೊಟ್ಟೆಯಲ್ಲಿ ಹುಟ್ಟಿದ ಒಬ್ಬಳೇ ಮಗಳು ಚಂದ್ರಿ. ಹೈಸ್ಕೂಲು ವಿದ್ಯಾಭ್ಯಾಸ ಪಡೆದವಳು. ವೇಶ್ಯಾವೃತ್ತಿಗೆ ಪ್ರಲೋಭನೆಗಳು ಬಂದರೂ ತಲೆಬಾಗದೆ ಸ್ವತಂತ್ರವಾಗಿ ಮರ್ಯಾದೆಯಿಂದ ದಾಂಪತ್ಯಜೀವನ ಅನುಭವಿಸಬೇಕೆಂಬ ಆಸಕ್ತಿಯಿದ್ದವಳು. ಆದರೆ ಕರ್ಣಾನುಕರ್ಣಿಕೆಯಾಗಿ ಬಂದ ಹಳೆಯ ಹೇಳಿಕೆಗಳಿಂದ ತನ್ನ ಅಜ್ಜಿ ಮಂಜುಳೆ ಪ್ರಸಿದ್ಧ ಗಾನಗಾತಿ, ನೃತ್ಯಗಾತಿಯೆಂದು ಕೇಳಿ, ಹಳೆಯ ಕಲಾಸಂಪ್ರದಾಯ ಉಳಿಸಿ ಬೆಳೆಸಿದವಳೆಂಬ ಅಭಿಮಾನ ತಾಳಿದ್ದಳು;

ಹಳೆಯ ಕಡತಗಳನ್ನು ಝಡತಿಮಾಡುತ್ತಿದ್ದಾಗ ಚಂದ್ರಿಗೆ ದೊರೆತ ಮಂಜುಳೆಯ ಆತ್ಮವೃತ್ತದಲ್ಲಿ ಸುರುಳಿ ಬಿಚ್ಚಿ ಬಂದ ಕಾದಂಬರಿ, ಈ "ಮೈ ಮನಗಳ ಸುಳಿಯಲ್ಲಿ".

ಕಾದಂಬರಿಕಾರ ಕಾರಂತರದು ಸ್ತ್ರೀಪಾತ್ರಚಿತ್ರಣದಲ್ಲಿ ಮೊದಲಿನಿಂದಲೂ ಕುದುರಿದ ಕೈ. ಅವರು ಸೃಜಿಸಿದ ಮಹಿಳಾಪಾತ್ರಗಳು ಸಮಾಜದ ಜೀವಂತ ಚಿತ್ರಣಗಳು. ಒಂದೊಂದೂ ತ್ಯಾಗಮಯಿ ಮಾತೆಯರ ಸಜೀವ ರೂಪಗಳು. ಅವರು ಆರಿಸಿಕೊಂಡ ಸ್ತ್ರೀ ಯಾವ ಸಮಾಜದ್ದೇ ಇರಲಿ, ಯಾವ ಮನೋಭಾವ ಬೆಳೆಸಿಕೊಂಡದ್ದೇ ಇರಲಿ ಓದುಗನ ಅನುಕಂಪ ಸದಾ ಅವಳ ಪಾಲಿನದು. "ಮರಳಿ ಮಣ್ಣಿಗೆ"ಯ ನಾಗವೇಣಿಯ ತ್ಯಾಗಜೀವನ, ಬದುಕನ್ನು ಮತ್ತೆ ಕಟ್ಟಬೇಕೆಂಬ ಛಲ. "ಸನ್ಯಾಸಿಯ ಬದುಕಿ"ನ ಮಾಯಿ, "ಹೆತ್ತಳಾ ತಾಯಿ"ಯ ಕುಸುಮ, ತಾಯ್ತನದ ಅದಮ್ಯ ಆಸೆಗೆ ಕಾಲುಜಾರಿದ ಬದುಕು ಅವಳದು; ಹೀಗೆ ನೂರಾರು ಪಾತ್ರಗಳು; ಪ್ರತಿಯೊಂದು ಪಾತ್ರವೂ ಆಯಾಯ ಪರಿಸರ ಹೊಂದಿದ ಜ್ವಲಂತ ಮೂರ್ತಿಗಳು. ಯಾವುದರಲ್ಲಿಯೂ ಆದರ್ಶದ ಅತಿರೇಕಗಳಿಲ್ಲ. ಆದರೆ ಹೃದಯವನ್ನು ಕೆರಳಿಸಿ, ಅನುಕಂಪದ ಸೆಲೆಯೊಡೆಯಿಸದ ಬದುಕು ಯಾರದೂ ಅಲ್ಲ. ತಾಯ್ತನದ ಬಯಕೆ, ಸೇವಾಬುದ್ಧಿ, ಸಹನೆಯ ಬದುಕು ಒಂದೊಂದೂ ಹೆಣ್ಣುಮಕ್ಕಳಲ್ಲಿ ಕಾರಂತರು ಕಾಣುವ ಗುಣವಿಶೇಷಗಳು. ಮಂಜುಳೆಯಾದರೂ ಮನುಷ್ಯಜೀವಿ, ಹೆಣ್ಣು. ಕಾರಂತರ ಬಗೆಗಣ್ಣು ಅದನ್ನು ಕಂಡಿದೆ.

ಮನಸ್ಸಿನ ಆದರ್ಶಗಳು ಏನೇ ಇದ್ದರೂ ಮೈಯ ಕರೆಯೂ ಜೀವನದ ಒಂದು ಅವಿಭಾಜ್ಯ ಅಂಗ. ಆದರ್ಶದ ಬೆನ್ನುಹತ್ತಿ ಮೈಯ ಕರೆಯನ್ನು ಲೆಕ್ಕಿಸದೆ ಮೆಟ್ಟಿ ಮೇಲೆರುವೆನೆಂದು ಯಾರಾದರೂ ಅಂದರೆ ಅದು ಬರಿಯ ಸೋಗು. ಇದು ಕಾರಂತರು ತಳೆದ ಮನೋಭಾವ. ಅವರ ಹಲವಾರು ಕಾದಂಬರಿಗಳ ಮೂಲಕ ವಿಚಾರವಂತ ಕನ್ನಡಿಗರ ಮುಂದಿಟ್ಟ ವಿಚಾರವಾದ. ಅಂತೆಯೇ ಮಂಜುಳೆ. ತಾನು ಕಲಿತ, ಆಡಿ ತೋರುತ್ತಿದ್ದ ನೃತ್ಯ ವೈವಿಧ್ಯ, ಇವೆಲ್ಲದರ ಪುರಸ್ಕರ್ತರೆಂದು ಮುಂದೆಬಂದವರು, ಬರಿಯ ತನ್ನ ಮೈಯ ಹಂಬಲದಿಂದ ಎಂಬುದನ್ನು ಅರಿತುಕೊಳ್ಳಲು ಆಕೆಗೇನೂ ತಡವಾಗಲಿಲ್ಲ. ಅಂತೆಯೇ ಆಕೆಯೂ ಅದಕ್ಕೇನೂ ಹೊರಗಾದವಳಲ್ಲ. ಮೈಯ ಹಂಬಲ ಆಕೆಯನ್ನು ಕಂಡಲೂರು ವಾಸುದೇವ ಪೈಗಳನ್ನು ಮನೆಗೆ ಕರೆಯಿಸಿಕೊಳ್ಳುವಂತೆ ಮಾಡಿತು. ಆದರೆ ಮನದ ಮಮತೆ ಬೇರು ಬಿಟ್ಟುದು ತನ್ನ ಕಲಾಪ್ರೌಢಿಮೆಯನ್ನು ನಿಜವಾಗಿ ಅರಿತ ಸುಬ್ರಾಯ ಉಳ್ಳೂರರಲ್ಲಿ. ಅವರ ಘನಸ್ತಿಕೆಯಲ್ಲಿ, ಅವರ ವಿಶಾಲಮನೋಭಾವದಲ್ಲಿ. ನಿಜವಾಗಿಯೂ ಮೈಯ ಹಂಬಲ ತೃಪ್ತಿಗೊಂಡುದು ಸ್ವಾಮಿ ಲಕ್ಷ್ಮಣತೀರ್ಥರ ನಿಜಸಖ್ಯದಲ್ಲಿ ಜೀವನದಲ್ಲಿ ಒಂದಕ್ಕೊಂದು ಹೊಂದಿಕೊಂಡು ಬರುವ ನಾಣ್ಯದ ಎರಡು ಮೈ

ಗಳು ಕಾಮಪ್ರೇಮಗಳು. ನಿಸರ್ಗದತ್ತವಾದ ಮನೋಭಾವ. ಮೈಯ ಕೀಟಲೆ ಇದನ್ನು ಮೆಟ್ಟಿನಿಲ್ಲುವೆನೆಂದು ಮನಸ್ಸು ಒಂದೊಮ್ಮೆ ಹೇಳಿತಾದರೂ ಕೊನೆಗಾದರೂ ಅದು ಸೋಲಲೇಬೇಕು ಮೈಯ ಕರೆಗೆ ಕಿವುಡಾದೆವೆಂದವರು, ಒಂದೊಮ್ಮೆ ಸಾಧಿಸಿಯೂ ತೋರಿದವರು ಆತ್ಮದ್ರೋಹಿಗಳು. ಯಾಕಂದರೆ ಕಾರ್ಯತಹ ಆಚರಿಸಿ ತೋರಿದ್ದವರೂ ಆತ್ಮಶಾಂತಿ ದೊರೆಯದೆ, ಆತ್ಮಫಲತೆ ಅಲ್ಲಿ ಇದ್ದೇ ಇರಬೇಕು. ಇದು ಅನುರಕ್ತಿ-ವಿರಕ್ತಿಗಳ ಬಗೆಗೆ ಕಾರಂತರು ತಾಳಿದ ನಿಜವಾದ ಮನೋಭಾವ. ಈ ಕಾದಂಬರಿಯಲ್ಲಿ ಆ ಭಾವ ಒಡಮೂಡಿದೆ.

ಮೈಮನಗಳ ಸುಳಿಯೊಳಗೆ ಸಿಲುಕಿದ ಮಂಜುಳೆಯ ಜೀವನದಲ್ಲಿ ಹಾದು ಹೋದ ವ್ಯಕ್ತಿಗಳು ಹಲವಾರು ಮಂದಿಗಳು. ಕಂ. ವಾ. ಪೈಗಳು, ಸುಬ್ರಾಯ ಉಳ್ಳೂರರು. ಕಂಟ್ರಾಕ್ಟರ್ ನಂಜಪ್ಪ, ಮೆಕ್ಕೆಮನೆ ಸುಬ್ರಾಯ, ವೇಷಧಾರಿ ಶೀನಪ್ಪ, ಸ್ವಾಮಿ ಲಕ್ಷ್ಮಣತೀರ್ಥರು. ಮಂಜುಳೆ ಒಬ್ಬೊಬ್ಬರ ಸಹವಾಸದಲ್ಲಿಯೂ ಪಡೆದ ಅನುಭವದ ಮೊತ್ತವೇ ಕಾರಂತರು ವಿಶದೀಕರಿಸಲು ಹೊರಟ ಲೈಂಗಿಕ ಮೌಲ್ಯಗಳು. "...ನನ್ನ ಮನೆಯಲ್ಲಿ ಉಂಡದಲ್ಲ. ನನ್ನ ಮೈಯನ್ನು ಉಂಡರು, ಮುಕ್ಕಿದರು ಇನ್ನೊಂದು ದಿವಸ ಮಣ್ಣುಮುಕ್ಕಿಸುತ್ತಾರೆ ..." ಇದು ದೇಹದ ಕರೆಗೆ ಮೈ ಮರೆತು, ತಾನೇ ಕರೆಕಳುಹಿಸಿ ಬಂದ ಕಂ. ವಾ. ಪೈಗಳ ದೇಹಸಖ್ಯದಲ್ಲಿ ಮಂಜುಳೆ ಪಡೆದ ಬದುಕು. ಸ್ತ್ರೀ ವೇಷಧಾರಿ ಶೀನನಿಗೆ ತಾನೇ ಮರುಳಾಗಿ ಮೈಕೊಟ್ಟಾಗ, ಅವನು ಅವಳ ಪಾಲಿಗೆ ಬರಿಯ ಗುಬ್ಬಚ್ಚಿಯಾದ. ಸುಬ್ರಾಯ ಉಳ್ಳೂರರಾದರೋ ಪರೇಂಗಿ ತಜ್ಞರು, ಕಲಾಭಿಜ್ಞರು, ಪ್ರವೀಣರು. ಸುಭಾಷಿಗಳು, ರಸಿಕಶ್ರೇಷ್ಠರು, ಪ್ರಮಾಣಿಕರೂ. ಮಂಜುಳೆಯ ಪ್ರೌಢಿಮೆಯನ್ನು ಮೆಚ್ಚಿ ನುಡಿಯಬಲ್ಲ ಕಲಾ ವಿಮರ್ಶಕರು. ಅವರ ತೊಡೆಯ ತೊಟ್ಟಿಲು, ಮೈಯ ಅಪ್ಪುಗೆ ಅಪ್ಯಾಯಮಾನ. ಆದರೆ ಆಕೆಯ ಮೈಯ ಕರೆಯನ್ನು ಮಣಿಸಲಾಗದ ಪರಿಸ್ಥಿತಿಗೊಳಗಾಗದ ದುರಂತ ಅವರದು. ಸ್ವಾಮಿ ಲಕ್ಷ್ಮಣತೀರ್ಥರು ಅಳುಕು ಸ್ವಭಾವದವರು. ವೃತ್ತಿಗೆ ಹೊಸಬರು. ಆಕೆಯ ಆತ್ಮವೃತ್ತದಲ್ಲಿ "....ಅವರೊಂದು ಹೊಸವೀಣೆಯಂತೆ. ಎಲ್ಲ ತಂತಿಗಳೂ ಇವೆ. ಬಿರಡೆ ಬಿಗಿದು ನಾನೇ ನುಡಿಸಬೇಕು ...ಕ್ರೀಡೆಯ ದಣಿವಾರಿತು ಅವರು ನನ್ನ ದೇಹವನ್ನೆತ್ತಿ ದೂರವೆಸೆಯದೆ ಎತ್ತಿ ತೊಡೆಯಮೇಲಿರಿಸಿಕೊಂಡರು" ಮಂಜುಳೆಯ ಮನೋಭಾವವನ್ನು ಸೂಚಿಸುವ ಮೇಲಿನಮಾತುಗಳು ಮಾಡುವ ಪರಿಣಾಮವೆಂದರೆ, ದೇಹಧರ್ಮದ ಸಮಸ್ಯೆಯನ್ನು ಎತ್ತಿತೋರುವ ಬಗೆ.

ತಾಯ್ತನದ ಬಯಕೆ, ಕಾರಂತರು ಕಂಡಂತೆ ಹೆಣ್ಣುಜೀವನದ ಒಂದು ಆಂತರಿಕ ಆಸೆ ಮಾತ್ರವಲ್ಲ ಉತ್ಕಟೇಚ್ಛೆ. ಅಂತೆಯೇ ಸೂಳೆ ಮಂಜುಳೆಯೂ

ಇದಕ್ಕೆ ಹೊರಗಾದವಳಲ್ಲ. ಕಾರಂತರ ಪ್ರಾಮಾಣಿಕತೆಯ ಮನೋಭಾವ ಈ ಪಾತ್ರದಲ್ಲಿಯೂ ಚೆನ್ನಾಗಿ ಒಡಮೂಡಿದೆ. ಮಗುವಿನ ಅಪೇಕ್ಷೆಗೆ ಕಂಟ್ರಾಕ್ಟರ್ ನಂಜಪ್ಪನಿಗೆ ಮೈಯೊಡ್ಡಿ ಬಸಿರಾದಳು ಮಂಜುಳೆ. ಆದರೆ ಆತ ಕೊಟ್ಟ ವಜ್ರ-ದುಂಗುರ ನಕಲಿಯೆಂದು ಅರಿವಾದಾಗ ಆತನ ಅಪ್ರಾಮಾಣಿಕತನಕ್ಕೆ ಮನನೊಂದು ಬೆಂದಳು. ಹೊಯ್ಯಳಿದು ಮಗು ಸತ್ತಾಗ ಅಪ್ರಾಮಾಣಿಕರ ಸಂತಾನ ಉಳಿಯುವುದಕ್ಕಿಂತ ಅಳಿಯುವುದೇ ಲೇಸೆಂಬ ಮನೋಪ್ರವೃತ್ತಿ ಬೆಳೆಸಿಕೊಂಡಳು. ನಡೆಯಿಸದ ಗಂಭೀರಮಾತುಗಳಿಗಿಂತ ಮಾತು ಕೊಟ್ಟು ಮೋಸ ಮಾಡದ ಮಂಜುಳೆಯಂತಹ ಸೂಳೆಯರ ಬದುಕೇ ಮೇಲು. ಕಾರಂತರು ಹೆಣ್ಣುಜೀವವನ್ನು ಅರಿತುಕೊಂಡ ಬಗೆ, ಅವಳ ಬದುಕಿನ ಬಗ್ಗೆ ಅವರು ತಾಳುವ ಅನುಕಂಪ, ಹೆಣ್ತನಕ್ಕೆ ಕಾರಂತರು ಸಲ್ಲಿಸುವ ಗೌರವ, ಮರ್ಯಾದೆ ಇಲ್ಲಿ ಎದ್ದು ಕಾಣುತ್ತವೆ.

ಕರಿಮುಗಿಲೆಡೆಯಿಂದ ಹಾಯ್ದುಬರುವ ಮಿಂಚಿನ ಬೆಳಕಿನಂತೆ ನಾಲ್ಕೈದು ವಾಕ್ಯಗಳಲ್ಲಿ ಕಾರಂತರು ಚಿತ್ರಿಸಿದ ಎರಡು ದಂಪತಿಗಳ ಚಿತ್ರಣ ಅದ್ವಿತೀಯ: ಅಜರಾಮರ. ಮನಗೂಡದೆ ಮೈಗೂಡಿಸಿದ ಕಟ್ಟಳೆಯ ಮದುವೆಯ ಬಂಧನಕ್ಕೊಂದು ಸವಾಲು. ಮೇಲ್ಜಾತಿಯ ದಂಪತಿಗಳು ರಾಮಪ್ಪಯ್ಯ ಅಡಿಗಳು–ಕಾವೇರಮ್ಮ. ಅಂತೆಯೇ ಕೀಳ್ಮಟ್ಟದವರೆಂದು ಪರಿಗಣಿಸಲ್ಪಟ್ಟ ಹರಿಜನರ ಜೋಡಿ ದುಗ್ಗಿ-ಪಮ್ಮ. ಹೊಲಸುಮಾಡಿದ ಮಗು ಮುಂದೇನು ಮಾಡುತ್ತದೆಯೆಂಬುದರ ಅರಿವಿದ್ದೂ ಮಡದಿ ಕಾವೇರಮ್ಮ ಬರುವವರೆಗೂ ಎತ್ತಿಹಿಡಿಯುವಷ್ಟು ಸಂಯಮ ಧರಿಸಿದ ರಾಮಪ್ಪಯ್ಯ ಅಡಿಗಳು. ಮಗು ಹೊಲಸು ತಿಂದಾಗ ಮಡದಿಯನ್ನೇ ಗದರಿಸುತ್ತಾರೆ. ಒಬ್ಬರನ್ನೊಬ್ಬರು ಬಿಟ್ಟರಿಯದ ಮುದಿಪಮ್ಮ ಕುರುಡಿದುಗ್ಗಿ. ಒಬ್ಬರಿಗೊಬ್ಬರು ಆತುಕೊಂಡೇ ಬದುಕಿನ ಭವಣೆಗೆ ತಲೆಕೊಟ್ಟು ನಡೆದವರು. ದೊರೆತ ಗಂಜಿಯಲ್ಲಿ ಕುರುಡಿಯ ಹಸಿವಡಗಿಸಿ ಉಳಿದುದನ್ನು ತಾನುಂಡು ಆತ್ಮಾನಂದ ಹೊಂದುತ್ತಾನೆ ಹರಿಜನರ ಪಮ್ಮ. ಈ ಎರಡೂ ದಂಪತಿಗಳನ್ನು ಕಂಡ ಮಂಜುಳೆಗೆ ಅನುಭಾವದಿಂದ ಜ್ಞಾನೋದಯವಾಯಿತು. ಅಗ್ನಿಗೆ ಏಳುಸುತ್ತು ಬಂದು ಸತಿಪತಿಗಳಾದವರು ಅಡಿಗಳು ಕಾವೇರಮ್ಮ. ಇವಾವುದರ ಕೋಲಾಹಲವೂ ಇಲ್ಲದೆ ಮಿಲನಗೊಂಡವರು ಪಮ್ಮ-ದುಗ್ಗಿ. ಅಗ್ನಿಗೆ ಏಳುಸುತ್ತು ಬಂದರೂ ಒಂದೇ, ಎಪ್ಪತ್ತು ಸುತ್ತು ಬಂದರೂ ಒಂದೇ. ಮನಸ್ಸು ಕೂಡದ ಮದುವೆ, ಬದುಕಿಗೆ ಪೂರಕವಲ್ಲ. ಮಾತು ಕೊಟ್ಟು ಮೋಸಮಾಡದ ಬಾಳೇ, ಬಾಳು. ಮಂಜುಳೆ ಕಂಡ ನಿತ್ಯಸತ್ಯ. ಮದುವೆಯ ಸಮಸ್ಯೆಗೆ ಕಾರಂತರು ಹಿಡಿದ ಕೈಗನ್ನಡಿ.

ಅರಿಸಿಕೊಂಡ ವಸ್ತು, ವೇಶ್ಯಾಸಮಸ್ಯೆಯಾದರೂ ಎಂದೂ ವೈಚಿತ್ರ್ಯ ಮೀರಿದ ಮಾತುಗಳು ಕಾದಂಬರಿಯಲ್ಲಿ ಹುಡುಕಿ ತೆಗೆಯಲೂ ಸಿಗಲಾರವು. ಕಾರಂತರ

ಮನೋಧರ್ಮವೇ ಅಂಥಾದ್ದು. ಸಮಸ್ಯೆಯ ವಿಶ್ಲೇಷಣೆಯೆಂಬ ಹೆಸರಿನಲ್ಲಿ, ಹಲವಾರು ಕನ್ನಡ ಕಾದಂಬರಿಗಳಲ್ಲಿ ಕಾಮಕೇಳಿಯ ವಿವರಣೆಯನ್ನೊಳಗೊಂಡ ವರದಿಯೋದಿ ಬೇಸತ್ತ ಕನ್ನಡದ ಜನಕ್ಕೆ ವೇಶ್ಯೆಯೊಬ್ಬಳ ಒಳತೋಟಿಯೇನೆಂದು ಅರಿಯಬಲ್ಲ, ಆ ಮೂಲಕ ರತಿಸಮಸ್ಯೆಯ ಮೇಲೆ ಕ್ಷಕಿರಣ ಬೀರಿ ಓದುಗರನ್ನು ವಿಚಾರದ ಗುಂಗಿಗೆ ಇಳಿಸಬಲ್ಲ ಪದ್ಮಭೂಷಣ ಡಾ. ಕೋಟ ಶಿವರಾಮ ಕಾರಂತರು ಇತ್ತೀಚಿನ ದಿನಗಳಲ್ಲಿ ಬರೆದ ಕಾದಂಬರಿ, 'ಮೈಮನಗಳ ಸುಳಿಯಲ್ಲಿ'.

# ಮೈಸೂರುಪ್ರದೇಶದ ಪ್ರಕಟಿತ ಶಾಸನಗಳ ಸಮೀಕ್ಷೆ ಹಾಗೂ ಅಪ್ರಕಟಿತ ಶಾಸನಗಳ ಸೂಚಿ

ಎಸ್. ಶೆಟ್ಟರ್
ಎಸ್. ರಾಜಶೇಖರ

| ಅ ಸಂ. | ಗ್ರಾಮ | ತಾಲೂಕು | ಜಿಲ್ಲೆ | ಕ್ರಿ ಶ | ಆಳುವಅರಸ | ಅರಸುಮನೆತನ | ಶಾಸನದ ವಿವರ | ವರದಿ ಮತ್ತು ಉಲ್ಲೇಖ |
|---|---|---|---|---|---|---|---|---|
| ೪೪. | ವಾಗಟ | ಹೊಸಕೋಟೆ | ಬೆಂಗಳೂರು | ೧೩೫೫ | ಹರಿಹರ I | ಸಂಗಮ | ವಾಯಿಜಣ್ಣ ಪುತ್ರ .. ಲಿದೇವ ಮತ್ತು ವ್ಯಾಪಾರಿಗಳಿಂದ ವರವ ರಾಜದೇವರಿಗೆ ದತ್ತಿ. | ಆ.ಸ.ಮೈ. ಆ.ರಿ. ೧೯೧೯, ಪು. ೩೩ |
| ೪೫ | ಹೊಂಗನೂರು | ಚಾಮರಾಜ ನಗರ | ಮೈಸೂರು | ೧೩೬೬ | ಬುಕ್ಕ I | ,, | ಹೊಂಗನೂರಿನ ಗವುಡ ಕಾಳಪ್ಪ ಮತ್ತು ಇತರರು ಅಲ್ಲದೆ ಎಲ್ಲಾ ೧೮ ಜಾತಿಯವರೂ ಅಂಕನಾಥ ದೇವಸ್ಥಾನದ ಪಾತ್ರದವಳಿಗೆ ಕೊಟ್ಟ ದತ್ತಿ. | ಆ.ಸ.ಮೈ. ಆ.ರಿ. ೧೯೧೭, ಪು. ೪೭ |
| ೪೬. | ವಾಗಟ | ಹೊಸಕೋಟೆ | ಬೆಂಗಳೂರು | ೧೩೭೧ | ಹರಿಹರII | ,, | ಸೋಮಯದೇವರಿಗೆ ಪಮ್ಮಣ್ಣ ನಿಂದ ಐದು ಕೊಳಗ ಭೂದತ್ತಿ. | ಆ.ಸ.ಮೈ. ಆ.ರಿ. ೧೯೧೯, ಪು. ೩೪ |

| ಅ.ಸಂ | ಗ್ರಾಮ | ತಾಲೂಕು | ಜಿಲ್ಲೆ | ಕ್ರಿ.ಶ. | ಆಳುವ ಅರಸ | ಅರಸು ಮನೆತನ | ಶಾಸನದ ವಿವರ | ವರದಿ ಮತ್ತು ಉಲ್ಲೇಖ |
|---|---|---|---|---|---|---|---|---|
| ೪೭. | ವಾಗಟ | ಹೊಸಕೋಟೆ | ಬೆಂಗಳೂರು | ೧೩೭೭ | ಹರಿಹರII | ಸಂಗಮ | ತ್ರುಟಿತ. ಚಂದ್ರಭೂಷಣದೇವ ಒಡೆಯರಿಂದ ಭಾಗೀರಥಿಪುರದ ವರದರಾಜದೇವರಿಗೆ ಬಿಟ್ಟ ದತ್ತಿ. | ಆ.ಸ.ಮೈ. ಆ.ರಿ. ೧೯೧೯, ಪು. ೩೪ |
| ೪೮. | ,, | ,, | ,, | ೧೩೮೮ | ,, | ,, | ಸವಕಲು. ವರದರಾಜದೇವರಿಗೆ ಬಿಟ್ಟ ದತ್ತಿ ಅಲ್ಲದೆ ಕ್ರಿಯಾಶಕ್ತಿ ದೇವನ ಉಲ್ಲೇಖವಿದೆ. | ,, |
| ೪೯. | ಜೋಡಿಲ-ಕ್ಕೊಂಡನಪಳ್ಳಿ | ,, | ,, | ೧೩೭೯ | ,, | ,, | ದೇವಪ್ಪ ಒಡೆಯ, ರಾಚರಸ ಮತ್ತು ಹುಲ್ಲೂರಿನ ಗೌಂಡ ಪ್ರಜೆಗಳಿಂದ ಮಂಡಲಪುರುಷನಿಗೆ ಲಕ್ಕಗೊಂಡನಹಳ್ಳಿ (ರಾವ್ಪಸಮುದ್ರ) ಯನ್ನು ಅಗ್ರಹಾರವಾಗಿ ಬಿಟ್ಟ ದತ್ತಿ. | ಆ.ಸ.ಮೈ. ಆ.ರಿ. ೧೯೧೯, ಪು. ೩೩ |
| ೫೦. | ಹಂಪಸಮುದ್ರ | ಗೌರಿಬಿದನೂರು | ಕೋಲಾರ | ೧೪೦೯ | ದೇವರಾಯ | ,, | ಭೀಮುಸಂದ್ರದ ರಾಯರಸನು ತನ್ನ ಒಡೆಯ ಪೆನುಗೊಂಡೆ ರಾಜ್ಯದ ಮಂತ್ರಿ ನರಸಿಂಹದೇವ ಒಡೆಯನಿಗೆ ಪುಣ್ಯವಾಗಲೆಂದು ಹಂಪಸಮುದ್ರದ ಕೆರೆಗೆ ತೂಬೊಂದನ್ನು ಕಟ್ಟಿಸಿದ. | ಆ.ಸ.ಮೈ.ಆ.ರಿ. ೧೯೧೮, ಪು. ೫೧ |

| ಅ ನಂ. | ಗ್ರಾಮ | ತಾಲೂಕು | ಜಿಲ್ಲೆ | ಕ್ರಿ.ಶ. | ಆಳುವ ಅರಸ | ಅರಸು ಮನೆತನ | ಶಾಸನದ ವಿವರ | ವರದಿ ಮತ್ತು ಉಲ್ಲೇಖ |
|---|---|---|---|---|---|---|---|---|
| ೫೧. | ಹೆಗ್ಗವಾಡಿ | ಚಾಮರಾಜ ನಗರ | ಮೈಸೂರು | ೧೪೨೬ | ದೇವರಾಯ II | ಸಂಗಮ | ದೇವರಾಯ ಒಡೆಯರ ಅಳಿಯ ದೇವರಸನಿಂದ ಹೆಗ್ಗವಾಡಿಯ. ಸಂಬುನಾಥ ದೇವರ ನಂದಾದೀವಿಗೆಗೆ ದತ್ತಿ. | ಆ.ಸ. ಮೈ. ಆರಿ. ೧೯೧೭, ಪು. ೪೮ |
| ೫೨. | ವಾಗಟ | ಹೊಸಕೋಟೆ | ಬೆಂಗಳೂರು | ೧೪೩೦ | ದೇವರಾಯ II | ,, | ಲಕ್ಕಣ್ಣ ಒಡೆಯ ಅಪ್ಪಣೆಯ ಮೇರೆಗೆ ವರದರಾಜ ದೇವರಿಗೆ ಬಿಟ್ಟ ಕೆಲವು ತೆರಿಗೆ ವಿನಾಯಿತಿ. | ಆ ಸ.ಮೈ.ಆ.ರಿ. ೧೯೧೯, ಪು. ೩೪ |
| ೫೩. | ವಡಿಗೇಹಳ್ಳಿ | ,, | ,, | ೧೪೩೮ | ,, | ,, | ತ್ರುಟಿತ. ಕಟಿ ...ಯೀಳಿಪುರದ ಕೆರೆ ಯನ್ನು ದುರಸ್ತಿ ಮಾಡಿದ ಒಗಟ್ಟದ ಸಿವನಿಸೆಟ್ಟಿಗೆ ದತ್ತಿ. | ,, |
| ೫೪. | ವಾಗಟ | ,, | ,, | ೧೪೯೬ | ಇಮ್ಮಡಿ ನರಸಿಂಗ | ಸಳುವ | ಇಮ್ಮಡಿ ನರಸಿಂಗರಾಯನ ಅಳಿಯ ಕೃಷ್ಣರಾಯ ಒಡೆಯನಿಂದ ವರದರಾಜ ದೇವರಿಗೆ ದತ್ತಿ. | ,, |
| ೫೫. | ವಡಿಗೇಹಳ್ಳಿ | ,, | ,, | ೧೫೧೨ | ಕೃಷ್ಣದೇವ ರಾಯ | ತುಳುವ | ವೀರ ನರಸಿಂಹರಾಯ ಅಧಿಕಾರಿ ....ಕೃಣನಾಯಕನಿಂದ ಭೂದತ್ತಿ. | ಅದೇ, ಪು. ೩೬ |

| ಅ.ನಂ | ಗ್ರಾಮ | ತಾಲೂಕು | ಜಿಲ್ಲೆ | ಕ್ರಿ.ಶ. | ಆಳುವಅರಸ | ಅರಸುಮನೆತನ | ಶಾಸನದ ವಿವರ | ವರದಿ ಮತ್ತು ಉಲ್ಲೇಖ |
|---|---|---|---|---|---|---|---|---|
| ೫೬. | ನಂಜನಗೂಡು | ನಂಜನಗೂಡು | ಮೈಸೂರು | ೧೫೧೪ | ಇಮ್ಮಡಿ ನರಸಿಂಗ | ಸಳುವ | ತ್ರುಟಿತ. ಸುತ್ತೂರು ಮಠದ ಸ್ವಾಮಿಗಳ ಉಲ್ಲೇಖ ಮತ್ತು ಸಂಗಮೇಶ್ವರ ದೇವರಿಗೆ ದತ್ತಿ. | ಆ.ಸ.ಮೈ.ಆ.ರಿ. ೧೯೧೮, ಪು. ೫೭ |
| ೫೭. | (ಡೆಪ್ಯುಟಿ ಕಮೀಶನರ, ಮೈಸೂರು) | | | ೧೫೧೬ | ಕೃಷ್ಣದೇವ ರಾಯ | ತುಳುವ | ತಾಮ್ರಶಾಸನ. ಅರಸನು ನಾಗಮಂಗಲದ ಚಿಕ್ಕಬ್ಬೆಹಳ್ಳಿ, ಚೆನ್ನಪಟ್ಟಣದ ಹಲವುಮಾರ ಹೊಸಹಳ್ಳಿ ಮತ್ತು ಬಿಲ್ಲಗೊಂಡನದ ವೆಂಗೇನಹಳ್ಳಿಗಳನ್ನು ವ್ಯಾಸತೀರ್ಥರಿಗೆ ವಿರೂಪಾಕ್ಷ ದೇವರ ಸಮ್ಮುಖದಲ್ಲಿ ಸರ್ವಮಾನ್ಯವಾಗಿ ಬಿಟ್ಟದತ್ತಿ. | ಆ.ಸ.ಮೈ. ಆ.ರಿ. ೧೯೧೯, ಪು.೩೪-೩೫ |
| ೫೮. | ದೇವನೂರು | ನಂಜನಗೂಡು | ಮೈಸೂರು | ೧೫೧೭ | ,, | ,, | ಸಾಳುವ ಗೋವಿಂದರಾಜನಿಂದ ಸುತ್ತೂರು ಮಠದ ಸ್ವಾಮಿಗಳಿಗೆ ಭೂದತ್ತಿ. | ಆ.ಸ.ಮೈ.ಆ.ರಿ. ೧೯೧೮, ಪು.೫೨-೫೩ |
| ೫೯. | ನಂಜನಗೂಡು | ,, | ,, | ೧೫೨೧ | ,, | ,, | ತ್ರುಟಿತ. ಸಂಗಮೇಶ್ವರ ದೇವರಿಗೆ ಕೊಟ್ಟ ದತ್ತಿ ಮತ್ತು ಸುತ್ತೂರು ಮಠದ ಸ್ವಾಮಿಗಳ ಉಲ್ಲೇಖ. | ಅದೇ, ಪು. ೫೩ |

| ಅ ಸಂ. | ಗ್ರಾಮ | ತಾಲೂಕ | ಜಿಲ್ಲೆ | ಕ್ರಿ.ಶ. | ಆಳುವಅರಸ | ಅರಸುಮನೆತನ | ಶಾಸನದ ವಿವರ | ವರದಿ ಮತ್ತು ಉಲ್ಲೇಖ |
|---|---|---|---|---|---|---|---|---|
| ೬೦. | ಅಬ್ಲೂರು | ಚನ್ನಪಟ್ಟಣ | ಬೆಂಗಳೂರು | ೧೫೨೩ | ಕೃಷ್ಣದೇವ ರಾಯ | ತುಳುವ | ತಾಮ್ರಶಾಸನ. ಅರಸನು ವ್ಯಾಸ ತೀರ್ಥರಿಗೆ ತಲವ್ರ.. ... ಸ್ಯಪಲ್ಲಿ (ಬ್ರಹ್ಮಣ್ಣಯ ತೀರ್ಥಪುರ ಯನ್ನು ವಿಠಲೇಶ್ವರ ದೇವರ ಸಮಕ್ಷಮ ದಲ್ಲಿ ಸರ್ವಮಾನ್ಯವಾಗಿ ಕೊಟ್ಟ ದತ್ತಿ. ಶಾಸನ ಬರೆದವನು ಸಭಾ ಪತಿ, ಕೊರೆದವನು ಮಲ್ಲಣ. | ಆ.ಸ.ಮೈ.ಆ.ರಿ. ೧೯೧೯, ಪು. ೩೫ |
| ೬೧. | ಸರ್ಜಾಪುರ | ಆನೇಕಲ್ | ,, | ೧೫೨೬ | ,, | ,, | ಸವಕಲು ಗವುಡನು ದೇವಸ್ಥಾನ ವೊಂದನ್ನು ಬಹುಶಃ ಕಟ್ಟಿಸಿ ಅಥವಾ ದುರಸ್ತಿ ಮಾಡಿದ. | ಅದೇ, ಪು. ೩೬ |
| ೬೨. | ದೇವಿಸೆಟ್ಟಿಹಳ್ಳಿ | ಹೊಸಕೋಟೆ | ,, | ,, | ,, | ,, | ತ್ರುಟಿತ. ದೇವರಾಯನ ಅಪ್ಪಣೆ ಯಂತೆ ... ಪ ನಾಯಕನಿಂದ ವೊಗ ಟ್ಟದ ವರದರಾಜದೇವರಿಗೆ ಮತ್ತು ವರಾಳದೇವರಿಗೆ ದತ್ತಿ. | ,, |

| ಅ ಸಂ. | ಗ್ರಾಮ | ತಾಲೂಕು | ಜಿಲ್ಲೆ | ಕ್ರಿ.ಶ. | ಆಳುವಅರಸ | ಅರಸುಮನೆತನ | ಶಾಸನದ ವಿವರ | ವರದಿ ಮತ್ತು ಉಲ್ಲೇಖ |
|---|---|---|---|---|---|---|---|---|
| ೬೩. | ಉಮ್ಮತ್ತೂರು | ಚಾಮರಾಜ ನಗರ | ಮೈಸೂರು | ೧೫೪೫ | ಸದಾಶಿವ ರಾಯ | ತುಳುವ | ನಂದಿಹಾಳದ ಮಹಾಮಂಡಳೇಶ್ವರ ಓಭಳದೇವ ಮಹಾ ಅರಸನಿಂದ ಉಮ್ಮತ್ತೂರು ಸೀಮೆಯ ನಾಲ್ಕು ಅಗ್ರಹಾರದ ಮಹಾಜನಗಳಿಗೆ ದತ್ತಿ. | ಆ.ಸ ಮೈ.ಆ.ರಿ. ೧೯೧೭, ಪು. ೪೯ |
| ೬೪. | ನಂಜರಾಜಪುರ | ,, | ,, | ,, | ,, | ,, | ನಂದಾಲದ ಮಹಾಮಂಡಳೇಶ್ವರ ತಿಮ್ಮರಾಯದೇವ ಮಹಾ ಅರಸನ ಅಧಿಕಾರಿ ವೆಂಗಳಪ್ಪನಿಂದ ಯಾಚೆಂಬಳಿಗ್ರಾಮದ ದತ್ತಿ. | ಅದೇ, ಪು. ೫೦ |
| ೬೫. | ತುಮಕೂರು | ತುಮಕೂರು | ತುಮಕೂರು | ೧೫೬೦ | ,, | ,, | ಮಹಾಮಂಡಳೇಶ್ವರ ಜಗನ್ನಾಥಯ ದೇವ ಮಹಾರಾಜನಿಂದ ತುಮಕೂರಿನ ಪ್ರಸನ್ನ–ತಿರುವೆಂಗಡನಾಥನಿಗೆ ಭೂದತ್ತಿ. | ಆ.ಸ.ಮೈ.ಆ.ರಿ. ೧೯೧೮, ಪು.೫೩ |
| ೬೬. | ಮಸ್ಕಲ್ | ಹಿರಿಯೂರು | ಚಿತ್ರದುರ್ಗ | ೧೫೮೯ | ವೆಂಕಟಪತಿ ರಾಯ | ಅರವೀಡು | ಮಹಾಮಂಡಳೇಶ್ವರ ಶ್ರೀವೀರ ಪ್ರತಾಪ ವೆಂಕಟಪತಿರಾಯನಿಂದ ಹಿರಿಯೂರಿನ ವೀರಯನಿಗೆ ದತ್ತಿ. | ,, |

| ಅ.ನಂ. | ಗ್ರಾಮ | ತಾಲೂಕು | ಜಿಲ್ಲೆ | ಕ್ರಿ.ಶ. | ಆಳುವಅರಸ | ಅರಸುಮನೆತನ | ಶಾಸನದ ವಿವರ | ವರದಿ ಮತ್ತು ಉಲ್ಲೇಖ |
|---|---|---|---|---|---|---|---|---|
| ೬೭. | ಸರ್ಜಾಪುರ | ಆನೇಕಲ್ | ಬೆಂಗಳೂರು | ೧೬೦೧ | ವೆಂಕಟಪತಿ ರಾಯ | ಅರವೀಡು | ತಾಮ್ರಶಾಸನ. ಅರಸನು ಪೆರುಂಗೊಲತ್ತೂರು (ವೆಂಕಟರಾಯಪುರ) ಗ್ರಾಮವನ್ನು ರಾಮಾರ್ಯನಿಗೆ ಸರ್ವಮಾನ್ಯವಾಗಿ ಬಿಟ್ಟದತ್ತಿ. ಶಾಸನ ಬರೆದವನು ಕಾಮಾಕ್ಷಿ, ಕೊರೆದವನು ಕಾಮಯೂಚಾರ್ಯ. | ಆ.ಸ.ಮೈ. ಆ.ರಿ. ೧೯೧೯, ಪು. ೩೩ |
| ೬೮. | ನಂಜರಾಜಪುರ | ಚಾಮರಾಜನಗರ | ಮೈಸೂರು | ೧೬೦೫ | ,, | ,, | ನಂಜರಾಜ ಒಡೆಯರು ತನ್ನ ತಂದೆ ತಾಯಿಗಳಿಗೆ ಶಿವಲೋಕ ಪ್ರಾಪ್ತವಾಗಲೆಂದು ದೇವಸಿಂಗ ದೇವರ ಸಾನಿಧ್ಯದಲ್ಲಿ ಉಮಂಬಳಿ (ನಂಜರಾಜಪುರ) ಗ್ರಾಮವನ್ನು ಲಕುಮಣಭಟ್ಟ ಮತ್ತಿತರರಿಗೆ ಕೊಟ್ಟ ದತ್ತಿ. | ಆ.ಸ.ಮೈ.ಆ.ರಿ. ೧೯೧೭, ಪು. ೫೧ |
| ೬೯. | ಬೊಮ್ಮನಬಂಡೆ | ಹೊಸಕೋಟೆ | ಬೆಂಗಳೂರು | ೧೬೦೯ | ,, | ,, | ತ್ರುಟಿತ. ಬಹುಶಃ ಹೊಸಹಳ್ಳಿಯ ನಾಗಯನಿಂದ ದತ್ತಿ. | ಆ.ಸ.ಮೈ. ಆ.ರಿ. ೧೯೧೯, ಪು. ೩೬ |

| ಅ.ನಂ. | ಗ್ರಾಮ | ತಾಲೂಕು | ಜಿಲ್ಲೆ | ಕ್ರಿ ಶ | ಆಳುವಅರಸ | ಅರಸುಮನೆತನ | ಶಾಸನದ ವಿವರ | ವರದಿ ಮತ್ತು ಉಲ್ಲೇಖ |
| --- | --- | --- | --- | --- | --- | --- | --- | --- |
| ೭೦. | ಬೆಟ್ಟದಹಳ್ಳಿ | ಚಾಮರಾಜ ನಗರ | ಮೈಸೂರು | ೧೬೧೩ | ವೇಂಕಟಪತಿ ರಾಯ | ಅರವೀಡು | ತ್ರುಟಿತ. ತಿರುಮಲರಾಜಯ್ಯ ನಾಯಕನಿಂದ ಬೆಟ್ಟದಹಳ್ಳಿಯ ದತ್ತಿ. | ಆ.ಸ.ಮೈ.ಆ.ರಿ. ೧೯೧೭, ಪು. ೫೧ |
| ೭೧. | ಕೊರಟಗೆರೆ | ಕೊರಟಗೆರೆ | ತುಮಕೂರು | ೧೬೩೩ | ಶ್ರೀರಂಗರಾಯ | ,, | ಸನದು. ಕೊರಟಗೆರೆ ಮತ್ತು ಮಿಡಿಗೇಸಿ ನಾಯಕರುಗಳ ಮಧ್ಯೆ ನಡೆದ ಕದನ. ಸೊಣ್ಣೆಗೌಡನು ಮಿಡಿಗೇಸಿಯ ನಾಯಕನನ್ನು ಪರಿಣೆ ಎಂಬಲ್ಲಿ ಸೆರೆಹಿಡಿದು ತಲೆ ತರಿದು, ಕೊರಟಗೆರೆಯ ನಾಯಕ ರಣಭೈರೆಗೌಡನಿಂದ ಜಾಗೀರೊಂದನ್ನೂ ಪಡೆದ | ಆ.ಸ.ಮೈ.ಆ.ರಿ. ೧೯೧೮, ಪು. ೫೪–೫೫ |
| ೭೨. | ಮುಳುವಾಗಿಲು | ತೀರ್ಥಹಳ್ಳಿ | ಶಿವಮೊಗ್ಗ | ೧೬೬೦ | ಶ್ರೀರಂಗ ರಾಯII | ,, | ತಾಮ್ರಶಾಸನ. ಅರಸನಿಂದ ರಣಘಟ ಮತ್ತು ಹಿರೇಕಲ್ಯಾಣಿ ಗ್ರಾಮಗಳ ದತ್ತಿ. | ಆ. ಸ.ಮೈ. ಆ.ರಿ. ೧೯೧೯, ಪು. ೩೭ |
| ೭೩. | ಅಬ್ಬಿನಹೊಳೆ | ಹಿರಿಯೂರು | ಚಿತ್ರದುರ್ಗ | ೧೬೬೪ | ,, | ,, | ಶಾನುಭೋಗಿಕೆ ಅಧಿಕಾರದ ಬಗ್ಗೆ ನಡೆದ ಒಪ್ಪಂದ. | ಆ.ಸ. ಮೈ.ಆ.ರಿ. ೧೯೧೮, ಪು. ೫೪ |

| ಅ.ನಂ. ಗ್ರಾಮ | ತಾಲೂಕು | ಜಿಲ್ಲೆ | ಕ್ರಿ.ಶ. | ಆಳುವಅರಸ | ಅರಸುಮನೆತನ | ಶಾಸನದ ವಿವರ | ವರದಿ ಮತ್ತು ಉಲ್ಲೇಖ |
|---|---|---|---|---|---|---|---|
| ೭೪. ಮಧುಗಿರಿ | ಮಧುಗಿರಿ | ತುಮಕೂರು | ೧೬೮೭ | ಶ್ರೀರಂಗ ರಾಯ | ಅರವೀಡು | ಅರಸನ ಅಪ್ಪಣೆಯಂತೆ ಕಾಳಚಿಕ್ಕಪ್ಪ ಗೌಡನು ಮದ್ದಗಿರಿ ಮತ್ತು ಕಂಬದ ಕೋಟೆಯ ಗೌಡಿಕೆಯನ್ನು ರಂಗೇಗೌಡ ಮತ್ತು ರಾಮೇಗೌಡರಿಗೆ ಕೊಟ್ಟುದು. | ಆ.ಸ.ಮೈ.ಆ.ರಿ. ೧೯೧೮, ಪು. ೫೫ |
| ೭೫. ವೀರದೇವನಪುರ | ನಂಜನಗೂಡು | ಮೈಸೂರು | ೧೫೮೮ | ನಂಜರಾಜ ಒಡೆಯ | ಉಮ್ಮತ್ತೂರು | ನಂಜರಾಯನಿಂದ ನಂಜಲು-ಗೂಡು ಶ್ರೀಕಂಠದೇವರಿಗೆ ದೇವರಾಯಪುರದ ಸರ್ವಮಾನ್ಯ ದತ್ತಿ. | .. |
| ೭೬. ಉಮ್ಮತ್ತೂರು | ಚಾಮರಾಜ ನಗರ | ,, | — | ಅಂಕುಶ ರಾಯ ಒಡೆಯ | ಅರವೀಡು | ಅಧಿಕಾರಿ ತಿಮ್ಮರಸಯ್ಯನಿಂದ ದತ್ತಿ. | ಆ.ಸ. ಮೈ.ಆ.ರಿ. ೧೯೧೭, ಪು. ೫೪ |

(ಮುಂದುವರಿಯುವುದು)

# ಒರೆಗಲ್ಲು

---

## ೧. ವಾಹಿಲ–ಓಹಿಲ

ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ
ಕೀಳು **ವಾಹಿಲದೇವ** ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನು ಕಱೆಯದು ಕಾಣಾ ರಾಮನಾಥ[1]

ಇದು ಜೇಡರದಾಸಿಮಯ್ಯನ ಒಂದು ವಚನ ಇಲ್ಲಿ ಬಂದಿರುವ 'ವಾಹಿಲದೇವ' ಯಾರು ಎಂಬುದು ಪ್ರಶ್ನೆ. ಈ ಅಂಶವನ್ನು ವಿಚಾರಮಾಡುವುದು ಈ ಲೇಖನದ ಉದ್ದೇಶ. ಈ ವಚನವನ್ನು ವಚನಪಿತಾಮಹ ಫ. ಗು. ಹಳಕಟ್ಟಿಯವರು

ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ
ಕೀಳು **ವಹಿಲದೇವ**, ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥ[2]

ಎಂದು ಇಟ್ಟಿದ್ದಾರೆ. ಇದನ್ನೇ ತಾವು ಸಂಪಾದಿಸಿದ 'ದೇವರದಾಸಿಮಯ್ಯನ ವಚನಗಳು' ಕೃತಿಯಲ್ಲಿಯೂ ಇಟ್ಟಿದ್ದಾರೆ. ಇಲ್ಲಿ ಬಂದಿರುವ '**ವಹಿಲದೇವ**' ಎಂಬಂಶ ಗಮನಾರ್ಹವಾದದು. ಶ್ರೀಯುತ ಬಿ. ಎಸ್. ಸಣ್ಣಯ್ಯನವರು, "ದೇವರ ದಾಸಿಮಯ್ಯನ ವಚನಗಳು" ಎಂಬ ಶೀರ್ಷಿಕೆಯಲ್ಲಿ ಈ ವಚನಗಳನ್ನು ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಗೊಳಿಸಿದ್ದಾರೆ. ಅಲ್ಲಿ ಅವರು ಈ ವಚನವನ್ನು

ಕೀಳು ಡೋಹರ ಕಕ್ಕ ಕೀಳು ಮಾದರ ಚೆನ್ನ
ಕೀಳು **ಓಹಿಲದೇವ** ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥ[3]

ಎಂದು ಹೇಳಿ, ಶ್ರೀ ಫ. ಗು. ಹಳಕಟ್ಟಿಯವರು ಕೊಟ್ಟಿರುವ "**ವಹಿಲದೇವ**" ಎಂಬುದನ್ನು ಅಡಿಟಿಪ್ಪಣಿಯಲ್ಲಿ ಪಾಠಾಂತರವಾಗಿ ಸೂಚಿಸಿದ್ದಾರೆ. ಇಲ್ಲಿ "**ವಹಿಲದೇವ**", "**ಓಹಿಲದೇವ**" ಎರಡಾಗಿದೆ.

---

೧. ಸಂ. ಎಚ್. ದೇವೀರಪ್ಪ, ಆರ್. ರಾಚಪ್ಪ: 'ಜೇಡರದಾಸಿಮಯ್ಯನ ವಚನಗಳು' ತರಳ ಬಾಳು ಪ್ರಕಾಶನ, ಸಿರಿಗೆರೆ. ೧೯೭೪. ಪು: ೧೯; ವ. ಸಂ: ೭೯.

೨. ಸಂ. ಫ. ಗು. ಹಳಕಟ್ಟಿ: ವಚನಶಾಸ್ತ್ರಸಾರ; ಭಾಗ ೧; ಶಿವಾನುಭವ ಗ್ರಂಥಮಾಲೆ ವಿಜಾಪುರ. ೧೯೩೧

೩. ಪ್ರಬುದ್ಧಕರ್ನಾಟಕ: ೪೬–೪ ಪುಟ: ೧೩೦.

ಇವೆಲ್ಲವುಗಳನ್ನು ಆಕರಗ್ರಂಥಗಳನ್ನಾಗಿಟ್ಟುಕೊಂಡು, 'ದೇವರದಾಸಿಮಯ್ಯನ ವಚನಗಳು' ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿದ ಡಾ. ಎಲ್. ಬಸವರಾಜು ಅವರೂ ಈ ವಚನವನ್ನು ಶ್ರೀಯುತ ಸಣ್ಣಯ್ಯನವರಲ್ಲಿರುವಂತೆಯೇ ಇಟ್ಟಿದ್ದಾರೆ[೪] ಓಹಿಲ ದೇವ ಎಂಬ ಪಾಠಾಂತರವನ್ನು ಅಂಗೀಕರಿಸಿದ್ದಾರೆ.

ಮೊದಲಬಾರಿಗೆ ಈತನ ವಚನಗಳನ್ನು ಸಂಪಾದಿಕೊಟ್ಟ ಶ್ರೀ ಫ. ಗು ಹಳಕಟ್ಟಿ ಯವರು 'ವಹಿಲದೇವ' ಯಾರು ಎಂಬ ವಿಷಯವನ್ನು ತಿಳಿಸಿಲ್ಲ. ನಂತರದ ಇವನ್ನು ಸಂಪಾಸಿದ ಶ್ರೀ ಬಿ. ಎಸ್. ಸಣ್ಣಯ್ಯನವರು ಹಾಗೂ ಡಾ. ಎಲ್ ಬಸವರಾಜುಅವರು 'ವಹಿಲದೇವ' ಅಲ್ಲ, 'ಓಹಿಲದೇವ' ಎಂಬ ನಿಲುವನ್ನು ತಳೆದು ಈ ಬಗೆಗೆ ವಿಚಾರವಮಾಡಿಲ್ಲ. ಈ ವಚನಗಳನ್ನು ಹಿರಿಯರಾದ ಶ್ರೀ ಎಚ್. ದೇವೀರಪ್ಪ ನವರೊಂದಿಗೆ ಸಂಪಾದಿಸುವಾಗ ಈ ಸಮಸ್ಯೆ ತಲೆದೋರಿತು. ನಮ್ಮಲ್ಲಿರುವ ಹಸ್ತ ಪ್ರತಿ ತಾಳೆ ಪ್ರತಿ)ಯಲ್ಲಿ 'ವಾಹಿಲದೇವ' ಎಂದೇ ಇದೆ. ನಾವು ಅದನ್ನೇ ಅಂಗೀಕರಿ ಸಿದ್ದೇವೆ. ಇಲ್ಲಿನ ಸಮಸ್ಯೆ ಎಂದರೆ ವಾಹಿಲ ಯಾರು? ಎಂಬುದು. ಇದು ಶ್ರೀಯುತ ಸಣ್ಣಯ್ಯನವರಾಗಲಿ, ಡಾ. ಎಲ್. ಬಸವರಾಜು ಅವರಾಗಲಿ ಹೇಳಿರುವಂತೆ 'ಓಹಿಲ'. ಆದರೆ ಅವನು 'ಕೀಳು' ಎಂದು ಸಂಬೋಧಿಸಲು ಕಾರಣವೇನು ? ಎಂಬುದು ಒಂದು ಅಂಶ. ಪ್ರಾಚೀನ ಹಸ್ತಪ್ರತಿಗಳಲ್ಲಿ 'ವಾ' 'ವೋ' ಲಿಪಿಗಳಿಗೆ ಇರುವ ವ್ಯತ್ಯಾಸ ತೀರ ಅಲ್ಪ. 'ವಾ' ಅನ್ನು 'ವೋ' ಎಂದು ಹಸ್ತಪ್ರತಿಕಾರ ಬರೆದಿರಬಹುದು. ಆದುದರಿಂದ ಶ್ರೀಯುತರು 'ವೋ' ವನ್ನು 'ಓ' ಸ್ವರವೆಂದು ಗ್ರಹಿಸಿರಬಹುದು. ಏಕೆಂದರೆ 'ಓ' ಸ್ವರವನ್ನು 'ವೋ' ಎಂದು ಬರೆಯುತ್ತಿದ್ದುದು ರೂಢಿಯಲ್ಲಿದ್ದಿತು.[೫] ಆದುದರಿಂದ ಅದು ಸ್ವರ 'ಓ' ಅಲ್ಲ, 'ವಾ' ಇರಬೇಕು.

ಈಗ 'ವಾಹಿಲ' ಮತ್ತು 'ಓಹಿಲ' ಯಾರು ಎಂಬಂಶವನ್ನು ವಿಚಾರ ಮಾಡೋಣ. ಇಲ್ಲಿ ನಾವು ಮೊದಲು ಗಮನಿಸಬೇಕಾದ ಅಂಶ 'ವಾಹಿಲ'–'ಓಹಿಲ' ಬೇರೆಬೇರೆ ಎಂಬುದು.

'ವಾಹಿಲ', ತಮಿಳುನಾಡಿನ ಅರುವತ್ತುಮೂವರು ಪುರಾತನರಲ್ಲಿ ಒಬ್ಬ ಅಲ್ಲಿ ಅವನನ್ನು 'ವಾಹಿಲ್ಯ' ಎಂದು ಕರೆಯಲಾಗಿದೆ. ಈತನ ಬಗೆಗೆ ಒಂದು ರಗಳೆಯೂ ರಚಿಸಲ್ಪಟ್ಟಿದೆ. ವಾಹಿಲ್ಯನನ್ನು ಕುರಿತು ಪೆರಿಯಪುರಾಣದಲ್ಲಿ ಈ ರೀತಿ ಹೇಳಿದೆ

---

೪. ಸಂ. ಡಾ. ಎಲ್. ಬಸವರಾಜು : 'ದೇವರದಾಸಿಮಯ್ಯನ ವಚನಗಳು'. ಗೀತಾ ಬುಕ್ ಹೌಸ್, ಮೈಸೂರು, ೧೯೬೦, ಪುಟ : ೬೩. ವ. ಸಂ. ೧೨೬.

೫. ಡಾ. ಡಿ. ಎಲ್. ನರಸಿಂಹಾಚಾರ್: 'ಗ್ರಂಥಸಂಪಾದನೆ'. ಶಾರದಾ ಮಂದಿರ ಮೈಸೂರು ಎರಡನೆಯ ಮುದ್ರಣ (೧೯೬೦). ಪುಟ: ೭೯

'ತೊಂಡೀರ ಮಂಡಲದ ಮಯೂರಾಖ್ಯಪುರ'ದಲ್ಲಿ ವಾಹಿಲ್ಯನೆಂಬ ಭಕ್ತನಿದ್ದನು. ಕುಲದಲ್ಲಿ ಶೂದ್ರನಾದವರೂ ಶೀಲವಲ್ಲಿ ಭದ್ರ. ತನ್ನ ದೇಹವೇ ಶಿವನ ಮನೆಯೆಂದು ಸುಜ್ಞಾನಯೋಗದಿಂದ ಶಿವನಿಗೆ ಅಷ್ಟವಿಧಾರ್ಚನೆ ನಡೆಸುತ್ತಿದ್ದನು. ಇವನ ಭಕ್ತಿಗೆ ಮೆಚ್ಚಿ ಶಿವನು ಈತನಿಗೆ ಗಣಪದವಿಯನ್ನು ಇತ್ತನು'[೬] ಈ ಭಕ್ತನನ್ನು ಕುರಿತು ರಗಳೆ[೭]ಯಲ್ಲಿ ಈತನು ಶೂದ್ರನೆಂದೂ "ಸರ್ವದೊಳು ಶಿವಪ್ಪನೆಂದು ತಾಂ ಕಾಣುತಂ, ಸರ್ವಮುಂ ಶಿವನೆಂದು ಚಿತ್ತದೊಳು ಕಾಣುತಂ" ಇದ್ದ ಯೋಗಿಪವರನೆಂದೂ, ಈತನು "ನಡೆದುದೇ ಗಂಗೆ, ನಿಂದುದೇ ತೀರ್ಥ, ನುಡಿದುದೇ ವೇದ, ಇದ್ದುದೇ ಕಾಶಿ, ಪುಟ್ಟಿತೇ ಘನಶಿವಭಕ್ತಿ" ಯಾಗಿದ್ದಿತು. ಇಂತಹ ಮಹಾಯೋಗಿಯ ಅಂತರಂಗಮಂದಿರದಲ್ಲಿ ಶಿವನು ಸದಾಕಾಲವಲ್ಲಿಯೂ ನೆಲೆಸಿರುವನೆಂದು ಹೇಳಲಾಗಿದೆ. ಪೀಠಿಕೆಯಲ್ಲಿ ಬರೆಯುತ್ತಾ ಶ್ರೀ ಎಚ್. ದೇವೀರಪ್ಪನವರು. "ವಾಹಿಲ, ವಾಹಿಲಾರ, ವಾಹಿಲ ಒಬ್ಬನ ಹೆಸರುಗಳೇ, ಅಸಂಖ್ಯಾತರಲ್ಲೊಬ್ಬನಾದ ಸೌರಾಷ್ಟ್ರದ ಓಹಿಲದೇವನೇ ಬೇರೆ"[೮] ಎಂದು ಹೇಳಿದ್ದಾರೆ. ಈ ರಗಳೆಯಲ್ಲಿ ಆತನನ್ನು "ವಸುಮತೀಭಾಗ್ಯದಂತಿಪ್ಪ ಶಿವಭಕ್ತ" ನೆಂದೂ "ದೇಹಮೆ ಭರ್ಗಗೃಹಮಾಗಿ ಮಿಗೆ ನೆಗಳಿ ಪೂಜಿಸುತೆ ಪರಮಹರುಷಿತನಾಗಿ"[೯]ದ್ದನೆಂದೂ ವರ್ಣಿಸಲಾಗಿದೆ.

ಸುರಂಗಕವಿ ತನ್ನ "ತ್ರಿಷಷ್ಟಿ ಪುರಾತನ ಚಾರಿತ್ರ"ದಲ್ಲಿಯೂ ಈ ಕಥೆಯನ್ನು ಅಳವಡಿಸಿದ್ದಾನೆ. "ಚೋಳದೇಶದ ತಿರುಪೊನ್ನಪುರದಲ್ಲಿ ಶಿವಭಕ್ತಿಸಂಪನ್ನನಾದ ವಾಹಿಲ್ಯನು ವಾಸಿಸುತ್ತಿದ್ದನು. ಗುರುಕೃಪೆಯಿಂದ ಹೃದಯಕಮಲದಲ್ಲಿ ಲಿಂಗವನ್ನು ಧರಿಸಿ, ಭಾವಕುಸುಮವಗಳಿಂದ ಲಿಂಗಾರ್ಚನೆ ಮಾಡುತ್ತಿದ್ದನು. ಇವನ ಭಕ್ತಿಯನ್ನು ಪ್ರದರ್ಶಿಸಲು ಶಿವನು ಶಿವಸದ್ಗೋಷ್ಠಿಯಿಂದ ನೆರೆದ ತಾಣಕ್ಕೆ ಬಂದು ತಾನು ಒಬ್ಬ ಶ್ರೋತೃವಾಗಿ ಕುಳಿತುಕೊಳ್ಳುವನು. ಒಬ್ಬ ಜಂಗಮನನ್ನು ಪ್ರೇರೇಪಿಸಿ 'ವಿಭೂತಿ ರುದ್ರಾಕ್ಷಿಯಿಂದ ಶೋಭಿಸುವ ನಿನ್ನ ಲಿಂಗಾರ್ಚನೆಯನ್ನು ಯಾರೂ ಕಂಡರಿಯರು, ಕೇಳರಿಯರು' ಎಂದು ನುಡಿದನು. ಆಗ ವಾಹಿಲ್ಯ ತನ್ನ ವಕ್ಷಸ್ಥಲವನ್ನು ಸುರಗಿಯಿಂದ ಇರಿದುಕೊಂಡು ಕಲ್ಪತರು ಕುಸುಮಗಳಿಂದ ಪೂಜೆಗೊಂಡ ಶಿವ

---

೬. ಸಂ. ಎಚ್. ದೇವಿರಪ್ಪ, ಆರ್. ರಾಜಪ್ಪ : 'ಜೇಡರದಾಸಿಮಯ್ಯನ ವಚನಗಳು'. ಟಿಪ್ಪಣಿ (ಅ), ಕಥಾಸಂದರ್ಭಗಳು. ಪುಟ: ೪೧.

೭. ಈ ರಗಳೆ, ಹರಿಹರ ಕೃತವಲ್ಲವೆಂದು 'ಶಿವಶರಣ ಸಂಪುಟ'ದಲ್ಲಿ ಹೇಳಲಾಗಿದೆ

೮. ಸಂ: ಎಚ್. ದೇವಿರಪ್ಪ . 'ಶಿವಶರಣ ಸಂಪುಟ', ಬೆಂಗಳೂರ ವಿಶ್ವವಿದ್ಯಾಲಯ ೧೯೬೭: ಪು. ೯೦.

೯. ಅದೇ : ಪು; ೨೨೨

ಲಿಂಗವನ್ನು ತೋರಿಸುವನು. ಇದನ್ನು ಕಂಡ ಭಕ್ತಕಲೆ ಸಂತೋಷದಿಂದ ಉದ್ಗಾರವನ್ನು ಮಾಡಿತು. ಶಿವನು ಪ್ರತ್ಯಕ್ಷನಾಗಿ ವಾಹಿಲ್ಯನನ್ನು ಕೈಲಾಸಕ್ಕೆ ಕೊಂಡೊಯ್ದು ಗಣಪದವಿಯಿತ್ತನು.'[೧೦]

ನಿಜಗುಣಶಿವಯೋಗಿಗಳು ತಮ್ಮ ಪುರಾತನರ ತ್ರಿವಿಧಿಯೊಳಗೆ ಈತನನ್ನು

> ಪರಮನಂ ಮನಸಾಂತರದೊಳರ್ಚಿಸಿ ಮುಕ್ತಿ
> ತರುಣಿಯೊಡನಗಲದಿರುತಿರ್ಪೋಹಿಲನೆನ್ನ
> ದುರಿತ ಸಂಕುಳವನೊರೆಸುವುದು

ಎಂದು ಪ್ರಾರ್ಥಿಸಿದ್ದಾರೆ. ಇಲ್ಲಿ ಅವರು ಹೇಳಿರುವ ಘಟನೆ, ವಾಹಿಲ್ಯರಿಗೆ ಅನ್ವಯಿಸುವುದು. ಹೆಸರನ್ನು ಓಹಿಲ ಎಂದು ಹೇಳಿದ್ದಾರೆ. ಇದು ಕೇವಲ ಛಂದಸ್ಸಿಗಾಗಿ ಮಾಡಿಕೊಂಡ ಬದಲಾವಣೆ ಇರಬೇಕು.

ಲಕ್ಕಣದಂಡೇಶ ತನ್ನ ಶಿವತತ್ವಚಿಂತಾಮಣಿಯಲ್ಲಿ,

> ಮೃಡನ ಮನದೊಳ್ ಧರಿಸಿಯುತಿಭಕ್ತಿಯಿಂದ ಸುಖ
> ನುಡಿ ನಡೆಯು ನೋಟ ಪರುಷನವೆನಿಪವೊಳಗಾಗಿ
> ಯುಡತುತಿಪ್ಪತಿಪದಾರ್ಥಂ ಭಾವಲಿಂಗಕ್ಕೆ ಕೊಡುತಿರಲು ಶಿವನು ತಾನೆ
> ಕಡು ಹರುಷದಿಂದ ಷಡ್ದರುಶನದೊಳೊಂದನೀ
> ನೊಡರಿಸುಯೆನಲ್ಕೊಲ್ಲದಾಂ ಪ್ರಕಟವಾಗೆನೆನೆ
> ದೃಢಚಿತ್ತದಿಂ ಮೆಚ್ಚಿಸಿದ ವಾಹಿಲಾರಿಯ ಸುಚರಣಾಂಬುಜಕ್ಕೆ ಶರಣು

ಎಂದು ಶರಣುಮಾಡಿದ್ದಾನೆ. ಇಲ್ಲಿ 'ವಾಹಿಲಾರಿ' ಎಂದಿದ್ದರೂ ಕಥೆ ವಾಹಿಲ್ಯನಿಗೆ ಸಂಬಂಧಿಸಿದ್ದೇ ಆಗಿದ್ದು, ಛಂದಸ್ಸಿನ ಅನುಕೂಲಕ್ಕಾಗಿ 'ವಾಹಿಲಾರಿ' ಎಂದಿಟ್ಟುಕೊಳ್ಳಲಾಗಿದೆ. ಮತ್ತು ಆ ಕಾಲಕ್ಕೆ 'ವಾಹಿಲಾರಿ' ಎಂಬ ಹೆಸರೂ ಬಳಕೆಯಲ್ಲಿರಬೇಕು.

ತ. ಸು. ಶಾಮರಾಯರು ವಾಘಿಲ, ವಾಹಿಲಾರಿ, ವಾಹಿಲ್ಯ ಎಂಬ ಹೆಸರುಗಳು ಒಬ್ಬನದೆಂದು ಹೇಳಿದ್ದಾರೆ. 'ಚೋಳದೇಶದ ತಿರುಪೊನ್ನೆ ಎಂಬ ಪುರದಲ್ಲಿದ್ದ ಈ ಶರಣನು ನಿರ್ಗುಣಪೂಜೆ ಮಾಡುತ್ತ ಶಿವನು 'ಸಾಕಾರಪೂಜೆಯನ್ನು ಬಿಡುವರೆ'

---

೧೦. ಸಂ : ಡಾ. ಆರ್. ಸಿ ಹಿರೇಮಠ, 'ತ್ರಿಷಷ್ಟಿ ಪುರಾತನ ಚಾರಿತ್ರಂ', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೬, ಪ್ರಸ್ತಾವನೆ; ಪುಟ : ೨೯೬.

೧೧. ಸಂ. : ಎಚ್. ದೇವೀರಪ್ಪ : 'ಶಿವತತ್ವಚಿಂತಾಮಣಿ', ಮೈಸೂರು ಪ್ರಾಚ್ಯಸಂಶೋಧನಾ ಇಲಾಖೆ, ಮೈಸೂರು, ೧೯೬೦. ಪುಟ : ೩೨೧ ಪ : ೫೦

ಎಂದು ಕೇಳಿಸಲು, ತನ್ನ ಎದೆಯನ್ನು ಬಗಿದು ಲಿಂಗವನ್ನು ತೋರಿ ಶಿವಕೃಪೆ ಪಡೆದನು'[೧೩] ಎಂದು ಹೇಳಿದ್ದಾರೆ

ಇದಿಷ್ಟು ವಾಹಿಲ್ಯನನ್ನು ಕುರಿತು ಇರುವ ಸಾಹಿತ್ಯ. ಇವೆಲ್ಲವುಗಳಿಂದ ಈತನು ಶೂದ್ರನೆಂದೂ ಅಂತರಂಗ ಶಿವಪೂಜೆ ಮಾಡಿ, ಶಿವಕೃತೆ ಪಡೆದನೆಂದೂ ವಿದಿತವಾಗುತ್ತದೆ.

'ಓಹಿಲದೇವ' ಗುಜರಾತಿನ ವಿಳಾಸವತಿ ಪಟ್ಟಣದ ನಿಃಕುಂಭ ರಾಜನ ಮಗ. ಬಹಳ ಕಾಲ ಮಕ್ಕಳಾಗದಿರಲು ಶಿವನನ್ನು ಬೇಡಿ ಪಡೆದ ಒಬ್ಬನೇ ಮಗ. ಕಾಲಾನಂತರದಲ್ಲಿ ನಿಃಕುಂಭರಾಯನು ಮರಣವನ್ನಪ್ಪಲು ಅವನ ದೇಹಕ್ಕೆ ಅಗ್ನಿಸ್ಪರ್ಷ ಮಾಡಲಾಯಿತು. ಹತ್ತಿರದಲ್ಲಿದ್ದ ಆತನ ಮಗನು ತನ್ನ ತಂದೆ ಎಂದು ಬರುವನೆಂದು ಕೇಳಲು ಅಲ್ಲಿ ನೆರದಿದ್ದ ಹಿರಿಯರು "ಎಲೆ ಕುಮಾರಕ ಕೇಳು, ನಿಮ್ಮಯ್ಯನೆಂದುವುಂ ಬಾರನೈ, ಎಲೆ ಕಂದ ನಿಮ್ಮರಸನುರಿದುಪೋದಂ ಬಾರನೆಲೆ ಕಂದ, ಸತ್ತನುರಿದಂ ಭಸ್ಮವಾದನಿನ್ನುಂ ಬಾರ"[೧೪] ಎಂದು ಹೇಳಿದರು. ಕುಮಾರನು ಕೌತುಕಗೊಂಡು ಮನದಲ್ಲಿ ಮಹಾವಿರಕ್ತಿಯನ್ನು ತಳೆದು "ತನಗೆಂತೆನುತ್ತಾ ಕುಮಾರಕಂ ಕೇಳ್ವುತಿರೆ" ಶಿವಭಕ್ತನೊಬ್ಬನು "ನಿನಗೆ ಈ ವಿಧಿಯೆಂದು ಭಕ್ತನುಳ್ಳದನುಸುರೆ, ಈ ಸಾವುದಂ ಮಾಣಿಸಲ್ಕೆ ಬಲ್ಲವರುಂಟೆ" ಎಂದು ಓಹಿಲ ಕೇಳುವನು. ಅದಕ್ಕೆ ಆ ಭಕ್ತನು, ಈ ಸಾವಿನ ದುಃಖವನ್ನು ನಿವಾರಿಸುವವನು ಒಬ್ಬನೇ 'ಸೌರಾಷ್ಟ್ರಪತಿ ಸೋಮನಾಥ' ಎಂದು ಹೇಳುವನು. ಆ ಕ್ಷಣದಲ್ಲಿಯೇ ಉಟ್ವಸಪುರವನ್ನು ಸೀಳ್ದು ಕೌಪೀನ ಧಾರಿಯಾಗಿ, ಭಸಿತವನ್ನು ಧರಿಸಿ. ರಾಜ್ಯವನ್ನು ತೋರೆದು, ಸೌರಾಷ್ಟ್ರ ಸೋಮನಾಥನನ್ನು ಹುಡುಕುತ್ತಾ ಹೊರಟು ಆತನ ಬಳಿ ಬಂದು, ಆತನನ್ನೇ ನೋಡುತ್ತಾ ಕುಳಿತುಕೊಳ್ಳುವನು. ಹೊತ್ತಾದ ಮೇಲೆಯೂ ಹಾಗೆಯೇ ಕುಳಿತಿದ್ದ ಈತನನ್ನು ಕಂಡು ಪೂಜಾರಿಯು ಹೊರಗೆಳೆದು ಹಾಕಿ ಬೀಗ ಹಾಕಿಕೊಂಡು ಮನೆಗೆ ಹೋದನು. ಓಹಿಲಯ್ಯ ದುಃಖದಿಂದ ಸೋಮನಾಥನಿಗೆ ಮೊರೆಯಿಡುವನು. ಶಿವನು ಈತನ ಮೊರೆ ಕೇಳಿ ಪೂಜಾರಿಯ ಕನಸಿನಲ್ಲಿ ಬಂದು ಗಂಟಲನ್ನು ತ್ರಿಶೂಲದಿಂದ ಒತ್ತಿ "ಎನ್ನಣುಗಂ, ಎನ್ನ ಭಕ್ತಂ, ಓಹಿಲದೇವನಂ ಪೊರಗಿರಿಸಿ ಕದವಂ ಚಾಚಲಾಗದು

---

೧೨. ಸಂ: ತ. ಸು. ಶಾಮರಾಯ: 'ಶಿವಶರಣಕಥಾರತ್ನಕೋಶ', ತ. ವೆಂ. ಸ್ಮಾರಕ ಗ್ರಂಥ-ಮಾಲೆ, ಮೈಸೂರು. ೧೯೬೭. ಪು: ೩೯೧.

೧೩. ಸಂ: ಫ. ಗು. ಹಳಕಟ್ಟಿ: ಹರಿಹರನ ರಗಳೆಗಳು ( ಸಮಗ್ರಸಂಪುಟ ), ಸಮಾಜ ಪುಸ್ತಕಾಲಯ, ಧಾರವಾಡ. ೧೯೬೮. ಪು: ೨೦೨.

೧೪. ಅದೇ, ಪುಟ: ೨೦೩.

ಬೇಗಂ ತಂದೊಳಪುಗಿಸೆಂದು"[೫೫] ಬೆಸಸಿ ಹೋಗುವನು. ಅಂತೆಯೇ ಪೂಜಾರಿ ಬಂದು ಓಹಿಲನನ್ನು ಒಳ ಪೊಗಿಸಿದನು. ಮರುದಿನ ಬೆಳಿಗ್ಗೆ ಶಿವನು ತನಗೆ ಗುಗ್ಗುಳ ಸೇವೆ ನಡೆಸೆಂದು ಆಜ್ಞಾಪಿಸುವನು. ಓಹಿಲ ಗುಗ್ಗುಳಕ್ಕಾಗಿ ದ್ವೀಪಾಂತರಕ್ಕೆ ಹೊರಟನು. ಗುಗ್ಗುಳವನ್ನು ತಂದು ಶಿವನಿಗೆ ಸಲ್ಲಿಸುತ್ತಾ ಹನ್ನೆರಡುವರ್ಷಗಳನ್ನು ಕಳೆದನು. ಶಿವನನಿಗೆ ಇನ್ನೂ ಈತನ ಗುಗ್ಗುಳ ಸೇವೆಯನ್ನು ಕೈಕೊಳ್ಳಬೇಕೆನಿಸಿ ಮತ್ತೆ ಹನ್ನೆರಡುವರ್ಷ ಈ ಸೇವೆ ನಡೆಸುವಂತೆ ಆಜ್ಞಾಪಿಸಲು, ಅದರಂತೆ ಧೂಪದ ದ್ವೀಪಕ್ಕೆ ಹೋಗಿ ಶ್ರಮದಿಂದ ಧೂಪವನ್ನು ಸಂಪಾದಿಸಿ ತಂದು ಹನ್ನೆರಡುವರ್ಷ ಧೂಪಸೇವೆ ನಡೆಸಿ "ತಂದೆ ಕರುಣಿಸುವುದೆನಗೆ ನಿತ್ಯತ್ವಮಂ" ಎಂದು ಬೇಡಿಕೊಳ್ಳುವನು. ಇವನ ಸೇವೆಗೆ ಮೆಚ್ಚಿದ ಶಿವನು ಈತನಿಗೆ ಗಣಪದವಿಯನ್ನಿತ್ತನು.

ಈ ಇಬ್ಬರು ಭಕ್ತರ ಜೀವನಚಿತ್ರದಿಂದ ಅವರ ಭಕ್ತಿ, ಸಾಧನಮಾರ್ಗ, ಬೇರೆಬೇರೆ ಎಂಬುದು ಸ್ಪಷ್ಟವಾಗುತ್ತದೆ. ಇಬ್ಬರ ಜೀವನ ಧ್ಯೇಯ ಸಾಧನೆ, ಸಿದ್ಧಿ ಬೇರೆಬೇರೆ. ಒಬ್ಬ ಶೂದ್ರ, ಮತ್ತೊಬ್ಬ ರಾಜ. ಒಬ್ಬ ಅಂತರಂಗದಲ್ಲಿಯೇ ಸಾಧನೆ ಮಾಡಿದರೆ, ಮತ್ತೊಂಬ ಬಹಿರಂಗ ಸಾಧಕ. ಹುಟ್ಟಿನಿಂದ ಶೂದ್ರನಾದ ವಾಹಿಲ್ಯ, ಸಾಧನೆಯಿಂದ ಉತ್ತಮೋತ್ತಮನೆನಿಸಿ ಶಿವಕೃಪೆ ಪಡೆದವನು. ಓಹಿಲ, ರಾಜನಾಗಿದ್ದವನು [illegible] ತಂದೆಯ ಮರಣದಿಂದ ವಿರಕ್ತಿಹೊಂದಿ ಮರಣವನ್ನು ಗೆಲ್ಲಲು ಶಿವನಿಗೆ ಶರಣಾಗುವುದೇ ಏಕೈಕಮಾರ್ಗವೆಂದು ತಿಳಿದು ಭಕ್ತಿ ಆಚರಿಸಿದನು.

ಈ ಎಲ್ಲ ವಿಷಯಗಳ ಆಧಾರದ ಮೇಲೆ ಜೇಡರದಾಸಿಮಯ್ಯ ತನ್ನ ವಚನದಲ್ಲಿ ಕುರಿತು ಹೇಳಿರುವುದು ತಮಿಳುನಾಡಿನ ಶೈವಭಕ್ತನಾದ ವಾಹಿಲ್ಯನನ್ನು ಕುರಿತೇ ಹೊರತು ಓಹಿಲ್ಯನನ್ನು ಕುರಿತಲ್ಲ. 'ಕೀಳಿಂಗಲ್ಲದೆ ಹಯನು ಕರೆಯದು ಕಾಣಾ' ಎಂಬ ಹೇಳಿಕೆಯನ್ನು ಸಾದರಪಡಿಸಲು, ಸಮಾಜದ ದೃಷ್ಟಿಯಲ್ಲಿ ಕೀಳು ಕುಲದವರು ಎನಿಸಿಕೊಂಡಿದ್ದ ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ವಾಹಿಲ್ಯ, ಉದ್ಭಟಯ್ಯ[೧]ಗಳನ್ನು ಉದಾಹರಿಸಿದ್ದಾನೆ. ಆದುದರಿಂದ ಇಲ್ಲಿ ವಚನಪಿತಾಮಹ ಫ. ಗು. ಹಳಕಟ್ಟಿಯವರು ಇಟ್ಟಿರುವ 'ವಾಹಿಲದೇವ' ಎಂಬುದೇ ಶುದ್ಧಪಾಠ ಎಂದು ತೀರ್ಮಾನಿಸಬಹುದು.

ಆರ್. ರಾಚಪ್ಪ

---

೫೫ ಹರಿಹರನ ರಗಳೆಗಳು: ಪುಟ: ೨೦೬.

೧. ಉದ್ಭಟಯ್ಯನ ವಿಚಾರ, ಈ ಲೇಖನಕ್ಕೆ ಹೊರತಾದುದರಿಂದ ಆ ವಿಷಯವನ್ನು ಇನ್ನೊಂದು ಲೇಖನದಲ್ಲಿ ವಿಚಾರಮಾಡಲಾಗುವುದು.

**೨. ಕೆಳದಿ ಸೋಮಶೇಖರನಾಯಕನ ಕಾಲದ ಶಾಸನಪ್ರತಿ :**

…………ಶುಳಿಲ್ಲೂ ಶ್ರೀಮತ್ಕೆಳದಿ ಸೋಮಶೇಖರನಾಯಕರೂ
ಗ ….ರಸಿ … …ವಿ ….. ಯ್ಯ ಶರಜಾ ವೆಂಕಪನ ಮಗ ತಿರುಮಲೈಯ್ಯನು
ತೀರ್ಥರಾಜಪುರದ ರಾಮೇಶ್ವರದೇವರ ದೇವಸ್ಥಾನದ ಸಮೀಪದಲ್ಲಿ। ದೆವಸ್ಥಾನ
ವನೂ ಕಟ್ಟಿಸಿ
ನಮ ಹೆಸರಲ್ಲೂ ಪ್ರತಿಷ್ಟೆ ಮಾಡಿಸಿದ ಸೋಮೇಶ್ವರ ದೇವರಿಗೆ ಸ್ವಾಸ್ಥೆಯಿಲ್ಲ
ಕ್ರಯವ ಕೊ . ….
ತನು ಸ್ವಾಸ್ಥೆಯ ಪಾಲಿಸಿಕೊಳ್ಳಬೇಕೆಂದು ಹೇಳಿಕೊಳುಥಾನೆ ಆ ರಿತಿ ಅಪ್ಪಣೆಯಾ
ಗಬೆಕೆಂದು ಅಳಿಯ ನಿರ್ವಾಣ್ಯೆಯನು ಹೇಳಿಕೊಂಡ ಸಂಮಂಥ। ಯೀ ತಿರುಮ
ಲೈಯನ ಕೈಯ ಕ್ರಯ ೧೧೬|೧೦ ನೂರಹದಿನಾರು ವರಹಾನು ಹನೊಪ್ರೊ
…. .. ವಂನೂ ಅರಮನೆಗೆ ತೆಗೆದುಕೊಂಡು ಉತ್ತಾರವ ಕೊಟ್ಟದು
ಅರಗದ ದೆವಸ್ಥಾ
ನದ ಸಿಮೆ ನಾರಸೊಭಟ್ಟನ ಪಟ್ಟಿಡಿಯಿಂದ। ಸ್ಥಳದ ಸೆನಬವ ಬರಸಿದ ಪ್ರಮಾಸೊ
ಅನಂತಪುರದ ದಾಸನಗದ್ದೆ ತಾರಿಕೊಡಗಿ ಗ್ರಾಮದಿಂದ। ಸಿಸ್ತಿನಿಂದ ೧೦|೩=
ಪ್ರಾಕು ನಿಲಿಸ್ತನಷ್ಟದಿಂದ ೯೩ ಯಿತ್ತಲಾಗಿ ನಿಲಿಸಿದ ನಷ್ಟದಿಂದ ೯।೦ ಉಭಯಂಗ
॥೩ಉ
ಭಯಂಗ ೧೧॥೧= ಹಸೊಂದು ವರಹಾನು ಆರುಹನಾಉ ಬೆಳೆ ಸ್ವಾಸ್ಥೆಯ
ನು ಯೀ ತಿರುಮಲೈಯ್ಯನು ತಿರ್ಥರಾಜಪುರದಲ್ಲು ದೆವಸ್ಥಾನವ ಕಟ್ಟಿಸಿ ನಯ ಹೆಸ
ರಲ್ಲು ಪ್ರತಿಷ್ಟೆಮಾಡಿದ ಸೋಮೇಶ್ವರ ದೆವತಾ ವೆಚ್ಚಕ್ಕೆ ಶಿವಾರ್ಪಿತವಾಗಿ ಕೊಟ್ಟು
ಯಿೂ ಭೂಮಿಗೆ …ನ ಮುದ್ರಾಶಿಲಾಸ್ಥಾತಿವ ಮಾಡಿಸುವಲ್ಲಿಗೆ ಹುಜೂರಿಂದ ಊಳಿ
ಗದ ಚಂನವಿರನ ..ಹಿಸಿಥೆವೆ ಚೌಗ್ರಾಮದವರ ಕರಸಿಕೊಂಡು ಗಡಿತಕ್ರಾರಬಾರದರಿ
ತಿ ಯಿವನ ಮುಂದಿಟ್ಟು ರೆಬೆ ಪ್ರಮಾಣ ಭೂಮಿಗೆ ಶಿಲಾಸ್ಥಾಪಿತವಮಾಡಿಸಿ
ಕೊಟ್ಟು ಯಿಾ
ಕಾಗದವ ಸೆನಬವರ ಕಡಿತಕ್ಕೆ ಬರಸಿ ತಿರಗಿ ಯಿಾತನ ವಶಕ್ಕೆ ಕೊಡುವದಾಗಿ
(ಇಲ್ಲಿ ಮುದ್ರೆಯಿದೆ)

ವಿವರಣೆ :

ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ ೧೯೦೬-೧೯೧೧ ರಲ್ಲಿನ Vol: I ನೆಯದರಲ್ಲಿ ಇದರ ಯಥಾ ಉಲ್ಲೇಖಗಳು ಇರಬಹುದಾಗಿ ಕಂಡುಬರುತ್ತದೆ. ಆದರೆ ಇದು ತಾಮ್ರಶಾಸನದ ಉಲ್ಲೇಖವಾಗಿದ್ದು, ಡಾ. ಸರ್ಜಾ ಚಂದ್ರಶೇಖರಯ್ಯನವರಲ್ಲಿ ರುವುದು ಕಾಗದದಲ್ಲಿನ ಪ್ರತಿಯಾಗಿರುತ್ತದೆ. ಪ್ರತಿಯು ತುಂಬಾ ಹಳೆಯದಾಗಿದ್ದು

ಮುದ್ರೆಯೂ ಸಹ ಇರುತ್ತದೆ. ಮೇಲಿನ ತಾಮ್ರಶಾಸನವು ಕುಂಸಿಯ ವೆಂಕಪ್ಪ ದೀಕ್ಷಿತರಲ್ಲಿ ದೊರೆತಿದ್ದು ಕ್ರಿ. ಶ ೧೭೨೦ ರ ಕಾಲವನ್ನು ತೋರಿಸುತ್ತದೆ. ಇದು ತೀರ್ಥರಾಜಪುರದಲ್ಲಿ ಕಟ್ಟಿಸಿದ ಸೋಮೇಶ್ವರದೇವರಿಗೆ, ದೇವತಾ ವೆಚ್ಚಕ್ಕಾಗಿ ಇಮ್ಮಡಿ ಸೋಮೇಶ್ವರನಾಯಕನು ನೀಡಿರುವ .ಭೂಸ್ವಾಸ್ಥೆಯ ಉಂಬಳಿ ಎಂಬುದಾಗಿ ಕಂಡುಬರುತ್ತದೆ. ಈ ಸೋಮಶೇಖರ ನಾಯಕನ ಕಾಲದಲ್ಲಿ (ಕ್ರಿ. ಶ. ೧೭೧೫–೧೭೪೦) ಶರಜಾಖ್ಯ ವೆಂಕಟಯ್ಯನು ಮಾತ್ರ ಇರುವುದು ವ್ಯಕ್ತಪಡುತ್ತದೆ. *

ಗುಂಡಾ ಜೋಯಿಸ್

## ೩. ಆದಿಪುರಾಣದ ಒಂದು ಪದ್ಯ ಹಾಗೂ ಪಂಪನ ಜೀವನದೃಷ್ಟಿ :

'ಪಂಪನ ಜೀವನದೃಷ್ಟಿ'ಯನ್ನು ನಿರೂಪಿಸಿದ ಅನೇಕ ಮಹನೀಯರು ಆದಿಪುರಾಣದ ಒಂದು ಪದ್ಯವನ್ನು ವಿಶೇಷವಾಗಿ ಉಲ್ಲೇಖಿಸಿ, ಅದು ಪಂಪನ ದೃಷ್ಟಿ ಎಂದು ಹೇಳುವುದುಂಟು. ಆ ಪದ್ಯವೆಂದರೆ :

ಧರ್ಮಾರ್ಥಕಾಮಮೆಂಬಿವು
ಧರ್ಮಾರ್ಥಜನಕ್ಕೆ ನೆಱೆದ ನೆರ್ಮಂತವಱೊಳ್
ಧರ್ಮಂ ಪ್ರಧಾನಮರ್ಥಂ
ಧರ್ಮಾಂಘ್ರಿಪಫಳಮದರ್ಕೆ ರಸಮದು ಕಾಮಂ[1]

ಎಂಬುದು. ಸು. ಕ್ರಿ. ಶ. ೧೯೩೭ ರಲ್ಲಿ ಪೂಜ್ಯ ತೀ. ನಂ. ಶ್ರೀ ಅವರು 'ಪಂಪ' ಎಂಬ ಒಂದು ಕಿರುಹೊತ್ತಿಗೆಯನ್ನು ಬರೆದರು. ಅದರಲ್ಲಿ ಶ್ರೀಯುತರು "ಪಂಪನಿಗೆ ದೇಹ ಸೌಂದರ್ಯದಲ್ಲಿ ಅಭಿಮಾನವಿತ್ತು; ಸಂಸಾರ ಸುಖದಲ್ಲಿ ಆಸಕ್ತಿಯಿತ್ತು. ಕ್ಷಣಿಕವಾದರೂ ಧರ್ಮವಿರುದ್ಧವಲ್ಲದ ಸವಿ ಇದರಲ್ಲೆಲ್ಲಾ ಉಂಟೆಂದು ಅವನು ಅನುಭವಿಸಿ ತಿಳಿದಿದ್ದನು.

'ಧರ್ಮಂ ಪ್ರಧಾನಂ– ಅರ್ಥಂ
ಧರ್ಮಾಂಘ್ರಿಪ ಫಳಂ– ಅದರ್ಕೆ ರಸಮದು ಕಾಮಂ'

ಎಂದು ಅವನು ಸ್ಪಷ್ಟವಾಗಿ ಹೇಳಿದ್ದಾನೆ. ... ತನ್ನ ಬಾಳಿನಲ್ಲಿ ಎಲ್ಲ ಬಗೆಯ ಭೋಗಗಳನ್ನು ಕೊರತೆ ಮಾಡಿಕೊಳ್ಳದೆ ಅನುಭವಿಸಿ, ಅವುಗಳ ಸವಿಯನ್ನೂ ಅಸ್ಥಿರತೆಯನ್ನೂ ಒಟ್ಟಿಗೇ ಕಂಡು, ಅವಕ್ಕೆ ಮೀರಿದ ಶಾಶ್ವತಸುಖವನ್ನು ಬಯಸುವ ರಸಿಕಹೃದಯ

---

* ಕರ್ನಾಟಕ ಭಾರತಿ, ಸಂಪುಟ: ೬, ಸಂಚಿಕೆ: ೪, ೧೯೭೪.

೧. ಆದಿಪುರಾಣ (ಸಂ. ಎಸ್. ಜಿ ನರಸಿಂಹಾಚಾರ್). ಆಶ್ವಾಸ: ೧೦, ಪದ್ಯ: ೪೮

ಅವನದು" ಎಂದು ಮುಂತಾಗಿ ಬರೆದಿದ್ದಾರೆ.[೨] ಅವರು ಟಂಕಿಸಿದ ಈ ನಾಣ್ಯ ಅಂದಿನಿಂದ ಇಂದಿನವರೆಗೂ ಚಲಾವಣೆಯಲ್ಲಿದ್ದು ವಿಶೇಷ ಮೌಲ್ಯದಿಂದ ಭರಿತವಾದುದೆಂದು ಮಾನಿತವಾಗಿದೆ. ಅಂತಹ ಕೆಲವನ್ನು ಇಲ್ಲಿ ಉಲ್ಲೇಖಿಸುವೆ :

೧. ಪಂಪನು ಸುಂದರ, ಒಳ್ಳೆಯ ರಸಿಕ, ಅಚ್ಚುಕಟ್ಟಾದ ವೇಷಭೂಷಣಗಳನ್ನು ತುಂಬ ಮೆಚ್ಚಿದವನು, ಪ್ರೇಮದ ಸುಖವನ್ನು ಅನುಭವಿಸಿ ಬಲ್ಲವನು, ಕೋಮಲವಾದ ಬಹುಮುಖವಾದ ಸೊಬಗು ಕಂಪುಗಳನ್ನು ಬೀರುವ ಮಲ್ಲಿಗೆ ಮೊದಲಾದ ಹಲವು ಹೂವುಗಳ ಚೆಲುವಿಗೆ ಮನಸೋತವನು, ಗಾನದಿಂಪಿಗೆ ಮೈಮರೆಯುವವನು. ಸಂಸಾರಸುಖವನ್ನು ಅಲ್ಲಗಳೆಯದೆ ಅದರ ಸಾರವನ್ನು ಸವಿಯುವುದು ಕರ್ತವ್ಯವೆಂಬ ಮನೋಭಾವನೆಯುಳ್ಳವನು. ಅವನ ಕಾವ್ಯಗಳೆರಡರಲ್ಲೂ ಇದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ಕಾಣಬಹುದು. ಆದಿಪುರಾಣದಲ್ಲಿ ಒಂದುಕಡೆ 'ಧರ್ಮಂ ಪ್ರಧಾನಂ; ಅರ್ಥಂ ಧರ್ಮಾಂಘ್ರಿಪ ಫಳಂ; ಅದರ್ಕೆ ರಸಮದು ಕಾಮಂ' ಎಂದು ನುಡಿದು, ಕಾಮೋಪಭೋಗ ಯಾವಾಗಲೂ ಧರ್ಮಕ್ಕೆ ವಿರುದ್ಧವೆಂಬ ಭಾವನೆ ತಪ್ಪು ಎಂದು ಸಾರಿದ್ದಾನೆ.[೩]

೨. Even when he (Pampa) says Dharma is primary, he believes that Dharma is primary, he believes that wealth is one of the fruits of Dharma and the juice of flavour of that fruit is desire, Kama.[೪]

೩. ಪಂಪನ ಸಮರಸದೃಷ್ಟಿಯನ್ನು ವಿವರಿಸುತ್ತ "ಧರ್ಮಂ ಪ್ರಧಾನಂ.... ಅದರ್ಕೆ ರಸಮದು ಕಾಮುಂ" ಎಂಬುದನ್ನು ಉಲ್ಲೇಖಿಸಿ ಇದು ಪಂಪನ ಜೀವನದೃಷ್ಟಿ ಎಂದಿದ್ದಾರೆ, ಜಿ. ಎಸ್. ಶಿವರುದ್ರಪ್ಪನವರು.[೫]

೪. 'ಧಾರ್ಮಿಕ ಕವಿಯಾಗಿ ಪಂಪ' ಎಂಬ ಲೇಖನದಲ್ಲಿ ಡಾ. ಜಿ. ವರದರಾಜ ರಾಯರು, ಪಂಪನ ಈ ಪದ್ಯವನ್ನು ಉದ್ಧರಿಸಿ, "ಭರತನ ಈ ವಿವೇಚನಾಶಕ್ತಿಯಲ್ಲಿ ಪಂಪನ ಮನೋಧರ್ಮವೇ ಎದ್ದುಕಾಣುವಂತಿದೆ" ಎಂದಿದ್ದಾರೆ . ಈ ವಿವರಣೆ ದೇಹಲಿ ದೀಪದ ನ್ಯಾಯದಂತಿದೆ ! (ಹೊಸತಿಲ್ ಮೇಲಿನ ದೀಪ) —ಇವರ ಪ್ರಕಾರ ಈ ಕವಿತೆಯ ಭಾವ ಪಂಪನದೆಂಬುದು ಸುಸ್ಪಷ್ಟ.

---

೨. ತೀ.ನಂ.ಶ್ರೀ: 'ಪಂಪ' ( ಮೈ. ವಿ. ವಿ. ಪ್ರ. ಪು. ). ಪು. ೩೧–೩೨ (೬ನೆಯ ಮುದ್ರಣ).

೩. ಎಲ್. ಗುಂಡಪ್ಪ : ಆದಿಪುರಾಣ ಸಂಗ್ರಹ, ಪೀಠಿಕೆ; ಪು; ix (೨ನೆಯ ಮುದ್ರಣ)

೪. V. Sitaramaih, 'Pampa'– Values p. 219

೫. ಜಿ. ಎಸ್. ಶಿವರುದ್ರಪ್ಪ: 'ಪರಿಶೀಲನ' ಪು. ೧೬

೬. 'ಪಂಪ : ಒಂದು ಅಧ್ಯಯನ' (ಬೆಂಗಳೂರು ವಿಶ್ವವಿದ್ಯಾಲಯವು ಏರ್ಪಡಿಸಿದ ಸಂಕಿರಣದಲ್ಲಿ ಓದಿದ ಲೇಖನಗಳ ಪುಸ್ತಕ ರೂಪ) ಪು : ೧೦೬

೫. 'ಪಂಪನ ಜೀವನದೃಷ್ಟಿ' ಎಂಬ ಲೇಖನದಲ್ಲಿ ಸಂಪ ನಾಗರಾಜಯ್ಯ ನವರು ಹೀಗೆ ಬರೆದಿದ್ದಾರೆ :

ಪಂಪ, ಸ್ವಭಾವದಿಂದ ರಸಿಕ. ಬಾಳಿನ ಚೆಲವು ಒಲುವುಗಳನ್ನು ಕಣ್ತುಂಬ ಕಂಡು ಎದೆತುಂಬ ತುಂಬಿಕೊಂಡು ಸವಿದು ಚಪ್ಪರಿಸುತ್ತಾನೆ. ಧರ್ಮಕ್ಕೆ ವಿರೋಧಿಯಾಗದ ರಸಿಕತೆಗೆ ಸದಾ ಸ್ವಾಗತ ಬಯಸುತ್ತಾನೆ. 'ಧರ್ಮಂ ಪ್ರಧಾನಂ, ಅರ್ಥಂ ಧರ್ಮಾಂಘ್ರಿಪ ಫಳಂ, ಅದರ್ಕೆ ರಸಮದು ಕಾಮಂ'. ಧರ್ಮಭೂಮಿಕೆಯಾಗಿ ಹರಡಿಕೊಂಡಾಗ ಅದರ ಮೇಲೆ ನಿಲ್ಲುವ ಭೋಗದ ಬದುಕು ಸುಲಭವಾಗಿ ನಿವಾರಿಸಿಕೊಳ್ಳುತ್ತದೆ– ಅರ್ಥ ಕಾಮದ ತೊಡಕನ್ನು. ಪಂಪ ತನ್ನ ವಿಚಾರವಾಗಿ ಹೇಳಿಕೊಂಡಷ್ಟನ್ನೇ ಮನಗೊಂಡಾಗಲೂ ಅವನು ಒಮ್ಮೆ ರಸಿಕನಾಗಿ ಇನ್ನೊಮ್ಮೆ ಸುಕುಮಾರನಾಗಿ ಮತ್ತೊಮ್ಮೆ ವೀರನಾಗಿ ಸೊಗಯಿಸುತ್ತಾನೆ. ಪ್ರಾಯದ ಪೆಂಪು ಪಂಪನಿಗೆ ಅಂಗೈ ಮೇಲಣ ನೆಲ್ಲಿಕಾಯಿ. ಕೇರಳಾಂಧ್ರ ವಧುಗಳಲ್ಲಿ ರಮಿಸಿದವನು ಪಂಪನ ಅಭಿಪ್ರಾಯದಲ್ಲಿ ಹರಯದ ಹಿರಿಮೆಯನ್ನರಿತು ಭೋಗದ ರಮಣೀಯಕತೆಯನ್ನು ಅಸಾರವೆಂದು ಹಳಿಯದೆ ಅನುಭವಿಸಬೇಕು. ಹಾಗೆಂದು ಅದೇ ಅಮರವೆಂಬ ಭ್ರಾಂತಿ ಇರಕೂಡದು. ಆದುದರಿಂದಲೇ ಪಂಪ ಭೋಗಕ್ಕೆ ಬೆನ್ನಾಗಬೇಕೆಂದು ಬೋಧಿಸಿದವನಲ್ಲ. ತಾನೇ ಸ್ವತಃ ತುಂಬುಬಾಳನ್ನು ಎರಡೂ ಕೈಗಳಿಂದ ಬರಮಾಡಿಕೊಂಡವನು, ಅದರಂತೆ ಬಾಳಿದವನು. ಬಾಳು ಎಲ್ಲ ನಿಟ್ಟಿನಿಂದ ತುಂಬಿಕೊಂಡು ತೋರವಾಗಿ ಅರೆಕೊರೆಗಳಿಲ್ಲದೆ ತೋರಬೇಕು ಅದಕ್ಕಾಗಿ ಸುಖಕ್ಕೆ ವಿಮುಖರಾಗಬೇಕಾಗಿಲ್ಲ. ರಾಗದಿಂದ ತುಸು ನಡೆದು, ವಿರಾಗದಿಂದ ತುಸು ನಡೆದು ಎರಡನ್ನೂ ಸರಿದೂಗಿಸಿಕೊಂಡು ಇಲ್ಲಿ ಮೊದಲು ಸಂದು ತರುವಾಯ ಅಲ್ಲಿಯೂ ಸಲ್ಲಬೇಕು. ಯಾರು ಭೋಗವನ್ನು ಸರಿಯಾಗಿ ಅರಿಯರೋ ಅವರು ವೈರಾಗ್ಯವನ್ನು ಚೆನ್ನಾಗಿ ತಿಳಿಯಲಾರರು. ವ್ಯಕ್ತಿ ಎಲ್ಲ ವಿದ್ಯೆಗಳನ್ನು ಬಲ್ಲವನಾಗಬೇಕು, ಅನುಭವಿಸಿರಬೇಕು. ........ಇತ್ಯಾದಿ.[೭] ಶ್ರೀಯುತರ ಈ ನಿರ್ಣಯವನ್ನು ಮಾನದಂಡವಾಗಿ ಸ್ವೀಕರಿಸಿದರೆ ಬಾಲಬ್ರಹ್ಮಚಾರಿಗಳಾದ ಜಿನಸೇನರ 'ಪೂರ್ವಪುರಾಣ'— ಪಂಪನ 'ಆದಿಪುರಾಣ'ಕ್ಕೆ ಸರಿಯಲ್ಲ. ಪಂಪನು 'ಪೂರ್ವಪುರಾಣ' ಗ್ರಂಥದಿಂದ ಅನೇಕ ವಿಷಯಗಳನ್ನು ಎತ್ತಿಕೊಂಡಿದ್ದಾನೆ, ಕಥೆ ಸಹಿತ ಮೊದಲುಮಾಡಿ. ಜಿನಸೇನರ 'ಪೂರ್ವಪುರಾಣ' ಕೇವಲ ಪುರಾಣವಲ್ಲ; ಅದು ಶ್ರೇಷ್ಠ ಮಹಾಕಾವ್ಯವೆಂದೂ ಪರಿಗಣಿತವಾಗಿದೆ.[೯] ಪಂಪನು ಕಾವ್ಯಧರ್ಮ ಹಾಗೂ ಧರ್ಮಗಳನ್ನು ಕಾವ್ಯದಲ್ಲಿ ಅಳವಡಿಸಿ

---

೭. ಅದೇ ಗ್ರಂಥ, ಪು. ೨೫೨

೮ ನಾಥೂರಾಮ ಪ್ರೇಮಿ. ಜೈನ ಸಾಹಿತ್ಯ ಮತ್ತು ಅವರ ಇತಿಹಾಸ, ಪು. ೧೪೨–೧೪೫

೯. ಅ) ಅದೇ ಗ್ರಂಥ, ಪು. ೧೪೬

ಆ) ಡಾ. ಕೆ. ಕೃಷ್ಣಮೂರ್ತಿ: ಸಂಸ್ಕೃತ ಕಾವ್ಯ, ಪು. ೨೯೮

ಕೊಂಡುದು ಜಿನಸೇನರಿಂದಲೇ ಕಲಿತುಕೊಂಡದ್ದು. ಅವನು ಅವರನ್ನು 'ಜ್ಞಾನರ್ಥಿಸಂಪನ್ನರ್' ಎಂದೂ ಹೇಳಿದ್ದಾನೆ; ಆ ಕಥಾಬ್ಧಿಯನ್ನು ಈಸಬಯಸಿದುದನ್ನೂ ತಿಳಿಸಿದ್ದಾನೆ:

> ಪುರುದೇವಾದಿ ಜಿನೇಂದ್ರನಾಳೆ ಗಣಭೃತ್ಸಂತಾನಮೆಂದೀ ಪರಂ
> ಪರೆಯಿಂ ವಿಶ್ರುತ ವೀರಸೇನ ಜಿನಸೇನಾಚಾರ್ಯಪರ್ಯಂತಮಾ
> ಗಿರೆ ಬಂದೀ ಕಥೆ ಗುಣ್ಪುವೆತ್ತುದನರುಂ ಜ್ಞಾನರ್ಥಿಸಂಪನ್ನರೆಂ
> ದಿರದಾಂ ಧೃಷ್ಟನೆನೀ ಕಥಾಬ್ಧಿಯುಮನೇನೀರ್ಸಲ್ಕನಂದಂದೆನೋ

ಜಿನಸೇನರ ಆ ಗ್ರಂಥದಲ್ಲೂ ಬೇಕಾದಷ್ಟು ಶೃಂಗಾರ ರಸವಿದೆ. ಎರಡೂ ಕೃತಿಗಳ ದೃಷ್ಟಿ ಬೇರೆಬೇರೆಯಲ್ಲ.

ಹಂಪ ನಾಗರಾಜಯ್ಯನವರ ದೃಷ್ಟಿ, ತೀ. ನಂ. ಶ್ರೀ. ಅವರ ವಿವರಣೆಯ ಹೆಜ್ಜೆಯನ್ನು ಅನುಕರಿಸಿದೆ. ತೀ. ನಂ. ಶ್ರೀ. ಅವರ ವಿವರಣೆಯ ಹೆಜ್ಜೆಯನ್ನೇ ಇನ್ನೂ ಕೆಲವರು ತುಳಿದಿದ್ದಾರೆ.[೧೦] "ಧರ್ಮಾರ್ಥ ಕಾಮ.........ರಸಮದು ಕಾಮಂ". ಈ ಪದ್ಯ ಮೂಲತಃ ಪಂಪನದಾದರೆ, ಈ ಎಲ್ಲ ವಿದ್ವಾಂಸರು ಕೊಟ್ಟಿರುವ ಸ್ವಕಪೋಲ ಕಲ್ಪನೆಗಳು ನಿಸ್ಸಂದೇಹವಾಗಿ ಸ್ವೀಕಾರಾರ್ಹವೇ. ಹಂಪ ನಾಗರಾಜಯ್ಯನವರ ವಿವರಣೆಯಂತೆ ಪಂಪನ ತ್ಯಾಗದ ಬಗೆಗೆ ಒಂದಕ್ಷರವೂ ನಮಗೆ ಕಾಣುತ್ತಿಲ್ಲ. ಶ್ರೀ ವರದರಾಜರಾಯರ ವಿವರಣೆಯಲ್ಲೂ ಅಷ್ಟೇ. ಅಷ್ಟೇ ಅಲ್ಲ, "ಪಂಪ: ಒಂದು ಅಧ್ಯಯನ" ಗ್ರಂಥದಲ್ಲಿ ಆಗಲೀ– ಆ 'ಸಂಕಿರಣ'ದಲ್ಲಿ ಎತ್ತಿದ ಪ್ರಶ್ನೆಗಳಲ್ಲಾಗಲೀ ಭೋಗ, ತ್ಯಾಗಗಳ ಸಮನ್ವಯ– ಇದರ ಪ್ರಸ್ತಾಪ ಇದ್ದಲ್ಲೆಲ್ಲ ಒಂದೆಡೆಯಲ್ಲೂ ಪಂಪನ "ತ್ಯಾಗಜೀವನ"ದ ಬಗೆಗೆ ಚಕಾರವೂ ಇಲ್ಲ. ಹಾಗಾದರೆ ಅವನ ತ್ಯಾಗದ ವರ್ಣನೆಗಳೆಲ್ಲ ಅನನುಭವಿಕ ವಾಣಿ ! ಅನನುಭವದ ಅಭಿವ್ಯಕ್ತಿ !! ಇದು ಸರಿಯೆ ?

ಪ್ರಸ್ತುತ ಪದ್ಯ ಮೂಲತಃ ಪಂಪನದೇ ಅಲ್ಲವೆಂದಾಗ, ಈ ವಿಚಾರಪ್ರಣಾಲಿಗಳ ಪುನರ್ವಿಮರ್ಶೆ ಆಗಬೇಕೆಂದು ತೋರುತ್ತದೆ. ಈ ಪದ್ಯವನ್ನು ಪಂಪ, ಜಿನಸೇನರಿಂದ ಅನುವದಿಸಿಕೊಂಡಿದ್ದಾನೆನ್ನುವುದಕ್ಕೆ "ಪೂರ್ವಪುರಾಣ"ದ ಕೆಳಗಿನ ಶ್ಲೋಕವೇ ಸಾಕ್ಷಿ :

> ಪಶ್ಯ ಧರ್ಮಸ್ತರೋರರ್ಥಃ ಫಲಂ ಕಾಮಸ್ತು ತದ್ರಸಃ ।
> ಸ ತ್ರಿವರ್ಗಸ್ತ್ರಯಸ್ಯಾಸ್ಯ ಮೂಲಂ ಧರ್ಮಕಥಾ ಶ್ರುತಿಃ ॥[೧೧]

---

೧೦. 'ಪಂಪ : ಒಂದು ಅಧಯನ' ಪು. ೪೪, ೩೨೪

೧೧. 'ಪೂರ್ವಪುರಾಣಂ' : ಸಂ. ಎ. ಶಾಂತಿರಾಜಶಾಸ್ತ್ರೀ ದ್ವಿತೀಯ ಪರ್ವ–೩೧, ಪು. ೨೬ ಭಾರತೀಯ ಜ್ಞಾನಪೀಠ ಮುದ್ರಣದಲ್ಲಿ 'ಧರ್ಮಕಥಾ ಶ್ರುತಿಃ' ಇದಕ್ಕೆ 'ಪುಣ್ಯಕಥಾಶ್ರುತಿಃ' ಎಂಬ ಪಾಠಾಂತರವಿದೆ.

ಪಂಪನು ಹೇಳಿರುವ

ಧರ್ಮ೦ ಪ್ರಧಾನಮರ್ಥ೦
ಧರ್ಮಾ೦ಘ್ರಿಪಫಳಮುದರ್ಕೆ ರಸಮದು ಕಾಮಂ ॥

ಎಂಬಲ್ಲಿ ಆತ ಜಿನಸೇನರಿಂದ ಭಿನ್ನವಾದ ಭಾವವನ್ನು ಅಭಿವ್ಯಕ್ತಮಾಡಿದ್ದಾನೆಂದು ನಮಗೆ ತೋರದು. ಕಾರಣ ಪಂಪನ ಜೀವನಚಿತ್ರ– ಜೀವನದೃಷ್ಟಿ ಎಂತಹುದು ? ಇದು ವಿಚಾರಣೀಯ.*

●

ಸೀತಾರಾಮ ಜಾಗೀರ್‌ದಾರ್

---

* ಈ ಲೇಖನವನ್ನು ಬರೆಯುವಲ್ಲಿ ಗುರುಗಳಾದ ಡಾ. ಆರ್. ಸಿ. ಹಿರೇಮಠ ಹಾಗೂ ಡಾ. ಹಾ. ಮಾ. ನಾಯಕ ಮೊದಲಾದವರಿಗೆ ಋಣಿಯಾಗಿದ್ದೇನೆ.

# ಗ್ರಂಥಾವಲೋಕನ

**ಮುಟ್ಟಿಲ ಮುರಕಿ (ಕವನ ಸಂಕಲನ) :**
ಪ್ರ : ಮಹಾದೇವ ಕಣವಿ, ಗುಳೇದಗುಡ್ಡ.
ಬೆಲೆ : ಎರಡೂವರೆ ರೂಪಾಯಿ. ಪುಟ : ೧೮+೪೮

ಕವಿಯ ಚೊಚ್ಚಲಕೃತಿ ( ಕವನ ಸಂಕಲನ ) 'ಮುಟ್ಟಿಲ ಮುರಕಿ', ಭುಜೇಂದ್ರ ಮಹಿಷವಾಡಿಯವರ ಮುನ್ನುಡಿಯ ಹರಕೆಯೊಂದಿಗೆ ಸಾಂಕೇತಿಕ ಮೇಲುಹೊದಿಕೆ ಹೊತ್ತು ಹೊರಬಂದಿದೆ.
ಸಂಗ್ರಹದಲ್ಲಿರುವ ಮೂವತ್ತೊಂದು ಚಿಕ್ಕ, ದೊಡ್ಡ ಕವನಗಳಲ್ಲಿ

ಕಲ್ಪನೆಯ ಕಿಡಿಗೇಡಿ ಭಾವದ ಕೆರೆಗೆ
ಕಿರಿದೊಂದು ಬಿರುಕನ್ನುಂಟುಮಾಡಿ
ಕಿಸಕ್ಕನೆ ನಕ್ಕಾಗ

ಹೊರಹೊಮ್ಮಿದ ಭಾವತರಂಗಗಳಿವೆ. 'ಮುಟ್ಟಿಲ ಮುರಕಿ' ಯಿಂದ 'ಬಹುರೂಪಿ' ಯ ವರೆಗೆ ಕವಿಯು ಅನಿಸುವಿಕೆಗೆ ಅಭಿವ್ಯಕ್ತಿಕೊಡುವ ಪ್ರಾಮಾಣಿಕ ಪ್ರಯತ್ನ, ಇಲ್ಲಿ ವಿವಿಧ ಹಂತಗಳಲ್ಲಿ ನಡೆದುದನ್ನು ಕಾಣುತ್ತೇವೆ.

ಎದೆ ಗೂಡಿನಲ್ಲಿಯ ಆಶೆಯ ಹಕ್ಕಿಯನ್ನು
ನಿರಾಶೆಯ ಗಿಡುಗ
ಕತ್ತು ಹಿಸುಕಿದಂತೆ ಹೈರಾಣವಾಗಿದ್ದೇನೆ
Life is real.......
ಪುಸ್ತಕದ ಬದನೆಕಾಯನು ಬಿಸುಟು
ತೆರೆವ ಜೀವನದ ಪುಟಗಳನ್ನೋದಲು
ಜೀವ ಚಡಪಡಿಸುತ್ತದೆ. (ನೆನಪು ಕಹಿಯಲ್ಲ)

ಇನ್ನುವಲ್ಲಿ ಕವಿ ಆಶಾವಾದಿಯೂ ವಾಸ್ತವಿಕ ಪ್ರಜ್ಞೆ ಹಾಗೂ ಜೀವನಾನುಭವಗಳಿಗೆ ಬೆಲೆ ಕೊಡುವವನೂ ಆಗಿದ್ದಾನೆಂಬುದು ಕಂಡುಬರುತ್ತದೆ. ಹಾಗೆಯೇ ಕವಿ

ಅಪಾಯದ ಗಂಟೆ ಬಾರಿಸಿ
ನಿಮ್ಮ ಕಣ್ಣಿನ ಹಳದೀ ಚಾಳೀಸ ತಗೀರಿ
ತಗದು ಚೆಂದಾಗಿ ನೋಡಿರಿ
ಕೂದಲ ತಲಿ ಅಲ್ಲ, ತಲಿ ಇದ್ದವರಂಗ
ವಿಚಾರ ಮಾಡ್ರಿ

ಎಂದು ವಿಚಾರ ಮಾಡಹಚ್ಚಿಸುತ್ತಾನೆ. ಪ್ರೇಯಸಿಗೆ;

ಇದು,
ಪ್ರೀತಿ ಜೇನು ತುಂಬುವ ಅಕ್ಷಯ ಪಾತ್ರೆ
ಬೇಕೆನಿಸಿದ್ದರೆ
ಧೈರ್ಯವಿದ್ದರೆ
ನೀಡು !

ಎಂದು ಕೇಳುತ್ತಾನೆ.

ಬಾಳೊಂದು ಅಗಲಿಕೆಗಳ ಸರಮಾಲೆ
ನಾನೊಂದು ಮುತ್ತು.
ಯಾಕೆ ? ಏನು ? ಎಂದು ಕೇಳಿದರಿಲ್ಲ
ಅದು ವಿಧಿಯ ಗತ್ತು

ಎಂದು 'ಚೂಯಿಂಗಂ' ದಲ್ಲಿ ವೇದಾಂತ ಹೇಳುವ ಕವಿ,

ಜಗವೆಂಬ ವರ್ತಮಾನ ಪೇಪರಿನಲ್ಲಿ
ನನ್ನದೊಂದು ಚಿಕ್ಕ ಕಾಲಮ್ಮು

ಎನ್ನುವ ವಾಸ್ತವ ಸತ್ಯವನ್ನು. ತನ್ನ ಅಸ್ತಿತ್ವವನ್ನು. ತನಗಿರುವ ಬೆಲೆಯನ್ನು ಅರಿತು ಕೊಂಡು

ಸುಡುಗಾಡು ನನ್ನನ್ನು ಹೆದರಿಸಲಿಲ್ಲ
ಪಲಾಯನವನ್ನು ಬೋಧಿಸಲಿಲ್ಲ
ಕಟುಸತ್ಯ ಕಂಡು ಸಾಗುತಿದ್ದೇನೆ
ಎಲ್ಲಿಗೆ ....?. (ಗೋರಿಗಳ ನಡುವೆ)

ಎನ್ನುವಲ್ಲಿ ಕವಿಯ ಸ್ಥೈರ್ಯ, ಕಾಣುತ್ತೇವೆ.

ಭಾರತಿಯ ದೇಹ
ಅಮೇರಿಕದ ಆಚಾರಗಳನ್ನು ಹುದಗಿಸಿ
ತ್ರಿಶಂಕುವಿನಂತಾಗಿದ್ದೇವೆ.

ಎಂದು ತಮ್ಮತನವನ್ನೇ ಮರೆತು. ಅಂಧಾನುಕರಣೆಗೈವ ಜನವನ್ನು ಹೀಯಾಳಿಸುವುದರ ಜೊತೆಗೆ ಕವಿ ಅದೇ ಕವನದಲ್ಲಿ ಮುಂದುವರೆದು ಸಾಹಿತ್ಯದಲ್ಲಿನ 'ಗುಂಪುಗಾಳಿತನ' ಮಠ ಪರಂಪರೆ ಕಂಡು ಕಟಕಿಯಾಡಿದ್ದಾನೆ ಅಸಹಾಯಕನಾಗಿ.

ಮಾಡುವದೇನು
ಗಡಿಯಾರ ತಿರುಗುತ್ತದೆ (ಧೋಬಿಕಾ ಕುತ್ತಾ)

ಎಂದು ಉದ್ಗಾರವೆತ್ತುತ್ತಾನೆ.

ಇದು ಮೈಗಳ್ಳರ ದೇಶ
ಇಲ್ಲಿ ಕ್ರಾಂತಿಯಿಲ್ಲ ಬರೀ ಭ್ರಾಂತಿ
ನಮಗೆ ಬೇಕಾದುದು ಕ್ರಾಂತಿ! ಕ್ರಾಂತಿ !!

ಎಂದು 'ಸಂಗ್ರಾಮ' ದಲ್ಲಿ ದುಂದುಭಿ ಊದಿದ್ದಾನೆ. ನನ್ನ ಮೊಗೆಯಲ್ಲಿದ್ದುದೇ, ಹಕ್ಕಿ ಮನಸು, ಮೊದಲಾದವುಗಳಲ್ಲಿ ಕವಿ ಪ್ರೀತಿ, ಪ್ರೇಮ ಕುರಿತು ಹಾಡಿದ್ದಾನೆ.

ಬಾಳ ಮಾರ್ಕೆಟ್ಟಿನಲ್ಲಿ ಸಿಕ್ಕುವದು
ಎಷ್ಟೆಂದು ಕಳ್ಳ ಖೋಟಾ ಮಾಲು

ಎಂದು ಸಾತ್ವಿಕ ರೋಷದಿಂದ ಸಿಡಿದೆದ್ದಿದ್ದಾನೆ.

ಒಟ್ಟಾರೆ ಏನು
ಸುಳ್ಳುನಾಣ್ಯ ಸವಕಲಾಗುವದಿಲ್ಲ !

ಎಂದು ಅನಿವಾರ್ಯ ಸಮಾಧಾನ ಹೊಂದಿದ್ದಾನೆ.

'ಮಣ್ಣಿಗೆ ಮತ್ತೇರಿಸುವ ಮಳೆ' ಕಂಡ ಕವಿ ಮನದುಂಬಿ ಹಾಡಿದ್ದಾನೆ.

ಪ್ರೀತಿಯ ವ್ಯಾಖ್ಯಾನ ಮಾಡುತ್ತ
ಪ್ರೀತಿ ಪ್ರೀತಿ ಅಂತ ಕೊರಚ್ಯಾಡತೀನಿ
ಎಲ್ಲೈತಿ ಪ್ರೀತಿ ?
ಗಣ್ಣಾಗ ಕಾಮ ಕುಣಿತೈತಿ

ಎಂದು ಪ್ರಾಮಾಣಿಕವಾಗಿ ತಪ್ಪೊಪ್ಪಿಕೊಳ್ಳುವ ಕಳ್ಳಮನಸಿನ ಚಿತ್ರ, ಚೆನ್ನಾಗಿ ಮೂಡಿ ಬಂದಿದೆ.

ಕವಿ ಕೆಲವಾರು ಕವನಗಳಲ್ಲಿ ಆಡುಮಾತಿನ, ದೇಸಿಯ, ನಾಣ್ಣುಡಿಗಳ ಸೂರೆ ಮಾಡಿದ್ದಾನೆ.

ನೀ ಹೀಂಗ ಕಾಡಬ್ಯಾಡ ನನ್ನ, ಭಾವಿ ಅಳಿಯ. ಕುಷ್ಟರೋಗಿ, ಕಿಳ್ಳಿಕ್ಯಾತರ ಗೊಂಬೆಗಳು ಮೊದಲಾದವು ನೇರ ಉದಾಹರಣೆಗಳಾದರೆ ಅನೇಕ ಕವನಗಳಲ್ಲಿ ಎಡೆ ಸಿಕಲ್ಲೆಲ್ಲ ಈ ದೇಸಿ, ನಾಣ್ಣುಡಿ, ಪಡೆನುಡಿ ಸೊಗಸು ಸಾರ್ಥಕವಾಗಿ ಮೂಡಿಬಂದಿದೆ.

ಮುಟ್ಟಲ ಮುರಕಯಂತೆ ಸೂಕ್ಷ್ಮಸಂವೇದನಾಶೀಲತೆಯುಳ್ಳ ಕವನಗಳ ಜೊತೆಗೆ ಪ್ರಕೃತಿಯ ರಮ್ಯಚಿತ್ರಣ, ಪರಿಸರಕ್ಕೆ ತಕ್ಕ ಪ್ರತಿಸ್ಪಂದನ, ಸಾಮಾಜಿಕ ರೀತಿ ನೀತಿಗಳ ಕುರಿತಾದ ಕಟಕಿ ನುಡಿಗಳು, ಬಳಸಿಕೊಳ್ಳುವ ಬೆಳೆಸಿಕೊಂಡು ಹೋಗುವ ಪ್ರತಿಮೆಗಳು, ಅನ್ಯಾಯ ಕಂಡಾಗ ಸಿಡಿದೇಳುವ ಸಾತ್ವಿಕರೋಷ, ಕನಿಕರ, ಅನುಕಂಪೆ, ಪ್ರೀತಿ, ಪ್ರಣಯ, ಭೀಭತ್ಸ ದೃಶ್ಯಚಿತ್ರಣ ಕೊಡುವಲ್ಲಿಯ ಸಹಜತೆ ಕಣವಿಯವರಿಗೆ ಸಾಧಿಸಿವೆ.

ಮೊದಲನೆಯ ಕವನ ಸಂಕಲನದಲ್ಲೇ ಕಣವಿ ಮಹಾದೇವ ಅವರು ಭರ

ವಸೆಯ ಕವಿ ತಾವೆಂದು ರುಜುವಾತುಪಡಿಸಿದ್ದಾರೆ. ಸಂಕಲನದಲ್ಲಿ ಕೆಲವಾರು ಕವನಗಳಲ್ಲಿ ಭಾವ ಬಂಧುರತೆಯ ಕೊರತೆ, ತುಂಬ ಜಾಳಾದ ಪ್ರತಿಮೆಗಳಿಗೆ ಒತ್ತಾಯದ ಮಾಘಸ್ನಾನ ಕಂಡುಬರುತ್ತದೆ. ಮೊದಲ ಸಂಕಲನದಲ್ಲಿ ಸಾಮಾನ್ಯವಾಗಿ ಕಂಡುಬರುವ ಸಾಮಾನ್ಯ ದೋಷಗಳು ಕೆಲವು ಇಲ್ಲಿವೆಯಾದರೂ ಒಟ್ಟಾರೆ ಶಿಲ್ಪ ಅಂದವಾಗಿದೆ. 'ಅತಿ' ಗೆ ದೂರಾಗಿ 'ಮಿತಿ' ಗೆ ಹತ್ತಿರವಾಗಿ ಇರುವ ಕಣವಿಯವರ ಕವನಗಳಲ್ಲಿ ಹಿಡಿತವಿದೆ.

'ಏನೇ ಹುಡಿಗಿ ಎದುಸಿರು' ಅಂದರೆ
'ಬದುಕಿಗೆ ಸಾರ್ಥಕತೆ ಬೇಡವೆ' ಎನ್ನುತ್ತೀ
ನನ್ನ ಮಗುವಿನ ಕಾಳಜಿ ತೆಗೆದುಕೊಳ್ಳಬೇಕು
ನಿನ್ನ ರೂಪ ಸ್ವರೂಪಗಳನ್ನು ಕಂಡಾಗ

ಎನ್ನುವ 'ಬಹುರೂಪಿ' ಯ ಸಾಲುಗಳನ್ನೇ ಕವಿಗೆ ನೆನಪಿಸಿ ಅಷ್ಟು ಕಾಳಜಿವಹಿಸಿದ್ದರೆ ಒಪ್ಪೋಲೆಯ ಅವಶ್ಯಕತೆಯೇ ಇರಲಿಲ್ಲ ಎನಿಸುತ್ತದೆ.

ಐವತ್ತು ಪುಟದ ಒಳ್ಳೆಯ ಕಾಗದದ ಅಚ್ಚುಕಟ್ಟಾದ ಮುದ್ರಣಕ್ಕೆ ಇನ್ನೂರೈವತ್ತು ಪೈಸೆ ತುಟ್ಟಿಯಲ್ಲಿ ಎಂದು ಕಾವ್ಯಕರ್ಮದ ಕಣಕ್ಕಿಳಿದಿರುವ ಕವಿ ಕಣವಿ ಮಹಾದೇವ ಅವರೆಗೆ ಕಣದ ಮಣ್ಣಿನ ವಾಸನೆ ಒಗ್ಗಿದೆ. ಕಸರತ್ತು, ತಾಲೀಮುವಾದಷ್ಟು ಒಳ್ಳೆಯ ಕವಿಯಾಗಿ ಇನ್ನಷ್ಟು ಸತ್ಕೃತಿ ನೀಡಿಯಾರು ಎಂದು ಆಶಿಸುತ್ತೇನೆ.

ಒಟ್ಟಾರೆ ಆರೋಗ್ಯಕರ ಬೆಳವಣಿಗೆಯ ಈ 'ಮುಟ್ಟಲ ಮುರಕಿ', ಸಹೃದಯ ಓದುಗರು ಬರಮಾಡಿಕೊಳ್ಳಲು ತಕ್ಕುದಾಗಿದೆ.

ಹೇಮು

# ಸಂಪಾದಕೀಯ

**ರಜತಮಹೋತ್ಸವ :**

ಇಪ್ಪತ್ತೈದು ವರ್ಷಗಳ ಸಫಲಜೀವನದ ನೆನಪಿಗಾಗಿ ಕರ್ನಾಟಕ ವಿಶ್ವವಿದ್ಯಾಲಯ, ಈ ವರ್ಷ ರಜತಮಹೋತ್ಸವವನ್ನು ಆಚರಿಸುತ್ತಲಿದೆ. ವಿಶ್ವವಿದ್ಯಾಲಯದ ಕೂಡ ಬೆಳೆಯುತ್ತ, ಅದನ್ನು ಬೆಳೆಸಿದವರಲ್ಲಿ ಒಬ್ಬರಾದ ಡಾ. ಆರ್. ಸಿ. ಹಿರೇಮಠ ಅವರು ಈ ಸಂದರ್ಭದಲ್ಲಿ ಕುಲಪತಿಗಳಾದುದು ಉಚಿತವೂ, ಸಮಯೋಚಿತವೂ ಆಗಿದೆ. ಕುಲಪತಿಗಳು ಈ 'ಬೆಳ್ಳಿಹಬ್ಬ'ವನ್ನು ವಿಧಾಯಕ ರೀತಿಯಲ್ಲಿ ಆಚರಿಸಲು ಯೋಜಿಸಿದ್ದಾರೆ. ಪ್ರತಿಯೊಂದು ಜಿಲ್ಲೆಯಿಂದ ನಿಧಿ ಸಂಗ್ರಹಿಸಿ, ವಿದ್ಯಾರ್ಥಿಗಳ ವಸತಿಗಾಗಿ 'ಜಿಲ್ಲಾಭವನ'ಗಳನ್ನು ಕಟ್ಟಿಸುವುದು ಇವುಗಳಲ್ಲಿ ಮುಖ್ಯವಾದುದು. ಇದಲ್ಲದೆ ಬಹುದಿನಗಳ ಆವಶ್ಯಕತೆಯಾಗಿರುವ ಪ್ರಾಧ್ಯಾಪಕರ ಮತ್ತು ಅಧಿಕಾರಿಗಳ ನಿವಾಸ ನಿರ್ಮಾಣ, ಕೆಲವು ವಿಭಾಗಗಳ ಸ್ವತಂತ್ರ ಕಟ್ಟಡ ಕಟ್ಟುವಿಕೆ, ಸ್ಟೇಡಿಯಂ-ಮಹಾದ್ವಾರಗಳ ರಚನೆ ಇತ್ಯಾದಿಗಳ ನೀಲನಕಾಶೆ ಸಿದ್ಧವಾಗಿ ನಿಂತಿದೆ.

ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರದ ವಿಸ್ತರಣೆ, ಸಂಡೂರು ತಾಂತ್ರಿಕ ಕೇಂದ್ರದ ಪ್ರಾರಂಭ, ವೃತ್ತಿಶಿಕ್ಷಣಕ್ಕೆ ಸಂಬಂಧಿಸಿದ ಹಲವು ಹೊಸಶಾಖೆಗಳ ಉದಯ-ಇವು ಗಮನಿಸಬೇಕಾದ ಸಾಧನೆಗಳು. ಪ್ರಾಧ್ಯಾಪಕರ ಬೋಧನೆ, ಸಂಶೋಧನೆಗಳಿಗೆ ಸಂಬಂಧಿಸಿದಂತೆ ಕೆಲವು ಮೂಲಭೂತ ಪ್ರಯೋಗಗಳನ್ನು ರೂಢಿಸುವ ಪ್ರಯತ್ನ ನಡೆದಿದೆ. ಈ ಎಲ್ಲ ಯೋಜನೆಗಳು ಸಮರ್ಪಕವಾಗಿ ಕೈಗೂಡಲಿಯೆಂದು ಭಾರತಿ ಹಾರೈಸುತ್ತದೆ.

## ಸಾದರ ಸ್ವೀಕಾರ

೧. **ಹತ್ತರಕೂಡ ಹನ್ನೊಂದು :**

ಶಿವಶರಣ ಜಾವಳಿ ಪ್ರ : ವಿಚಾರಭಾರತಿ ಅಧ್ಯಯನ ವೇದಿಕೆ, ಕಲಬುರ್ಗಿ-೧
ಬೆಲೆ : ೪ ರೂಪಾಯಿ. ಪುಟ : ೯೯ + vii

೨. **ನರಕದಲ್ಲೂ ಲಂಚ :**

ಎಂ. ಎಸ್. ಮಹಾಂತಯ್ಯ ಪ್ರ : ವಿಚಾರಭಾರತಿ ಅಧ್ಯಯನ ವೇದಿಕೆ, ಕಲಬುರ್ಗಿ-೧
ಬೆಲೆ : ೧-೨೫ ರೂಪಾಯಿ. ಪುಟ : ೧೮

೩. **ಕನಕದಾಸರ ಜೀವನ, ಸಾಧನೆ :**

ಬಿ. ವಾಯ್. ಕೌಜಲಗಿ ಪ್ರ : ಗಂಗಾಧರ ಮಡಿವಾಳೇಶ್ವರ ಪ್ರಕಾಶನ, ತುರವಿಹಾಳ
ಬೆಲೆ : ೩ ರೂಪಾಯಿ. ಪುಟ : x + ೭೨

೪. **ಪ್ರಣಯ ಮುಕ್ತಕಗಳು :**

ಗವೀಶ ಹಿರೇಮಠ ಪ್ರ : ವಿಚಾರ ಭಾರತಿ ಅಧ್ಯಯನ ವೇದಿಕೆ, ಕಲಬುರ್ಗಿ-೧
ಬೆಲೆ : ೪ ರೂಪಾಯಿ. ಪುಟ : ೫೦

೫. **ತುಳುನಾಡಿನ ಧಾರ್ಮಿಕ ಪರಂಪರೆ :**

ಸೂರ್ಯನಾಥ ಕಾಮತ್ ಪ್ರ : ಡಿ. ರತ್ನವರ್ಮ ಹೆಗಡೆ ಸ್ಮಾರಕ ಉಪನ್ಯಾಸ ಮಾಲೆ ಸಮಿತಿ, ಉಜಿರೆ ಬೆಲೆ : ೧ ರೂಪಾಯಿ. ಪುಟ : ೩ + ೨೪

೬. **ಸ್ತ್ರೀ ಹಾಗೂ ಕಾನೂನು :**

ಜಿ. ಎನ್. ಸಭಾಹಿತ ಪ್ರ : ಜಾಗೃತ ಭಾರತ, ಧಾರವಾಡ-೧
ಬೆಲೆ : ೧ ರೂಪಾಯಿ. ಪುಟ : iv + ೨೦

೭. **ಮಳಲುದಾರಿ :**

ವಿ. ಎಸ್. ಕಾಶೆಟ್ಟಿ ಪ್ರ . ಶ್ರೀ ಪ್ರಕಾಶನ, ರಾಜೇಂದ್ರನಗರ ಹಾವೇರಿ
ಬೆಲೆ : ೨ ರೂಪಾಯಿ. ಪುಟ : ೨ + ii + ೨೮

೮. **ಮಿನುಗು ತಾರೆ :**

ಮಹಾಂತೇಶ ಕಣಗಲಿ ಪ್ರ : ಕನ್ನಡ ಸಾಹಿತ್ಯ ಮಂಟಪ, ಬೆಳಗಾವಿ
ಬೆಲೆ : ೪ ರೂಪಾಯಿ. ಪುಟ : ೫೦

### ೯. ನಿಲ್ದಾಣಗಳ ನಡುವೆ :

ಎಂ. ವಿ. ಸೀತಾರಾಮಯ್ಯ ಪ್ರ : ರಾಘವ ಪ್ರಕಾಶನ, ಬೆಂಗಳೂರು-೧೯
ಬೆಲೆ : ೧೫ ರೂಪಾಯಿ

### ೧೦. ಹಂಪಕ್ಕನ ಹಾಡುಗಳು :

ಶ್ರೀರಃವಃ ಬಿದರಿ ಪ್ರ : ಜನಪದ ಸಾಹಿತ್ಯ ಸಂಘ, ಬಿಲಹಳ್ಳಿ
ಬೆಲೆ : ೩ ರೂಪಾಯಿ ಪುಟ. : x + ೨೦

### ಪತ್ರಿಕೆಗಳು :

ಕನ್ನಡ ನುಡಿ
ಸಾಹಿತ್ಯ ಪರಿಷತ್ಪತ್ರಿಕೆ
ಜೀವನ ವಿಕಾಸ
ಪಂಚಾಚಾರ ಪ್ರಕಾಶ
ಪರಂಜ್ಯೋತಿ
ಕೃಷಿವಿಜ್ಞಾನ
ರಾಷ್ಟ್ರೋತ್ಥಾನವಾರ್ತೆ
ಮತ್ಸ್ಯಲೋಕ
ಅಭಿರುಚಿ

# ಈ ಸಂಚಿಕೆಯ ಲೇಖಕರು

೧. ಶ್ರೀ ಮೋಹನ ಕುರುಡಿಗಿ :
ಗ್ರಾಮ : ತೋಟಗಂಟಿ ಅಂಚೆ : ಕೋಡಿಕೊಪ್ಪ ತಾ: ರೋಣ ಜಿಲ್ಲೆ : ಧಾರವಾಡ

೨. ಶ್ರೀ ಎಚ್. ಆರ್. ರಘುನಾಥಭಟ್ :
ಇತಿಹಾಸ ಅಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಮೈಸೂರು ವಿಶ್ವವಿದ್ಯಾಲಯ, ಮೈಸೂರು-೬

೩. ಶ್ರೀ ಬಸವರಾಜ ನಾಯ್ಕರ:
ಸಂಶೋಧನ ಸಹಾಯಕ, ಇಂಗ್ಲೀಷ ವಿಭಾಗ, ಸ್ನಾತಕೋತ್ತರ ಕೇಂದ್ರ ಕಲಬುರ್ಗಿ

೪. ಶ್ರೀ ಜಯಸುದರ್ಶನ :
೭೬೯, ೫ನೆಯ ಬ್ಲಾಕ್, ರಾಜಾಜಿ ನಗರ, ಬೆಂಗಳೂರು-೫೬೦೦೧೦

೫. ಶ್ರೀ ಟಿ. ಎಂ. ಸುಬ್ಬರಾಯ :
ಗೋಕಲೆ ಬಿಲ್ಡಿಂಗ ಚೌಕಿಮಠ, ಶಿರಶಿ

೬. ಶ್ರೀ ಗೌರೀಶ ಕಾಯ್ಕಿಣಿ :
ಗೋಕರ್ಣ

೭. ಶ್ರೀ ಸಂಗಮೇಶ ಬಿರಾದಾರ :
ಕನ್ನಡ ಅಧ್ಯಾಪಕರು, ಕಲಾ ಮತ್ತು ವಿಜ್ಞಾನ ಕಾಲೇಜು ಜಮಖಂಡಿ

೮. ಶ್ರೀ ಮಹಾದೇವ ಕಣವಿ :
ಇಂಗ್ಲೀಷ ಅಧ್ಯಾಪಕರು, ಭಂಡಾರಿ ಆರ್ಟ್ಸ ಕಾಲೇಜು, ಗುಳೇದಗುಡ್ಡ

೯. ಶ್ರೀ ಎಸ್. ಶಿವಣ್ಣ :
ಸಂಶೋಧನ ಸಹಾಯಕ, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

೧೦. ಶ್ರೀ ಪ್ರಭುಸ್ವಾಮಿಮಠ :
ಕನ್ನಡ ಅಧ್ಯಾಪಕರು ಲಾಲಬಹದ್ದೂರ ಕಾಲೇಜು, ಸಾಗರ (ಶಿವಮೊಗ್ಗ)

೧೧. ಶ್ರೀ ಬಿ. ಎಂ. ರಮೇಶ :
೭೧-c "ಶುಭದಾ" ಹೌಸಿಂಗ ಬೋರ್ಡ ಕಾಲನಿ, ಮಿಲ್‌ರೋಡ, ಕಲಬುರ್ಗಿ.

೧೨. ಶ್ರೀ ಎಚ್. ಜಿ. ಲೋಕೂರ :
ಕನ್ನಡ ಅಧ್ಯಾಪಕರು ಲಿಂಗರಾಜ ಕಾಲೇಜು, ಬೆಳಗಾವಿ

೧೩. ಶ್ರೀ ಸರವು ರಾಮ ಭಟ್ :
ವಕೀಲರು, ಕೋಡಪದವು—೫೭೪೨೨೨. ದಕ್ಷಿಣ ಕನ್ನಡ ಜಿಲ್ಲೆ

೧೪. ಡಾ. ಎಸ್. ಶೆಟ್ಟರ್ :
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,ಇತಿಹಾಸ ವಿಭಾಗ,ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೫. ಶ್ರೀ ಎಸ್. ರಾಜಶೇಖರ :
ಇತಿಹಾಸ ಅಧ್ಯಾಪಕರು, ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೬. ಶ್ರೀ ಆರ್. ರಾಚಪ್ಪ :
ಮುಖ್ಯಸ್ಥರು, ಕನ್ನಡ ವಿಭಾಗ, ರೇಣುಕಾಚಾರ್ಯ ವಿಜ್ಞಾನ ಕಾಲೇಜು,
ಬೆಂಗಳೂರ-೧೯

೧೭. ಶ್ರೀ ಗುಂಡಾ ಜೋಯಿಸ್ :
ಕೆಳದಿ ವಸ್ತುಸಂಗ್ರಹಾಲಯ, ಕೆಳದಿ

೧೮. ಶ್ರೀ ಸೀತಾರಾಮ ಜಾಗೀರ್ ದಾರ್ :
ಸಂಶೋಧನ ಸಹಾಯಕ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು—೬

೧೯. ಶ್ರೀ ಹೇಮ (ಸಿ. ಪಿ. ಹೇಮಗಿರಿಮಠ)
ಕನ್ನಡ ಅಧ್ಯಾಪಕರು, ನೆಹರು ಆರ್ಟ್ಸ್ ಕಾಲೇಜು ಹುಬ್ಬಳ್ಳಿ.

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ವಿಭಾಗ

## ಇತ್ತೀಚಿನ ಪ್ರಕಟನೆಗಳು

---

### ಸಂಶೋಧನ ಗ್ರಂಥಮಾಲೆ

ಸಿದ್ಧರಾಮ ಶಿವಯೋಗಿ —ಎಂ. ಬಿ. ಕೊಟ್ರಶೆಟ್ಟಿ ರೂ. ೨೪=೦೦

ಹೊಸಗನ್ನಡ ಸಾಹಿತ್ಯದ ಉದಯಕಾಲ —ರಾ. ಯ. ಧಾರವಾಡಕರ ರೂ. ೩೫=೦೦

### ಉಪನ್ಯಾಸಗ್ರಂಥಮಾಲೆ : ಪ್ರತಿಯೊಂದರ ಬೆಲೆ ೨೫ ಪೈಸೆ

ಜನಸಂಖ್ಯಾಸ್ಫೋಟ ಮತ್ತು ಅಂತರರಾಷ್ಟ್ರೀಯ ಜನಸಂಖ್ಯಾವರ್ಷ
—ಪಿ. ಬಿ. ಅಂಗಡಿ

ಕುಕನೂರು —ಎಸ್. ಎಲ್. ಶಾಂತಕುಮಾರಿ

ಜಗನ್ನಾಥದಾಸರ ಹಿರಿಮೆ —ವಸಂತ ಕುಷ್ಟಗಿ

ನವಭಾರತ ನಿರ್ಮಾಪಕ ರಾಜಾರಾಮ ಮೋಹನರಾಯ —ಜೆ. ಜಿ. ಕಾಡದೇವರ

ಭಾರತೀಯ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು —ಶಿವಾನಂದ ಗುಬ್ಬಣ್ಣವರ

ಭಾರತದ ಆರ್ಥಿಕ ಬೆಳವಣಿಗೆಯ ಗುಣದೋಷಗಳು —ಡಿ. ಎ. ಹೆಗಡೆ

ಸಸ್ಯಪೋಷಕಗಳು —ಸಾ. ನಾ. ವಜ್ರನಾಭಯ್ಯ

ಕೌಟಿಲ್ಯನ ಅರ್ಥಶಾಸ್ತ್ರ —ಅರವಿಂದ ಜೋಶಿ

### ಜನಪದ ಸಾಹಿತ್ಯಮಾಲೆ

ಜನಪದ ಸಾಹಿತ್ಯದರ್ಶನ —ಸಂ: ಆರ್. ಸಿ. ಹಿರೇಮಠ ರೂ. ೧೦=೦೦
(ಕೆಲಿಕೋ) ರೂ. ೧೨=೦೦

ಗಂಗೀ-ಗೌರಿ ಸಂವಾದ —ಸಂ: ಎಂ. ಎಸ್. ಸುಂಕಾಪುರ ರೂ. ೫=೦೦

## ವಚನ ಸಾಹಿತ್ಯ

ಸ್ವತಂತ್ರಸಿದ್ಧಲಿಂಗೇಶ್ವರನ ಕೃತಿಗಳು —ಸಂ: ಎಚ್. ಪಿ. ಮಲ್ಲೇದೇವರು
ರೂ. ೧೬=೦೦

ಉರಿಲಿಂಗಪೆದ್ದಿಯ ವಚನಗಳು —ಸಂ: ಎಚ್. ಪಿ ಮಲ್ಲೇದೇವರು ರೂ. ೧೬=೦೦

## ಇತರ ಪ್ರಕಟನೆಗಳು

ಕನ್ನಡದಲ್ಲಿ ಷಟ್ಪದಿಸಾಹಿತ್ಯ ರೂ. ೫=೦೦

ಧಾರವಾಡ ಜಿಲ್ಲೆಯ ಶಾಸನಸೂಚಿ —ಎಂ. ಎಂ. ಕಲಬುರ್ಗಿ ರೂ. ೨೦=೦೦
(ಕೆಲಿಕೊ) ರೂ. ೩೦=೦೦

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ ೧ ರಿಂದ ಮಾರ್ಚ ೩೧ ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ೩೩⅓ ದಂತೆ ಕಮೀಶನ್ ಕೊಡಲಾಗುವುದು

*

ವಿಶ್ವವಿದ್ಯಾಲಯದ ರಜತಮಹೋತ್ಸವದ ನೆನಪಿಗಾಗಿ

## ವಿಶೇಷ ರಿಯಾಯಿತಿ

- ೧೦೦ ರೂ. ಹಾಗು ಅದಕ್ಕೂ ಮೇಲ್ಪಟ್ಟು ಪುಸ್ತಕಗಳ (ಪುಠ್ಯಪುಸ್ತಕ ಹೊರತು ಪಡಿಸಿ) ಖರೀದಿಗೆ ಶೇ. ೨೫+೧೫.
- ೫,೦೦೦ ರೂ. ಹಾಗು ಅದಕ್ಕೂ ಮೇಲ್ಪಟ್ಟು ಖರೀದಿಗೆ ಶೇ. ೩೩⅓ + ಶೇ. ೧೫

(೨೯-೨-೧೯೭೬ ರ ವರೆಗೆ ಮಾತ್ರ)

*

## ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆ ವೆಚ್ಚ ಸಹಿತ)

ಬಿಡಿ ಪ್ರತಿ —ರೂ. ೨-೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

## ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವುದು.

(ಹಣವನ್ನು ಮನಿ ಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೩